೭೮ ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಗಂಗಾವತಿ, ಕೊಪ್ಪಳ ಜಿಲ್ಲೆ

ಬಾಣ

ಕಾದಂಬರಿ



ಕನ್ನಡಿಸಿದವರು

ಗಂಗಾಧರ ಮಡಿವಾಳೇಶ್ವರ ತುರಮರಿ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು-೫೬೦ ೦೧೮.

೭೮ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಗಂಗಾವತಿ, ಕೊಪ್ಪಳ ಜಿಲ್ಲೆ

ಬಾಣ ಕಾದಂಬರಿ

ಕನ್ನಡಿಸಿದವರು
ಗಂಗಾಧರ ಮಡಿವಾಳೇಶ್ವರ ತುರಮರಿ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು- ೫೬೦೦೧೮

BANA KADAMBARI : A Novel translated from Sanskrit by
Gangadhara Madivaleshwara Turamari
Published by : **Kannada Sahitya Parishat**
Pampa Mahakavi Road, Chamarajapet, Bangalore - 560018
Pages : 110+xii Price : **Rs.60=00 ; 2011**

ಮೊದಲನೆಯ ಮುದ್ರಣ : ೨೦೦೩
ಎರಡನೆಯ ಮುದ್ರಣ : ೨೦೦೯
ಮೂರನೆಯ ಮುದ್ರಣ : ೨೦೧೧

ಪ್ರತಿಗಳು : ೧೦೦೦
ಬೆಲೆ : ಅರವತ್ತು ರೂಪಾಯಿಗಳು

ಪ್ರಕಟಣಾ ಸಮಿತಿ

ಮುಖಪುಟ ವಿನ್ಯಾಸ : ಶ್ರೀ ಪ.ಸ. ಕುಮಾರ್

ಮುದ್ರಣ : ಬಿ.ಎಂ. ಶ್ರೀ. ಅಚ್ಚುಕೂಟ ಆಫ್‌ಸೆಟ್, ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೧೮

ಅಧ್ಯಕ್ಷರ ನುಡಿ

ಕನ್ನಡ ಸಾಹಿತ್ಯ ಪರಿಷತ್ತಿನ ಮೂರು ವರ್ಷಗಳ ಆಡಳಿತಾವಧಿಯಲ್ಲಿ ನಾಲ್ಕು ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳನ್ನು ನಡೆಸುವ ಅದೃಷ್ಟ ಕೆಲವು ಅಧ್ಯಕ್ಷರಿಗೆ ಮಾತ್ರ ಬರುತ್ತದೆ. ಅಂಥ ಸುಯೋಗ ನನ್ನ ಪಾಲಿಗೆ ಬಂದಿರುವುದರಿಂದ ಚಿತ್ರದುರ್ಗ, ಗದಗ, ಬೆಂಗಳೂರುಗಳ ನಂತರ ಇದೀಗ ೨೦೧೧ರ ಡಿಸೆಂಬರ್ ೯ ರಿಂದ ೧೧ರವರೆಗೆ ಕೊಪ್ಪಳ ಜಿಲ್ಲೆಯ ಗಂಗಾವತಿಯಲ್ಲಿ ನಡೆಯಲಿರುವ ಅಖಿಲ ಭಾರತ ೭೮ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಭರದ ಸಿದ್ಧತೆಗಳು ನಡೆಯುವ ಕ್ಷಣಗಣನೆ ಆರಂಭವಾಗಿದೆ. ಎಂದಿನಂತೆ ಈ ಸಮ್ಮೇಳನದ ಹೊತ್ತಿಗೂ ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ಸಾಹಿತ್ಯ ಪರಿಷತ್ತಿನ ಪ್ರಕಟಣಾ ಘನತೆಗೆ ಯೋಗ್ಯವೆಂದು ಪ್ರಕಟಣ ಸಮಿತಿ ಆಯ್ಕೆ ಮಾಡಿರುವ ಕೃತಿಗಳನ್ನು ಹೊರತರಲಾಗುತ್ತಿದೆ.

ನಾನು ಅಧ್ಯಕ್ಷನಾಗಿ ಕನ್ನಡ ಸಾಹಿತ್ಯ ಪರಿಷತ್ತನ್ನು ಪ್ರವೇಶ ಮಾಡಿದಾಗಿನಿಂದ ಸಾಹಿತ್ಯ ಪರಿಷತ್ತಿನಲ್ಲಿ ಹಲವು ಸಕಾಲಿಕವೆನಿಸುವಂಥ ಸುಧಾರಣೆಗಳನ್ನು ಮಾಡುತ್ತಾ ಬಂದಿದ್ದೇನೆ. ಇವುಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸುವ ಪುಸ್ತಕಗಳು ಒಳಗೆ ಮೌಲಿಕವಾಗಿರುವಂತೆ ಹೊರಗೆ ಆಕರ್ಷಕವಾಗಿರಬೇಕೆನ್ನುವುದೂ ಒಂದು. ಪುಸ್ತಕಗಳ ಮೂಲಕ ಓದುಗ ವರ್ಗದಲ್ಲಿ ಸದಭಿರುಚಿಯನ್ನು ನಿರ್ಮಾಣ ಮಾಡುವುದರಲ್ಲಿ ಪರಿಷತ್ತಿಗೆ ಒಂದು ವಿಶೇಷ ಜವಾಬ್ದಾರಿಯಿದೆ ಎಂಬುದನ್ನು ನಾನು ಮನಗಂಡೇ ಇಂಥ ಸುಧಾರಣೆಗೆ ಕೈ ಹಚ್ಚಿದ್ದೇನೆ. ಪರಿಷತ್ತಿನ ಪುಸ್ತಕಗಳು ಆತ್ಮಾಭಿಮಾನದಿಂದ ತಲೆಯೆತ್ತಿ ನಿಲ್ಲುವುದಕ್ಕೆ ಏನೇನು ಸಾಧ್ಯವಿತ್ತೋ ಆ ಎಲ್ಲ ಪ್ರಯೋಗಗಳನ್ನು ಮಾಡಲಾಗಿ ಇವತ್ತು ನಮ್ಮ ಪ್ರಕಟಣೆಗಳು ಯಾರಿಗೂ ಕಡಿಮೆಯಿಲ್ಲದಂತೆ ಭರಾಟೆಯಿಂದ ಖರ್ಚಾಗುತ್ತಿವೆ. ಹೊಸ ಬಣ್ಣಗಳಲ್ಲಿ, ಹೊಸ ವಿನ್ಯಾಸಗಳಲ್ಲಿ ಕಂಗೊಳಿಸುತ್ತಿವೆ. ಓದುಗರ ಮೆಚ್ಚುಗೆಗೆ ಪಾತ್ರವಾಗುತ್ತಿವೆ. ಬಹುಬೇಗ ಖರ್ಚಾಗುತ್ತಿವೆ, ಮರುಮುದ್ರಣಗೊಳ್ಳುತ್ತಿವೆ. ಈ ಬಾರಿಯ ಅಕ್ಷರಜಾತ್ರೆಯಲ್ಲಿ ಅರ್ಥಪೂರ್ಣ ಪುಸ್ತಕಗಳು ಇರಬೇಕೆನ್ನುವ ಎಚ್ಚರದೊಂದಿಗೆ ಈ ಪುಸ್ತಕಗಳನ್ನು ಪ್ರಕಟಿಸಲಾಗಿದೆ. ೨೦೧೧ ಡಿಸೆಂಬರ್ ೯ ರಿಂದ ೧೧ರವರೆಗೆ ಕೊಪ್ಪಳ ಜಿಲ್ಲೆಯ ಗಂಗಾವತಿಯಲ್ಲಿ ನಡೆಯಲಿರುವ ೭೮ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಲೋಕಾರ್ಪಣೆಗೊಳ್ಳಲಿರುವ ಈ ಪುಸ್ತಕಗಳು ಸಹೃದಯರ ಜ್ಞಾನಭಂಡಾರವನ್ನು ವಿಸ್ತರಿಸಿ, ಅವರು ಬಯಸುವ ಸಂತೋಷವನ್ನು ಕೊಡಲೆಂದು ಆಶಿಸುತ್ತೇವೆ. ಓದುಗರ ರಚನಾತ್ಮಕ ಸಲಹೆ ಮತ್ತು ಪ್ರತಿಕ್ರಿಯೆಗಳನ್ನು ಸ್ವಾಗತಿಸುತ್ತೇನೆ.

ಡಾ. ನಲ್ಲೂರು ಪ್ರಸಾದ್. ಆರ್.ಕೆ.
ಅಧ್ಯಕ್ಷರು

ತುರಮರಿಯವರ ಜೀವನ ಹಾಗೂ ಇತರ ಕೃತಿಗಳು

(ಜನನ : ೧೮೨೭, ಮರಣ : ೫ - ೧೦ - ೧೮೭೭)

ಗಂಗಾಧರಯ್ಯನವರು ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ತುರಮರಿಯವರು. ಚನ್ನಬಸಪ್ಪನವರ ಮಕ್ಕಳಾದ ಇವರು ಅಥಣಿಯ ಹಿರಿಯ ಮಠದ ಮಡಿವಾಳ ಸ್ವಾಮಿಗಳಿಗೆ ದತ್ತಕ ಹೋಗಿದ್ದರು. ಪೇಶ್ವೆಯ ಪ್ರಭಾವದಿಂದ ಮರಾಠಿಯೇ ಶಿಕ್ಷಣಭಾಷೆಯಾಗಿದ್ದ ಅಂದಿನ ಉತ್ತರ ಕರ್ನಾಟಕದ ಪರಿಸ್ಥಿತಿಗೆ ಅನುಗುಣವಾಗಿ ಇವರ ಪ್ರಾಥಮಿಕ ಶಿಕ್ಷಣವು ಮರಾಠಿಯ ಮುಖಾಂತರವೇ ದೊರೆತರೂ ಮನೆಯಲ್ಲಿ ಮಡಿವಾಳಸ್ವಾಮಿಗಳ ನೆರವಿನಿಂದ ಇವರು ಸಂಸ್ಕೃತ, ಕನ್ನಡದಲ್ಲಿ ಅಪಾರ ಪಾಂಡಿತ್ಯ ಸಂಪಾದಿಸಿ ಕಾವ್ಯವಾಚನ, ಪುರಾಣ-ಪ್ರವಚನದಲ್ಲಿ ಅದ್ವಿತೀಯರೆನಿಸಿಕೊಂಡರು.

ದೇಶೀಯ ಶಾಲೆಗಳು ಕ್ರಮವಾಗಿ ಕನ್ನಡದಲ್ಲಿ ಪರಿವರ್ತನೆಗೊಂಡಂತೆ, ಸ್ಥಾನಿಕ ಪಂಡಿತರು ಅಲ್ಲಿ ಉಪಾಧ್ಯಾಯರಾಗತೊಡಗಿದರು. ಇಂಥ ಸಮಯದಲ್ಲಿ ಗಂಗಾಧರಯ್ಯನವರೂ ೨೫ ರೂಪಾಯಿ ಮಾಸಿಕ ವೇತನದ ಮೇಲೆ ಹುನಗುಂದ ಶಾಲೆಯ (ಅಂದು ಇದು ಬೆಳಗಾವಿ ಜಿಲ್ಲೆಯ ಭಾಗವಾಗಿತ್ತು.) ಮುಖ್ಯೋಪಾಧ್ಯಾಯರಾದ ತುಸು ದಿವಸಗಳಲ್ಲಿಯೇ ತಮ್ಮ ಕಾರ್ಯದಕ್ಷತೆ ಹಾಗೂ ವಿದ್ವತ್ತಿನಿಂದ ಮೇಲಧಿಕಾರಿಗಳನ್ನು ಸಂತೋಷಪಡಿಸಿ, ಬೆಳಗಾವಿ ನಾರ್ಮಲ್ ಟ್ರೇನಿಂಗ್ ಸ್ಕೂಲಿನಲ್ಲಿ ಕನ್ನಡ ಪಂಡಿತರ ಹುದ್ದೆಯನ್ನು ಪಡೆದರು; ಹಾಗೂ ಸ್ವಪರಿಶ್ರಮದಿಂದ ಇಂಗ್ಲೀಷು ಕಲಿತು ಕ್ರಿ. ಶ. ೧೮೬೬ (ಜುಲಾಯಿ)ರಲ್ಲಿ ಆಗ ಕನ್ನಡ ಅಸಿಸ್ಟಂಟ್ ಟ್ರಾನ್ಸ್‌ಲೇಟರ್‌ರಾಗಿದ್ದ ಗೋವಿಂದರಾವ್ ಕಂಠಿಯವರ ಸ್ಥಾನಕ್ಕೆ ವರ್ಗಾಯಿಸಲ್ಪಟ್ಟರು. ಅಧಿಕಾರದೊಂದಿಗೆ ಮರುವರ್ಷ ಟ್ರೇನಿಂಗ್ ಸ್ಕೂಲಿನ ಮುಖ್ಯಾಧ್ಯಾಪಕ ಹುದ್ದೆಯೂ ದೊರೆತಿತು. ಕ್ರಿ. ಶ. ೧೮೭೫ (ಜೂನ್ ೧) ರಲ್ಲಿ ಈ ವಿದ್ಯಾಸಂಸ್ಥೆಯು ಬೆಳಗಾವಿಯಿಂದ ಧಾರವಾಡಕ್ಕೆ ಸ್ಥಳಾಂತರಿಸಲ್ಪಟ್ಟಾಗ ಕೆಲದಿನ ಇವರು ಬೆಳಗಾವಿಯ ಹೈಸ್ಕೂಲಿನಲ್ಲಿ ಕನ್ನಡ ಪಂಡಿತರಾಗಬೇಕಾಯಿತು. ಮುಂದೆ ಸ್ವಲ್ಪೇ ದಿನಗಳಲ್ಲಿ ಅಸಿಸ್ಟಂಟ್ ಟ್ರಾನ್ಸಲೇಟರರ ಕಚೇರಿಯೂ ಧಾರವಾಡಕ್ಕೆ ಸ್ಥಾನಾಂತರಗೊಂಡದ್ದರಿಂದ ಇವರೂ ಧಾರವಾಡಕ್ಕೆ ಹೋದರು. ಅಲ್ಲಿ ಎರಡು ವರ್ಷ ಕೆಲಸ ಮಾಡಿ, ತಮ್ಮ ೫೦ನೆಯ ವಯಸ್ಸಿನಲ್ಲಿ ಅಕಾಲಮೃತ್ಯುವಶವಾದರು.

ಗಂಗಾಧರಯ್ಯನವರು 'ಮಠಪತ್ರಿಕೆ' (ಶಾಲಾಪತ್ರಿಕೆ) ಯ ಸಂಪಾದಕರೂ 'ರಸಿಕರಂಜನಿ', 'ಕರ್ನಾಟಕ ಜ್ಞಾನಮಂಜರಿ' (೧೮೭೪) ಮಾಸ ಪತ್ರಿಕೆಗಳ ಪ್ರಮುಖ ಲೇಖಕರೂ ಆಗಿದ್ದರು. 'ಶಾಲಾಪತ್ರಿಕೆ' ಯಲ್ಲಿ ಶಬ್ದಮಣಿದರ್ಪಣದ ಟೀಕೆ (೧೮೬೬ ರಿಂದ ೧೮೭೦) ಯನ್ನೂ, 'ಭಾಷಾದರ್ಪಣ' ವೆಂಬ ಸ್ವತಂತ್ರ ವ್ಯಾಕರಣವನ್ನೂ (೧೮೭೬) ಬರೆದು ಪ್ರಕಟಿಸಿದರು. ಇವರ ಆಕಸ್ಮಿಕ ಮರಣದಿಂದ ಭಾಷಾದರ್ಪಣವು ಅರ್ಧಕ್ಕೆ ನಿಂತಿತು.

ಕ್ರಿ. ಶ. ೧೮೬೭ ರಲ್ಲಿ (ನವಂಬರ್) ಬೆಳಗಾವಿಯಲ್ಲಿ ಸ್ಥಾಪಿತವಾದ ವೀರಶೈವ ವಿದ್ಯಾರ್ಥಿನಿಲಯದ ವ್ಯವಸ್ಥಾಪಕರಾಗಿ ಕೆಲದಿನ ಇದ್ದರು. ಅವರು ರಚಿಸಿದ ಗ್ರಂಥಗಳು ಕ್ರಮವಾಗಿ ಕನ್ನಡ ಕವಿತಾಪದ್ಧತಿ, ಕನ್ನಡ ಕವಿತೆಯ ಎರಡನೆಯ ಮೂರನೆಯ ಪುಸ್ತಕಗಳು, ಕವಿತಾಸಂಗ್ರಹ, ಕೈವಲ್ಯಪದ್ಧತಿಯ ಟೀಕೆ, ಬಾಣಕಾದಂಬರಿ, ಬಾಲಕರ ಕನ್ನಡ ವಾಚನಪಾಠಗಳು, ರಾಜಶೇಖರ ವಿಳಾಸ ಟೀಕೆ, ಶಬ್ದಮಂಜರಿ, ಕೊನೆಯವೆರಡಕ್ಕೆ ಸರಕಾರದಿಂದ ಪುರಸ್ಕಾರವೂ ದೊರೆತಿತ್ತು.

ಪ್ರಸ್ತಾವನೆ (ಪ್ರಥಮ ಮುದ್ರಣ)

ಕಾವ್ಯಗಳಲ್ಲಿ ಗದ್ಯರೂಪ, ಪದ್ಯರೂಪವೆಂಬ ಎರಡು ಪ್ರಕಾರಗಳುಂಟು. ಗದ್ಯರೂಪ, ಪದ್ಯರೂಪಗಳೆಂದರೆ ಏನೆಂಬ ಬಗ್ಗೆ, ಹಲವರು ಭ್ರಾಂತಿಗೊಳ್ಳಬಹುದು. ಆದರೆ, 'ಗದ್ಯ'—'ಪದ್ಯ' ಗಳೆಂಬ ಶಬ್ದಗಳ ಮೂಲಾರ್ಥಗಳನ್ನೂ, 'ರಸಾತ್ಮಕಂ ಕಾವ್ಯಂ' ಎಂಬ ಕಾವ್ಯ ಲಕ್ಷಣವನ್ನೂ ಸ್ವಲ್ಪ ಶೋಧಿಸಿದರೆ, ಆಗಲೇ ಅವರ ಭ್ರಾಂತಿಯು ದೂರಾಗುವದು. 'ಗದ್ಯ' (ಗದ್-ಮಾತಾಡು) ಅಂದರೆ ಸಾಧಾರಣವಾಗಿ ವ್ಯವಹಾರದಲ್ಲಿ ಮಾತಾಡುವ ಭಾಷೆಯ ರಚನೆಯಂತೆ ರಚನೆಯು; 'ಪದ್ಯ' (ಪದ್-ಛಂದದ ಪ್ರಕಾರ ರಚಿಸು) ಅಂದರೆ ಛಂದೋಬದ್ಧವಾದ ಕೃತ್ರಿಮ ರಚನೆಯು; 'ರಸಾತ್ಮಕಂ ಕಾವ್ಯಂ' ಅಂದರೆ ರಸಯುಕ್ತವಾದದ್ದೇ ಕಾವ್ಯವು; ರಸವಿಲ್ಲದಿದ್ದರೆ ಕಾವ್ಯವೆನಿಸದು. ಗದ್ಯಗ್ರಂಥಕ್ಕೂ, ಪದ್ಯಗ್ರಂಥಕ್ಕೂ ರಸವೇ ಪ್ರಧಾನವು. ರಸವು ಸ್ವತಂತ್ರವಾದದ್ದು. ಅದಕ್ಕೂ, ಯಮಕಪ್ರಾಸಶ್ಲೇಷವರ್ಣಮಾಧುರ್ಯ ಗಳೆಂಬ ಶಬ್ದ ರಚನೆಗೂ ಏನೂ ಸಂಬಂಧವಿಲ್ಲ.

ಪದ್ಯಗ್ರಂಥಗಳು ಹುಟ್ಟಿದ ತರುವಾಯ ಗದ್ಯಗ್ರಂಥಗಳು ಹುಟ್ಟುವದೊಂದು ಸಾಧಾರಣ ನಿಯಮವಿದೆ. ಇದಕ್ಕೆ ಕಾರಣವಾದರೂ ಮೇಲೆಯೇ ತೋರುತ್ತದೆ. ತಿಳುವಳಿಕೆಯಿಲ್ಲದಾಗ ಮನುಷ್ಯರಿಗೆ ಸುಳ್ಳು ಕಲ್ಪನೆಗಳು ಹುಟ್ಟಿದ ಹಾಗೆ ತಿಳುವಳಿಕೆಯಾದಾಗ ಹುಟ್ಟುವದಿಲ್ಲ; ಆಗ ವಿಚಾರ ಶಕ್ತಿಯು ಹುಟ್ಟುತ್ತದೆ. ವಿಚಾರಶಕ್ತಿಯು ಹುಟ್ಟಿದ ಹಾಗೆ, ಮನುಷ್ಯರ ಮನಸ್ಸು ಸತ್ಯಾಸತ್ಯಗಳನ್ನು ಪ್ರತಿಪಾದಿಸುವ ವಿಷಯಗಳಿಗೆ ಎಳಸುತ್ತದೆ. ಅಂಥ ವಿಷಯಗಳ ಗ್ರಂಥಗಳಿಗೆ ಛಂದೋಬದ್ಧವಾದ ಕೃತ್ರಿಮ ರಚನೆಯು ಮೊದಲೇ ಒಪ್ಪುವದಿಲ್ಲ; ವ್ಯವಹಾರದೊಳಗಿನ ಭಾಷೆಯೇ ಸಲ್ಲುವದು. ಈ ಕಾರಣದಿಂದ ಪದ್ಯಗ್ರಂಥಗಳು ಹಿಂದಕ್ಕೆ ಬಿದ್ದು, ಗದ್ಯಗ್ರಂಥಗಳು ಮುಂದಕ್ಕೆ ಬರುವವು.

ಈ ಮೇರೆಗೆ ಗದ್ಯಗ್ರಂಥಗಳ ಪರಿಪಾಠವಾಗಿ, ಗ್ರಂಥ ರಚಿಸುವ ರೀತಿಯು ಇದೇ ಎಂದು ಗೊತ್ತಾಗುವದು ವಿದ್ಯಾಭಿವೃದ್ಧಿಯ ಕುರುಹೇ ಸರಿ. ಕೇಳುವವರ ಕಿವಿಗೆ ಇಂಪಾಗುವ ಸ್ವರಸಂಯೋಗ, ಶಬ್ದಾಲಂಕಾರ, ಅರ್ಥಾಲಂಕಾರ ಮುಂತಾದ ಬಾಹ್ಯ ಸಾಧನಗಳು, ಕವಿತೆಗೆ ಬೇಕಾದ ಹಾಗೆ, ಗದ್ಯಗ್ರಂಥಗಳಿಗೆ ಬೇಕಾಗುವದಿಲ್ಲ; ಬರೇ ಒಳಗಿನ ಅರ್ಥದ ಸೌಂದರ್ಯದಿಂದಲೂ, ಸಮಂಜಸತನದಿಂದಲೂ ಗದ್ಯಗ್ರಂಥಗಳು ಓದುವವರ ಮನಸ್ಸು ರಂಜನೆಗೊಳಿಸುತ್ತವೆ.

ಇಂಥ ಗದ್ಯಗ್ರಂಥಗಳನ್ನು ಪ್ರಾಚೀನ ಕಾಲದಲ್ಲಿ ಬಾಣ, ಸುಬಂಧು, ದಂಡಿ ಎಂಬ ಕವಿಗಳು ಸಂಸ್ಕೃತ ಭಾಷೆಯಲ್ಲಿ ರಚಿಸಿದರು. ಈ ಕವಿಗಳಲ್ಲಿ ಬಾಣನೇ ವಿಶೇಷ ಪ್ರಸಿದ್ಧನು.

ಬಾಣಕವಿಯ ತಂದೆ ಚಿತ್ರಭಾನು; ತಾಯಿ ರಾಜದೇವಿ. ಇವನು ಹದಿನಾಲ್ಕು ವರ್ಷದವನಿರುವಾಗ ತಂದೆ ತೀರಿದನು. ಭದ್ರನಾರಾಯಣ, ಈಶಾನ, ಮಯೂರ*

---

* ಈ ಮಯೂರನು ಮುಂದೆ ಪ್ರಸಿದ್ಧ ಕವಿಯಾದನು. ಈತನು ರಚಿಸಿದ ಸೂರ್ಯಶತಕವೆಂಬ ಕಾವ್ಯವು ಇಂದಿಗೂ ಪ್ರಸಿದ್ಧವಿದೆ.

ರೆಂಬುವರು ಬಾಣಕವಿಯ ಬಾಲಮಿತ್ರರು. ಬಾಣನ ಮನೆಯು ಶೋಣಾನದಿಯ ಪಡುವಣಕ್ಕೆ ಪ್ರೀತಿಕೂಟವೆಂಬ ಊರೊಳಗಿತ್ತು. ಇದೇ ಹೊಳೆಯ ದಂಡೆಯಮೇಲೆ ಯಷ್ಟಿಗ್ರಹ ವೆಂಬದೊಂದು ಗ್ರಾಮವಿದೆ. ಈ ಊರಿನ ಮುಂದಕ್ಕೆ ಹೋದರೆ ಶ್ರೀಕಂಠವೆಂಬ ದೇಶವಿದೆ. ಆ ನಾಡೊಳಗೆ ಹರ್ಷರಾಜನ ರಾಜಧಾನಿಯಿತ್ತು. ಬಾಣಕವಿಯು ಆ ಹರ್ಷರಾಜನ ಆಶ್ರಯದಲ್ಲಿದ್ದನು. ಸನ್ ೬೫೦ನೇ ಇಸವಿಯಲ್ಲಿ ಬಾಣನು ಜೀವಂತನಿದ್ದನೆಂಬುದಾಗಿ ಒಂದು ಇತಿಹಾಸದಿಂದ ತಿಳಿದುಬಂದಿದೆ.

ಬಾಣಕವಿಯು 'ಕಾದಂಬರಿ', 'ಹರ್ಷಚರಿತ', 'ಚಂಡಿಕಾಶತಕ', 'ಪಾರ್ವತೀಪರಿಣಯ ನಾಟಕ', 'ರತ್ನಾವಲಿ ನಾಟಕ' ಎಂಬ ಐದು ಗ್ರಂಥಗಳನ್ನು ಸಂಸ್ಕೃತ ಭಾಷೆಯಲ್ಲಿ ರಚಿಸಿದನು. ಈ ಐದು ಗ್ರಂಥಗಳಲ್ಲಿ ಕಾದಂಬರೀ ಗ್ರಂಥವೇ ಲೋಕದಲ್ಲಿ ಬಹು ಪ್ರಸಿದ್ಧ. ಇದು ಸಂಪೂರ್ಣ ಗದ್ಯರೂಪವಿದೆ. ಇದರೊಳಗೆ ಅತಿ ಮನೋಹರವಾದ ಕಥೆಯುಂಟು. ಈ ಕಥೆಯೊಳಗೆ ಕಾದಂಬರಿಯೆಂಬ ಗಂಧರ್ವಕನ್ನಿಕೆಯು ನಾಯಿಕೆಯಿರುವುದರಿಂದ, ಕವಿಯು ಈ ಗ್ರಂಥಕ್ಕೆ ಕಾದಂಬರಿಯಂತಲೇ ಹೆಸರಿಟ್ಟಿರುವನು.

ಈ ಕಾವ್ಯದಲ್ಲಿ ಸಂಸ್ಕೃತ ಭಾಷೆಯೊಳಗಿನ ಯಾವತ್ತೂ ಅಲಂಕಾರಗಳೂ, ಗುಣಗಳೂ ಉಂಟು. ಶೃಂಗಾರ-ಕರುಣರಸಗಳಂತೂ ತಾವೇ ಮೂರ್ತಿಮತ್ತಾಗಿವೆ; ಅದು ಸರಸವೂ ತಕ್ಕಮಟ್ಟಿಗೆ ಉಂಟು; ನಡುನಡುವೆ ನೀತಿಯ ಉಪದೇಶಗಳುಂಟು; ಸಂವಿಧಾನ ಸಾಧಿಸಿದ ಕಲ್ಪನೆಗೆ ವಿದ್ವಾಂಸರು ತಲೆದೂಗುತ್ತಾರೆ. ಬಣ್ಣಿಸುವ ಲೋಕೋತ್ತರವಾದ ಬಣತಿಯು ಬಾಣನಿಗೇ ಸಲ್ಲುವದೆಂಬದು "ಬಾಣೋಚ್ಛಿಷ್ಟಂ ಜಗತ್ಸರ್ವಂ" ಎಂಬ ವಚನದ ಮೇಲಿಂದಲೇ ಕಂಡುಬರುತ್ತದೆ ಗೀರ್ವಾಣಭಾಷೆಯು ಮೊದಲೇ ಮನೋಹರವು; ಅದರೊಳಗೆ ಬಾಣ*ನಂತ ಜಾಣನ ಕೈವಶವಾದ ಬಳಿಕ ಕೇಳುವದೇನು!

ಈ ಗ್ರಂಥದಲ್ಲಿ ಎರಡು ಭಾಗಗಳಿವೆ; ಅವು ಕವಿಯಿಂದಾಗಲಿಲ್ಲ; ಕಾಲನಿಂದಾದವು! ತುಸು ಹೆಚ್ಚು ಕಡಿಮೆ ಮುಕ್ಕಾಲುವರೆಗೆ ಈ ಕಾವ್ಯವು ಆಗಿತ್ತು. ಅಷ್ಟರೊಳಗೆ ಬಾಣನನ್ನು ಕಾಲನು ಒಮ್ಮಿಂದೊಮ್ಮೆಲೆ ಒಯ್ದನು.

ಬಳಿಕ ಬಾಣನ ಮಗನು ಅಷ್ಟಕ್ಕೆ 'ಪೂರ್ವಾರ್ಧ'ವೆಂದು ಹೆಸರಿಟ್ಟು ಮುಂದೆ ತಾನು 'ಉತ್ತರಾರ್ಧ'ವನ್ನು ರಚಿಸಿ, ಕಾದಂಬರೀ ಕಾವ್ಯವನ್ನು ಮುಗಿಸಿದನು. ತಂದೆಯ ವರ್ಷಶ್ರಾದ್ಧವಾಗುವದರೊಳಗೆ ಮುಗಿಸಬೇಕೆಂದು ಸಂಕಲ್ಪಮಾಡಿ, ಅದರಂತೆ ಮುಗಿಸಿದನೆಂದು ಹೇಳುತ್ತಾರೆ. ಈ ಸಂಪೂರ್ಣ ಗ್ರಂಥವು ತನ್ನ ತಂದೆಯ ಹೆಸರಿನಿಂದ ಪ್ರಸಿದ್ಧವಾಗಲೆಂಬ ಮನಸ್ಸಿನಿಂದ ಆತನು ಉತ್ತರಾರ್ಧದಲ್ಲೆಲ್ಲಿಯೂ ತನ್ನ ಹೆಸರು ತಂದಿಲ್ಲ. ಇದು ಆತನ ವಿನಯಗುಣಕ್ಕೂ ಪಿತೃಭಕ್ತಿಗೂ ಭೂಷಣವೇ ಸರಿ.

---

* ಜಾತಾ ಶಿಖಂಡಿನೀ ಪ್ರಾಕ್ ಯಥಾ ಶಿಖಂಡೀ ಕಥಾವಗಚ್ಛಾಮಿಃ ॥
ಪ್ರಾಗಲ್ಭ್ಯ ಮಧಿಕಮಾಪ್ತುಂ ವಾಣೀ ಬಾಣೋ ಬಭೂವೇತಿ ॥೧॥

ಅರ್ಥ— ಪೂರ್ವದಲ್ಲಿ ಶಿಖಂಡಿನಿಯು ಶಿಖಂಡಿಯಾದಂತೆಯೇ ವಾಣಿಯು (ಸರಸ್ವತಿಯು) ಹೆಚ್ಚಿಗೆ ಜಾಣತನ ಬರಲೆಂದು ತಾನೇ ಬಾಣಕವಿಯಾದಳೆಂದು ತಿಳಿಯುತ್ತೇನೆ.

ಈ ಕಾದಂಬರೀ ಕಥೆಯನ್ನು ಆರಂಭದಿಂದ ಕಡೆತನಕ ಓದಿ, ಇದರೊಳಗೆ ಸಾಧಿಸಿದ ಸಂವಿಧಾನಕವನ್ನು ಸ್ಮರಣೆಗೆ ತಂದರೆ ಮನಸ್ಸಿಗೆ ಆನಂದವೂ, ಆಶ್ಚರ್ಯವೂ ಆಗದೆ ಇರದೆಂದು ಸ್ವಾನುಭವದಿಂದ ಹೇಳುತ್ತೇವೆ. ಎಷ್ಟು ಸಾರೆ ಓದಿದರೂ ಮತ್ತೂ ಓದಬೇಕೆನಿಸುವಂಥ ಚಮತ್ಕಾರಿಕವಾದ ಸಂವಿಧಾನಕವೂ, ವರ್ಣನೆಗಳೂ ಇದರಲ್ಲಿ ಉಂಟು. ಈ ಮೇರೆಗೆ ಅನೇಕ ಗುಣಗಳಿಂದ ರಮಣೀಯವಾದುದರಿಂದಲೂ, ಈ ಗ್ರಂಥವು ಹನ್ನೆರಡುನೂರು ವರ್ಷಗಳ ಪೂರ್ವದಲ್ಲಿ ಹುಟ್ಟಿದ್ದರಿಂದಲೂ, ಓದುವವರಿಗೆ ಪ್ರಾಚೀನ ಕವಿಗಳ ಕಲ್ಪನೆಗಳೂ, ಆ ಕಾಲದ ಅರಸರ ಐಶ್ವರ್ಯ, ನಡೆನುಡಿ ಮುಂತಾದವುಗಳೂ ಇದರಿಂದ ತಿಳಿಯಬಂದ ಹಾಗೆ ಮತ್ತೊಂದರಿಂದ ಬಾರವೆಂಬುದಕ್ಕೆ ಅಡ್ಡಿ ಇಲ್ಲ.

ಇಂಥ ಸಂಸ್ಕೃತ ಕಾದಂಬರಿಯೊಳಗಿನ ಅತಿ ಮನೋಹರವಾದ ಕಥೆಯನ್ನು ನಮ್ಮ ದೇಶಬಾಂಧವರ ಸಲುವಾಗಿ ಕನ್ನಡಿಸಿ, ಸ್ವಲ್ಪದರೊಳಗೆ ಬರೆದಿದ್ದೇವೆ. ಇದು ಮೂಲಗ್ರಂಥದ ಚತುರ್ಥಾಂಶವಾದೀತು. ಇದರಲ್ಲಿ ರಾಜವೈಭವದ ವರ್ಣನೆ, ವಿಂಧ್ಯಾಟವೀವರ್ಣನೆ, ಅಗಸ್ತ್ಯಋಷಿಯ ಹೆಂಡತಿ ಲೋಪಾಮುದ್ರೆಯು ಬೆಳೆಸಿದ ವನದ ವರ್ಣನೆ, ಪಂಚವಟಿಯಲ್ಲಿ ಸೀತಾ ರಾಮ-ಲಕ್ಷ್ಮಣರು ಇದ್ದಾಗಿನ ವೃತ್ತಾಂತ, ಪಂಪಾಸರೋವರದ ಹತ್ತಿರ ಸಪ್ತತಾಳವೃಕ್ಷಗಳ ನೆರೆಯಲ್ಲಿದ್ದ ಶಾಲ್ಮಲೀವೃಕ್ಷದ ವರ್ಣನೆ, ಮಾತಂಗ ಮುಂತಾದ ಕಿರಾತರ ಬೇಟೆಯ ವರ್ಣನೆ, ಜಾಬಾಲಿ ಮುಂತಾದ ಮಹಾ ಮಹಾ ಋಷಿಗಳು ಇದ್ದ ತಪೋವನದ ವರ್ಣನೆ, ಚಂದ್ರಾಪೀಡನ ವಿದ್ಯಾಭ್ಯಾಸ, ಚಂದ್ರಾಪೀಡನು ವಿದ್ಯಾಮಂದಿರದಿಂದ ಬರುವಾಗ ಉಜ್ಜಯಿನಿಯ ಶೋಭೆಯು, ಚಂದ್ರಾಪೀಡನಿಗೆ ಶುಕನಾಸನು ಉಪದೇಶ ಮಾಡಿದ ರಾಜನೀತಿ, ಅಚ್ಛೋದ ಸರೋವರದ ವರ್ಣನೆ, ಮಹಾಶ್ವೇತೆಯೆಂಬ ಗಂಧರ್ವ ಕನ್ನಿಕೆಗೆ ಮೋಹಿತನಾದ ಪುಂಡರೀಕನೆಂಬ ಮಿತ್ರನನ್ನು ಅಸನ್ಮಾರ್ಗದೊಳಗಿಂದ ಉಳಿಸಿಕೊಳ್ಳಬೇಕೆಂದು ಕಪಿಂಜಲಋಷಿಯು ಅಂತಃಕರಣಪೂರ್ವಕ ಮಾಡಿದ ಪ್ರಯತ್ನ, ಮಹಾಶ್ವೇತೆಯ ಪಾತಿವ್ರತ್ಯಪ್ರಭಾವ, ಗಂಧರ್ವಲೋಕದ ಕಾದಂಬರೀ ಕನ್ಯಾಂತಃಪುರದ ವರ್ಣನೆ, ಹಿಮಗೃಹದ ವರ್ಣನೆ, ಕಾದಂಬರಿಯ ಮನೋರಥ ಕೈಗೂಡಿದ ಸಂಗತಿ, ವೈಶಂಪಾಯನವೆಂಬ ಗಿಳಿಯ ಪರಿಣಾಮ, ಇಷ್ಟು ವಿಷಯಗಳುಂಟು.

ಮುಖ್ಯವಾಗಿ ದೊಡ್ಡ ಮನಸ್ಸಿನ ಸ್ತ್ರೀಪುರುಷರು ತಮ್ಮ ಮಿತ್ರರಿಗೆ ಸಂಕಟ ಬಂದಾಗ, ತಾವು ಅವರ ಸಲುವಾಗಿ ಎಷ್ಟು ಕಷ್ಟಪಡುತ್ತಾರೆ, ಅವರಿಗೆ ಕಲ್ಯಾಣವಾಗುವ ಬಗ್ಗೆ ಎಷ್ಟು ಸಾಹಸ ಮಾಡುತ್ತಾರೆ, ಹಾಗೂ ಒಬ್ಬರ ಮೇಲೊಬ್ಬರು ಎಷ್ಟು ಪ್ರೀತಿ ಮಾಡುತ್ತಾರೆ ಎಂಬ ವಿಷಯದಲ್ಲಿಯೂ, ಪಾಪ ವಾಸನೆಯಿಂದ ಕೆಟ್ಟ ಪರಿಣಾಮವಾಗದೆ ಇರುವದಿಲ್ಲೆಂಬ ವಿಷಯದಲ್ಲಿಯೂ, ಆ ಪಾಪ ಪರಿಹಾರವಾಗುವದಕ್ಕೆ ದೇವರ ಧ್ಯಾನವೇ ಮುಖ್ಯವೆಂಬ ವಿಷಯದಲ್ಲಿಯೂ, ಈ ಗ್ರಂಥದಿಂದ ಚೆನ್ನಾಗಿಯೇ ಬೋಧನ ವಾಗುವಂತಿರುವದು.

ಗಂಗಾಧರ ಮಡಿವಾಳೇಶ್ವರ ತುರಮರಿ

ಗ್ರಂಥಕರ್ತ

ಕಾದಂಬರೀ ಕಥೆಯೊಳಗೆ ಬರುವವರ ಹೆಸರುಗಳು

ಶೂದ್ರಕ	–	ವಿದಿಶಾ ಪಟ್ಟಣದ ಅರಸು. (ಚಂದ್ರಾಪೀಡನ ಎರಡನೆಯ ಜನ್ಮ)
ಕುಮಾರಪಾಲಿತ	–	ಶೂದ್ರಕನ ಪ್ರಧಾನನು.
ಮಾತಂಗ	–	ಕಿರಾತನು.
ಜಾಬಾಲಿ	–	ಋಷೀಶ್ವರನು. ಈತನ ಆಶ್ರಮದಲ್ಲಿ ವೈಶಂಪಾಯನ ಗಿಳಿಯು ದಿನಗಳೆಯಿತು.
ಹಾರೀತ	–	ಜಾಬಾಲಿಯ ಮಗ.
ತಾರಾಪೀಡ	–	ಉಜ್ಜಯಿನೀ ಪಟ್ಟಣದ ಅರಸು.
ಚಂದ್ರಾಪೀಡ	–	ತಾರಾಪೀಡನ ಪಟ್ಟದ ರಾಣಿ.
ವಿಲಾಸವತಿ	–	ತಾರಾಪೀಡನ ಮಗನು. (ಪುಂಡರೀಕನ ಶಾಪದಿಂದ ಭೂಮಿಗೆ ಅವತರಿಸಿದ ಚಂದ್ರನು)
ಪತ್ರಲೇಖೆ	–	ಚಂದ್ರಾಪೀಡನ ತಾಂಬೂಲದ ಕರಡಿಗಿ ಹಿಡಿಯುವ ಪ್ರೀತಿಪಾತ್ರಳಾದ ದಾಸಿ. (ಭೂಮಿಗೆ ಅವತರಿಸಿದ ರೋಹಿಣಿ)
ಶುಕನಾಸ	–	ತಾರಾಪೀಡನ ಪ್ರಧಾನನು.
ಮನೋರಮೆ	–	ಶುಕನಾಸನ ಹೆಂಡತಿ.
ವೈಶಂಪಾಯನ	–	ಶುಕನಾಸನ ಮಗನು; ಚಂದ್ರಾಪೀಡನ ಜೀವದ ಗೆಳೆಯನು. (ಪುಂಡರೀಕನ ಎರಡನೆಯ ಜನ್ಮ) ಈತನೇ ಮಹಾಶ್ವೇತೆಯ ಶಾಪದಿಂದ ಗಿಳಿಯಾಗಿ ಹುಟ್ಟಿದನು.
ಇಂದ್ರಾಯುಧ	–	ಚಂದ್ರಾಪೀಡನ ಕುದುರೆ. (ಕಪಿಂಜಲನ ಎರಡನೆಯ ಜನ್ಮ)
ಶ್ವೇತಕೇತು	–	ತಪಸ್ವಿಯು.
ಪುಂಡರೀಕ, ಕಪಿಂಜಲ	–	ಜೀವದ ಗೆಳೆಯರಾದ ಋಷಿಕುಮಾರರು.
ಹಂಸ, ಗೌರಿ	–	ಮಹಾಶ್ವೇತೆಯ ತಂದೆ–ತಾಯಿಗಳಾದ ಗಂಧರ್ವರು.
ಮಹಾಶ್ವೇತೆ	–	ಗಂಧರ್ವಕನ್ನಿಕೆ.
ತರಲಿಕೆ	–	ಮಹಾಶ್ವೇತೆಯ ದಾಸಿಯು
ಚಿತ್ರರಥ, ಮದಿರೆ	–	ಕಾದಂಬರಿಯ ತಂದೆ–ತಾಯಿಗಳಾದ ಗಂಧರ್ವರು.
ಕಾದಂಬರಿ	–	ಗಂಧರ್ವ ಕನ್ನಿಕೆ.
ಕೇಯೂರಕ	–	ಕಾದಂಬರಿಯ ದಾಸನು.
ಮದಲೇಖೆ	–	ಕಾದಂಬರಿಯ ದಾಸಿಯು.
ಲಕ್ಷ್ಮಿ	–	ಒಬ್ಬ ಚಾಂಡಾಲ ಕನ್ನಿಕೆಯು.

******

ಕನ್ನಡ

ಕಾದಂಬರೀ ಕಥೆ

б ч

ಮಾಳವದೇಶದಲ್ಲಿ ವೇತ್ರವತೀ ನದೀತೀರದಲ್ಲಿ ವಿದಿಶಾ ಎಂಬ ಪಟ್ಟಣವಿತ್ತು; ಅಲ್ಲಿ ಪೂರ್ವಕಾಲದಲ್ಲಿ ಶೂದ್ರಕನೆಂಬ ಅರಸನು ರಾಜ್ಯವಾಳುತ್ತಿದ್ದನು. ಈತನು ನಾಲ್ಕು ಸಮುದ್ರಗಳಿಂದ ಬಳಸಲ್ಪಟ್ಟ ಯಾವತ್ತು ಜಂಬೂದ್ವೀಪವನ್ನು ಆಳುತ್ತಿದ್ದುದರಿಂದ ಎಲ್ಲ ಅರಸರು ಈತನ ಅಪ್ಪಣೆಯ ಮೇರೆಗೆ ನಡೆದುಕೊಳ್ಳುತ್ತಿದ್ದರು. ಈತನು ತನ್ನ ಭುಜಬಲ ಪರಾಕ್ರಮದಿಂದ ಎಲ್ಲ ವೈರಿಭೂಪರನ್ನು ತಲೆವಾಗಿಸಿ, ಪ್ರೀತಿಯಿಂದ ಮಾಂಡಲಿಕ ಭೂಪಾ ಲರನ್ನು ಮೆಚ್ಚಿಸಿ, ರಾಜನೀತಿಯಿಂದ ಸರ್ವ ಪ್ರಜೆಗಳನ್ನು ಪರಿಪಾಲಿಸುತ್ತಿದ್ದನು. ಆದುದ ರಿಂದ, ಯಾವತ್ತು ಜನರು ಯಾವಾಗಲೂ ಸುಖದಿಂದ ಸಂಸಾರ ಮಾಡುತ್ತ ಹಾಡಿ ಹರಸಿ, ಈತನಿಗೆ ಕಲ್ಯಾಣವಾಗಲೆಂತಲೂ, ಈತನೇ ಚಿರಕಾಲ ರಾಜ್ಯವಾಳಲೆಂತಲೂ, ದೇವರನ್ನು ಬೇಡಿಕೊಳ್ಳುತ್ತಿದ್ದರು. ಬೇಡುವ ಬಡವರಿಗೆ ಕೊಡುವಲ್ಲಿ ಕೊಡುಗೈ ದೊರೆ ಈತನೇ ಎಂದರೂ ಸಲ್ಲುವದು. ಈ ಅರಸನು ಸಕಲ ಶಾಸ್ತ್ರಗಳಲ್ಲಿಯೂ ಕಲೆಗಳಲ್ಲಿಯೂ ನಿಪುಣನಾಗಿ, ಸದ್ಗುಣಗಳಿಗೆ ತವರುಮನೆಯಾಗಿದ್ದನು.

ಈತನು ಪೃಥ್ವಿಯನ್ನು ಆಳುತ್ತಿರುವಾಗ, ಆನೆಗಳಲ್ಲಿಯೇ ಮದವಿಕಾರವಿತ್ತಲ್ಲದೆ ಈತನ ನಾಡೊಳಗಿನ ಜನರಲ್ಲಿದ್ದಿಲ್ಲ; ಖಡ್ಗಗಳಲ್ಲಿ ಕಲಂಕವಿತ್ತಲ್ಲದೆ, ಈತನ ಆಳಿಕೆಯಲ್ಲಿ ದ್ದಿಲ್ಲ; ಜನರಿಗೆ ಶಾಸ್ತ್ರ ಚಿಂತನವಲ್ಲದೆ ಬೇರೆ ಚಿಂತೆಯಿದ್ದಿಲ್ಲ; ತೆರವಾದ ಮನೆಗಳು, ಪಗಡೆ ಚತುರಂಗಪಟಗಳ ಮೇಲಲ್ಲದೆ, ಶೂದ್ರಕನ ರಾಜ್ಯದಲ್ಲಿದ್ದಿಲ್ಲ; ಕನಸಿನ ಹೊರತು, ಜನ ರೊಳಗೆ ಅಸಂಗತ ಭಾಷಣವಾಗುತ್ತಿದ್ದಿಲ್ಲ; ಈತನ ರಾಜ್ಯದೊಳಗಿನವರಿಗೆ, ಪರಲೋ ಕದ ಹೊರತು ಬೇರೆ ಯಾತರದೂ ಅಂಜಿಕೆಯಿದ್ದಿಲ್ಲ.

ಈ ಅರಸನ ಬಳಿಯಲ್ಲಿ ಕುಲಪರಂಪರಾಗತರಾದಂಥ, ಕುಲೀನರಾದಂಥ, ನೀತಿ ಶಾಸ್ತ್ರಜ್ಞರಾದಂಥ, ನಿರ್ಲೋಭಿಗಳಾದಂಥ ವಿದ್ವಾಂಸರಾದ ಮಂತ್ರಿಗಳು ಅನೇಕರಿದ್ದರು. ಇವರು ಬಹು ಜಾಣತನದಿಂದಲೂ, ತತ್ಪರತೆಯಿಂದಲೂ ರಾಜಕಾರ್ಯಗಳನ್ನು ನಡೆಸು ತ್ತಿದ್ದುದರಿಂದ ಅರಸನಿಗೆ ರಾಜ್ಯಭಾರದ ಚಿಂತೆಯಿದ್ದಿಲ್ಲ.

ಈ ಅರಸನಿಗೆ ಮಕ್ಕಳಿದ್ದಿಲ್ಲ ; ಮುಂದೆ ಪಟ್ಟಕ್ಕೆ ಪುತ್ರಸಂತಾನವಾಗಬೇಕೆಂದು ಮಂತ್ರಿ ಮುಂತಾದವರೆಲ್ಲರೂ ಬಯಸುತ್ತಿದ್ದಾಗ್ಯೂ, ಸ್ತ್ರೀ ಸುಖಕ್ಕೆ ಈತನ ಮನಸ್ಸು ಎಳೆಸು ತ್ತಿದ್ದಿಲ್ಲ. ಚೆಲ್ವಿಕೆಯಿಂದ ರತಿದೇವಿಯನ್ನು ನಾಚಿಸಿ ತಲೆವಾಗಿಸುವಂಥ, ವಿಲಾಸಗಳಿಂದ ಮನಸ್ಸಿಗೆ ಸೊಗಸುಗೊಳಿಸುವಂಥ, ವಿನಯ ಗುಣದಿಂದ ವರ್ತಿಸುವಂಥ, ಕುಲೀನ ಪತ್ನಿ ಯರಿದ್ದರೂ ಈ ಅರಸನು ಅವರ ಭೋಗಸುಖಕ್ಕೆ ಎರವಾಗಿದ್ದನು. ಕಾರಣವೇನೆಂದರೆ, ಈತನು ತನ್ನ ಗೆಳೆಯರಾದ ಅರಸುಮಕ್ಕಳೊಡಗೂಡಿಕೊಂಡು, ಒಮ್ಮೊಮ್ಮೆ ಹಾಡುವುದ

ರಲ್ಲಿ, ಒಮ್ಮೊಮ್ಮೆ ವೀಣಾಮೃದಂಗಗಳನ್ನು ಬಾರಿಸುವುದರಲ್ಲಿ, ಒಮ್ಮೊಮ್ಮೆ ಬೇಟೆಯಾಡುವುದರಲ್ಲಿ, ಒಮ್ಮೊಮ್ಮೆ ಪಂಡಿತ ಜನರನ್ನು ಕೂಡಿಸಿ ಕಾವ್ಯ-ನಾಟಕ ಮುಂತಾದ ಗ್ರಂಥಗಳನ್ನು ರಚಿಸುವುದರಲ್ಲಿ, ಒಮ್ಮೊಮ್ಮೆ ಶಾಸ್ತ್ರೀಯ ವಿಷಯ ವಿವೇಚನೆ ಮಾಡುವುದರಲ್ಲಿ ಒಮ್ಮೊಮ್ಮೆ ಇತಿಹಾಸ-ಪುರಾಣ-ಕಥೆಗಳನ್ನು ಕೇಳುವುದರಲ್ಲಿ, ಒಮ್ಮೊಮ್ಮೆ ಅರಮನೆಗೆ ಬಂದ ಅತಿಥಿಗಳಿಗೂ ಯತಿಗಳಿಗೂ ಆದರ ಸತ್ಕಾರಮಾಡಿ, ಅವರ ಬಯಕೆಗಳನ್ನು ಪೂರ್ಣಮಾಡುವುದರಲ್ಲಿ, ಯಾವಾಗಲೂ ಹೊತ್ತು ಗಳೆಯುತ್ತಿದ್ದನು.

ಒಂದು ದಿನ ಮುಂಜಾವಿನಲ್ಲಿ, ಸೂರ್ಯನು ಮೂಡಣಿಂದ ಮೇಲಕ್ಕೇರಿ ತನ್ನ ಹೊಂಬಣ್ಣದ ಕಿರಣಗಳನ್ನು ಹರವುತ್ತ ಬರುವಾಗ, ಶೂದ್ರಕರಾಜನು ಸಭಾಮಂಟಪದಲ್ಲಿ ಸುಖಾಸನದ ಮೇಲೆ ಅದೇ ಬಂದು ಕುಳಿತಿದ್ದನು. ಅಷ್ಟರಲ್ಲಿ, ಮೈಗೆ ಚಂದನವನ್ನು ಪೂಸಿಕೊಂಡು, ಬಿಳಿಯ ಬಟ್ಟೆಯನ್ನುಟ್ಟುಕೊಂಡು, ಬಲಗೈಯೊಳಗೆ ಬಂಗಾರದ ಬೆತ್ತವನ್ನು ಹಿಡಕೊಂಡು, ನಡುವಿನ ಎಡಗಡೆ ಜೋತಾಡುವ ಕತ್ತಿಯಿಂದ ಸರ್ಪಯುಕ್ತವಾದ ಚಂದನದ ಬಳ್ಳಿಯಂತೆ ಒಪ್ಪುವ ಒಬ್ಬ ದ್ವಾರಪಾಲಿಕೆಯು ಸಿಂಹಾಸನದ ಹತ್ತಿರ ಬಂದು, ಮೊಣಕಾಲೂರಿ, ನೆಲಕ್ಕೆ ಕೈಹಚ್ಚಿ, ಅರಸನಿಗೆ ಮುಜುರೆ ಮಾಡಿ ಎದ್ದು ನಿಂತುಕೊಂಡಳು. ಆಗ ಓಲಗದಲ್ಲಿ ಕುಳಿತ ಮಾಂಡಲಿಕ ಭೂಪಾಲರ ಕಿರೀಟಗಳ ರತ್ನಗಳೊಳಗೆ ಅವಳ ಪಡಿನೆಳಲು ಪ್ರತಿಬಿಂಬಿಸಿದ್ದರಿಂದ, ಅರಸನ ಮೂರ್ತಿಮಂತವಾದ ಆಜ್ಞೆಯನ್ನು ಅವರು ಶಿರಸಾವಹಿಸಿಕೊಂಡಿರುತ್ತಾರೋ ಏನೋ ಅನ್ನುವಂತೆ ತೋರಿತು. ಇಂಥ ದ್ವಾರಪಾಲಿಕೆಯು, ನಮ್ರಭಾವದಿಂದ ಅರಸನಿಗೆ ಕೈ ಮುಗಿದು,- “ಜೀಯಾ ಚಿತ್ತೈಸಬೇಕು, ತೆಂಕಣ ನಾಡಿನಿಂದ ಒಬ್ಬ ಚಾಂಡಾಲ ಕನ್ನಿಕೆಯು, ಕೈಯೊಳಗೆ ಒಂದು ಗಿಳಿಯ ಪಂಜರವನ್ನು ಹಿಡಕೊಂಡು, ಆ ಗಿಳಿಯನ್ನು ಒಡೆಯರಿಗೆ ಕಾಣಿಕೆ ಕೊಡಬೇಕೆಂತಲೂ ಸ್ವಾಮಿಗಳ ದರ್ಶನ ಸುಖವನ್ನು ಅನುಭೋಗಿಸಬೇಕೆಂತಲೂ ಹಾರೈಸಿಕೊಂಡು ಬಂದಿದ್ದಾಳೆ. ದೊರೆಗಳ ಅಪ್ಪಣೆಯಾದಂತೆ ನಡಕೊಳ್ಳುವೆನು” ಎಂದು ಬಿನ್ನವಿಸಿ ಸುಮ್ಮನೆ ನಿಂತಳು. ಈ ಮಾತು ಕೇಳಿ ಅರಸನು ಸುತ್ತು ಮುತ್ತು ಕುಳಿತ ಮಾಂಡಲಿಕರ ಮುಖ ನೋಡಿ, “ಚಿಂತೆಯಿಲ್ಲ, ಒಳಗೆ ಬರಲಿ” ಎಂದು ಅಪ್ಪಣೆ ಕೊಟ್ಟಕೂಡಲೆ, ದ್ವಾರಪಾಲಿಕೆಯು ಹೋಗಿ ಆ ಚಾಂಡಾಲ ಕನ್ನಿಕೆಯನ್ನು ಒಳಗೆ ಕರಕೊಂಡು ಬರುವಾಗ, ಆಕೆ ದೂರದಿಂದ ಸಭೆಯ ನಡುವೆ ಪ್ರಜ್ವಲಿಸುವದೊಂದು ಮಂಟಪವನ್ನು ಕಂಡಳು. ಆ ಮಂಟಪದ ನಾಲ್ಕೂ ಮೂಲೆಗಳಿಗೆ ರತ್ನಖಚಿತವಾದ ನಾಲ್ಕು ಕಂಬಗಳಿದ್ದವು. ಆ ಕಂಬಗಳ ತುದಿಗೆ ಬಂಗಾರದ ನಾಲ್ಕು ಸರಪಳಿಗಳನ್ನು ತೊಡಕಿಸಿ, ಮೇಲೆ ಬಿಳೀ ರೇಶಿಮೆಯ ಮೇಲ್ಕಟ್ಟು ಕಟ್ಟಿ, ಆ ಮೇಲ್ಕಟ್ಟಿನ ದಂಡೆ ಹಿಡಿದು ಮುತ್ತಿನ ಗೊಂಚಲುಗಳನ್ನು ಸಾಲ್ಗೊಳಿಸಿ ಜೋಲುಬಿಟ್ಟಿದ್ದರು. ಇಂಥ ಮಂಟಪದ ಮಧ್ಯದಲ್ಲಿ, ಚೆಲ್ವಾದ ಚಂದ್ರಕಾಂತದ ಸಿಂಹಾಸನದ ಮೇಲೆ, ಅರಸನು ಕುಳಿತಿದ್ದನು. ಆತನ ಎಡಬಲದಲ್ಲಿ ಇಬ್ಬರು ಸುಂದರ ಸ್ತ್ರೀಯರು ನಿಂತು, ಬಂಗಾರದ ಕಾವಿನ ಚಾಮರಗಳನ್ನು ಹಿಡಿದು, ತೋಳುಗಳನ್ನು ನೆಗವಿ ಸೂಳ್ವರಿದು ಡಾಳಿಸುತ್ತಿದ್ದರು. ಅರಸನ ಮೈಮೇಲಿನ ಬಿಳಿಯ ಉಡಿಗೆಯು, ಇಂಗಡಲೊಳಗಿನ ಬೆಳ್ನೊರೆಯನ್ನು ಹೋಲುತ್ತಿರುವುದು; ಎದೆಗೆ ತೊಡೆದ ಅರಗಜ, ಅಷ್ಟಗಂಧಗಳ ಸುವಾಸನೆಯು ಸುತ್ತಲೂ

ಚಿಮ್ಮುತ್ತಿರುವುದು. ನೊಸಲೊಳಗಿನ ಊರ್ಣಾ ಎಂಬ ಸಾರ್ವಭೌಮ ಚಿಹ್ನವು, ಮೃಣಾಲ ತಂತುವಿನಂತೆ ಸೂಕ್ಷ್ಮತೆಯಿಂದ ಒಪ್ಪುತ್ತಿರುವುದು ; ಕಿರೀಟದ ಮೇಲೆ ಹವಳ ಮಲ್ಲಿಗೆ ಹೂವಿನ ತುರಾಯವು ಶೋಭಿಸುತ್ತಿರುವುದು; ಇಂದ್ರನೀಲಮಣಿಯ ನೆಲಗಟ್ಟಿನಲ್ಲಿ ಪ್ರತಿ ಬಿಂಬಿಸಿದ ಅರಸನ ನೆಳಲು, ಪೃಥ್ವಿಯು ತನ್ನ ಪತಿಯನ್ನು ಪ್ರೀತಿಯಿಂದ ಹೃದಯದೊ ಳಗೇ ಇಟ್ಟುಕೊಂಡಿದ್ದಾಳೋ ಏನೋ ಎನ್ನುವಂತೆ ತೋರುತ್ತಿರುವುದು. ಈ ಮೇರೆಗೆ ಶೋಭಿಸುವ ಶೂದ್ರಕರಾಜನನ್ನು ಆ ಚಾಂಡಾಲಕನ್ನಿಕೆಯು ನೋಡಿ, ದೂರ ನಿಂತು, ತಾನು ಬಂದದ್ದು ಸರ್ವರಿಗೆ ತಿಳಿಯಬೇಕೆಂಬ ಬಗೆಯಿಂದ, ಕಂಕಣಗಳು ಝಣಲೆನ್ನುವ ಹಾಗೆ ಕೋಮಲವಾದ ಕೈಯೆತ್ತಿ, ಬಿದಿರ ಜೆಳಿಕೆಯನ್ನು ನೆಲಕ್ಕೆ ಅಪ್ಪಳಿಸಲು, ಒಮ್ಮಿಂ ದೊಮ್ಮೆ ಆದ ಸಪ್ಪಳ ಕೇಳಿ ಶೂದ್ರಕನ ಮುಖ ನೋಡುತ್ತ ಕುಳಿತ ಮಾಂಡಲಿಕ ಮುಕುಟವರ್ಧನರೆಲ್ಲರೂ ಗಕ್ಕನೆ ತಿರುಗಿ ಅವಳನ್ನು ನೋಡಿದರು.

ಆಗ ದ್ವಾರಪಾಲಿಕೆಯು- "ಜೀಯಾ ಚಾಂಡಾಲಕನ್ನಿಕೆಯನ್ನು ನೋಡಬೇಕು" ಎಂದು ಅರಿಕೆ ಮಾಡಿಕೊಂಡ ಬಳಿಕ, ಅರಸನು ಅವಳನ್ನು ದಿಟ್ಟಿಸಿ ನೋಡಹತ್ತಿದನು. ಅವಳ ಮುಂದೆ ಮೈಮೇಲೆ ಬಿಳೀ ಬಟ್ಟೆಹೊತ್ತಂಥ ಒಬ್ಬ ದಿನಹೋದ ಮನುಷ್ಯನಿದ್ದನು; ಅವನು ಹೊಲೆಯನಾಗಿದ್ದರೂ, ಸೌಮ್ಯಪುರುಷನಂತೆ ತೋರುತ್ತಿದ್ದನು. ಆಕೆಯ ಹಿಂದೆ ಒಬ್ಬ ಹುಡು ಗನಿದ್ದನು; ಅವನೂ ಹೊಲೆಯರವನೇ. ಆ ಹುಡುಗನ ಎರಡೂ ಕೆನ್ನೆಗಳ ಮೇಲಿನ ಜುಲುಪಿಗಳು ಗಾಳಿಗೆ ಹಾರಾಡುತ್ತಿದ್ದವು ; ಅವನು ಕೈಯೊಳಗೆ ಬಂಗಾರದ ತಂತಿಯ ಪಂಜರವನ್ನು ಹಿಡಿದಿದ್ದನು; ಅದರೊಳಗೆ ಒಂದು ಗಿಳಿಯಿತ್ತು. ಅದರ ಹಸರು ಬಣ್ಣದಿಂದ ಆ ಪಂಜರವು ಪಚ್ಚರತ್ನದ ಪಂಜರದ ಹಾಗೆ ಕಾಣಿಸುತ್ತಿರುವುದು. ಆ ಚಾಂಡಾಲ ಕನ್ನಿ ಕೆಯು ಬಹಳ ಕಪ್ಪು ಇದ್ದುದರಿಂದ, ಇಂದ್ರನೀಲಮಣಿಯ ಗೊಂಬೆಯು ಮಾತಾಡುವಂತೆ ಒಪ್ಪುತ್ತಿರುವಳು. ಹಿಮ್ಮಡತನಕ ಇಳಿಬಿದ್ದ ಕರಿಯ ನಿಲುವಂಗಿಯನ್ನು ತೊಟ್ಟುಕೊಂಡು, ಮೇಲೆ ಹೊಂಬಣ್ಣದ ಶೆಲ್ಲೆಯನ್ನು ಹೊತ್ತಿದ್ದಳು. ತಲೆಗೂದಲೊಳಗೆ ಹಸ್ತಿದಂತದ ಹಣಿಗೆ ಇಟ್ಟುಕೊಂಡುದರಿಂದ, ಅದು ನೀಲವರ್ಣದ ಆಕಾಶದೊಳಗಿನ ಚಂದ್ರಬಿಂಬದಂತೆ ಹೊಳೆ ಯುತ್ತಿರುವುದು. ಅವಳ ನೊಸಲೊಳಗಿನ ಗೋರೋಚನದ ಬೊಟ್ಟು ನೆಟ್ಟಗೆ ಎದ್ದು ಕಾಣಿ ಸುತ್ತಿರುವುದು. ಅಂಗಾಲಿಗೆ ಅಲತಿಗೆಯ ರಸವನ್ನು ತೊಡೆದುದರಿಂದ, ಆಕೆಯ ಪೈಜಣದ ಅಡಿಗಳು ಅಶೋಕದ ತಳಿರುಗಳಂತೆ ತೋರುತ್ತಿರುವವು. ಕಾಲೊಳಗಿನ ಪೈಜಣದ ರತ್ನ ಪ್ರಭೆಯು ಅವಳ ಮೈಯಲ್ಲಿ ಹಬ್ಬಿರುವುದು. ತಲೆಯಲ್ಲಿ ಚಂದನದ ಎಳೆದಳಿರು ಮುಡಿದು, ಕೈಯಲ್ಲಿ ಕಮಲಪುಷ್ಪವನ್ನು ಹಿಡಿದಿದ್ದಳು. ನೂತನ ಯೌವನದಿಂದಲೂ, ಸರಿಯಾದ ಆಕಾರದಿಂದಲೂ, ಲೋಕೋತ್ತರವಾದ ಲಾವಣ್ಯದಿಂದಲೂ, ಪುರುಷರ ಮನಸ್ಸನ್ನು ಎಳಕೊಳ್ಳುವಲ್ಲಿ ಸಂಪನ್ನಳಿದ್ದಳು. ಹೊಲೆಯರಲ್ಲಿ ಹುಟ್ಟಿದ್ದೊಂದೇ ಕುಂದಲ್ಲದೆ, ಬೇರೆ ಯಾವ ಕುಂದೂ ಇದ್ದಿಲ್ಲ. ಇಂಥ ಭುವನಸುಂದರಿಯಾದ ಮಾತಂಗಕನ್ನಿಕೆಯನ್ನು ನೋಡಿ ಅರಸನು ಬೆರಗಾಗಿ ಮನದೊಳಗೆ- "ಆಹಹಾ, ಬ್ರಹ್ಮನು ಎಂಥ ಹುಚ್ಚನು! ಎಂಥಲ್ಲಿ ರೂಪಲಾವಣ್ಯದ ನಿಕ್ಷೇಪವನ್ನು ಇಟ್ಟನು! ಆಕೃತಿಯಿಂದ ಅತಿ ಮನೋಹರಳಾದಾಗ್ಯೂ, ಹೊಲೆಯರ ಕುಲದಲ್ಲಿ ಹುಟ್ಟಿದ್ದರಿಂದ ಇವಳು ದೂಷಿತಳೇ ಸರಿ. ಸೌಂದರ್ಯದ ಹೆಮ್ಮೆ

ಯುಳ್ಳ ಸಕಲ ಲೋಕದೊಳಗಿನ ಸ್ತ್ರೀಯರನ್ನು ಈಕೆ ಸೋಲಿಸಲೆಂಬ ಬಗೆಯಿಂದ, ಬ್ರಹ್ಮನು ಇಂಥ ಚೆಲ್ವಿಕೆಯಿಟ್ಟನೋ! ಇಲ್ಲವೆ, ಮುಟ್ಟಿದರೆ ಮಾಸುವಳೆಂತಲೂ, ಮಾಸಿದರೆ ತಾನು ನಿರ್ಮಾಣಮಾಡಿದ ಸುಕುಮಾರತನಕ್ಕೆ ಭಂಗಬರುತ್ತದೆಂತಲೂ ಬಗೆದು, ಇವಳ ಚೆಲ್ವಿಕೆಯು ಅಚ್ಚಳಿಯದೆ ಸ್ವಚ್ಛವಾಗಿರಲೆಂದು ಮುಟ್ಟಬಾರದ ಕುಲದಲ್ಲಿ ಇವಳನ್ನು ಹುಟ್ಟಿಸಿದನೊ! ಏನೋ!" ಎಂದು ಯೋಚಿಸುತ್ತಿರುವಾಗ, ಆ ಚಾಂಡಾಲ ಕನ್ನಿಕೆಯು ಅರಸನಿಗೆ ತಲೆವಾಗಿ ನೆಲಮುಟ್ಟಿ ನಮಿಸಿ, ಆತನ ಅಪ್ಪಣೆಯಿಂದ, ಇಂದ್ರನೀಲಮಣಿಯ ನೆಲಗಟ್ಟಿನ ಮೇಲೆ ಕುಳಿತುಕೊಂಡಳು. ಅವಳ ಸಂಗಡ ಬಂದ ಆ ಮುದುಕನು, ಆ ಹುಡುಗನ ಕೈಯೊಳಗಿನ ಗಿಳಿಯ ಪಂಜರ ತಕ್ಕೊಂಡು ಮುಂದಕ್ಕೆ ಬಂದು, ಅದನ್ನು ಮುಂದೆಮಾಡಿ ವಿನಯದಿಂದ "ಜೀಯಾ, ಈ ಗಿಳಿಯು ಸಕಲಶಾಸ್ತ್ರಗಳನ್ನೂ, ರಾಜನೀತಿಯನ್ನೂ ಕಲಿತಿದೆ: ಇತಿಹಾಸ, ಪುರಾಣ, ಸಂಗೀತ, ಸುಭಾಷಿತ, ನಾಟಕ, ನೃತ್ಯ ಮುಂತಾದ ಕಲೆಗಳನ್ನು ಚನ್ನಾಗಿ ಬಲ್ಲದು; ವಿನೋದದ ಮಾತುಗಳನ್ನಾಡುವಲ್ಲಂತೂ ಮೇಲಾದದ್ದು ; ವೀಣಾಮೃದಂಗಗಳನ್ನು ಬಾರಿಸಬಲ್ಲದು; ಇದರ ಹೆಸರು ವೈಶಂಪಾಯನ; ದೊರೆಗಳಲ್ಲಿ ಎಲ್ಲ ರತ್ನಗಳುಂಟು; ಇದೂ ಒಂದು ರತ್ನವು ಸ್ವಾಮಿಗಳ ಸನ್ನಿಧಾನದಲ್ಲಿರತಕ್ಕದೆಂಬ ಇಚ್ಛೆಯಿಂದ, ಈ ಕನ್ನಿಕೆಯು ಒಡೆಯರ ಅಡಿಗಳ ಬಳಿಗೆ ಬಂದಿದ್ದಾಳೆ ; ದಯಮಾಡಿ ಇದನ್ನು ಅಂಗೀಕರಿಸಬೇಕು" ಎಂದು ಆ ಪಂಜರವನ್ನು ಮುಂದಿಟ್ಟು ಹಿಂದಕ್ಕೆ ಸರಿದನು.

ಕೂಡಲೆ ಆ ಪಂಜರದೊಳಗಿನ ಅರಗಿಳಿಯು ಅರಸನ ಮುಖವನ್ನು ನೋಡಿ, ಬಲಗಾಲೆತ್ತಿ- "ಭೂಲೋಕದೊಡೆಯನೆ, ನಿನಗೆ ಜಯವಾಗಲಿ" ಎಂದು ಹರಸಿ, ಅರಸನನ್ನು ಅನುಲಕ್ಷಿಸಿ ಈ ಕಂದವನ್ನು ಅಂದಿತು:-

"ದೊರೆಗಳೆ ನಿಮ್ಮರಿಗಳ ಹೆಂ ।
ಡಿರ ಎದೆಗಳು* ಮಿಂದು ತೋರ್ಪುವಾ ಕಣ್ಣೀರಿಂ ॥
ದುರಿದು ಶೋಕಾಗ್ನಿಯಿಂದಂ ।
ವರಯತಿ ತಪಮಾಡುವಂತೆ ತೊರೆದಾಹಾರಂ ॥೧॥

ತಾತ್ಪರ್ಯ:- ದೊರೆಗಳೇ, ನಿಮ್ಮ ವೈರಿಗಳ ಹೆಂಡಿರ ಎದೆಗಳು ತಪಸ್ಸು ಮಾಡುತ್ತವೆಯೋ ಏನೋ ಅನ್ನುವಂತೆ ತೋರುತ್ತವೆ. ಹೇಗೆಂದರೆ, ತಪಸ್ಸು ಮಾಡುವವರು ಯಾವಾಗಲೂ ಸ್ನಾನಮಾಡುವಂತೆ, ಇವೂ ಕಣ್ಣೀರಿಂದ ತೊಯ್ಯುತ್ತವೆ; ಅವರು ಬೆಂಕಿಯನ್ನು ಇಟ್ಟುಕೊಂಡಂತೆ ಇವೂ ದುಃಖಾಗ್ನಿಯನ್ನು ಇಟ್ಟುಕೊಂಡಿವೆ; ಅವರು ಆಹಾರವನ್ನು ತೊರೆಯುವಂತೆ ಇವೂ ಆ (ಮುತ್ತಿನ) ಹಾರವನ್ನು ತೊರೆದಿರುವುವು".

ಅರಸನು ಈ ಕಂದವನ್ನು ಕೇಳಿ ಆಶ್ಚರ್ಯಗೊಂಡು, ಬಳಿಯಲ್ಲಿ ಕುಳಿತ ಬೃಹಸ್ಪತಿ ಸಮಾನನಾದ ಕುಮಾರಪಾಲಿತನೆಂಬ ಮುಖ್ಯಮಂತ್ರಿಗೆ, ಹರ್ಷದಿಂದ- "ನೀವು ಈ ಗಿಳಿಯ ನುಡಿಗಳನ್ನು ಕೇಳಿದಿರೋ! ಇದರ ಸ್ವರವೆಷ್ಟು ಮಂಜುಳವು! ವರ್ಣೋಚ್ಚಾರವೆಷ್ಟು ಸ್ಪಷ್ಟವು! ಬಹುತರವಾಗಿ ಪಶುಪಕ್ಷಿಗಳು ಆಹಾರನಿದ್ರಾಭಯ ಮುಂತಾದುವುಗಳನ್ನು

*** ಮೂಲಗ್ರಂಥದಲ್ಲಿ "ಸ್ತನಯುಗ" ಎಂದು ಇದೆ**

ಮಾತ್ರ ಬಲ್ಲವು. ಬುದ್ಧಿಪೂರ್ವಕವಾಗಿ ಹೊಸ ಕಲ್ಪನೆಗಳನ್ನು ಅರಿಯವು. ಈ ಪಕ್ಷಿಯು, ತಾನು ಕಲ್ಪನೆಯಿಂದ ರಚಿಸಿ, ಈ ಕಂದವನ್ನು ಅಂದಿತು. ಇದು ಬಹು ಆಶ್ಚರ್ಯವು" ಅಂದನು. ಇದನ್ನು ಕೇಳಿ ಕುಮಾರಪಾಲಿತನು- "ಜೀಯಾ ಇದರೊಳಗೇನು ಆಶ್ಚರ್ಯ? ಗಿಳಿ, ಗೊರವಂಕ ಮುಂತಾದ ಕೆಲವು ಪಕ್ಷಿಗಳು, ಕಲಿಸಿದರೆ ಕಲಿತು ಮಾತಾಡುತ್ತವೆ. ಅಂಥದರೊಳಗೂ ಇವು, ಪೂರ್ವಜನ್ಮದ ಕರ್ಮಧರ್ಮಗಳ ಸಂಯೋಗದಿಂದ, ಒಂದೊಂದು ವೇಳೆ ಶಾಸ್ತ್ರನೀತಿಗಳನ್ನು ಸಹ ಕಲಿಯಬಹುದು" ಎಂದು ಮಾತಾಡುವಷ್ಟ ರೊಳಗೆ ಆರು ತಾಸಿನ ಭೇರಿ ಬಾರಿಸಿತು. ಆ ಧ್ವನಿಯನ್ನು ಕೇಳಿ, ಸ್ನಾನದ ಸಮಯವಾಯಿ ತೆಂದು ಓಲಗದೊಳಗಿನ ಸರ್ವಮಾಂಡಲಿಕ ಭೂಪಾಲರಿಗೆ ಅಪ್ಪಣೆ ಕೊಟ್ಟು, ಅರಸನು ಸಭಾಮಂಟಪದಿಂದ ಎದ್ದು, ತಾನೇ ಆ ಚಾಂಡಾಲ ಕನ್ನಿಕೆಗೆ "ಸ್ವಸ್ಥದಿಂದ ಇಲ್ಲಿ ಇರು" ಎಂದು ಹೇಳಿ ವೈಶಂಪಾಯನವನ್ನು ಒಳಗೆ ಒಯ್ದು ಏನಾದರೂ ತಿನ್ನಿಸೆಂದು, ತನ್ನ ತಾಂಬೂಲದ ಕರಡಿಗೆ ಹಿಡಿಯುವ ಸ್ತ್ರೀಗೆ ಅಪ್ಪಣೆ ಮಾಡಿ ಅಂತಃಪುರವನ್ನು ಹೊಕ್ಕನು.

ಬಳಿಕ ಅರಸನು, ತನ್ನ ಮಿತ್ರರಾದ ರಾಜಪುತ್ರರನ್ನು ಸಂಗಡ ಕರೆದುಕೊಂಡು ಗರಡಿಮನೆಗೆ ಹೋಗಿ, ಅಲ್ಲಿ ಗರಡಿ ಸಾಧಕ ಮಾಡಿ, ಲೋಡು ತಿರುವಿ, ಕುಸ್ತಿ ಹಿಡಿದು ಜೋರನೆ ಬೆವತನು ; ಆಗ ಆತನ ಮೈಮೇಲಿನ ಬೆವರಹನಿಗಳು ಮುತ್ತುಗಳಂತೆ ಶೋಭಿ ಸುತ್ತಿದ್ದವು.

ಅಷ್ಟರೊಳಗೆ, ಸೇವಕರು ಸ್ನಾನಗೃಹದೊಳಗೆ ಮೇಲೆ ಮೇಲ್ಕಟ್ಟು ಕಟ್ಟಿ, ಕೆಳಗೆ ಸ್ಫಟಿಕದ ಚೌಕಿಯನ್ನು ಇಟ್ಟು, ಒಂದು ಮಗ್ಗುಲಿಗೆ ಗಂಧೋದಕ ತುಂಬಿದ ಬಂಗಾರದ ಡೋಣಿಯನ್ನೂ, ಒತ್ತಟ್ಟಿಗೆ ಪುನುಗು-ಜವಾದಿ ಬೆರೆದ ನೀರು ತುಂಬಿದ ಬೆಳ್ಳಿಯ ಕೊಡ ಗಳನ್ನೂ ಇಟ್ಟು, ಸ್ನಾನದ ಸರ್ವಸಿದ್ಧತೆ ಮಾಡಿದ್ದರು. ಅರಸನು ಬಂದು, ಸ್ಫಟಿಕದ ಚೌಕಿಯ ಮೇಲೆ ಕುಳಿತ ಕೂಡಲೆ ಮಾರ್ಗ ನಿರೀಕ್ಷಿಸುತ್ತ ನಿಂತ ವಾರನಾರಿಯರು, ತವಕದಿಂದ ತಮ್ಮ ಎದೆಯ ಮೇಲಿನ ಸೆರಗು ಒಡ್ಯಾಣದೊಳಗೆ ತೊಡಕಿಸಿಕೊಂಡು, ಮುಂಗೈ ಕಂಕಣ ಗಳನ್ನು ಹಿಂದಕ್ಕೆ ಸರಿಸಿಕೊಂಡು, ಕಾಲೊಳಗಿನ ಪೈಜಣಗಳನ್ನು ತೆಗೆದಿಟ್ಟು ಮುಂದಕ್ಕೆ ಬಂದ ಮುಂದಲೆಯ ಕೂದಲುಗಳನ್ನು ಹಿಂದಕ್ಕೆ ತಿದ್ದಿಕೊಂಡು ಸೀರೆಯ ನಿರಿಗೆಗಳನ್ನು ಕಾಲೊಳಗೆ ಅವಚಿ ಹಿಡಕೊಂಡು, ಅರಸನ ಮೈಗೆ ಮಲ್ಲಿಗೆ ಎಣ್ಣೆಯನ್ನು ಪೂಸಿ, ಕೋಮ ಲವಾದ ಕೈಗಳಿಂದ ತಿಕ್ಕಿ ತಿಕ್ಕಿ ಮೈತೊಳೆದರು. ಆಗ ಜಲದೇವತೆಗಳು ವರುಣನಿಗೆ ಸ್ನಾನ ಮಾಡಿಸುತ್ತಾರೋ ಏನೋ ಅನ್ನುವಂತೆ ತೋರಿತು.

ಈ ಮೇರೆಗೆ ಅರಸನು ಸ್ನಾನಮಾಡಿ, ಸೂಕ್ಷ್ಮವಾದ ಬಿಳಿಯ ಮಡಿವಸ್ತ್ರವನ್ನು ಉಟ್ಟುಕೊಂಡು, ತಲೆಗೆ ಬಿಳಿಯ ರೇಶಿಮೆಯ ಶಾಲನಾಮೆಯನ್ನು ಸುತ್ತಿಕೊಂಡು, ಮಂತ್ರೋ ದಕದಿಂದ ಸೂರ್ಯನಿಗೆ ಅರ್ಘ್ಯಕೊಟ್ಟು, ಪಿತೃತರ್ಪಣ ಮಾಡಿ, ದೇವರ ಮನೆಯೊಳಗೆ ಹೋಗಿ, ಶಿವಪೂಜೆ ಮಾಡಿ, ಹೋಮಶಾಲೆಯಲ್ಲಿ ಹೋಮಕರ್ಮವನ್ನು ತೀರಿಸಿ, ವಿಲೇಪನ ಗೃಹದೊಳಗೆ ಹೊಕ್ಕು, ಹಣೆಗೆ ಕೇಶರಗಂಧದ ಬೊಟ್ಟು ಹಚ್ಚಿಕೊಂಡು, ಕಸ್ತೂರೀಕರ್ಪೂರ ಗಳಿಂದ ಬೆರೆದ ಶ್ರೀಗಂಧವನ್ನು ಸರ್ವಾಂಗಕ್ಕೂ ಲೇಪನ ಮಾಡಿಕೊಂಡು, ಮೈಮೇಲೆ

ಬಲುಬೆಲೆಯ ಶಾಲುಜೋಡಿಯನ್ನು ಹೊದ್ದುಕೊಂಡು, ಭೋಜನ ಶಾಲೆಯೊಳಗೆ ದಿನಾಲು ತನ್ನ ಪಂಕ್ತಿಯಲ್ಲಿ ಉಂಬ ಆಪ್ತರಾದ ರಾಜಪುತ್ರರೊಡಗೊಂಡು, ಪ್ರೀತಿಯಿಂದ ಷಡ್ರಸಾನ್ನವನ್ನು ಯಥೇಚ್ಛವಾಗಿ ಭೋಜನ ಮಾಡಿದನು.

ಬಳಿಕ ತ್ರಯೋದಶಗುಣ ತಾಂಬೂಲ ಸವಿದು, ಭೋಜನವಾದ ಮೇಲೆ ಹೋಗಿ ಕುಳಿತುಕೊಳ್ಳುವ ಮಂಟಪಕ್ಕೆ ಹೋದನು. ಆ ಮಂಟಪದ ನಾಲ್ಕೂ ಮಗ್ಗಲಿಗೆ ಸ್ಫಟಿಕದ ಗೋಡೆಯಂತೆ ಒಪ್ಪುವ ಬಿಳೀ ಪರದೆಗಳು ಇಳಿಬಿಟ್ಟಿದ್ದವು. ಕಸ್ತೂರಿಯೊಡನೆ ಬೆರೆದ ಚಂದನೋದಕದಿಂದ ನೆಲವನ್ನು ಸಾರಿಸಿ, ಅದರ ಮೇಲೆ ಅರಳಮಲ್ಲಿಗೆ ಹೂವುಗಳನ್ನು ಹರವಿದ್ದರಿಂದ, ಆ ನೆಲವು ನಕ್ಷತ್ರಗಳಿಂದ ಶೋಭಿಸುವ ಆಕಾಶಮಂಡಲದಂತೆ ಒಪ್ಪು ತ್ತಿತ್ತು. ಆ ಮಂಟಪದ ನಾಲ್ಕೂ ಮೂಲೆಯ ಬೆಳ್ಳಿಯ ಕಂಬಗಳಲ್ಲಿ ಕೆತ್ತಿದ ಪುತ್ಥಳಿಗಳು ಗೃಹದೇವತೆಗಳಂತೆ ಶೋಭಿಸುತ್ತಿದ್ದವು. ಆ ಮಂಟಪದ ಮಧ್ಯಭಾಗದಲ್ಲಿ ಸ್ಫಟಿಕದ ಕಟ್ಟೆಯ ಮೇಲೆ ಹಸ್ತಿದಂತದ ಮಂಚವಿಟ್ಟು ಅದರ ಮೇಲೆ ಹಂಸತುಪ್ಪಳ ಹಾಸಿಗೆ ಹಾಕಿ, ಮೇಲೆ ಅದೇ ಆಗ ಅರಳಿದ ಜಾಜಿಮಲ್ಲಿಗೆಹೂವುಗಳ ತನಿಗಂಪಿನಿಂದಲೂ, ಅಗರುಧೂಪ ದಿಂದಲೂ, ಘಮಘಮಿಸುವ ಬಿಳಿಯ ಬಟ್ಟೆಯನ್ನು ಹಾಸಿ, ಮೇಲ್ಗಡೆಗೆ ಕುತ್ನಿಯ ತಲೆದಿಂಬನ್ನೂ ಕಾಲದೆಸೆಗೆ ಶಾಲಜೋಡಿಯನ್ನೂ ಇಟ್ಟಿದ್ದರು. ಆ ಮಂಚದ ಮೇಲೆ ಅರಸನು ಕುಳಿತುಕೊಂಡು, ಯಾವಾಗ ಆ ಗಿಣಿಯ ಮುಖದಿಂದ ಅದರ ವೃತ್ತಾಂತವನ್ನೆಲ್ಲ ಕೇಳೇನೆಂದು ಲವಲವಿಕೆಯುಳ್ಳವನಾಗಿ "ಅಂತಃಪುರದೊಳಗಿನ ವೈಶಂಪಾಯನನನ್ನು ತಕ್ಕೊಂಡು ಬಾ" ಎಂದು ಹತ್ತಿರ ನಿಂತ ತೊತ್ತಿಗೆ ಅಪ್ಪಣೆ ಮಾಡಿದನು. ಆ ತೊತ್ತು ಆ ಗಿಣಿಯ ಪಂಜರ ತಂದು ಮುಂದಿಟ್ಟ ಕೂಡಲೆ ಅರಸನು ಗಿಳಿಯನ್ನು ನೋಡಿ— "ರಾಣಿ ವಾಸದೊಳಗೆ ನೀನು ಏನೇನು ತಿಂದೆ?" ಎಂದು ಕೇಳಲು— "ಜೀಯಾ, ಜೇಂಗೊಡದೊಳಗಿನ ನೆಲ್ಲಿಕಾಯಿಗಳನ್ನೂ, ಸೊಕ್ಕಿದ ಕೋಗಿಲೆಗಳ ಕಣ್ಣುಗಳ ಬಣ್ಣದ ನೀರಲ ಹಣ್ಣುಗಳನ್ನೂ ಸಿಂಹನ ಹೊಡೆತಕ್ಕೆ ನೆತ್ತರಗೂಡಿ ಅದೇ ಉದುರಿಬಿದ್ದ ಆನೆದಲೆಯೊಳಗಿನ ಮುತ್ತುಗಳಂತೆ ಕಂಗೊಳಿಸುವ ದಾಳಿಂಬೆ ಬೀಜಗಳನ್ನೂ, ದ್ರಾಕ್ಷೆಯ ಹಣ್ಣುಗಳನ್ನೂ, ರಾಣಿದೊರೆಗಳು ತಾವೇ ತಮ್ಮ ಕೈಮುಟ್ಟಿ ನನಗೆ ಅತಿ ಪ್ರೀತಿಯಿಂದ ತಿನಿಸಿ, ಬಳಿಕ ರಾಯನೆಲ್ಲಿಯ ರಸವನ್ನು ಕುಡಿಸಿದರು; ಆ ಫಲಗಳೆಲ್ಲ ಅಮೃತದಂತೆ ನನಗೆ ಸವಿ ಹತ್ತಿದವು" ಎಂದು ಆ ಗಿಳಿಯು ಹೇಳುವಾಗ ನಡುವೆ ಅರಸು— "ಒಳ್ಳೆಯದು ಇದು ಇರಲಿ; ಮೊದಲು ನನಗೆ ನಿನ್ನ ವೃತ್ತಾಂತವನ್ನು ಹೇಳು. ನೀನು ಯಾವ ನಾಡೊಳಗೆ ಹುಟ್ಟಿದಿ? ನಿನ್ನ ತಾಯಿ ತಂದೆಗಳು ಯಾರು? ನಿನಗೆ ವೈಶಂಪಾಯನನೆಂಬ ಹೆಸರು ಬಂದ ಕಾರಣವೇನು? ನಿನಗೆ ವೇದಶಾಸ್ತ್ರ ಜ್ಞಾನವು ಹೇಗೆ ಪ್ರಾಪ್ತವಾಯಿತು? ಇದೆಲ್ಲ ನಿನಗೆ ಜನ್ಮಾಂತರದ ಸ್ಮರಣದಿಂದ ಪ್ರಾಪ್ತವಾಯಿತೋ? ಯಾವನಾದರೂ ಸಿದ್ಧಪುರುಷನ ವರದಿಂದ ಪ್ರಾಪ್ತವಾಯಿತೋ? ಇಲ್ಲವೆ ಪಕ್ಷಿಯ ರೂಪವನ್ನು ತಾಳಿ ಗುಪ್ತರೂಪದಿಂದಿರುವ ಯಾವನಾದರೂ ಮಹಾಪುರುಷನಿರುವಿಯೋ? ನೀನು ಮೊದಲು ಎಲ್ಲಿ ಇದ್ದಿ? ಹುಟ್ಟಿ ಎಷ್ಟು ದಿವಸವಾಯಿತು? ನೀನು ಇಷ್ಟು ಜಾಣನಿದ್ದು ಆ ಚಾಂಡಾಲ ಕನ್ನಿಕೆಯ ಕೈಯೊಳಗೆ ಸಿಕ್ಕ ಕಾರಣವೇನು? ಇಲ್ಲಿಗೆ ಬಂದ ಕಾರಣವೇನು? ಇದನ್ನೆಲ್ಲ ಸಾದ್ಯಂತವಾಗಿ ನಮಗೆ ವಿಸ್ತರಿಸಬೇಕು" ಎಂದು ಆ ಗಿಳಿಗೆ ಅಪ್ಪಣೆ ಮಾಡಿದನು.

ಈ ಮೇರೆಗೆ ಅರಸನು ಆದರದಿಂದ ತಾನಾಗಿ ಕೇಳಿದ್ದಕ್ಕೆ ವೈಶಂಪಾಯನ ಗಿಳಿಯು ಕ್ಷಣಹೊತ್ತು ಮನದೊಳಗೆ ಆಲೋಚಿಸಿ ಆನಂದಬಟ್ಟು, "ಜೀಯಾ, ನನ್ನ ಕಥೆಯು ಬಹು ವಿಸ್ತಾರವಿದೆ, ತಮಗೆ ಬೇಸರು ಬಂದೀತು. ಆದರೂ ಕೇಳುವ ಆಕಾಂಕ್ಷೆಯಿದ್ದರೆ ಹೇಳುತ್ತೇನೆ, ಚಿತ್ತಗೊಟ್ಟು ಆಲಿಸಬೇಕು" ಎಂದು ಹೇಳಲಾರಂಭಿಸಿತು.

"ಮೂಡಣ-ಕಡಲ ಮೊದಲ್ಗೊಂಡು ಪಡುವಣ-ಕಡಲ ಪರ್ಯಂತರ ಹಬ್ಬಿದಂಥ ವಿಂಧ್ಯಾಟವಿಯೆಂಬುದೊಂದು ದೊಡ್ಡ ಅರಣ್ಯವಿದೆ. ಅದರೊಳಗೆ ಹಿಂಡುಗಟ್ಟಿ ತಿರುಗುತ್ತಿರುವ ಸಾವಿರಾರು ಕಾಡಾನೆಗಳ ಮದೋದಕ ಬಿದ್ದು ಯಾವಾಗಲೂ ನೆಲವು ನೆನೆಯುವದರಿಂದ, ಅಲ್ಲಿಯ ಮರಗಳು ಬಹು ಎತ್ತರವಾಗಿ ಬೆಳೆದು, ಮುಗಿಲಿಗೆ ಮುದ್ದುಕೊಡುತ್ತವೆ. ಅವುಗಳ ತುದಿಯ ಮೇಲಿನ ಹೂವುಗಳು ಆಕಾಶದೊಳಗಿನ ತಾರೆಗಳಂತೆ ಒಪ್ಪುವವು. ಆ ಕಾನನದೊಳಗೆ ಹುಲಿ, ಕರಡಿ, ಸಿಂಹ ಮುಂತಾದ ಕ್ರೂರಮೃಗಗಳ ಧ್ವನಿಗಳು ಯಾವಾಗಲೂ ಕಿವಿಗೆ ಬೀಳುತ್ತವೆ; ಅದರೊಳಗಿನ ಮರಿ ಆನೆಗಳು ಸೊಂಡಿಲು ಹಾಕಿ ಎಳೆದೆಳೆದು ಉದುರಿಸಿದ ತಮಾಲತಳಿರುಗಳ ತನಿಗಂಪು ಕಡಿವಡೆದ ಚಂದನವೃಕ್ಷಗಳ ಇನಿಗಂಪು, ಓಡಾಡುವ ಕಸ್ತೂರೀಮೃಗ, ಪುನುಗಿನ ಬೆಕ್ಕುಗಳ ಮೈಗಂಪು ಒಟ್ಟುಗೂಡಿ ವನವೆಲ್ಲ ಘಮಘಮಿಸುತ್ತದೆ. ಅಲ್ಲಲ್ಲಿಗೆ ತೆಂಗು, ಅಡಿಕೆ, ಮಾವು ಮುಂತಾದ ಮರಗಳೂ, ಕೇದಗಿ, ಬಾಳೆಗಳ ಬನಗಳೂ, ಎಲೆ, ಯಾಲಕ್ಕಿಗಳ ತೋಟಗಳೂ, ಬಿದುರು ಬೆತ್ತಗಳೂ ಒಪ್ಪುವವು. ದಣಿದು ಬಂದ ದಾರಿಕಾರರಿಗೆ ಕುಳಿತುಕೊಳ್ಳುವದಕ್ಕೆ ಅಲ್ಲಲ್ಲಿಗೆ ಹಾಸಿದ ಲವಂಗಲತೆಗಳ ಎಳೆದಳಿರುಗಳೂ, ಮಲ್ಲಿಗೆಯ ಮಂಟಪಗಳೂ ಶೋಭಿಸುತ್ತವೆ. ಕೆಲವೆಡೆಯಲ್ಲಿ ಕೋಗಿಲೆಗಳ ಪಂಚಮಸ್ವರವೂ, ಕೆಲವೆಡೆಯಲ್ಲಿ ತಾಳ ವೃಕ್ಷಗಳ ಫಲಗಳ ತೂತಿನೊಳಗೆ ಗಾಳಿ ಹೋಗುವದರಿಂದ ಉಂಟಾಗುವ ಮಂಜುಳ ಧ್ವನಿಗಳೂ ಕೇಳಬರುತ್ತವೆ. ಅಲ್ಲಲ್ಲಿಗೆ ನೀರಿನ ಝುರಿಗಳು ಹರಿಯುತ್ತವೆ. ಮಂಗಗಳು ಮರಗಳ ಟೊಂಗೆಗಳನ್ನು ಮುರಿಮುರಿದು ಚೆಲ್ಲಿ, ಇತ್ತಿಂದತ್ತ ಅತ್ತಿಂದಿತ್ತ ಹಾರಾಡುತ್ತವೆ.

ಈ ಮೇರೆಗೆ ಮನಸ್ಸಿಗೆ ಸೊಗಸಾದ ವಿಂಧ್ಯಾಟವಿಯೊಳಗೆ ದಂಡಕಾರಣ್ಯವೆಂಬುದೊಂದು ಪ್ರದೇಶವಿದೆ. ಅದರ ಮೇರೆಯ ಮೇಲೆ ಸಕಲ ಲೋಕ ಪ್ರಖ್ಯಾತನಾದ ಅಗಸ್ತ್ಯಋಷಿಯ ಆಶ್ರಮವುಂಟು. ಆ ಋಷಿಯ ಹೆಂಡತಿ ಲೋಪಾಮುದ್ರೆಯು ತಮ್ಮ ಆಶ್ರಮದ ಸುತ್ತುಮುತ್ತು ಹಣ್ಣಿನ ಗಿಡಗಳನ್ನೂ, ಹೂವಿನ ಬಳ್ಳಿಗಳನ್ನೂ ಹಚ್ಚಿ, ತಾನೇ ಅವುಗಳಿಗೆ ಕಟ್ಟೆಯ ಕಟ್ಟಿ, ದಿನಾಲು ನೀರು ಹನಿಸಿ ಮಕ್ಕಳಂತೆ ಅವುಗಳನ್ನು ಪ್ರೀತಿಯಿಂದ ಬೆಳೆಸಿದ್ದಾಳೆ. ಇವರ ಮಗನಾದ ದೃಢದಸ್ಯು ಎಂಬವನು ಬ್ರಹ್ಮಚರ್ಯ ವ್ರತವನ್ನು ಕೈಕೊಂಡು ಪರ್ಣಕುಟಿಯೊಳಗೆ ಭಿಕ್ಷೆ ಬೇಡುತ್ತ ಬಹುಕಾಲದಿಂದ ಅಲ್ಲಿ ಇರುತ್ತಾನೆ. ಸುತ್ತುಮುತ್ತಲು ಬಾಳೆಯ ಬನವಿರುವದರಿಂದ, ಆ ಆಶ್ರಮದ ನಾಲ್ಕೂ ಮಗ್ಗಲುಗಳು ಹಚ್ಚಗೆ ಸೊಂಪಾಗಿ ಶೋಭಿಸುತ್ತವೆ. ಈ ಬಾಳೆಯ ಬನದ ದಂಡೆಗೆ ಹತ್ತಿ ಗೋದಾವರೀ ನದಿಯು ಹರಿಯುತ್ತದೆ. ಅದೇ ಆಶ್ರಮ ಸ್ಥಾನದಲ್ಲಿ ದಶರಥನ ಮಗನಾದ ರಾಮಚಂದ್ರನು ತಂದೆಯ ವಚನವನ್ನು ಕಡೆಗಾಣಿಸುವದಕ್ಕಾಗಿ ರಾಜ್ಯದೊರೆದು ಬಂದು, ಪಂಚವಟಿಯಲ್ಲಿ ಲಕ್ಷ್ಮಣನ ಕೈಯಿಂದ ಪರ್ಣಶಾಲೆಯನ್ನು ಮಾಡಿಸಿ ಸೀತೆಸಹಿತ ಆ ಅಗಸ್ತ್ಯಋಷಿಯ

ಸೇವೆ ಮಾಡುತ್ತ ಹಲವು ಕಾಲ ಇದ್ದನು. ಅದೇ ಸ್ಥಾನದಲ್ಲಿ ಮಾರೀಚನೆಂಬ ರಾಕ್ಷಸನು ಮಾಯೆಯಿಂದ ಕಾಂಚನಮೃಗವನ್ನು ತೋರಿಸಿ, ಸೀತೆಗೆ ಲೋಭ ಹುಟ್ಟಿಸಿ ರಾಮಚಂದ್ರನನ್ನು ಮೋಸಗೊಳಿಸಿ ದೂರ ಒಯ್ದದ್ದರಿಂದ, ರಾವಣನು ಸೀತೆಯನ್ನು ಕದ್ದೊಯ್ದನು. ಬಳಿಕ ಸೀತೆಯ ವಿಯೋಗದಿಂದ, ದುಃಖಿತರಾದ ರಾಮ-ಲಕ್ಷ್ಮಣರನ್ನು ಯೋಜನಬಾಹುಕ ಬಂಧರೆಂಬ ದೈತ್ಯರು ಒಮ್ಮಿಂದೊಮ್ಮೆ ಬಂದು ತಡೆಯಲು, ರಾಮನು ಕಾದಿ ಅವರನ್ನು ಕೊಂದನು. ಸ್ತ್ರೀ ವಿರಹದ ವ್ಯಥೆಯು ತನಗಾಗಬಾರದೆಂಬ ಬಗೆಯಿಂದ ರಾಮನು ಸೀತೆಯಂಥಾದ್ದೊಂದು ಗೊಂಬೆಯನ್ನು ಮಾಡಿ, ತನ್ನ ಆಶ್ರಮದಲ್ಲಿ ಇಟ್ಟಿದ್ದನು; ಅದು ಇನ್ನೂ ಅಲ್ಲಿಯೇ ಅದೆ. ರಾಮಚಂದ್ರನು ಕಂದಮೂಲಗಳನ್ನು ಅಗಿದಗಿದು ತೆಗೆದ ತೆಗ್ಗುಗಳು ಅಲ್ಲಲ್ಲಿಗೆ ಇನ್ನೂ ಹಾಗೆಯೇ ಅವೆ. ಈ ಪ್ರಕಾರ, ಪುರಾತನ ಕಾಲದ ಕುರುಹುಗಳು ಆ ಆಶ್ರಮಸ್ಥಾನದಲ್ಲಿ ಇಂದಿಗೂ ಸ್ಪಷ್ಟವಾಗಿ ಕಂಗೊಳಿಸುತ್ತವೆ. ಈ ಅಗಸ್ತ್ಯಾಶ್ರಮದ ಹತ್ತಿರವೇ ಪಂಪಾಸರೋವರವುಂಟು. ಆ ಸರೋವರದ ಪಡುವಣ ಪ್ರದೇಶದಲ್ಲಿ, ರಘುವೀರನ ಕೂರಂಬುಗಳ ಹೊಡೆತಕ್ಕೆ ಕಡಿವಡೆದ ಸಪ್ತತಾಳವೃಕ್ಷಗಳ ನೆರೆಯಲ್ಲಿಯೇ ಒಂದು ಬಹುಕಾಲದ ದೊಡ್ಡ ಶಾಲ್ಮಲೀವೃಕ್ಷ (ಬೂರಲಮರ)ವಿದೆ. ಆ ಗಿಡದ ಬುಡಕ್ಕೆ ಒಂದು ದೊಡ್ಡ ಮುದಿ ಹೆಬ್ಬಾವು ಸುತ್ತು ಹಾಕಿಕೊಂಡಿರುವದರಿಂದ, ಕಟ್ಟೆಯ ಕಟ್ಟಿದಂತೆ ಕಾಣುತ್ತಿರುವದು. ಆ ಮರದ ಟೊಂಗೆಗಳು ಬಹು ವಿಸ್ತಾರವಾಗಿ ಗಗನಮಂಡಲದಲ್ಲೆಲ್ಲ ಪಸರಿಸಿರುವದರಿಂದ ಅದು ತನ್ನ ಮಾರು ಹಾಕಿ ದಿಕ್ಕುಗಳನ್ನು ಅಳೆಯುತ್ತದೆಯೋ ಏನೋ ಅನ್ನುವಂತೆ ತೋರುತ್ತಿರುವುದು. ಅದರ ಟೊಂಗೆಗಳ ಮೇಲೆ ಲೆಕ್ಕವಿಲ್ಲದಷ್ಟು ಹಾವಿನ ಪರೆಗಳು ಜೋತಾಡುತ್ತಿರುವದರಿಂದ, ಅದು ಸೂಕ್ಷ್ಮವಾದ ಬಿಳಿಯ ಶೆಲ್ಲೆಯನ್ನು ಮೈಮೇಲೆ ಹೊತ್ತುಕೊಂಡಂತೆ ಒಪ್ಪುತ್ತಿರುವದು. ಆ ಗಿಡದ ಬುಡದಿಂದ ತುದಿ ತನಕ ಸಾವಿರಾರು ಬಳ್ಳಿಗಳು ಹಬ್ಬಿರುವದರಿಂದ, ಮುಪ್ಪಿನ ಕಾಲಕ್ಕೆ ಅದರ ಮೈಮೇಲಿನ ನರಗಳು ಎದ್ದಂತೆ ಕಾಣುತ್ತಿರುವವು. ಅದರ ಮುಳ್ಳುಗಳು, ಮೈ ತುಂಬ ಎದ್ದ ನರವುಲಿಗಳಂತೆ ತೋರುತ್ತಿರುವವು. ಅದರ ತುದಿಯ ಮೇಲಿನ ಅರಳೆಯು ನರೆಗೂದಲುಗಳಂತೆ ಒಪ್ಪುವದು.

ಆ ಮರದ ಹೊದರುಗಳಲ್ಲಿಯೂ, ಹೊದೆಗಳಲ್ಲಿಯೂ, ತುದಿಯಲ್ಲಿಯೂ ನಾಡುನಾಡುಗಳಿಂದ ಬಂದ ಸಾವಿರಾರು ಗಿಳಿಗಳು ಗೂಡು ಕಟ್ಟಿಕೊಂಡಿರುತ್ತಿದ್ದವು. ಬುಡದಿಂದ ತುದಿತನಕ ಮುಳ್ಳುಗಳಿದ್ದ ಕಾರಣ, ಆ ಮರವು ಮನುಷ್ಯರಿಗೆ ಏರಲಸಾಧ್ಯವಾದುದರಿಂದ, ಆ ಗಿಳಿಗಳಿಗೆ ಏನೂ ಹೆದರಿಕೆ ಇದ್ದಿಲ್ಲ. ಬಹಳ ಹಳೆಯದಾದುದರಿಂದ, ಆ ಮರದ ಎಲೆಗಳೆಲ್ಲ ಉದುರಿ ಹೋದರೂ, ಆ ಗಿಳಿಗಳೇ ಅದರ ದಟ್ಟವಾದ ಹಸಿರೆಲೆಗಳಂತೆ ಕಾಣಿಸುತ್ತಿರುವವು. ಪಕ್ಕ ಬಲಿಯದೆ ಹಾರಲಿಕ್ಕೆ ಬಾರದ ಮರಿಗಳನ್ನು ಗೂಡುಗಳೊಳಗೆ ಇಟ್ಟು, ಆ ಗಿಳಿಗಳು ಹಗಲು ಹೊರಗೆ ಹೋಗಿ, ಆಗಾಗ್ಗೆ ಆಹಾರ ತಂದು ಮರಿಗಳಿಗೆ ಗುಟುಕು ಕೊಟ್ಟು, ಇರುಳೆಲ್ಲ ತಮ್ಮ ತಮ್ಮ ಮರಿಗಳನ್ನು ಮಗ್ಗಲೊಳಗಿಟ್ಟುಕೊಂಡು ಮರದ ಮೇಲೆ ಸುಖದಿಂದ ಇರುತ್ತಿದ್ದವು.

ಅದೇ ಮರದ ಮೇಲೆ, ಒಂದು ಹಳೆಯ ಗೂಡಿನೊಳಗೆ, ಒಂದು ಮುದಿಗಿಳಿಯು ತನ್ನ ಹೆಂಡತಿಯೊಡನೆ ಇರುತ್ತಿತ್ತು. ಅದಕ್ಕೆ ದೈವಯೋಗದಿಂದ ನಾನೊಬ್ಬನೇ ಮಗನು

ಹುಟ್ಟಿದೆನು. ನಾನು ಹುಟ್ಟಿದ ಕೂಡಲೆ, ನನ್ನ ತಾಯಿಯು ಪ್ರಸವವೇದನೆಯಿಂದ ತೀರಿಕೊಂಡಳು. ತನ್ನ ಪ್ರಿಯ ಪತ್ನಿಯು ಮುಪ್ಪಿನ ಕಾಲದಲ್ಲಿ ಸತ್ತದ್ದರಿಂದ ನನ್ನ ತಂದೆಗೆ ಬಹಳ ದುಃಖವಾಯಿತು; ಆದರೂ ಸ್ತ್ರೀಶೋಕವನ್ನು ತಡಕೊಂಡು ಪುತ್ರಪ್ರೀತಿಯಿಂದ ನನ್ನನ್ನು ಕಾಪಾಡಿದನು. ಮುಪ್ಪಿನಿಂದ ಆತನ ಹಲವು ಗರಿಗಳು ಉದುರಿಹೋಗಿದ್ದವು. ಕಾಳು ಮುಂತಾದ ಕಠಿಣ ಪದಾರ್ಥಗಳನ್ನು ಕುಕ್ಕಿ ಕುಕ್ಕಿ ಅವನ ಚಂಚುಪುಟವು ಮೊಂಡವಾಗಿತ್ತು. ಅವನಿಗೆ ದೂರ ಹಾರಿಹೋಗುವ ಶಕ್ತಿಯಿದ್ದಿಲ್ಲ; ಅಂಥದರೊಳಗೂ ನಡುನಡುಗುತ್ತ ಆ ಮರದ ಬುಡಕ್ಕೆ ಹೋಗಿ ಪಕ್ಷಿಗಳು ತಿನ್ನುವಾಗ ಅವುಗಳ ಬಾಯೊಳಗಿಂದ ಬಿದ್ದ ಹಣ್ಣು-ಹಂಪಲಗಳನ್ನೂ, ಹಾಲುಗಾಳುಗಳನ್ನೂ ತಂದು, ನನಗೆ ಗುಟುಕುಕೊಟ್ಟು ಉಳಿದರೆ ತಾನು ತಿನ್ನುತ್ತಿದ್ದನು.

ಒಂದು ದಿನ ಮುಂಜಾವಿನಲ್ಲಿ, ಎಂಟೂ ದಿಕ್ಕುಗಳು ಸ್ವಚ್ಛವಾಗಿಯೂ ವಿಸ್ತೀರ್ಣವಾಗಿಯೂ ತೋರಹತ್ತಿದವು; ಎಳೆಬಿಸಿಲು ಬಿದ್ದುದರಿಂದ, ಕಾನನದೊಳಗಿನ ಗಿಡಗಳ ಮೇಲಿನ ಹೂಗಳು ಚಂದವಾಗಿ ಕಾಣುತ್ತಿದ್ದವು; ಆ ಹೂವುಗಳ ಮೇಲೆಯೂ, ಕೊಳದೊಳಗಿನ ತಾವರೆಗಳ ಮೇಲೆಯೂ, ತುಂಬಿಗಳೆರಗಿ ಝೇಂಕಾರಸ್ವರ ಮಾಡಹತ್ತಿದವು; ನವಿಲುಗಳೆದ್ದು ಆಡಲನುವಾದವು; ಸಿಂಹಗಳು ಆಕಳಿಸಹತ್ತಿದವು; ಮಲಗಿದ ಮದೋನ್ಮತ್ತವಾದ ಆನೆಗಳನ್ನು ಹೆಣ್ಣಾನೆಗಳು ಎಬ್ಬಿಸಹತ್ತಿದವು; ಇರುಳು ಅರಳಿದ ಹೂವುಗಳು ಮುಂಜಾವಿನ ಮಂಜಿನ ಹನಿಗಳ ಭಾರದಿಂದ ನೆಲಕ್ಕುದುರಿದವು; ಋಷಿಗಳ ತಪೋವನದೊಳಗಿನ ಹೋಮಧೂಮವು ಮೇಲಕ್ಕೆದ್ದಿತು; ಮಂಜಿನ ಹನಿಗೂಡಿ ತಂಪಾದಂಥ ತಾವರೆಗೊಳದ ಮೇಲೆ ಹಾದು ಕಂಪಾದಂಥ, ಮುಂಜಾವಿನ ಮಂದಮಾರುತವು ಸುಳಿಯಹತ್ತಿತು; ಪಕ್ಷಿಗಳು ಆನಂದದಿಂದ ಅಕಾಶದೊಳಗೆ ಹಾರತೊಡಗಿದವು; ಎರಳೆಯ ಹಿಂಡುಗಳು ಸ್ವೇಚ್ಛೆಯಿಂದ ತಿರುಗಾಡಹತ್ತಿದವು; ಪಂಪಾಸರೋವರದ ದಂಡೆಯ ಮೇಲಿನ ಚಕೋರ, ಚಕ್ರವಾಕ, ಮರಾಳ ಪಕ್ಷಿಗಳು ಕಿಲಿಕಿಲಿಸಹತ್ತಿದವು; ಅಷ್ಟರೊಳಗೆ ಒಂದು ತಾಸು ಹೊತ್ತು ಏರಿತು; ನಾನು ಇರುವ ಮರದ ಮೇಲಿನ ಗಿಳಿಗಳೆಲ್ಲ, ಆಹಾರದ ಸಲುವಾಗಿ ತಮ್ಮ ತಮ್ಮ ಮನಸ್ಸಿಗೆ ಬಂದ ಕಡೆಗೆ ಹಾರಿಹೋದವು; ಗೂಡುಗಳೊಳಗೆ ಅವುಗಳ ಮರಿಗಳಿದ್ದರೂ, ಆ ಮರದ ಮೇಲೆಲ್ಲಿಯೂ ಶಬ್ದವಾಗುತ್ತಿದ್ದಿಲ್ಲ; ಆ ಕಾರಣ ನಾನೂ ನಮ್ಮ ತಂದೆಯೂ ಗೂಡಿನೊಳಗೆ ಸ್ವಸ್ಥವಾಗಿ ಕುಳಿತುಕೊಂಡಿದ್ದೆವು; ಅಷ್ಟರೊಳಗೆ ಒಮ್ಮಿಂದೊಮ್ಮೆಲೇ ಆ ಕಾನನದೊಳಗೆ ಬೇಟೆಯಾಡಬಂದ ಭಿಲ್ಲರ ಕೋಲಾಹಲ ಧ್ವನಿಯು ನನ್ನ ಕಿವಿಗೆ ಬಿತ್ತು.

ಅದನ್ನು ಕೇಳಿದ ಕೂಡಲೆ, ಯಾವತ್ತು ಕಾಡುಮೃಗಗಳು ಹೌಹಾರಿ ಕಾಲ್ದೆಗೆಯಲಾರಂಭಿಸಿದವು; ಆನೆಯ ಮರಿಗಳು ಅಂಜಿ ಘೀಳಿಡುತ್ತ ಓಡಿದವು; ಕಾಡಹಂದಿಗಳು ಮುಸುಗುಟ್ಟುತ್ತ ಮುಂದುವರಿದವು; ಕಾಡಕೋಣಗಳು ಕೊಂಯಿಕಿಡುತ್ತ ಓಡಿದವು; ಗವಿಯೊಳಗಿನ ಮಲಗಿದ ಸಿಂಹಗಳು ಎದ್ದು ಗರ್ಜಿಸಿದವು; ಅಂಥ ಆರ್ಭಟವನ್ನು ನಾನು ಎಂದೂ ಕೇಳಿದ್ದಿಲ್ಲ; ನನ್ನ ಕಿವಿಗಳು ಗಡಿದು ಹಾಕಿದವು; ನನ್ನ ಎದೆ ಒಡೆದು, ಮೈಯೊಳಗೆ ನಡುಗುಹುಟ್ಟಿ, ಅಂಜಿ ತಂದೆಯ ಮಗ್ಗುಲೊಳಗೆ ಹೊಕ್ಕು ಅಡಗಿಕೊಂಡೆನು.

ನಾನು ಕಿವಿಗೊಟ್ಟು ಕೇಳುವಾಗ ಆ ಬೇಟೆಗಾರರು ತಮ್ಮತಮ್ಮೊಳಗೆ "ಎಲೆಲೆ ಇಲ್ಲಿ ನೋಡು! ಕಾಡಾನೆಗಳು ಮುರಿದ ಹಾಲಮಡ್ಡಿಯ (ಧೂಪದ) ಗಿಡಗಳು ಎಷ್ಟು ನಾರುತ್ತವೆ! ಇಲ್ಲಿ ನೋಡು! ಮರಿಯಾನೆಗಳು ತುಳಿ ತುಳಿದು ಚೆಲ್ಲಿದ ತಂಗೊಳದೊಳಗಿನ ತಾವರೆಗಳ ಸುವಾಸನೆಯೆಷ್ಟು ಘಮಘಮಿಸುತ್ತವೆ! ಅತ್ತ ನೋಡಿರಿ! ಕಾಡಕೋಣಗಳು ಕೋಡುಗಳಿಂದ ಚಿಮ್ಮಿ ಚಿಮ್ಮಿ ಹಾರಿಸಿದ ಹುತ್ತಿನ ಕೆಂಧೂಳಿಯೇಳುತ್ತದೆ. ಇಲ್ಲಿ ನೋಡು! ಮೆಲುಕಾಡಿಸುವಾಗ ಎರಳೆಗಳ ಬಾಯೊಳಗಿನ ಬುರುಗೆಷ್ಟು ಬಿದ್ದಿದೆ. ಇಲ್ಲಿ ಕಾಡು ಮಿಕಗಳು ಕೋರೆಗಳಿಂದ ಅಗಿದು ತಿಂದು ತಿಂದು ಚೆಲ್ಲಿದ ಜೇಕಿನ ಗಡ್ಡೆಗಳೂ, ಬಾಳದ ಬೇರುಗಳೂ ಎಷ್ಟು ಬಿದ್ದಿವೆ ನೋಡಿರಿ! ಅಲ್ಲಿ ಕಾಡೆಮ್ಮೆಗಳು ತಿಕ್ಕಿದ ರಾಯಿನೆಲ್ಲಿಯ ಗಿಡದ ತೊಗಟೆಯ ಬಾಸ ಬರುತ್ತದೆ. ಅದೋ ಅಲ್ಲಿ ಚಿಗುರೆಗಳು ಓಡುತ್ತವೆ; ಅತ್ತಕಡೆ ಕಾಡಹಂದಿಗಳು ಕೆಸರೊಳಗಿಂದ ಹೊರಬಿದ್ದವು; ಆಚೆಯ ಕಡೆ ನವಿಲುಗಳು ಇದ್ದಹಾಗೆ ತೋರುತ್ತದೆ. ಸುಮ್ಮನೆ ಯಾಕೆ ನೋಡುತ್ತೀರಿ? ಹೊರಗಿಂದ ಹೋಗಿ ಕಣಿವೆಯ ಬಾಯಿಗೆ ದಾರಿಕಟ್ಟಿಕೊಂಡು ನಿಲ್ಲಿರಿ; ಗುಡ್ಡದ ಓರೆಯ ಹಿಡಿದು ಅಡ್ಡಾಡಿರಿ; ಮರವೇರಿ ನೋಡಿರಿ; ಕೊರಳ ಕುಣಿಕೆಯ ಉಚ್ಚಿ ನಾಯಿಯನ್ನು ಬಿಡು; ಕವಣೆಯ ಹೊಡೆ; ಕಲ್ಲು ಒಗೆ; ಬಿಲ್ಲೇರಿಸು; ಬಾಣವ ಹೂಡು; ಕೋಲು ತಿವಿ; ಬಲೆಹಾಕು; ಮೊಲ ಹೊಡೆ; ಕೊಲ್ಲೆಲೆ ಕೊಲ್ಲು; ಕಡಿಯಲೆ ಕಡಿ; ಕಾಲಗ್ಯಾರೀ ಹಿಡಿದು ಎಳೆ" ಎಂದು ಒದರಾಡುವ ಬೇಟೆಗಾರರ ಅಬ್ಬರವು ಅರಣ್ಯವನ್ನೆಲ್ಲ ತುಂಬಿತು. ಎತ್ತ ನೋಡಿದರೂ ಗೊಂದಲವೇ ಮುಸುಕಿತು. ಬೇಟೆಗಾರರಿಗೆ ಅಂಜಿ ಸಿಂಹಗಳು ಗರ್ಜಿಸುತ್ತ ಹಿಂದಕ್ಕೆ ಓಡಿದವು. ನಾಯಿಗಳು ಬೆನ್ನಟ್ಟಿ ಬಂದು ಹಿಡಿದು, ಹಲ್ಲುಗಳಿಂದ ಮೈಯೆಲ್ಲ ಹರಿದುದರಿಂದ ಚಿಗರೆಗಳು ಒದ್ದಾಡಿದವು. ಎಳೆಗರುಗಳು ಅಂಜಿ, ಎತ್ತ ತಪ್ಪಿಸಿಕೊಂಡು ಹೋದವೋ ಎಂದು, ಕಾಡಾಕಳುಗಳು ಅಂಬಾ ಎಂದು ಒದರುತ್ತ, ಅವುಗಳನ್ನು ಹುಡುಕಹತ್ತಿದವು. ಸಾವಿಗಂಜಿ ಸಾವಿರಾರು ಪಕ್ಷಿಗಳು ಈ ಮರದಿಂದ ಆ ಮರಕ್ಕೆ, ಆ ಮರದಿಂದ ಈ ಮರಕ್ಕೆ ಹಾರಾಡುತ್ತ ಕಿಲಿಕಿಲಿಸಹತ್ತಿದವು. ಅಷ್ಟರೊಳಗೆ, ಬಿಲ್ಲಾಳುಗಳು ಹೆದೆಯನ್ನು ಕಿವಿಯವರೆಗೆ ಜೆಗ್ಗಿ ಜೆಗ್ಗಿ ಅಂಬುಗಳನ್ನು ಎಸೆಯುವಾಗ ಬಿಲ್ಲುಗಳಿಂದುಂಟಾದ ಠಣತ್ಕಾರವೂ, ಕಡುಗಲಿಗಳು ಎಡೆಬಿಡದೆ ಎದೆಮಾಡಿ ಕಡಿಯುವಾಗ ಕಾಡಕೋಣಗಳ ಕೋಡಿಗೆ ತಾಕಿದ ಖಡ್ಗಗಳ ಖಣಖಣಾಟವೂ ಬೆದರಿ ಕಂಡಕಡೆಗೆ ಓಡುವ ಗಂಡೆರಳೆಗಳ ಬೆನ್ನು ಹತ್ತಿದ ಬೇಟೆಯ ನಾಯಿಗಳ ಬೊಗಳಾಟವೂ, "ಹಿಡಿ ಹಿಡೀರಿ, ಹೊಡಿ ಹೊಡೀರಿ" ಎಂಬ ಕುಲ್ಲಭಿಲ್ಲರ ಗುಲ್ಲುಗಳೂ, ಒಬ್ಬುಳಿಗೂಡಿ ತುಂಬಿದುದರಿಂದಂತೂ, ಬಿರುಗಾಳಿ ಬಿಟ್ಟಾಗ ಕಡಲು ಭೋರ್ಗರೆಯುವಂತೆ ಕಾನನವೆಲ್ಲ ಪ್ರತಿಧ್ವನಿಗೊಂಡಿರುವದು.

ಇಷ್ಟು ಆರ್ಭಟವು ಯಾತರದೆಂದು ನಾನು ನಮ್ಮ ತಂದೆಯ ಪಕ್ಕದೊಳಗಿಂದ ಹೊರಬಿದ್ದು, ತಲೆ ಎತ್ತರಿಸಿ, ಸಪ್ಪಳ ಕೇಳಬಂದತ್ತ ಮೆಲ್ಲಗೆ ಗೂಡಿನೊಳಗಿಂದಲೇ ಹಣಕಿ ನೋಡಹತ್ತಿದೆನು. ಆಗ ಆ ಕಾನನದೊಳಗಿಂದ ಎದುರಿಗೆ, ಯಮನಾಳುಗಳನ್ನು ಹೋಲುವಂಥ ಬೇಡರ ದಂಡು ಬರುತ್ತಿತ್ತು. ಆ ತಂಡದ ನಡುವೆ, ದಂಡಿನ ಒಡೆಯನು ಕರ್ರಗೆ ಕಾಲನಂತೆ ಕಾಣಿಸುತ್ತಿರುವನು. ಆತನಿಗೆ ಅದೇ ಹೊಸದಾಗಿ ಹರೆಯ ಬಂದು ಮಕಮಿಾಸೆ

ಒಡೆಯಹತ್ತಿದುದರಿಂದಲೂ ಅವನ ಮೈಕಟ್ಟು ಬಲು ಘಟ್ಟಿ ಇದ್ದುದರಿಂದಲೂ ಕಬ್ಬಿಣದ ಗಂಡುಗೊಂಬೆಯಂತೆ ಕಾಣಿಸುತ್ತಿರುವವನು. ತಲೆಯ ಮೇಲಿನ ಉಂಗುರಗೂದಲುಗಳು ಹೆಡಕಿನ ಮೇಲೆ ಜೋತಾಡುತ್ತಿರುವುದರಿಂದ, ಆನೆಯ ಮದೋದಕದಿಂದ ಮಲಿನವಾದ ಸಿಂಹನ ಕುತ್ತಿಗೆಯ ಮೇಲಿನ ಕೂದಲುಗಳಂತೆ ಒಪ್ಪುತ್ತಿರುವವು. ಅವನ ಹರವಾದ ಹಣೆಯೂ, ಉದ್ದ ಮೂಗೂ ಎದ್ದು ಕಾಣಿಸುತ್ತಿರುವವು. ಅವನ ಎಡಗಿವಿಯೊಳಗೆ ಜೋತಾಡುವ ರತ್ನದ ಬಾವುಲಿಯ ಕೆಂಬೆಳಗು ಕೆನ್ನೆಯ ಮೇಲೆ ಹೊಳೆಯುತ್ತಿರುವದು. ಅದೇ ಕೊಂದ ಆನೆಯ ಮದೋದಕವನ್ನು ಮೈಗೆಲ್ಲಾ ಹಚ್ಚಿಕೊಂಡದ್ದರಿಂದ ಕೃಷ್ಣಾಗರುಚಂದನವನ್ನು ತೊಡಕೊಂಡವನಂತೆ ತೋರುತ್ತಿರುವನು. ಆತನ ಕೆಂಗಣ್ಣುಗಳು ರಕ್ತದಿಂದ ತುಂಬಿ ತುಳುಕುವಂತೆ, ನೋಡುವವರಿಗೆ ಭೀತಿಯನ್ನು ಬೀರುತ್ತಿರುವವು. ಮೊಣಕಾಲತನಕ ಇಳಿಬಿದ್ದ ಅವನ ನಿಡಿದೋಳುಗಳು, ಕಾಡಾನೆಯ ಶುಂಡಿಲದಂತೆ,ದುಂಡಗೆ ಒಪ್ಪುತ್ತಿರುವವು. ಅವನು ತನ್ನ ಮಂಡಿಯೊಳಗಿನ ತಿಂಡಿಯ ರಕ್ತವನ್ನು ಶಸ್ತ್ರದಿಂದ ತಿವಿದು ತೆಗೆತೆಗೆದು ವನದೇವಿಗೆ ಅರ್ಪಿಸುತ್ತಿದ್ದನು. ಅದರಿಂದ ಅವನ ಮಂಡಿಗಳಿಗೆ ಗುಂಡ ಗುಂಡನ್ನ ಕಲೆಗಳು ಬಿದ್ದಿದ್ದವು; ಅವನ ಹರವಾದ ಎದೆಯ ಮೇಲಿನ ಬೆವರ ಹನಿಗಳು, ಕಾಡಮಿಕಗಳನ್ನು ಒತ್ತರದಿಂದ ಕೊಲ್ಲುವಾಗ ಹತ್ತಿದ ನೆತ್ತರಹನಿಗಳೊಡನೆ ಬೆರೆತು, ಗುಂಜೆಗಳನ್ನು ಕೂಡಿಸಿ ಪೋಣಿಸಿ ಮಾಡಿದ ಮುತ್ತಿನ ಮಾಲೆಯಂತೆ ಒಪ್ಪುತ್ತಿರುವವು. ಗರಡಿ ಸಾಧಕ ಮಾಡಿದವನಾದುದರಿಂದ ಹೊಟ್ಟೆಯು ತೆಳ್ಳಗೆ, ತೊಡೆಗಳು ಗಡುತರವಾಗಿ ಬಹು ಚಂದ ಕಾಣಿಸುತ್ತಿರುವನು. ಅವನು ಸಿಟ್ಟಿನವನಿದ್ದುದರಿಂದ ಹಣೆಯ ಮೇಲಿನ ನರಗಳು ಉಬ್ಬಿ ಹುಬ್ಬುಗಂಟುಹಾಕಿ ಭಯಂಕರನಾಗಿ ತೋರುತ್ತಿರುವನು. ಅವನ ಸುತ್ತು ಮುತ್ತು ಬೇಟೆಯ ನಾಯಿಗಳು ತೇಕುತ್ತ, ನಾಲಿಗೆ ತೆರಕೊಂಡು ಬೆನ್ನು ಹತ್ತಿ ಬರುತ್ತಿದ್ದವು.

ಆ ಬೇಡರೊಡೆಯನ ಬೆಂಗೊಂಡು ಬರುವ ನೂರಾರು ಮಂದಿ ಬೇಟೆಗಾರರೊಳಗೆ, ಹಲವರು ಚವರೀಮೃಗಗಳ ಬಾಲಗಳನ್ನೂ, ಆನೆಯ ಕೋರೆಗಳನ್ನೂ, ಹೊರೆಕಟ್ಟಿ ತಲೆಯ ಮೇಲೆ ಹೊತ್ತುಕೊಂಡು, ಕೆಲವರು ಜೇನು ಹುಟ್ಟುಗಳನ್ನು ಎಲೆಯ ದೊನ್ನೆಗಳೊಳಗೆ ಹಾಕಿಕೊಂಡು, ಹಲವರು ಪಿಶಾಚಿಗಳಂತೆ ಮಾಂಸವನ್ನು ತಕ್ಕೊಂಡು, ಹಲವರು ಹುಲಿದೊಗಲು, ಹುಲಿಯುಗುರು, ಸಿಂಹನ ಚರ್ಮ, ನವಿಲುಗರಿ, ಸಾರಂಗದ ಕೋಡು, ಇವುಗಳನ್ನು ತಕ್ಕೊಂಡು ಬರುತ್ತಿದ್ದರು. ಆ ಬೇಡರು ಮೈಮೇಲೆ ಕರಿಯ ಬಟ್ಟೆಗಳನ್ನು ಹೊತ್ತುಕೊಂಡು, ತಲೆಗೆ ನವಿಲುಗರಿಗಳನ್ನು ಸುತ್ತಿಕೊಂಡಿದ್ದರು. ಇಂಥ ಬೇಡರನ್ನೊಳಗೊಂಡು ಬರುವವನ ಹೆಸರು ಮಾತಂಗನೆಂದು ಹಿಂದಣಿಂದ ನನಗೆ ತಿಳಿಯಿತು.

ಆ ಬೇಡರನ್ನು ನೋಡಿ ನನ್ನ ಮನಸ್ಸಿಗೆ ಬಹಳ ಅಸಹ್ಯವಾಯಿತು. ಅವರ ಬಾಳುವೆಯ ಬಗೆ ಎಂಥ ಭಯಂಕರವು ನೋಡಿರಿ! ಅವರ ಹೊಲಸು ನಡತೆಗಳನ್ನು ಎಷ್ಟೆಂದು ಹೇಳಲಿ! ನರಮಾಂಸವನ್ನು ದೇವಿಗೆ ಬಲಿ ಕೊಡುವುದೇ ಅವರ ಧರ್ಮವಾಗಿದೆ. ಹಳಿಯತಕ್ಕ ಹೆಂಡ-ಖಂಡಗಳೇ ಅವರ ಆಹಾರವು. ಬೇಟೆಯಾಡುವುದೇ ಅವರ ಕುಲದ ಉದ್ಯೋಗವು. ನರಿಗಳ ಕೂಗುಗಳೇ ಅವರಿಗೆ ಶಾಸ್ತ್ರದ ವಚನಗಳು. ಪಶುಪಕ್ಷಿಗಳ ಜಾತಿಯ ಗುರುತು ಹಿಡಿಯುವುದೇ ವಿದ್ಯೆಯಾಗಿದೆ. ಅವರಿಗೆ ನಾಯಿಗಳ ಗೆಳೆತನವೇ ಗೆಳೆತನ.

ರಣಗುಟ್ಟುವ ಕಾನನವೇ ಅವರ ಬಿಡಾರದೆಡೆ. ಬಿಲ್ಲುಬಾಣಗಳೇ ಅವರ ಗಳಿಕೆಯ ಇಡುಗಂಟು. ಮರುಳ ಮೃಗಗಳನ್ನು ಮೋಸಗೊಳಿಸುವ ಸಿಳ್ಳುಕೊಳಲುಗಳೇ ಅವರಿಗೆ ಇಂಪಾದ ಗಾಯನವು. ಅವರಿಗೆ ಹುಲಿಕರಡಿಗಳ ನೆರೆಯೇ ನೆರೆ. ಕಾಡಮಿಕಗಳ ರಕ್ತದಿಂದ ದೇವಿಗೆ ಅಭಿಷೇಕ ಮಾಡುವುದೇ ಅವರಿಗೆ ಭಕ್ತಿಯ ಮಾರ್ಗವಾಗಿದೆ. ಕಳವು, ಕೊಲೆ ಮುಂತಾದ ಕೀಳು ಕೆಲಸಗಳೇ ಅವರ ಕರ್ತವ್ಯ ಕರ್ಮಗಳಾಗಿವೆ.

ಈ ಮೇರೆಗೆ ಮನದೊಳಗೆ ವಿಚಾರ ಮಾಡುವಷ್ಟರೊಳಗೆ ಆ ಮಾತಂಗನು, ಬೇಟೆಯ ದಣುವಾರಿಸಿಕೊಳ್ಳಬೇಕೆಂದು, ನಾನು ಇದ್ದ ಶಾಲ್ಮಲೀ ವೃಕ್ಷದ ನೆರಳಿಗೆ ಬಂದು, ಹೆಗಲಮೇಲಿನ ಬಿಲ್ಲನ್ನೂ, ಬೆನ್ನಿಗೆ ಕಟ್ಟಿದ ಬತ್ತಳಿಕೆಯನ್ನೂ, ನೆಲದ ಮೇಲಿಟ್ಟು, ತನ್ನ ಆಳು ಹಾಕಿದ್ದ ಎಲೆಯ ಗದ್ದುಗೆಯ ಮೇಲೆ ಕುಳಿತುಕೊಂಡನು. ಅಷ್ಟರೊಳಗೆ ಒಬ್ಬ ಬೇಡನು ಓಡುತ್ತ ಪಂಪಾಸರೋವರಕ್ಕೆ ಹೋಗಿ, ತಾವರೆಯೆಲೆಯ ದೊನ್ನೆಯೊಳಗೆ ತಣ್ಣನ್ನ ನೀರು ತುಂಬಿಕೊಂಡು ಬಂದು ಮುಂದಿಟ್ಟನು. ಮಾತಂಗನು ಆ ನೀರು ಕುಡಿದು, ಕ್ಷಣಹೊತ್ತು ದಣುವಾರಿಸಿಕೊಂಡು ಮುಂದಕ್ಕೆ ಸಾಗಿದನು. ಉಳಿದ ಬೇಡರು ನೀರು ಕುಡಿದು ಆತನ ಬೆನ್ನುಹತ್ತಿದರು. ಅವರೊಳಗಿನವನೊಬ್ಬ ಮುದಿ ಬೇಡನು, ಏನೂ ಬೇಟೆ ದೊರಕದ್ದರಿಂದ ಗಿಳಿಗಳನ್ನಾದರೂ ತಕ್ಕೊಂಡು ಹೋಗಬೇಕೆಂದು, ಅದೇ ಮರದ ಕೆಳಗೆ ಹಿಂದುಳಿದನು.

ಆ ದಂಡು ಮರೆಯಾದ ಕೂಡಲೆ, ಮರವನ್ನು ಎತ್ತಕಡೆಯಿಂದ ಹತ್ತಬೇಕೆಂಬ ಹಂಚಿಕೆಯಿಂದ, ಬುಡದಿಂದ ತುದಿತನಕ ಬಹಳ ಹೊತ್ತು ಕಿಡಿಗಣ್ಣುಗಳಿಂದ ದಿಟ್ಟಿಸಿ ನೋಡುತ್ತ ನಿಂತುಕೊಂಡನು. ಆಗ, ಯಾವತ್ತೂ ಗಿಳಿಮರಿಗಳ ಜೀವವು ನೆತ್ತಿಯಿಂದಲೇ ಹೋಯಿತು. ಜೀಯಾ, ಕ್ರೂರಕರ್ಮಿಗಳನ್ನು ಮಾಡುವವನಿಗೆ ಯಾವುದೂ ಅಸಾಧ್ಯವಲ್ಲವು. ನೋಡಿರಿ; ಆ ಮರವು ಎಷ್ಟೋ ತಾಳೆಯಮರದುದ್ದವಿದ್ದರೂ, ಅದರ ಟೊಂಗೆಗಳು ಮುಗಿಲಿಗೆ ಮುಟ್ಟಿದ್ದರೂ ಬುದದಿಂದ ತುದಿತನಕ ಮುಳ್ಳುಗಳಿದ್ದರೂ, ಆ ಮುದಿ ಬೇಡನು ತೊಂದರೆಗೊಳ್ಳದೆ, ಸುಲಭವಾಗಿ ಅದನ್ನು ಏರಿದನು. ಕೆಲವು ಮರಿಗಳು ಪುಚ್ಛ ಬಾರದೆ, ಗೋಣು ನಿಲ್ಲದೆ, ಹಾರುವ ಶಕ್ತಿಯಿಲ್ಲದೆ, ಮೈಮೇಲಿನ ಕೆಂಬಣ್ಣವು ಇನ್ನೂ ಹಾಗೇ ಇದ್ದುದರಿಂದ, ಆ ಬೂರಲಮರದ ಹೂವುಗಳಂತೆ ತೋರುತ್ತಿರುವವು; ಕೆಲವು ಪುಚ್ಛ ಬಲಿತ ಮರಿಗಳು ಅದರ ಕಾಯಿಗಳಂತೆ ಕಾಣುತ್ತಿರುವವು; ಇಂಥ ಮರಿಗಳನ್ನು, ಕೈಹಾಕಿ ಗೂಡುಗಳೊಳಗಿಂದ ಹಿರಿದು, ತೆಗೆತೆಗೆದು ಕೊಂದು, ನೆಲದ ಮೇಲೆ ಚೆಲ್ಲಿದನು. ಆ ರಕ್ಕಸನಂಥ ಬೇಡನು ಬಂದದ್ದನ್ನು ಕಂಡು ನಮ್ಮ ತಂದೆಯು, ಸಾಯುವ ಹೊತ್ತು ಬಂತೆಂದು ಹೌಹಾರಿ, ಇನ್ನೇನು ಮಾಡಲೆಂದು ಕಣ್ಣು ತುಂಬ ನೀರು ತಂದು ಗದಗದನೆ ನಡುಗಿದನು; ಕಣ್ಣಿಗೆ ಕತ್ತಲೆಗವಿದು, ಕುತ್ತಿಗೆ ನರವುಬ್ಬಿ, ಬಾಯಿಂದ ಮಾತುಗಳೇ ಬರಲೊಲ್ಲವು; ನನ್ನ ನೆನಪಾದುದರಿಂದಂತೂ ಅವನ ದುಃಖಕ್ಕೆ ಆಳವಿಲ್ಲದ ಹಾಗಾಯಿತು. ನನ್ನನ್ನು ತನ್ನ ಎದೆಗೆ ಅವಚಿಕೊಂಡು, ಇನ್ನು ಯತ್ನ ಮೀರಿತೆಂದು ಪಕ್ಕದೊಳಗಿಟ್ಟುಕೊಂಡು, ಆಶೆದೊರೆದು ಸುಮ್ಮನೆ ಕುಳಿತುಕೊಂಡನು. ಅಷ್ಟರೊಳಗೆ ಆ ಕಿರಾತನು ನಮ್ಮ ಗೂಡಿನ ಹತ್ತಿರ ಬಂದು, ಕರಿಯ ಹಾವಿನ ಹೆಡೆಯನ್ನು ಹೋಲುವಂಥ, ಕಾಡಹಂದಿಯ ನೆಣದಿಂದ ಹೊಲಸು

ನಾರುವಂಥ, ಬಿಲ್ಲು ಹಿಡಿದು ದಡ್ಡು ಬಿದ್ದಂಥ, ತನ್ನ ಎಡಗೈಯನ್ನು ನಮ್ಮ ಗೂಡಿನೊಳಗೆ ಹಾಕಿದನು. ಆಗ ನಮ್ಮ ತಂದೆಯು ಸಂಕಟದಿಂದ ಅವನ ಕೈಕಚ್ಚಿ ಫಡಫಡನೆ ಪಕ್ಕ ಜಾಡಿಸಿ, ಒಳಹೊಕ್ಕು ಒದರಿದರೂ ಆ ಚಾಂಡಾಲನು ಆ ಮುದಿ ಗಿಳಿಯನ್ನು ಗೂಡಿನೊಳಗಿಂದ ಹೊರಗೆ ಹಿರಿದು, ಗೋಣು ಮುರಿದು, ನೆಲಕ್ಕೆ ಒಗೆದನು. ತಂದೆಯ ಪಕ್ಕದೊಳಗೆ ಅಡಗಿದುದರಿಂದಲೂ, ಇನ್ನೂ ನಾಲ್ಕೊಪ್ಪತ್ತು ನಾನು ಜೀವದಿಂದಿರುವದಿದ್ದುದರಿಂದಲೂ, ಆ ಪಾಪಾತ್ಮನು ನನ್ನನ್ನು ನೋಡಲಿಲ್ಲ; ನಮ್ಮ ತಂದೆಯನ್ನು ಚೆಲ್ಲಿದಾಗ ಗಾಳಿ ಬಿಟ್ಟುದರಿಂದ, ತರಗೆಲೆಯ ರಾಶಿಯ ಮೇಲೆ ಹೋಗಿ ಬಿದ್ದ ಕಾರಣ ನನ್ನ ಮೈಗೆ ಪೆಟ್ಟೂ ಹತ್ತಲಿಲ್ಲ.

ಆ ಬೇಡನು ಮರದ ಮೇಲಿಂದ ಕೆಳಗಿಳಿದು ಬರುವಷ್ಟರೊಳಗೇ ನಾನು ಅತ್ತಿತ್ತ ಸರಿದಾಡಿ ಜೀವದಾಶೆಗಾಗಿ ಆ ತರಗೆಲೆಗಳೊಳಗೆ ಹೊಕ್ಕೆನು. ನನ್ನ ಪಕ್ಕದ ಬಣ್ಣವೂ ಆ ಎಲೆಗಳ ಬಣ್ಣವೂ ಒಂದೇ ಇದ್ದುದರಿಂದ ನಾನು ಅವನಿಗೆ ಕಾಣಿಸಲಿಲ್ಲ. ತಂದೆ ಸತ್ತದ್ದರಿಂದ ನಾನೂ ಅಲ್ಲಿಯೇ ಸಾಯತಕ್ಕದ್ದು; ಅಂಥದರೊಳಗೆ ನಾನು ಮನಸ್ಸು ಕಲ್ಲುಮಾಡಿಕೊಂಡು, ಪಿತೃಭಕ್ತಿಯನ್ನು ಅಲ್ಲಗಳೆದು, ತಂದೆಯ ಹೆಣವನ್ನು ಅಲ್ಲಿಯೇ ಬಿಟ್ಟು ಜೀವ ಉಳಿಸಿಕೊಳ್ಳಬೇಕೆಂಬ ಆಶೆಯಿಂದ ಒದ್ದಾಡುತ್ತ, ಉರುಳಾಡುತ್ತ ಯಮನ ಬಾಯೊಳಗಿಂದ ತಪ್ಪಿಸಿಕೊಂಡು, ಎರಡನೆಯ ತಂದೆಯ ತೊಡೆಯ ಮೇಲೆ ಹೋಗಿ ಕುಳಿತುಕೊಳ್ಳುವಂತೆ ನೆರೆಯಲ್ಲಿರುವ ಒಂದು ತಮಾಲವೃಕ್ಷದ ಬುಡದಲ್ಲಿ ಹೋಗಿ ಕುಳಿತುಕೊಂಡೆನು. ‘ ಸತ್ತವರ ಮಕ್ಕಳು ಇದ್ದವರ ಕೈಯೊಳಗೆ’ ಎಂಬ ಗಾದೆಯಂತೆ, ಆ ಮರವು ನನಗೆ ಆಶ್ರಯ ಕೊಟ್ಟಿತು. ಇತ್ತ ಆ ಬೇಡನು ಮರದ ಮೇಲಿಂದ ಕೆಳಗಿಳಿದು, ನೆಲದ ಮೇಲೆ ಅತ್ತಿತ್ತ ಬಿದ್ದ ಗಿಳಿಯ ಮರಿಗಳನ್ನೆಲ್ಲ ಕೂಡಹಾಕಿ, ಎಲೆಗಳೊಳಗೆ ಸುತ್ತಿ ಬಳ್ಳಿಯಿಂದ ಬಿಗಿ ಬಿಗಿದು ಕಟ್ಟಿ ತಲೆಯ ಮೇಲೆ ಇಟ್ಟುಕೊಂಡು, ಮಾತಂಗನು ಹೋದ ಹಾದಿಯ ಹಿಡಿದು ಓಡುತ್ತೋಡುತ್ತ ಹೋದನು. ಅವನು ಅತ್ತ ಹೋದ ಬಳಿಕ ನನಗೆ ತುಸು ಜೀವದ ಆಶೆ ಹುಟ್ಟಿತು. ಆದರೂ ತಂದೆ ಸತ್ತ ದುಃಖದಿಂದಲೂ, ಮರದ ಮೇಲಿಂದ ಕೆಳಗೆ ಬಿದ್ದುದರಿಂದಲೂ ಬಳಲಿಕೆ ಬಂದು ನನ್ನ ಮೈಯೊಳಗೆ ನಡುಗು ಹುಟ್ಟಿತು. ಆ ಕ್ರೂರನು ದೂರ ಹೋದನೋ ಇಲ್ಲವೋ ಎಂದು, ಅಂಜಂಜುತ್ತ ತಲೆಎತ್ತಿ ನಾಲ್ಕೂ ಕಡೆಗೂ ನೋಡಿದೆನು. ಹುಲ್ಲು ಕಡ್ಡಿ ಅಲ್ಲಾಡಿದರೆ ಸಾಕು, ಆ ದುರುಳನೇ ಮರಳಿ ಬಂದನೋ ಏನೋ ಎಂದು ಸಂಶಯಗೊಂಡು ಹೆದರುವೆನು. ಅಂಥದರೊಳಗೆ ಗಂಟಲಾರಿ ನೀರಡಿಕೆಯಾಯಿತು. ಇನ್ನು ನೀರು ಎಲ್ಲಿದ್ದಾವು; ಎಂದು ಹುಡುಕುವ ಹವಣಿಕೆಯಿಂದ, ಆ ತಮಾಲವೃಕ್ಷದ ಬುಡದಿಂದ ಮೆಲ್ಲಗೆ ಹೊರಟೆನು. ಆಗ ನನ್ನ ಪಕ್ಕ ಬಲಿತಿದ್ದಿಲ್ಲ. ಗೋಣು ನಿಲ್ಲುತ್ತಿದ್ದಿಲ್ಲ; ನಡೆಯಲಿಕ್ಕೆ ಕಾಲೊಳಗೆ ಕಸುವು ಇದ್ದಿಲ್ಲ. ಆದುದರಿಂದ ಆಗಾಗ್ಗೆ ನನ್ನ ಮೋರೆಯು ನೆಲಕ್ಕೆ ಬಡಿಯುವುದು; ಅಡಿಗಡಿಗೆ ಹೋಳಮೈಯಲ್ಲಿ ಬೀಳುವೆನು; ಹೊರಳಾಡುತ್ತ ಹೋಗುವುದರಿಂದ ಮೈಯೆಲ್ಲಾ ಮಣ್ಣಾಯಿತು; ಹೆಜ್ಜೆಹೆಜ್ಜೆಗೆ ತೇಕುಹತ್ತಿ ವಕವಕ ಬಾಯಿ ಬಿಡಹತ್ತಿದೆನು. ಎಷ್ಟು ಕಷ್ಟವಾದರೂ ಬದುಕಬೇಕೆಂಬ ಆಶೆ ಬಿಡುವುದಿಲ್ಲ! ಸ್ವಾಮೀ, ಜೀವಕ್ಕಿಂತ ಪ್ರಿಯಕರವಾದದ್ದು ಜಗದೊಳಗೆ ಯಾವುದೂ ಇಲ್ಲ! ನೋಡಿರಿ! ಅಂಥಾ ನನ್ನ ದಯಾಳು ತಂದೆ ತೀರಿದನೆಂಬ ಹಂಬಲವಿಲ್ಲದೆ, ಆ ಹೆಣವನ್ನು ಅಲ್ಲಿಯೇ ಬಿಟ್ಟು ನನ್ನ ಜೀವ ಉಳಿಸಿಕೊಳ್ಳುವುದನ್ನೇ ನಾನು ನೋಡಿದೆನು.

ಆದರಿಂದ ನನ್ನಂಥ ನಿರ್ದಯನೂ ನಿಷ್ಠುರನೂ, ಕೃತಘ್ನನೂ, ತಂದೆಗೆ ಮರುಗದವನೂ ಲೋಕದೊಳಗುಂಟೇ! ಉಪಕಾರ ಮಾಡಿದ ತಂದೆಯನ್ನು ಬಯಸದೆ ಬದುಕುವವನ ಬಾಳ್ವೆ ಯಾತರ ಬಾಳ್ವೆ! ನೋಡಿರಿ, ನಾನು ಎಂಥ ಕಲ್ಲು ಮನಸ್ಸಿನವನು. ಮುಪ್ಪಿನ ಕಾಲದಲ್ಲಿ ಹೆಂಡತಿ ಸತ್ತ ದುಃಖವನ್ನು ತಡಕೊಂಡು, ಹುಟ್ಟಿದಂದಿನಿಂದ ನನ್ನನ್ನು ಜೋಪಾನಮಾಡಿ, ಕಡೆಗೆ ನನ್ನನ್ನು ಮಗ್ಗುಲೊಳಗೆ ಇಟ್ಟುಕೊಂಡು ಮರಣ ಹೊಂದಿದ ತಂದೆಯನ್ನು ನಾನು ಆಗಲೇ ಮರೆತೆನು. ಇದರಿಂದ ಜೀವವು ಎಷ್ಟು ಪ್ರಿಯಕರವು ನೋಡಿರಿ! ನನ್ನ ಸಲುವಾಗಿ ಎಷ್ಟೋ ಕಷ್ಟಗಳನ್ನು ಅನುಭೋಗಿಸಿ, ತನ್ನ ಜೀವಕ್ಕಿಂತ ನನ್ನನ್ನು ಹೆಚ್ಚು ನೋಡಿ ಸಲಹಿದ ತಂದೆಯನ್ನು ಮರೆತು ನನ್ನ ಜೀವನವನ್ನೇ ನೋಡಿಕೊಂಡೆನು. ಅಂಥ ದುಃಖಾವಸ್ಥೆಯಲ್ಲಿ ಸಹ ನನಗೆ ನೀರಡಿಕೆಯಾಯಿತು. ನಿರ್ದಯತನದ ಮೂಲಕವಾಗಿಯೇ ಆಗ ನನಗೆ ಅಂಥ ನೀರಡಿಕೆಯಾಯಿತೋ ಏನೋ! ಕಲಹಂಸಗಳ ಕಲಕಲ ಧ್ವನಿಯು ದೂರದಿಂದ ಕೇಳಬಂದುದರಿಂದಲೂ, ಅರಳಿದ ತಾವರೆಗಳೊಳಗಿನ ತನಿಗಂಪು ನಾಲ್ಕೂ ದಿಕ್ಕಿಗೂ ಹರಿದುಹೋಗಿ ತುಸುತುಸು ಬಂದುದರಿಂದಲೂ ಇನ್ನೂ ಸರೋವರವು ಎಷ್ಟು ದೂರವಿದೆಯೋ ಏನೋ ಎಂದು ನನ್ನ ಹರಣ ಹಾರಿತು. ಬಿಸಿಲೇರಿ ನೆಲವು ಕಾದುದರಿಂದ ಮುಂದಕ್ಕೆ ಹೆಜ್ಜೆ ಇಡುವದಾಗಲೊಲ್ಲದು. ಈ ಮೇರೆಗೆ ಮರಣೋನ್ಮುಖನಾಗಿ ಬಳಲುತ್ತ ಬಿದ್ದುಕೊಂಡಾಗ ಹಾರೀತನೆಂಬ ಋಷಿಯು ಹಲವು ಮುನಿಕುಮಾರರನ್ನೊಡಗೊಂಡು ಅದೇ ಮಾರ್ಗದಿಂದ ಪಂಪಾ ಸರೋವರಕ್ಕೆ ಸ್ನಾನಕ್ಕೆ ಬಂದನು. ಸಾಧುಪುರುಷರ ಹೃದಯವು ಅತಿ ಕೋಮಲವೆಂಬ ಮಾತು ಸುಳ್ಳಲ್ಲ, ಅವರ ಅಂತಃಕರಣವು ಬೇಗನೆ ಕರಗುತ್ತದೆ. ನನ್ನನ್ನು ನೋಡಿ ಆ ಹಾರೀತಋಷಿಯು— "ಅದು ನೋಡು ಆ ಮರದ ಮೇಲಿಂದಲೋ, ಗಿಡಗನ ಬಾಯೊಳಗಿಂದಲೋ, ಅಲ್ಲಿ ಒಂದು ಗಿಳಿಯ ಮರಿಯು ಬಿದ್ದಿದೆ; ಅದಕ್ಕೆ ಇನ್ನೂ ಪುಚ್ಚ ಬಂದಿಲ್ಲ. ಓಡು ಓಡು, ಬೇಗನೆ ಅದನ್ನು ತಕ್ಕೊಂಡು ಬಾ" ಎಂದು ತನ್ನ ಸಂಗಡ ಬರುವ ಒಬ್ಬ ಋಷಿಕುಮಾರನಿಗೆ ಹೇಳಿ, ತಾನು ಮುಂದೆ ಹೋಗಿ ಸರೋವರದ ದಂಡೆಯ ಮೇಲೆ ಒತ್ತಟ್ಟಿಗೆ ದಂಡ ಕಮಂಡಲುಗಳನ್ನು ಇಟ್ಟು, ಆತನ ಕೈಯೊಳಗಿಂದ ನನ್ನನ್ನು ತಕ್ಕೊಂಡು ನನ್ನ ಬಾಯೊಳಗೆ ತಾನೇ ತನ್ನ ತುದಿ ಬೆರಳಿಂದ ನೀರ ಹನಿಯನ್ನು ಬಿಟ್ಟು ನನಗೆ ಚೇತನ ಬರುವಂತೆ ಮಾಡಿ, ತಾವರೆ ಬಳ್ಳಿಯ ನೆರಳೊಳಗೆ ನನ್ನನ್ನು ಇಟ್ಟನು. ಬಳಿಕ ಸ್ನಾನ ಸಂಧ್ಯಾದಿ ಕರ್ಮಗಳನ್ನು ತೀರಿಸಿಕೊಂಡು, ಕಮಲ ಪುಷ್ಪಗಳಿಂದ ಸುಗಂಧಮಯವಾದ ಸರೋವರದೊಳಗಿನ ಸ್ವಚ್ಛ ನೀರನ್ನು ಕಮಂಡಲುವಿನೊಳಗೆ ತುಂಬಿಕೊಂಡು ನನ್ನನ್ನು ತಕ್ಕೊಂಡು ಹೊರಟನು. ಮುಂದೆ ಬರಬರುತ್ತ ಹೂವಿನ ಬಳ್ಳಿಗಳಿಂದಲೂ, ಹಣ್ಣುಗಳಿಂದೊರಗುವ ಗಿಡಗಳಿಂದಲೂ ರಮಣೀಯವಾದದ್ದೊಂದು ತಪೋವನವನ್ನು ಕಂಡೆನು. ಕೇದಗಿಯ ಹೊಡೆಗಳೊಳಗಿನ ಹುಡಿಯುದುರಿ ಆ ಆಶ್ರಮದ ನೆಲವೆಲ್ಲ ಅರಿಷಣ ಬಣ್ಣವಾಗಿತ್ತು. ಎತ್ತ ನೋಡಿದರೂ ನೆಲದ ಮೇಲೆಲ್ಲ ಹೂವುಗಳೇ ಹಾಸಿದ್ದವು. ಆ ತಪೋವನದೊಳಗಿನ ಋಷಿಗಳ ಆಶ್ರಮದ ಅಂಗಳದೊಳಗೆ ಕೆಲಕೆಲವೆಡೆಯಲ್ಲಿ ನೆಲ್ಲಿಯಕಾಯಿ, ಬೋರೆಯ ಹಣ್ಣು, ಬಾಳೆಯ ಹಣ್ಣು, ಲವಂಗ, ಅಂಬಸೋಲು ಮುಂತಾದವುಗಳ ರಾಶಿಗಳು ಶೋಭಿಸುತ್ತಿರುವವು. ಕೆಲೆವೆಡೆಯಲ್ಲಿ ಸಾವೆ, ರಾಜಗಿರಿ

ಕಾಳುಗಳನ್ನು ಒಣಗಹಾಕಿದ್ದರು. ಕೆಲವೆಡೆಯಲ್ಲಿ ಮುನಿವಟುಗಳು ಅಧ್ಯಯನ ಮಾಡುತ್ತ ಕುಳಿತಿದ್ದರು. ಕೆಲವೆಡೆಯಲ್ಲಿ ಶುಕಸಾರಿಕೆಗಳು, ಋಷಿಗಳು ಉಚ್ಚರಿಸಿದ ಶಬ್ದಗಳನ್ನು ಕೇಳಿ ಕೇಳಿ ಅವುಗಳನ್ನೇ ಮರಳಿ ಮರಳಿ ನುಡಿಯುತ್ತಿದ್ದವು. ಅಂಗಳದೊಳಗೆ ಆಡುವ ಮುನಿಗಳ ಮಕ್ಕಳ ಮೈಯ್ಯನ್ನು ಎರಳೆಗಳು ತಮ್ಮ ಕೋಮಲವಾದ ನಾಲಿಗೆಯಿಂದ ನೆಕ್ಕುತ್ತಿದ್ದವು. ಅಗ್ನಿಯೊಳಗೆ ಹಾಕಿದ ಹೋಮದ್ರವ್ಯಗಳ ಸುವಾಸನೆಯು ಸುತ್ತಲೂ ಹರಡುತ್ತಿದ್ದಿತು. ಆ ಆಶ್ರಮದೊಳಗಿನ ಎಷ್ಟೋ ತಪಸ್ವಿಗಳು ಹಲವು ತರದ ಗ್ರಂಥಗಳನ್ನು ಓದುತ್ತ ಕುಳಿತಿದ್ದರು. ಹಲವರು ಧರ್ಮ-ಶಾಸ್ತ್ರಗಳನ್ನು ಪರಿಶೋಧಿಸುತ್ತಿದ್ದರು. ಹಲವರು ಪರ್ಣಶಾಲೆಗಳನ್ನು ಕಟ್ಟುತ್ತಿದ್ದರು. ಕೆಲವರು ಕೃಷ್ಣಾಜಿನವನ್ನು ಹದಗೊಳಿಸಿ ಮಿದುವು ಮಾಡತ್ತಿದ್ದರು. ಕೆಲವರು ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿಗಳೆಂಬ ಯೋಗಾಭ್ಯಾಸ ಸಾಧನೆಗಳಲ್ಲಿ ತತ್ಪರರಾಗಿದ್ದರು. ಸುಳ್ಳು-ಸಿಟ್ಟುಗಳೆಂಬವು ಆ ತಪಸ್ವಿಗಳಿಗೆ ಗೊತ್ತು ಇದ್ದಿಲ್ಲ. ಆ ತಪೋವನದೊಳಗೆ ಹೋಗುವದಕ್ಕೆ ಕಾಮನಿಗೆ ಎದೆಯಾಗುತ್ತಿದ್ದಿಲ್ಲ. ಶಾಂತ ಸ್ವಭಾವದಿಂದಲೂ, ತಪದ ತೇಜದಿಂದಲೂ, ಒಪ್ಪುವ ಯತೀಶ್ವರರನ್ನು ನೋಡಿ ನಾನು ಧನ್ಯನಾದೆನು.

ಆ ತಪೋವನದ ನಡುವೆ ಒಂದು ಅಶೋಕವೃಕ್ಷವಿದೆ. ಆ ವೃಕ್ಷದ ಎಲೆಗಳು ಅಲತಿಗೆಯ ರಸದೊಳಗೆ ಎದ್ದಿ ತೆಗೆದಂತೆ ಕೆಂಪಗೆ ಶೋಭಿಸುತ್ತಿದ್ದವು. ಆ ವೃಕ್ಷದ ಟೊಂಗೆಗಳಿಗೆ ಋಷಿಗಳು ತಮ್ಮ ಕೃಷ್ಣಾಜಿನಗಳನ್ನೂ, ನೀರು ತುಂಬಿದ ಕಮಂಡಲುಗಳನ್ನೂ ತೂಗುಹಾಕಿದ್ದರು. ಅದರ ಕಟ್ಟೆಯೊಳಗೆ ನಿಂತ ನೀರನ್ನು ಚಿಗರೆಯ ಮರಿಗಳು ಸುತ್ತುಮುತ್ತು ನಿಂತುಕೊಂಡು ಕುಡಿಯುತ್ತಿದ್ದವು. ಆ ಗಿಡದ ಬುಡಭಾಗದ ನೆಲವನ್ನು ಗೋಮಯದಿಂದ ಸಾರಿಸಿದ್ದರು. ಆ ಅಶೋಕವೃಕ್ಷದ ನೆಳಲೊಳಗೆ ಚರ್ಮಾಸನದ ಮೇಲೆ ವಯೋವೃದ್ಧನಾದ ಜಾಬಾಲಿ ಮಹರ್ಷೀಶ್ವರನು ಬಲಗೈಯೊಳಗೆ ರುದ್ರಾಕ್ಷ ಜಪಮಾಲೆ ಹಿಡಿದುಕೊಂಡು ಕುಳಿತಿದ್ದನು. ಆತನ ಸುತ್ತುಮುತ್ತು ಉಗ್ರ ತಪಶ್ಚರ್ಯ ಮಾಡಿದ ತಪಸ್ವಿಗಳು ಕುಳಿತುಕೊಂಡಿದ್ದರು. ಮುಪ್ಪಿನಿಂದ ಆತನ ಮೈ ಬಣ್ಣವು ಬೆಳ್ಳಗಾಗಿತ್ತು. ಆತನ ಮಸ್ತಕದ ಮೇಲಿನ ಬಿಳಿಯ ಜಡೆಗಳು ಮೈಮೇಲೆಯೂ, ನೆಲದ ಮೇಲೆಯೂ ಬಿದ್ದಿದ್ದವು. ಹುಬ್ಬುಗಳು ಕಣ್ಣುಗಳ ಮೇಲೆ ಜೋತಾಡುತ್ತಿದ್ದವು. ಎಡೆಬಿಡದೆ ಶಿವಮಂತ್ರವನ್ನು ಉಚ್ಚರಿಸುವಾಗ ಆ ಋಷೀಶ್ವರನ ಹಸನಾದ ಹಲ್ಲುಗಳು ಹೊಳೆಯುತ್ತಿದ್ದವು. ಆತನ ಬಾಯೊಳಗಿಂದ ಆಗಾಗ್ಗೆ ಸೋಮರಸದ ತೇಗು ಬರುತ್ತಿದ್ದವು. ಆ ಋಷಿಯು ಬಹಳ ತೆಳ್ಳಗೆ ಇದ್ದುದರಿಂದ ಗಲ್ಲಗಳು ಒಳಸಿಕ್ಕು ಮೂಗೂ, ಗದ್ದವೂ ಉದ್ದಕ್ಕೆ ಹಾಯ್ದಿದ್ದವು. ಕಣ್ಣೆವೆಗಳು ಉದುರಿ ಅಂಗಲಾಗಿದ್ದವು. ಕಿವಿಯಾಲೆಗಳು ಕೂದಲುಗಳಿಂದ ಮುಚ್ಚಿದ್ದವು. ಗಡ್ಡ ಮೀಸೆಗಳು ಹೊಕ್ಕಳ ತನಕ ಇಳಿಬಿದ್ದಿದ್ದವು. ಮೈತುಂಬಾ ನರಗಳು ಎದ್ದುದರಿಂದ ಬಳ್ಳಿಗಳಿಂದ ಸುತ್ತು ಹಾಕಿದ ಬಹುಕಾಲದ ಕಲ್ಪವೃಕ್ಷದಂತೆ ಕಂಗೊಳಿಸುತ್ತಿದ್ದನು. ಬಳಿಯಲ್ಲಿ ಭಾಗೀರಥಿಯ ಉದಕ ತುಂಬಿದ್ದೊಂದು ಸ್ಫಟಿಕದ ಕಮಂಡಲವಿಟ್ಟಿತ್ತು. ಈ ತಪಸ್ವಿಯ ತಪದ ಮಹಿಮೆಯನ್ನು ಎಷ್ಟೆಂದು ಹೇಳಲಿ! ಸ್ವಭಾವಸಿದ್ಧವಾಗಿ ಶಾಂತಮೂರ್ತಿಯಿದ್ದರೂ ಆತನ ತಪಶ್ಚರ್ಯದ ಪ್ರಭಾವವನ್ನು ಕಂಡು ನನಗೆ ಹೆದರಿಕೆ ಹುಟ್ಟಿತು. ಆತನ ಹೆಸರು ತಕ್ಕೊಂಡರೆ ಪಾಪ ಪರಿಹಾರವಾದೀತು; ಅಂಥ

ತಪೋಮೂರ್ತಿ ಇದ್ದೆಡೆಯೇ ಸುಕ್ಷೇತ್ರವು. ಅಂಥ ಆಶ್ರಮವಿರುವ ಭೂಮಿಯೇ ಪವಿತ್ರವು. ಅಂಥ ಕುಲಗುರುವಿನ ಸೇವೆಯಲ್ಲಿ ಹಗಲೂ ಇರುಳೂ ಹೊತ್ತುಗಳೆಯುವ ಮುನಿಗಳೇ ಪುಣ್ಯವಂತರು. ಇಂಥ ಮಹಾಮಹಿಮನ ಜಿಹ್ವಾಗ್ರದಲ್ಲಿರುವ ವಾಗ್ದೇವಿಯೇ ಧನ್ಯಳು. ಈ ಮಹಾ ಮುನೀಶ್ವರನ ಮುಖವೇ ವೇದಗಳಿಗೆ ನೆಲೆಮನೆಯಾಗಿದೆ. ಮಳೆಗಾಲದಲ್ಲಿ ಕಲಕಾದ ಹೊಳೆಗಳು ಶರತ್ಕಾಲದಲ್ಲಿ ಸ್ವಚ್ಛವಾದಂತೆ ಕಲಿಕಾಲದಿಂದ ಮಲಿನವಾದ ಯಾವತ್ತೂ ವಿದ್ಯೆಗಳು ಈ ಋಷಿಯ ಆಶ್ರಯದಿಂದ ಪುನಃ ಸ್ವಚ್ಛವಾದವು. ಸನ್ಮಾರ್ಗಕ್ಕೆ ದರ್ಪಣನಾದಂಥ, ಸತ್ವಗುಣಕ್ಕೆ ಆಶ್ರಯನಾದಂಥ, ತಪೋಧನಕ್ಕೆ ಭಾಂಡಾರನಾದಂಥ, ಮದಮತ್ಸರಾದಿ ದುರ್ಗುಣಗಳಿಗೆ ಶತ್ರುವಾದಂಥ ಜಾಬಾಲಿ ಋಷೀಶ್ವರನ ಪ್ರಭಾವದಿಂದ ಆ ತಪೋವನದೊಳಗೆ ಒಬ್ಬರಿಗೊಬ್ಬರು ದ್ವೇಷ ಅಸೂಯೆಗಳನ್ನು ಮಾಡುತ್ತಿದ್ದಿಲ್ಲ. ಸೋಜಿಗವೆಷ್ಟು ನೋಡಿರಿ! ಅಲ್ಲಿಯ ಶ್ವಾಪದಗಳು ಸಹ ತಮ್ಮ ಸ್ವಾಭಾವಿಕವಾದ ವೈರಭಾವವನ್ನು ಬಿಟ್ಟು, ತಮ್ಮತಮ್ಮೊಳಗೆ ಒಂದಕ್ಕೊಂದು ಸ್ನೇಹಭಾವದಿಂದ ನಡಕೊಂಡು, ಶಾಂತಿಯಿಂದ ಆ ತಪೋವನದೊಳಗೆ ಸುಖವನ್ನು ಅನುಭೋಗಿಸುತ್ತಿರುವವು. ಚಿಗರೆಯ ಮರಿಗಳು ಸಿಂಹಶಿಶುಗಳ ಕೂಡ ಆಡಿ ಈಲಾಗಿ, ತಮ್ಮ ತಾಯಿಯ ಬಿಟ್ಟು ಹೆಣ್ಣುಸಿಂಹನ ಮೊಲೆ ಕುಡಿಯುವವು. ಆನೆಯ ಮರಿಗಳು ಸಿಂಹನ ಕುತ್ತಿಗೆಗೆ ಸೊಂಡಿಲನ್ನು ಸುತ್ತಿ ಚಲ್ಲಾಟದಿಂದ ಎಳೆದಾಡುವಾಗ ಆ ಸಿಂಹವು ಕಣ್ಣುಮುಚ್ಚಿಕೊಂಡು ಸ್ವಸ್ಥವಾಗಿ ನಿಲ್ಲುವದು. ಸ್ನಾನ ಮಾಡಿ ಕುಳಿತಂಥ ಮುನಿಕುಮಾರರಿಗೆ ಮಂಗಗಳು ಗಿಡದ ಮೇಲಿನ ಹಣ್ಣುಗಳನ್ನು ತಂದುಕೊಡುವವು. ಸೊಕ್ಕಾನೆಗಳು ತಮ್ಮಮದೋದಕವನ್ನು ನೆಕ್ಕುವದಕ್ಕೆ ಗಲ್ಲದ ಮೇಲೆ ಬಂದು ಕುಳಿತ ಭ್ರಮರಗಳನ್ನು ಕಿವಿ ಬೀಸಿ ಹಾರಿಸುತ್ತಿದ್ದಿಲ್ಲ. ಇದನ್ನೆಲ್ಲ ಕಂಡು ಮನದೊಳಗೆ ಸೋಜಿಗಗೊಳ್ಳುವಷ್ಟರಲ್ಲಿ ಹಾರೀತನು ಆ ಅಶೋಕವೃಕ್ಷದ ಕೆಳಗೆ ಒತ್ತಟ್ಟಿಗೆ ನನ್ನನ್ನು ಇಟ್ಟು ತಂದೆಯಾದ ಜಾಬಾಲಿಋಷಿಯ ಚರಣಕ್ಕೆ ನಮಿಸಿ ದೂರ ದರ್ಭಾಸನದ ಮೇಲೆ ಕುಳಿತುಕೊಂಡನು. ಅಲ್ಲಿ ಕುಳಿತ ಮುನಿಗಳು ನನ್ನನ್ನು ನೋಡಿ "ಈ ಶುಕಶಿಶುವು ಎಲ್ಲಿ ದೊರಕಿತು?" ಎಂದು ಹಾರೀತನನ್ನು ಕೇಳಿದರು. ಅದಕ್ಕೆ ಹಾರೀತನು "ನಾವು ಸ್ನಾನಕ್ಕೆ ಹೋಗುವಾಗ ಮಾರ್ಗದಲ್ಲಿ ಪಂಪಾಸರೋವರದ ದಂಡೆಯ ಹತ್ತಿರ ಒಂದು ಮರದ ಮೇಲಿನ ಗೂಡಿನೊಳಗಿಂದ ಇದು ಕೆಳಗೆ ಬಿದ್ದಿತ್ತು; ಬಿಸಿಲಿಗೆ ಬಳಲಿ ಬಾಯಿಬಿಡಹತ್ತಿ ಈಗ ಸಾಯುತ್ತದೋ ಇನ್ನೊಂದು ಕ್ಷಣಕ್ಕೆ ಸಾಯುತ್ತದೋ ಅನ್ನುವ ಹಾಗೆ ಹೊರಳಾಡುತ್ತಿತ್ತು. ಗೂಡಿನೊಳಗೆ ಇಡಬೇಕಾದರೆ ಮರದ ಮೇಲೇರಲಿಕ್ಕೆ ಬಾರದ್ದರಿಂದ ಇತ್ತ ತಕ್ಕೊಂಡು ಬಂದೆನು; ಪಕ್ಕ ಬಲಿತು ಹಾರುವದಕ್ಕೆ ಬರುವತನಕ ಇದನ್ನು ಇಲ್ಲಿಯೇ ಜೋಕೆ ಮಾಡುವ. ಅನಾಥ ಪ್ರಾಣಿಗಳನ್ನು ಸಂರಕ್ಷಿಸುವುದೇ ನಮ್ಮ ಧರ್ಮವು. ಪಕ್ಕ ಬಲಿತ ಬಳಿಕ ಇದು ಬೇಕಾದಕಡೆಗೆ ಹೋದರೂ ಸರಿಯೇ, ಇಲ್ಲಿ ಇದ್ದರೂ ಸರಿಯೇ" ಎಂದನು. ಹೀಗೆ ಮಾತಾಡುವಾಗ ಆ ಜಾಬಾಲಿ ಋಷಿಗಳು ನನ್ನ ಕಡೆಗೆ ಮೋರೆದಿರುವಿ ನೋಡಿದರು. ನನ್ನ ಗುರುತು ಹತ್ತಿದ್ದರಿಂದ ಶಾಂತದೃಷ್ಟಿಯಿಂದ ಮರಳಿ ಮರಳಿ ನನ್ನನ್ನು ನೋಡಿ— "ತನ್ನ ಮೈ ಸೊಕ್ಕಿನ ಫಲವನ್ನು ಅನುಭೋಗಿಸುತ್ತಾನೆ" ಎಂದು ಅಂದರು. ತಪಃಸಾಮರ್ಥ್ಯದಿಂದ ತ್ರಿಭುವನವನ್ನು ಜ್ಞಾನದೃಷ್ಟಿಯಿಂದ ನೋಡುವ ಜಾಬಾಲಿ

ಋಷೀಶ್ವರರು ಹೀಗೆ ಆಡಿದ್ದನ್ನು ಕೇಳಿ ಎಲ್ಲ ಮುನಿಗಳೂ ಬಹಳ ಆಶ್ಚರ್ಯಗೊಂಡು, "ಸ್ವಾಮೀ, ಇದು ಏನು ಮೈ ಸೊಕ್ಕು ಮಾಡಿತು ? ಜನ್ಮಾಂತರದಲ್ಲಿ ಈತನು ಯಾವನು ? ಗಿಳಿಯಾಗಿ ಹುಟ್ಟಿದ ಕಾರಣವೇನು ? ಈತನ ಉತ್ಪತ್ತಿ ಹೇಗಾಯಿತು ? ಈತನ ಹೆಸರೇನು ? ಇದನ್ನೆಲ್ಲ ದಯಮಾಡಿ ನಮಗೆ ಹೇಳಬೇಕು" ಎಂದು ವಿನಯದಿಂದ ಕೈಮುಗಿದು ಬಿನ್ನವಿಸಿದರು. ಆಗ ಜಾಬಾಲಿ ಋಷೀಶ್ವರರು—"ಇದರ ವಿಲಕ್ಷಣವಾದ ಕಥೆಯು ಬಹಳ ವಿಸ್ತಾರವಾಗಿದೆ; ಈಗ ಸಂಜೆಯಾಗುತ್ತ ಬಂತು; ಸ್ನಾನ ಸಂಧ್ಯಾದಿ ನಿತ್ಯಕರ್ಮಗಳಿಗೆ ತಡವಾದೀತು; ನಿತ್ಯಕರ್ಮಗಳನ್ನು ತೀರಿಸಿಕೊಂಡು ಉಪಾಹಾರ ತಕ್ಕೊಂಡು ಸ್ವಸ್ಥವಾಗಿ ಕುಳಿತುಕೊಂಡ ಬಳಿಕ, ನಿಮಗೆ ಈ ಕಥೆಯನ್ನು ವಿಸ್ತರಿಸುವೆನು. ಈ ಶಿಶುವಿಗೂ ಆಹಾರ ಹಾಕಿ ಇದನ್ನೂ ಸಮಾಧಾನಗೊಳಿಸಿರಿ; ಇದರ ವೃತ್ತಾಂತವನ್ನು ಹೇಳಲಾರಂಭಿಸಿದ ಬಳಿಕ ಇದಕ್ಕೆ ತನ್ನ ಜನ್ಮಾಂತರದ ಸಂಗತಿಗಳು ಕನಸಿನೊಳಗಿನ ಮಾತುಗಳು ಜಾಗ್ರದವಸ್ಥೆಯಲ್ಲಿ ನೆನಪಾಗುವಂತೆ ನೆನಪಾಗುವವು" ಎಂದು ಹೇಳಿ ಸ್ನಾನಕ್ಕೆ ಹೋದರು. ಬಳಿಕ ಸಂಧ್ಯಾದಿಕರ್ಮಗಳನ್ನು ತೀರಿಸಿಕೊಳ್ಳುವಷ್ಟರೊಳಗೆ ನಾಲ್ಕು ಗಳಿಗೆ ರಾತ್ರಿಯಾಯಿತು. ಚಂದ್ರೋದಯವಾಗಿ ಬೆಳದಿಂಗಳು ಶೋಭಿಸಹತ್ತಿತು. ಮರಳಿ ಅದೇ ಅಶೋಕವೃಕ್ಷದ ಕೆಳಗೆ ಜಾಬಾಲಿ ಋಷೀಶ್ವರರು ಬಂದು ವೇತ್ರಾಸನದ ಮೇಲೆ ಕುಳಿತುಕೊಂಡರು. ಹಾರೀತ ಕುಮಾರನು ನನಗೆ ಹಣ್ಣು ತಿನಿಸಿ, ನೀರು ಕುಡಿಸಿ, ನನ್ನನ್ನು ತಕ್ಕೊಂಡು ಯಾವತ್ತೂ ಮುನಿಗಳೊಡಗೊಂಡು ಅಲ್ಲಿಗೆ ಬಂದು " ಜೀಯಾ, ತಾತನೇ, ಇವರೆಲ್ಲರೂ ಆ ಅದ್ಭುತ ಕಥೆಯನ್ನು ಕೇಳುವ ಲವಲವಿಕೆಯಿಂದ ಬಂದು ತಮ್ಮ ಸುತ್ತು ಮುತ್ತು ಹಾರೈಸಿಕೊಂಡು ಕುಳಿತಿದ್ದಾರೆ; ನಮ್ಮ ಇಚ್ಛೆಯನ್ನು ಪೂರ್ಣಮಾಡಬೇಕು ಎಂದು ಬೇಡಿಕೊಂಡನು. ಇದನ್ನು ಕೇಳಿ ನನ್ನನ್ನು ನೋಡಿ — "ಎಲೈ ಶಿಷ್ಯರೇ, ಈ ಸೋಜಿಗದ ಕಥೆಯನ್ನು ಚಿತ್ತಗೊಟ್ಟು ಆಲಿಸಿರಿ" ಎಂದು ಜಾಬಾಲಿ ಋಷೀಶ್ವರರು ಹೇಳಲುದ್ಯುಕ್ತರಾದರು.

ಕಥಾರಂಭವು

ಅವಂತೀ ಪ್ರದೇಶದಲ್ಲಿ ಕ್ಷಿಪ್ರಾನದೀತೀರದ ಮೇಲೆ ಉಜ್ಜಯಿನಿ ಎಂಬದೊಂದು ಲೋಕವಿಖ್ಯಾತವಾದ ಪಟ್ಟಣವಿದೆ. ಅದರ ಸುತ್ತು ಮುತ್ತು ನಾಲ್ಕು ಸುತ್ತಿನ ಎತ್ತರವಾದ ಕೋಟೆಯುಂಟು; ಆ ಕೋಟೆಯ ಸುತ್ತು ಹೊರಮಗ್ಗಲು ಆಳವಾದ ಅಗಳತವಿದೆ. ಆ ಪಟ್ಟಣದ ಪಗಡಿಸಾಲ ಪೇಟೆಯೊಳಗಿನ ಅಂಗಡಿಗಳೊಳಗೆ ಮಾರಾಟಕ್ಕೆ ಇಟ್ಟ ಮುತ್ತು, ಹವಳ, ವಜ್ರ, ಪಚ್ಚೆರತ್ನಗಳೂ, ತರತರದ ಆಭರಣಗಳೂ ಅಂದಗೊಂಡು ಒಪ್ಪುತ್ತಿರುವವು. ಅಲ್ಲಿಯ ಚಿತ್ರಶಾಲೆಯೊಳಗಿನ ದೇವಗಂಧರ್ವರ ಚಿತ್ರಗಳನ್ನು ನೋಡಿದರೆ, ಇವರೆಲ್ಲರೂ ಈ ಉಜ್ಜಯಿನಿ ನಗರದೊಳಗಿನ ಉತ್ಸವಗಳನ್ನು ನೋಡಲಿಕ್ಕೆ ಸ್ವರ್ಗದಿಂದ ಕೆಳಗಿಳಿದು ಬಂದಿದ್ದಾರೋ ಏನೋ ಅನ್ನುವಂತೆ ತೋರುವದು. ಅಲ್ಲಿಯ ಸುಂದರವಾದ ಗುಡಿಗಳ ಮೇಲಿನ ಬಂಗಾರದ ಕಲಶಗಳು ಮುಗಿಲನ್ನು ಮುದ್ದಿಸುವಂತೆ ಕಾಣಿಸುತ್ತಿರುವವು. ಅಲ್ಲಲ್ಲಿಗೆ ನೀರು ಪುಟಿಯುವ ಕಾರಂಜಿಗಳು ಒಪ್ಪುತ್ತಿರುವವು. ಆ ನಗರದೊಳಗೆ ಪರನಾರೀ ಸಹೋದರರಾದಂಥ, ಸಕಲ ವಿದ್ಯಾವಿಶಾರದರಾದಂಥ, ಹಲವು ಬರಹ-ಭಾಷೆಗಳನ್ನು ಬಲ್ಲಂಥ, ಮಹಾಭಾರತ-ರಾಮಾಯಣ ಇತಿಹಾಸಾನುರಾಗಿಗಳಾದಂಥ, ದಾನಶೀಲರಾದಂಥ ಧಾರ್ಮಿಕರಾದಂಥ ಹಲವು ವ್ಯಾಪಾರಗಳನ್ನು ಮಾಡುವ ಕೋಟ್ಯಾಧೀಶರಾದಂಥ, ಸವಿಮಾತುಗಳನ್ನು ಆಡುವಂಥ, ಸದಾಚಾರಸಂಪನ್ನರಾದ ಜನರು ಸುಖದಿಂದ ಸಂಸಾರ ಮಾಡುತ್ತ ಇರುತ್ತಿದ್ದರು. ಆ ಪಟ್ಟಣದೊಳಗಿನ ಗಚ್ಚಿನ ಮೇಲುಪ್ಪರಿಗೆಗಳು ಬಹು ಎತ್ತರವಾಗಿ ಬೆಳ್ಳಗೆ ಹೊಳೆಯುತ್ತಿರುವವು. ಆ ಊರೊಳಗೆ ಬೆಳಗುಮುಂಜಾವಿನ ನಾಲ್ಕು ಗಳಿಗೆ ರಾತ್ರಿ ಇರುವಾಗ ಅರಗಿಳಿಗಳು ಮಾತಾಡುವ ಮಂಜುಳ ಮಾತುಗಳೂ, ವಂದಿಗಳು ಅನ್ನುವ ಮಂಗಳಗೀತಗಳೂ ದಿನಾಲು ಕೇಳಬರುವವು; ವೇದಘೋಷವಂತೂ ಯಾವಾಗಲೂ ಸಾಗಿರುವದು. ಬಹಳ ಹೇಳುವುದೇನು? ಯಾವಾತನ ಚರಣಧ್ಯಾನವನ್ನು ಎಡೆಬಿಡದೆ ದೇವದಾನವರು ಮಾಡುತ್ತಾರೋ ಆ ಚಂದ್ರಶೇಖರನೇ ಇಲ್ಲಿ 'ಮಹಾಕಾಲೇಶ್ವರ' ನೆಂಬ ಹೆಸರು ಪಡೆದು ಕೈಲಾಸಪರ್ವತವನ್ನು ಬಿಟ್ಟು ಪ್ರೀತಿಯಿಂದ ತನ್ನ ಗಣಸ್ತೋಮದೊಡನೆ ಇರುತ್ತಾನೆ. ಇಂಥ ಈ ಉಜ್ಜಯಿನೀ ಪಟ್ಟಣವನ್ನು ಪೂರ್ವಕಾಲದಲ್ಲಿ ಎಲ್ಲ ಪ್ರಜೆಗಳ ಪೀಡೆಯನ್ನು ಪರಿಹರಿಸುವಂಥ ತಾರಾಪೀಡನೆಂಬ ಒಬ್ಬ ಅರಸನು ಆಳಿದನು. ಆ ಅರಸನು ನೀತಿಶಾಸ್ತ್ರವನ್ನೂ, ಧರ್ಮಶಾಸ್ತ್ರವನ್ನೂ ಚೆನ್ನಾಗಿ ಬಲ್ಲವನಿದ್ದನು. ಪುರಾತನಕಾಲದಲ್ಲಿ ಆಗಿಹೋದ ಮಾಂಧಾತ, ನಹುಷ, ನಳ, ಅಂಬರೀಷ, ಸಗರ ಮುಂತಾದ ಮಹಾರಾಜರಂತೆ ಈ ತಾರಾಪೀಡನು ಪರಾಕ್ರಮಶಾಲಿಯಾಗಿಯೂ ಪುಣ್ಯಶಾಲಿಯಾಗಿಯೂ ಒಪ್ಪುತ್ತಿದ್ದನು. ಈತನು ತನ್ನ ಬಾಹುಬಲದಿಂದ ಸಂಪೂರ್ಣ ಭೂಮಂಡಲವನ್ನು ಕೈವಶಮಾಡಿಕೊಂಡಿದ್ದನು. ಈತನ ಶುಭ್ರವಾದ ಕೀರ್ತಿಯು ಅಷ್ಟದಿಕ್ಕುಗಳಲ್ಲೆಲ್ಲ ತುಂಬಿ ಹಗೆಗಳ ಮುಖಕ್ಕೆ ಮಾತ್ರ ಕಪ್ಪು ಹಚ್ಚುತ್ತಿರುವದು. ಲಕ್ಷ್ಮಿಗೆ ನಿವಾಸಸ್ಥಾನನಾಗಿಯೂ, ಸತ್ಯಕ್ಕೆ ಆಶ್ರಯನಾಗಿಯೂ, ವಿದ್ವಾಂಸರಿಗೆ ಪಾಲಕನಾಗಿಯೂ,

ದೊಡ್ಡ ದಂಡು ಕಾಯ್ದುಕೊಂಡು ಶತ್ರುಗಳಿಗೆ ಕಾಲದಂಡನಾಗಿಯೂ, ಧರ್ಮದ ಅವತಾರನೋ, ಪುರುಷೋತ್ತಮನ ಪ್ರತಿನಿಧಿಯೋ ಅನ್ನುವಂತೆ ಈ ತಾರಾಪೀಡನು ರಾಜ್ಯವಾಳುತ್ತಿದ್ದನು. ಈತನಿಗೆ ನಾಲ್ಕೂ ದಿಕ್ಕಿನ ಅರಸರು ಕಪ್ಪಕಾಣಿಕೆ ಕೊಡುತ್ತಿದ್ದರು. ಬಹಳ ಹೇಳುವುದೇನು! ಈತನ ಐಶ್ವರ್ಯವನ್ನು ನೋಡಿ ಇಂದ್ರನಿಗೆ ಸಹ ಹೊಟ್ಟೆಕಿಚ್ಚು ಹುಟ್ಟುತ್ತಿತ್ತು.

ಈ ತಾರಾಪೀಡನು ಆಳುವಾಗ ಈತನ ರಾಜ್ಯದೊಳಗೆ ಅನ್ಯಾಯವೂ ಅಧರ್ಮವೂ ಹೇಳಹೆಸರಿಲ್ಲದ ಹಾಗಾಗಿದ್ದವು; ಆದುದರಿಂದ ಎಲ್ಲ ಪ್ರಜೆಗಳು ನೀತಿಯಿಂದ ವರ್ತಿಸುತ್ತ ಸುಖದಿಂದ ಇರುತ್ತಿದ್ದರು. ಈ ಅರಸನಿಗೆ ಶುಕನಾಸನೆಂಬ ಮುಖ್ಯಮಂತ್ರಿ ಇದ್ದನು. ಆ ಶುಕನಾಸ ಮಂತ್ರಿಯು ಯಾವಾಗಲೂ ಗುಪ್ತಚರರನ್ನು ಕಳುಹಿ, ಪೃಥ್ವಿಯ ಮೇಲಿನ ಸುದ್ದಿಗಳನ್ನು ತಿಳಿದುಕೊಳ್ಳುವನು; ಅದರಿಂದ ಅವನಿಗೆ ತಿಳಿಯದೆ ಎಲ್ಲಿಯೂ ಏನೂ ಆಗುತ್ತಿದ್ದಿಲ್ಲ. ಪರಚಕ್ರಗಳೆಂಬವು ಯಾವವೂ ಉಳಿಯದ್ದರಿಂದ ತಾರಾಪೀಡ ರಾಜನು ಎಲ್ಲ ರಾಜ್ಯ ಕಾರಭಾರವನ್ನು ಶುಕನಾಸಮಂತ್ರಿಗೆ ಒಪ್ಪಿಸಿ, ತಾನು ವಿಷಯಸುಖಗಳನ್ನು ಅನುಭೋಗಿಸುತ್ತಿದ್ದನು. ಒಮ್ಮೊಮ್ಮೆ ಹೂದೋಟದೊಳಗೆ ಹೋಗಿ ವಿಹರಿಸುವನು; ಒಮ್ಮೊಮ್ಮೆ ತಿಳಿಗೊಳದೊಳಗೆ ಜಲಕ್ರೀಡೆಯಾಡುವನು; ಒಮ್ಮೊಮ್ಮೆ ಕಟ್ಟಡವಿಗೆ ಹೋಗಿ ಕೆಟ್ಟ ಮೃಗಗಳ ಬೇಟೆಯಾಡುವನು; ಒಮ್ಮೊಮ್ಮೆ ಗೆಳೆಯರನ್ನು ಕೂಡಿಕೊಂಡು ವೀಣೆ, ಜಲತರಂಗ ಮುಂತಾದ ವಾದ್ಯಗಳನ್ನು ಬಾರಿಸಿ ಕಾಲಕ್ರಮಣ ಮಾಡುವನು. ಈ ಮೇರೆಗೆ ಅತಿ ರಮಣೀಯವಾದಂಥ, ಸುಖಕಾರಕವಾದಂಥ, ತನಗೂ ತನ್ನ ದೊಡ್ಡಸ್ತಿಕೆಗೂ ಆ ಆ ಋತುಗಳಿಗೂ ವಿರುದ್ಧವಲ್ಲದ ಸುಖೋಪಭೋಗಗಳನ್ನು ಅವುಗಳಿಗೆ ಸ್ವಾಧೀನನಾಗದೆ ಮಿತವಾಗಿ ಉಪಭೋಗಿಸುತ್ತಿದ್ದನು. ಆದರೂ ಪ್ರಜೆಗಳ ಅರಿಕೆಗಳನ್ನು ಕೇಳಿಕೊಳ್ಳಲಿಕ್ಕೆ ನಡುನಡುವೆ ಅವರಿಗೆ ದರ್ಶನ ಕೊಡುತ್ತಿದ್ದನು; ಹೆಚ್ಚಿನ ಕಾರಣಗಳ ಸಲುವಾಗಿ ಓಲಗದೊಳಗೆ ಬಂದು ಸಿಂಹಾಸನದ ಮೇಲೆ ಕುಳಿತುಕೊಳ್ಳುತ್ತಿದ್ದನು. ನಾಡೊಳಗೆಲ್ಲ ನಾಲ್ಕೂ ಕಡೆಯಲ್ಲಿ ಸ್ವಸ್ಥತೆ ಇದ್ದು, ಎಲ್ಲ ಪ್ರಜೆಗಳು ಸುಖದಿಂದ ಇದ್ದಾಗ ಈ ಮೇರೆಗೆ ಸುಖೋಪಭೋಗಗಳನ್ನುಪಭೋಗಿಸುತ್ತ ಆನಂದದಿಂದ ಕಾಲಕಳೆಯುವದು ಅರಸರಿಗೆ ಭೂಷಣವೇ ಸರಿ.

ಶುಕನಾಸ ಮಂತ್ರಿಯಾದರೂ ಜಾಣತನದಿಂದ ಎಲ್ಲ ರಾಜ್ಯ ಕಾರಭಾರವನ್ನು ಅರಸನಂತೆ ಸಹಜವೇ ಸಾಗಿಸುತ್ತಿದ್ದನು; ಪ್ರಜೆಗಳ ಬಿನ್ನಹವನ್ನು ಅಲಿಸಿ ತಡಮಾಡದೆ ಆಗಾಗ್ಗೆ ಅವರವರ ಕೆಲಸಗಳನ್ನು ನ್ಯಾಯದಿಂದ ತೀರಿಸಿಕೊಡುವನು; ಅದರಿಂದ ಈತನ ಮೇಲೆ ಎಲ್ಲರೂ ಮೊದಲಿಗಿಂತ ಹೆಚ್ಚು ನಂಬಿಗೆ ಇಟ್ಟರು. ಅರಸನಿಗೆ ಮಾನಮಾಡಿದಂತೆಯೇ ಈತನಿಗೂ ಮಾಂಡಲಿಕ ಭೂಪಾಲರೆಲ್ಲರೂ ಯಾವಾಗಲೂ ಮಾನ ಮಾಡುತ್ತ ತಲೆಬಾಗಿ ನಡೆದುಕೊಳ್ಳುತ್ತಿದ್ದರು.

ಇದೇ ಮೇರೆಗೆ ಬಹಳ ದಿವಸಗಳು ಹೋದವು. ಅರಸನಿಗೆ ಮಕ್ಕಳಿದ್ದಿಲ್ಲ ಎಂಬುದೊಂದೇ ಕೊರತೆಯಲ್ಲದೆ ಬೇರೆ ಯಾವ ಸುಖದ ಕೊರತೆಯೂ ಇದ್ದಿಲ್ಲ. ತನಗೆ ದಿನ ಹೋದವು. ಹೊಟ್ಟೆಯಲ್ಲಿ ಮಕ್ಕಳಿಲ್ಲೆಂಬ ಮಾತು ಮನಸ್ಸಿಗೆ ನೆನಪಾದ ಕೂಡಲೆ,

ಈ ವಿಷಯ ಸುಖವನ್ನೂ, ಈ ರಾಜ್ಯ ಪದವನ್ನೂ ತಕ್ಕೊಂಡು ಏನು ಮಾಡಬೇಕೆಂತಲೂ ಕಣ್ಣುಗಳಿದ್ದು ತಾನು ಕುರುಡನೆಂತಲೂ, ಎಲ್ಲರಿಗೆ ತಾನು ಆಶ್ರಯನಾಗಿ ತನಗೆ ಯಾರೂ ಆಶ್ರಯವಿಲ್ಲೆಂತಲೂ ಬಗೆದು ಉಸಿರು ಹಾಕಿ ಅರಸನು ಬಹಳ ಉಮ್ಮಳಗೊಳ್ಳುವನು. ಆತನಿಗೆ ಹಲವು ಜನ ಹೆಂಡಂದಿರಿದ್ದರು; ಅವರೊಳಗೆ ಸೌಂದರ್ಯದಿಂದ ಸೋಜಿಗಗೊಳಿಸುವ ವಿಲಾಸವತಿ ಎಂಬವಳೇ ಪಟ್ಟದ ರಾಣಿಯು.

ಒಂದು ದಿನ ಅರಸನು ವಿಲಾಸವತಿಯು ಇರುವ ಮಂದಿರಕ್ಕೆ ಬಂದು ಒಳಹೊಕ್ಕು ನೋಡುತ್ತಾನೆ— ಆಕೆ ತನ್ನ ಎಡಗೈಯನ್ನು ಗಲ್ಲಕ್ಕೆ ಹಚ್ಚಿಕೊಂಡು ದುಃಖದಿಂದ ಕಣ್ಣೀರು ಸುರಿಸುತ್ತ ಮಂಚದ ಮೇಲೆ ಕುಳಿತಿದ್ದಾಳೆ, ಕಣ್ಣೀರಿನಿಂದ ಆಕೆಯ ಸೀರೆಯ ಸೆರಗೆಲ್ಲ ತೊಯ್ದಿದೆ, ರಾಣೀವಾಸದೊಳಗಿನ ದಾಸಿಯರೆಲ್ಲರು ಚಿಂತೆಯಿಂದ ಸುಮ್ಮನೇ ನಿಂತಿದ್ದಾರೆ, ಚೋಪದಾರರು ಮನದೆಣಿಕೆಯಿಂದ ಒಂದು ತುಟಿ ಎರಡು ಮಾಡಲೊಲ್ಲರು, ಮನೆಯೊಳಗಿನ ಮುದುಕಿಯರು ಸುತ್ತುಮುತ್ತು ನೆರೆದು ಸಮಾಧಾನ ಹೇಳುತ್ತಾರೆ. ಅಷ್ಟರೊಳಗೆ ವಿಲಾಸವತಿಯು ಅರಸನನ್ನು ನೋಡಿ ಚಟ್ಟನೆ ಎದ್ದು ಮುಂದಕ್ಕೆ ಬರಲು, ಅರಸನು ಕೈಹಿಡಿದು ಅವಳನ್ನು ಮಂಚದ ಮೇಲೆ ಕುಳ್ಳಿರಿಸಿ ಅವಳ ಹತ್ತಿರ ತಾನೂ ಕುಳಿತುಕೊಂಡು, ತನ್ನ ಕೈಯಿಂದ ಆಕೆಯ ಗಲ್ಲದ ಮೇಲಿನ ಕಣ್ಣೀರ ಹನಿಗಳನ್ನು ಒರಸಿ— "ಪ್ರಿಯಳೇ, ಈ ಪರಿ ದುಃಖಿಸುವ ಕಾರಣವೇನು? ಬೇಡ, ಕಣ್ಣೀರು ಸುರಿಸಬೇಡ; ಮಾತಾಡು; ಸುಮ್ಮನೆ ಅತ್ತರೇನಾಗುವದು? ದುಃಖದಿಂದ ಉಸುರು ಹಾಕುವಂಥ ನಿನ್ನನ್ನು ಕಂಡು ನನ್ನ ಮನಸ್ಸು ತರಹರಗೊಳ್ಳಲೊಲ್ಲದು; ನನ್ನಿಂದ ಏನಾದರೂ ತಪ್ಪು ಆಗಿದ್ದರೆ ಹೇಳು. ದಾಸ ದಾಸೀ ಜನರಲ್ಲಿ ಯಾರಾದರೂ ಮನಸ್ಸು ನೋಯಿಸಿ ಎದುರುತ್ತರ ಕೊಟ್ಟರೋ ಹೇಗೆ? ಸುಮ್ಮನೆ ವ್ಯರ್ಥವಾಗಿ ಅಳಬೇಡ" ಎಂದು ಅರಸನು ಕೇಳಿಕೊಂಡರೂ ಆಕೆ ಏನೂ ಉತ್ತರ ಕೊಡದೆ ಸುಮ್ಮನೆ ದುಮ್ಮಾನದಿಂದ ಮೋರೆ ಕೆಳಗೆ ಮಾಡಿಕೊಂಡು ಕುಳಿತಳು. ಇದನ್ನು ಕಂಡು ಅರಸನು ಬಳಿಯಲ್ಲಿ ನಿಂತ ತೊತ್ತುಗಳನ್ನು ಕೇಳಲು, ಅವರಲ್ಲಿ ಅರಸಿಯ ತಾಂಬೂಲದ ಕರಡಿಗೆ ಹಿಡಿಯುವ ಮಕರಿಕೆಯೆಂಬ ದಾಸಿಯು— "ಜೀಯಾ ತಮ್ಮಿಂದ ಅಂಥದು ಏನೂ ಆಗಿಲ್ಲ; ಇಷ್ಟು ತಮ್ಮ ಕೃಪೆ ಇದ್ದ ಬಳಿಕ ಅರಸಿಯರ ಮನಸ್ಸು ನೋಯುವ ಹಾಗೆ ಎದುರುತ್ತರ ಕೊಡುವ ಎದೆ ಯಾರಿಗಾದೀತು? ಆದರೆ ಮಕ್ಕಳಿಲ್ಲೆಂಬ ದುಃಖವು ಬಹು ದಿವಸದಿಂದ ಅವರ ಹೃದಯದೊಳಗೆ ಮನೆಮಾಡಿಕೊಂಡಿದೆ. ನಾವು ಕೊರಳು ಬೀಳುವದರಿಂದಲೂ, ಸೆರಗೊಡ್ಡಿ ಬೇಡಿಕೊಳ್ಳುವದರಿಂದಲೂ, ಅವರು ಭೋಜನ ಮುಂತಾದ ಕ್ರಿಯೆಗಳನ್ನು ಮಾಡುತ್ತಿದ್ದರಲ್ಲದೆ ಸಂತೋಷದಿಂದ ಮಾಡುತ್ತಿದ್ದಿಲ್ಲ. ದೊರೆಗಳ ಮನಸ್ಸಿಗೆ ಖೇದವಾದೀತೆಂಬ ಅಂಜಿಕೆಯಿಂದಲೇ ಮನದೊಳಗಿನ ದುಃಖವನ್ನು ಹೊರಗೆ ತೋರಗೊಡದೆ ಒಳಗಿಂದೊಳಗೆ ನುಂಗಿಕೊಳ್ಳುತ್ತಿದ್ದರು. ಇಂಥದರೊಳಗೆ ಇಂದು ಶಿವರಾತ್ರಿಯೆಂದು ಮಹಾಕಾಲೇಶ್ವರನ ಗುಡಿಗೆ ಹೋಗಿದ್ದೆವು; ಅಲ್ಲಿ ಮಹಾಭಾರತ ಪುರಾಣವು ನಡೆದಿತ್ತು; ಅದರೊಳಗೆ ಮಕ್ಕಳಿಲ್ಲದವರಿಗೆ ಮೋಕ್ಷವಿಲ್ಲೆಂತಲೂ, ಪುನ್ನಾಮಕ ನರಕದಿಂದ ಬಿಡುಗಡೆ ಮಾಡಿಸುವದರಿಂದ ಪುತ್ರನೆನಿಸುತ್ತಾನೆಂತಲೂ ಆ ಪುತ್ರನಿಲ್ಲದಿದ್ದರೆ ಗತಿಯಿಲ್ಲೆಂತಲೂ ಹೊರಟಿತು. ಅದನ್ನು ಕೇಳಿಬಂದಾಗಿನಿಂದ ಅಳಹತ್ತಿದ್ದಾರೆ; ಎಷ್ಟು ಬಗೆಯಿಂದ

ಹೇಳಿಕೊಂಡರೂ ಅರಸಿಯರ ದುಃಖವು ನಿಲ್ಲಲೊಲ್ಲದು; ಸ್ನಾನಕ್ಕೆ ಏಳಲೊಲ್ಲರು; ಮೈಮೇಲಿನ ಆಭರಣಗಳನ್ನು ತೆಗೆದು ಚೆಲ್ಲಿದರು; ಹೊಟ್ಟೆಯೊಳಗಿನ ಸುಖ-ದುಃಖಗಳನ್ನು ನಮ್ಮ ಕೂಡ ಮಾತಾಡುವವರು ಈಗ ತಾಸು ಹೊತ್ತು ಆಯಿತು, ಎಷ್ಟು ಹಲುಬಿದರೂ ಅವರ ಬಾಯಿಂದ ಮಾತುಗಳೇ ಬರಲೊಲ್ಲವು; ಒಂದೇ ಸಮನೆ ಕಣ್ಣೀರು ಸುರಿಸುತ್ತಾರೆ" ಎಂದು ಹೇಳಿದಳು. ಈ ದಾಸಿಯ ಮಾತುಗಳನ್ನು ಕೇಳಿ ಅರಸನು ಸ್ವಲ್ಪ ಹೊತ್ತು ಸ್ತಬ್ಧನಾಗಿ ನಿಟ್ಟುಸಿರುಬಿಟ್ಟು "ವಿಲಾಸವತೀ, ಇದು ದೈವಾಧೀನದ ಮಾತು, ಮನುಷ್ಯರ ಕೈಯೊಳಗಿನದಲ್ಲ. ವ್ಯರ್ಥವಾಗಿ ಶೋಕ ಮಾಡಬೇಡ; ದೇವರ ಚಿತ್ತಕ್ಕೆ ಬಾರದ ಬಳಿಕ ನಾವು ಎಷ್ಟು ಹಲುಬಿದರೂ ವ್ಯರ್ಥವೇ ಸರಿ. ಪೂರ್ವಜನ್ಮದಲ್ಲಿ ಪುಣ್ಯಮಾಡಿ ನಾವು ಮಕ್ಕಳನ್ನೇ ಪಡಕೊಂಡು ಬಂದಿಲ್ಲ, ಈಗ ಬೇಡಿದರೆ ಎಲ್ಲಿಂದ ಬಂದಾವು? ಅತ್ತರೆ ಆಗುವುದೇನು? ನೋಡು, ಪೂರ್ವದಲ್ಲಿ ಮಗಧದೇಶದ ಬೃಹದ್ರಥನೆಂಬ ಅರಸನಿಗೆ ಚಂಡಕೌಶಿಕಋಷಿಯು ವರದಿಂದ ಜರಾಸಂಧನೆಂಬ ಮಗನು ಹುಟ್ಟಿ ಕೃಷ್ಣನನ್ನು ಜಯಿಸಲಿಲ್ಲವೇ? ದಶರಥರಾಯನಿಗೆ ಮುಪ್ಪಿನ ಕಾಲದಲ್ಲಿ ಕುಭಾಂಡಕ ಋಷಿಯ ಪುತ್ರನಾದ ಋಷ್ಯಶೃಂಗನ ಅನುಗ್ರಹದಿಂದ ರಾಮಚಂದ್ರನು ಮಗನಾಗಿ ಅವತರಿಸಲಿಲ್ಲವೇ? ಇದರಂತೆ ಋಷಿಗಳ ಪ್ರಸಾದದಿಂದ ಎಷ್ಟೋ ಅರಸರು ಪುತ್ರಸಂತತಿಯನ್ನು ಪಡಕೊಂಡದ್ದು ನೀನು ಕೇಳಿಬಲ್ಲೆಯಷ್ಟೇ; ನೀನಾದರೂ ತಪಸ್ವಿಗಳ ಸೇವೆಯನ್ನು ಆದರದಿಂದ ಮಾಡುತ್ತಿರು; ಭಕ್ತಿಯಿಂದ ಪರಮೇಶ್ವರನನ್ನು ಆರಾಧಿಸುತ್ತಿರು; ಬಡವರಿಗೆ ದಾನಧರ್ಮಗಳನ್ನು ಕೊಡುತ್ತಿರು; ಯಾವಾಗಲೂ ಎಡೆಬಿಡದೆ ದೇವರನ್ನು ಧ್ಯಾನಿಸುವ ಋಷಿಗಳ ಸೇವೆ ಮಾಡಿದ್ದು ಎಂದಿಗೂ ವ್ಯರ್ಥವಾಗದು. ನಾನೂ ನಿನ್ನಂತೆ ಹಗಲೂ ಇರುಳೂ ಮಕ್ಕಳಿಲ್ಲೆಂದು ಮನದೊಳಗೆ ಮರುಗುತ್ತೇನೆ. ಎಂದಾದರೂ ನಿನ್ನ ತೊಡೆಯ ಮೇಲೆ ಆಡುವ ಕಂದನ ಕಂಡೇನೇ ಎಂಬ ಆಕಾಂಕ್ಷೆಯು ಸರ್ವದಾ ನನ್ನ ಹೃದಯದೊಳಗೆ ನೆಲೆಗೊಂಡಿದೆ. ಮಕ್ಕಳಿಲ್ಲದ್ದರಿಂದ ಈ ಜಗವೆಲ್ಲ ನನ್ನ ಪಾಲಿಗೆ ಹಾಳಾಗಿದೆ; ಮಾಡುವದೇನು! ಮನದನ್ನಳೇ, ಇನ್ನು ಅಳಬೇಡ! ದೇವರನ್ನೇ ಮೊರೆಹೋಗು, ದೇವರೇ ನಮ್ಮ ಮೊರೆ ಕೇಳಬೇಕು" ಎಂದು ಹಲವು ಬಗೆಯಿಂದ ಸಮಾಧಾನ ಹೇಳಿದ, ಬಹಳ ಹೊತ್ತು ಅವಳ ಹತ್ತಿರ ಕುಳಿತುಕೊಂಡು, ಅರಸನು ಹೊರಟುಹೋದನು. ಬಳಿಕ ವಿಲಾಸವತಿಯು ಶೋಕ ಬಿಟ್ಟು, ಸ್ವಲ್ಪ ಸಮಾಧಾನಗೊಂಡು, ಮುಂಚಿನಂತೆ ಮೈ ತೊಳಕೊಂಡು ಉಂಡಳು. ಅಂದಿನಿಂದ ಆಕೆ ವಿಶೇಷವಾಗಿ ಋಷಿಗಳ ಶುಶ್ರೂಷೆಯಲ್ಲಿಯೂ ಪರಮೇಶ್ವರನ ಆರಾಧನೆಯಲ್ಲಿಯೂ, ಅತಿಥಿಗಳ ಸತ್ಕಾರದಲ್ಲಿಯೂ ಬಡವರಿಗೆ ಬೇಡಿದ್ದನ್ನು ಕೊಡುವದರಲ್ಲಿಯೂ ಹೊತ್ತುಗಳೆಯಹತ್ತಿದಳು.

ಇದೇ ಮೇರೆಗೆ ಹಲವು ದಿನಗಳು ಹೋದಬಳಿಕ ಒಂದು ಇರುಳು ಮೇಲುಪ್ಪರಿಗೆಯ ಮೇಲೆ ಮಲಗಿದಾಗ ವಿಲಾಸವತಿಯ ಮುಖದೊಳಗೆ ಪೂರ್ಣಚಂದ್ರನು ಹೋದಹಾಗೆ ಬೆಳಗು ಮುಂಜಾವಿಯಲ್ಲಿ ಅರಸನಿಗೆ ಸ್ವಪ್ನ ಬಿತ್ತು. ಅರಸನು ಎಚ್ಚತ್ತು ಹರ್ಷದಿಂದ ತತ್‌ಕ್ಷಣವೇ ಶುಕನಾಸ ಮಂತ್ರಿಯನ್ನು ಕರೆಯಿಸಿ ಆತನಿಗೆ ಈ ಕನಸು ಹೇಳಿದನು. ಶುಕನಾಸನು ಅರಸನ ಮುಖದಿಂದ ಈ ಕನಸು ಕೇಳಿದ ಕೂಡಲೇ ಅತ್ಯಾನಂದದಿಂದ— "ಸ್ವಾಮೀ, ಬಹು ದಿನದಿಂದ ಹಾರೈಸಿದಂಥ ನಮ್ಮ ಮನೋರಥವು ಪೂರ್ಣವಾಯಿತು. ಇನ್ನು ತಮಗೆ

ಮಗನು ಹುಟ್ಟುವನು. ನನಗೂ ಇಂದಿನ ಇರುಳು ಒಬ್ಬ ಬ್ರಾಹ್ಮಣನು ಬಿಳಿಯ ಬಟ್ಟೆಯನ್ನು ಉಟ್ಟುಕೊಂಡು, ಕೈಯೊಳಗೆ ಅರಳಿದ ಬಿಳಿದಾವರೆಯನ್ನು ಹಿಡಕೊಂಡು, ಆ ತಾವರೆಯ ಹೂವನ್ನು ನನ್ನ ಹಿರಿಯ ಹೆಂಡತಿಯಾದ ಮನೋರಮೆಯ ತೊಡೆಯ ಮೇಲಿಟ್ಟು ಅದೃಶ್ಯನಾದ ಹಾಗೆ ಸ್ವಪ್ನ ಬಿದ್ದಿತು. ಜೀಯಾ, ಶುಭ ಚಿಹ್ನೆಗಳು ಮುಂದಾಗುವ ಆನಂದಗಳನ್ನು ಸೂಚಿಸುತ್ತವೆ. ಮಕ್ಕಳ ಹೊರತು ನಮಗೆ ಯಾವ ಆನಂದವೂ ಉಳಿದಿಲ್ಲ. ಬೆಳಗಿನ ಕನಸುಗಳು ಬಹುತರವಾಗಿ ನಿದರ್ಶನಕ್ಕೆ ಬರುತ್ತವೆ. ಆದುದರಿಂದ, ನಿಶ್ಚಯವಾಗಿ ವಿಲಾಸವತೀ ದೇವಿಯವರಿಗೆ, ಲೋಕಕ್ಕೆ ಆನಂದ ಕೊಡುವ ಮಗನು ಹುಟ್ಟುವನು." ಈ ಪ್ರಕಾರ ಆಡಿದ ಶುಕನಾಸನ ಮಾತುಗಳನ್ನು ಕೇಳಿ, ಅರಸನು ಆತನ ಕೈ ಹಿಡಿದುಕೊಂಡು ವಿಲಾಸವತಿಯ ಮಂದಿರದೊಳಗೆ ಹೋಗಿ ಆಕೆಗೆ ಈ ಸ್ವಪ್ನದ ವೃತ್ತಾಂತವನ್ನು ಹೇಳಲು, ಅದನ್ನು ಕೇಳಿ ಅವಳು ಬಹಳ ಆನಂದಭರಿತಳಾದಳು.

ಮುಂದೆ ಕೆಲವು ದಿವಸಗಳ ತರುವಾಯ ದೇವರ ಅನುಗ್ರಹದಿಂದ ವಿಲಾಸವತಿಯು ಬಸುರಾಗಿ, ದಿನದಿನಕ್ಕೆ ಆಕೆಯ ಬಸುರು ಬೆಳೆಯಹತ್ತಿದ ಹಾಗೆ ಮೆಲ್ನಡಿಗೆಯೂ, ಆಗಾಗ್ಗೆ ಆಲಸ್ಯದಿಂದ ಬರುವ ಆಕಳಿಕೆಗಳೂ, ಕೇದಗಿಯ ಹಾಗೆ ಆದ ಮೈಬಣ್ಣವೂ ಶೋಭಿಸಿದವು; ಬಯಕೆ ಹತ್ತಿ ಅವಳಿಗೆ ಅನ್ನವು ಸವಿಹತ್ತದ ಹಾಗಾಯಿತು. ಈ ಲಕ್ಷಣಗಳನ್ನೆಲ್ಲ ಕಂಡು ಹತ್ತಿರಿರುವ ತೊತ್ತುಗಳು ಅರಸಿಯರ ಬಸುರು ನಿಜವೆಂದು ತಿಳಕೊಂಡರು; ಆ ತೊತ್ತುಗಳಲ್ಲಿ ಯಾವಾಗಲೂ ಅರಸನ ಬಳಿಗೆ ಹೋಗಿಬರುವ ಕುಲವರ್ಧನೆ ಎಂಬ ಮುಖ್ಯ ಒಕ್ಕಲಗಿತ್ತಿಯು ಒಂದು ದಿನ ಮೂರು ಸಂಜೆಯ ಶುಭ ವೇಳೆಯಲ್ಲಿ ಓಲಗಕ್ಕೆ ಹೋಗಿ ನಮ್ರಭಾವದಿಂದ ಅರಸನ ಕಿವಿಯೊಳಗೆ ಮೆಲ್ಲಗೆ ವಿಲಾಸವತಿಯು ಬಸುರಿದ್ದ ಸುದ್ದಿಯನ್ನು ಹೇಳಿದಳು. ಅಮೃತದಂಥ ಈ ಸುದ್ದಿಯ ಸವಿನುಡಿಗಳನ್ನು ಕೇಳಿದ ಕೂಡಲೇ ಅರಸನು ಆನಂದದಿಂದ ತನ್ನ ಮೈಮೇಲಿನ ಅಲಂಕಾರಗಳನ್ನು ತೆಗೆದು ಕುಲವರ್ಧನೆಗೆ ಉಚಿತವ ಕೊಟ್ಟನು. ಮುಂದೆ ಅರಸನು ವಿಲಾಸವತಿಯ ಬಯಕೆಗಳನ್ನು ಪೂರ್ಣ ಮಾಡಿದನು. ಒಂಬತ್ತು ತಿಂಗಳು ತುಂಬಿದ ಬಳಿಕ ಶುಭತಿಥಿಯಲ್ಲಿ ವಿಲಾಸವತಿಯು ದೇವರ ದಯೆಯಿಂದ ಗಂಡುಮಗನನ್ನು ಹೆತ್ತಳು. ಶಿಷ್ಯರೇ, ಆ ಸಮಯದ ಆನಂದವನ್ನು ಕೇಳುವದೇನು! ನಾಲ್ಕೂ ಕಡೆಯಲ್ಲಿ ಆಬಾಲವೃದ್ಧರಿಗೂ, ಎಲ್ಲ ಪ್ರಜೆಗಳಿಗೂ, ಮಾಂಡಲಿಕಭೂಪಾಲರಿಗೂ ಬಹಳ ಹರ್ಷವಾಯಿತು; ಎಲ್ಲ ಕಡೆಯಲ್ಲಿ ಉತ್ಸವಗಳೂ, ಮಂಗಲಭೇರಿ, ಮೃದಂಗ, ನೌಬತ್ತು ಮುಂತಾದ ವಾದ್ಯಗಳ ಧ್ವನಿಗಳೂ, ನರ್ತಕಿಯರ ನರ್ತನವೂ, ಗಾಯಕರ ಗಾಯನವೂ ನಡೆದವು; ಅರಮನೆಯ ಮುಂದೆ ನೆರೆದ ಕುರುಡ, ಕುಂಟ, ಕಿವುಡ, ಮೂಕ, ಜೋಗಿ, ಜಂಗಮ ಮುಂತಾದ ಭಿಕ್ಷುಕರಿಗೆ ಬೊಕ್ಕಸದೊಳಗಿನ ಲೆಕ್ಕವಿಲ್ಲದಷ್ಟು ಹಣ ತೆಗೆತೆಗೆದು ದಾನ ಕೊಟ್ಟರು; ಈ ಆನಂದದ ವರ್ತಮಾನವನ್ನು ಕೇಳಿದ ಕೂಡಲೆ ಅಂತಃಪುರದೊಳಗಿನ ರಾಜಸ್ತ್ರೀಯರು ಸಂತೋಷದಿಂದ ಸುದ್ದಿಯನ್ನು ಹೇಳಿದ ತೊತ್ತುಗಳಿಗೆ ಮೈಮೇಲಿನ ಪೊಂದೊಡಿಗೆಗಳನ್ನು ತೆಗೆತೆಗೆದು ಉಚಿತವ ಕೊಟ್ಟರು. ಈ ಮೇರೆಗೆ ನೋಡಿದತ್ತೆಲ್ಲ ಸಡಗರವೇ ಸಡಗರವಾಗಿರುವದು. ಚಂದ್ರೋದಯವಾದ ಕೂಡಲೇ ಸಮುದ್ರವು ಉಕ್ಕೇರಿದಂತೆ ಈ ಭಾಗ್ಯಶಾಲಿಯಾದ ರಾಜಪುತ್ರನು ಹುಟ್ಟಿದ ಕೂಡಲೆ, ಎಲ್ಲಿ ನೋಡಿದರೂ ಆನಂದವೇ

ಆನಂದವಾಗಿರುವದು. ಯಾವಾಗ ಮಗನನ್ನು ನೋಡೇನೋ ಎಂದು ಉತ್ಕಂಠೆಯುಳ್ಳವನಾಗಿ ಅರಸನು ಶುಕನಾಸನನ್ನು ಸಂಗಡ ಕರೆದುಕೊಂಡು ಸೂತಿಕಾಗೃಹಕ್ಕೆ ಹೋಗಲು, ಕೆಲ ಸುವಾಸಿನಿಯರು ಆ ಮನೆಯ ಬಾಗಿಲಿಗೆ ಬಿಳಿಯ ಹೂವುಗಳನ್ನೂ, ಕೋಮಲವಾದ ಕರಿಕೆಯನ್ನೂ ಸರಗೊಳಿಸಿ ಮಂಗಲಕರವಾದ ಮಾಲೆಯ ಮಾಡಿ ಕಟ್ಟುತ್ತಿದ್ದರು; ಗೋಡೆಗೆ ಸುಣ್ಣವ ಹಚ್ಚಿ ಅದರ ಮೇಲೆ ಸ್ತ್ರೀಯರು ಪಂಚವರ್ಣದ ರೇಶ್ಮೆಯ ಬಟ್ಟೆಗಳನ್ನು ಇಳಿಬಿಡುತ್ತಿರುವರು; ಕೆಲವು ಹೆಣ್ಣುಮಕ್ಕಳು ಅರಿಶಿಣದಿಂದಲೂ, ಕುಂಕುಮದಿಂದಲೂ ಸ್ವಸ್ತಿಕಗಳನ್ನು ಹಾಕುತ್ತಿರುವರು; ಕೆಲವು ಸುಂದರಿಯರು ಹೊನ್ನಿನ ಚೌಕಿಯ ಮೇಲೆ ಚಂದ್ರ-ಸೂರ್ಯರನ್ನು ಬರೆಯುತ್ತಿರುವರು; ಮಂಗಲ ದೀಪಗಳು ಪ್ರಕಾಶಿಸುತ್ತಿರುವವು; ಶೂರ ಶಿಪಾಯಿಗಳು ಬಿಚ್ಚುಗತ್ತಿಯನ್ನು ಹಿಡಕೊಂಡು ಎಚ್ಚರದಿಂದ ತಿರುಗುತ್ತ ಸುತ್ತಲೂ ಪಹರೆಯನ್ನು ಮಾಡುತ್ತಿರುವರು.

ಈ ಮೇರೆಗೆ ಶೋಭಿಸುವ ಸೂತಿಕಾಗೃಹದೊಳಗೆ ಹೊಕ್ಕು ಉದಯಕಾಲದ ಬಾಲಸೂರ್ಯನೋ, ಕಲ್ಪವೃಕ್ಷದ ಕೋಮಲವಾದ ಚಿಗುರೆಲೆಯೋ ಅದೇ ಅರಳಿದ ಕೆಂದಾವರೆಯೋ, ಮರ್ತ್ಯಲೋಕವನ್ನು ನೋಡಬಂದ ಮಂಗಳನೋ, ದೇವಾಂಗನೆಯರ ಕೈಯೊಳಗಿಂದ ಭೂಮಿಗೆ ಬಿದ್ದ ದೇವೇಂದ್ರನ ಕಂದನೋ ಅನ್ನುವ ಹಾಗೆ ಒಪ್ಪುವಂಥ, ಸಕಲ ಸುಲಕ್ಷಣಗಳಿಂದ ಯುಕ್ತವಾದಂಥ, ಆನಂದದಾಯಕವಾದಂಥ ಶಿಶುವನ್ನು ಅರಸನು ಕಂಡನು. ಮಗನ ಮುಖವನ್ನು ನೋಡಿದ್ದರಿಂದ ಆದ ಅರಸನ ಆನಂದವನ್ನು ಬಣ್ಣಿಸಲಾರೆನು; ಇಂದಿಗೆ ಧನ್ಯನಾದೆನೆಂತಲೂ, ತನ್ನ ಸಕಲ ಮನೋರಥಗಳು ಇಂದಿಗೆ ಸಫಲವಾದವೆಂತಲೂ ಅರಸನು ಸಡಗರದ ಕಡಲೊಳಗೆ ಈಸಾಡಹತ್ತಿದನು. ಶುಕನಾಸ ಮಂತ್ರಿಯು ಸೂಕ್ಷ್ಮ ದೃಷ್ಟಿಯಿಂದ ಆ ಕೂಸಿನ ಅವಯವಗಳನ್ನೆಲ್ಲ ದಿಟ್ಟಿಸಿನೋಡಿ, ಪ್ರೀತಿಯಿಂದ "ಮಹಾಸ್ವಾಮೀ, ಇತ್ತ ನೋಡಬೇಕು, ಇನ್ನೂ ಈತನ ಅವಯವಗಳು ಪೂರ್ಣ ವ್ಯಕ್ತವಾಗದಿದ್ದರೂ ಈ ಚಕ್ರವರ್ತಿ ಲಕ್ಷಣಗಳು ಹೇಗೆ ಎದ್ದು ಕಾಣಿಸುತ್ತವೆ, ನೋಡಿರಿ; ಹುಬ್ಬುಗಳ ನಡುವಿನ ಊರ್ಣಾ-ರಾಜಚಿಹ್ನವೆಷ್ಟು ಸ್ಪಷ್ಟವಾಗಿ ತೋರುತ್ತದೆ, ನೋಡಿರಿ; ಈತನ ನಿಡಿಯವಾದ ಕಣ್ಣುಗಳು, ಅರಳಿದ ನೀಲೋತ್ಪಲಗಳಂತೆ ಒಪ್ಪುತ್ತವೆ; ಈ ನೆಟ್ಟನ್ನ ಮೂಗು ನೋಡಿದ ಕೂಡಲೆ ಸಂಪಿಗೆಯ ತೆನೆಯೇ ನನ್ನ ದೃಷ್ಟಿಗೆ ಬಿದ್ದಹಾಗೆ ಆಯಿತು; ಇವೇನು ತುಟಿಗಳೋ, ಹವಳದ ಕುಡಿಗಳೋ ನೋಡಿರಿ; ಇವನ ಕೋಮಲವಾದ ಕೈಯೊಳಗಿನ ಶಂಖ ಚಕ್ರ ಮುಂತಾದ ಚಿಹ್ನೆಗಳನ್ನು ನೋಡಿದಿರಾ! ಈಗಲೇ ಎಷ್ಟು ಸ್ಪಷ್ಟವಾಗಿ ತೋರುತ್ತವೆ; ಇವೇನು ಈ ಕಂದನ ಕೋಮಲವಾದ ಪಾದಗಳೋ, ಕಲ್ಪವೃಕ್ಷದ ಎಳೆದಳಿರುಗಳೋ ಪರೀಕ್ಷಿಸಿರಿ; ಇವುಗಳ ಮೇಲಿನ ರೇಖಾಂಕಿತವಾದ ಧ್ವಜ, ರಥ, ತುರಗ, ಛತ್ರ, ಕಮಲಗಳು ಹೇಗೆ ಕಂಗೊಳಿಸುತ್ತವೆ ನೋಡಿರಿ; ಈತನ ರೋದನಸ್ವರವೆಷ್ಟು ಗಂಭೀರದ್ದಿದೆ ನೋಡಿರಿ. ಈ ಯಾವತ್ತು ಲಕ್ಷಣಗಳಿಂದ ಮುಂದೆ ಈತನು ಸಾವಿರಾರು ಅರಸರಿಂದ ವಂದನೆ ಮಾಡಿಸಿಕೊಳ್ಳುವಂಥ ಮಹಿಮಾನ್ವಿತನಾಗುವನೆಂಬುದಾಗಿ ಈಗಲೇ ಕಂಡು ಬರುತ್ತದೆ." ಈ ಮೇರೆಗೆ ಆತನು ಮಾತನಾಡುವಷ್ಟರಲ್ಲಿ ಮಂಗಲಕನೆಂಬ ಒಬ್ಬ ಸೇವಕನು ತ್ವರದಿಂದ ಅರಸನ ಬಳಿಗೆ ಬಂದು ಜಯವಾಗಲೆಂದು ಹರಸಿ—"ಜೀಯಾ ತಮ್ಮ ಭಾಗ್ಯಕ್ಕೆ ಎಣೆಯಿಲ್ಲ,

ತಮ್ಮ ಮುಖ್ಯಮಂತ್ರಿಗಳಾದ ಈ ಶುಕನಾಸಪ್ರಧಾನರ ಹಿರಿಯ ಹೆಂಡಿರು ಮನೋರಮಾತಾಯಿಯವರು ಗಂಡುಮಗುವನ್ನು ಹೆತ್ತರು" ಎಂದು ಹೇಳಿದನು. ಈ ಸುದ್ದಿಯ ಕೇಳಿ ಅರಸನು ಅತ್ಯಾನಂದದಿಂದ "ಜನರು ಅನ್ನುವದು ಸುಳ್ಳಲ್ಲ, ದುಃಖಗಳು ಬರಹತ್ತಿದರೆ ಒಂದರ ಹಿಂದೊಂದು ಬರುತ್ತವೆ; ಸುಖಗಳು ಬರಹತ್ತಿದರೆ ಒಂದರ ಹಿಂದೊಂದು ಒಂದೇಸವನೆ ಬರುತ್ತವೆ" ಎಂದು ಆಡಿ, ಸ್ನೇಹಭಾವದಿಂದ ಶುಕನಾಸನ ಹೆಗಲ ಮೇಲಿನ ಮುತ್ತಿನ ಶೆಲ್ಲೆಯನ್ನು ಕಸಿದು ಮಂಗಲಕನಿಗೆ ಕೊಟ್ಟು, ಆತನೊಡಗೊಂಡು ಅಂತಃಪುರದೊಳಗಿಂದ ಹೊರಟು ವಂದಿ ಮಾಗಧಸ್ತುತಿಪಾಠಕರ ಗಡಣದೊಡನೆ, ಮಾಂಡಲಿಕಭೂಪಾಲರ ಸಮೂಹ ಸಹಿತ ಶುಕನಾಸಮಂತ್ರಿಯ ಮಂದಿರಕ್ಕೆ ಬಂದು, ಮುಂಚೆಗಿಂತ ಹೆಚ್ಚು ಉತ್ಸವ ಮಾಡಿಸಿದನು. ಮುಂದೆ ಹತ್ತನೆಯ ದಿವಸ ಅರಸನು, ಬೇಡಿಕೊಳ್ಳುವ ಬಡವರಿಗೆ ದಾನಕೊಟ್ಟು ವಿಧಿಪೂರ್ವಕವಾಗಿ ಮಗನಿಗೆ ಚಂದ್ರಾಪೀಡ ಎಂಬ ಹೆಸರು ಇಡಿಸಿದನು; ಶುಕನಾಸನೂ ಅರಸನನ್ನು ಕೇಳಿ ಮಗನಿಗೆ ವೈಶಂಪಾಯನ ಎಂಬ ಹೆಸರು ಇಡಿಸಿದನು.

ಮುಂದೆ ಕ್ರಮದಿಂದ ಚೂಡಾಕರಣ ಮುಂತಾದ ಸಂಸ್ಕಾರಗಳು ಆಗಿ ಬಾಲ್ಯಾವಸ್ಥೆ ಹೋಗಿ, ಚಂದ್ರಾಪೀಡನು ಸ್ವಲ್ಪ ದೊಡ್ಡವನಾದ ಬಳಿಕ, ಅರಸನು ಪಟ್ಟಣದ ಹೊರಗೆ ಅರ್ಧ ಹರದಾರಿಯ ಅಂತರದಲ್ಲಿ ಕ್ಷಿಪ್ರಾನದಿತೀರದ ಮೇಲೆ ಒಂದು ದೊಡ್ಡ ವಿದ್ಯಾಮಂದಿರವನ್ನು ಕಟ್ಟಿಸಿದನು. ಅದರ ಸುತ್ತುಮುತ್ತು ಎತ್ತರವಾದ ಕೋಟೆಯ ಗೋಡೆಯನ್ನು ಹಾಕಿಸಿ, ಹೊರಮಗ್ಗಲು ಅಳವಾದ ಅಗಳತವನ್ನು ಕಡಿಸಿ, ಅದಕ್ಕೆ ಬಲವಾದ ಅಗಸೆಯ ಬಾಗಿಲುಗಳನ್ನು ಹಚ್ಚಿಸಿದ್ದರು. ಅವುಗಳಲ್ಲಿ ಒಂದೇ ಬಾಗಿಲು ತೆರೆದಿರುವದು. ಆ ಕೋಟೆಯ ಒಳಮಗ್ಗಲು ಒಂದು ಕಡೆ ಅಶ್ವಶಾಲೆಯನ್ನೂ, ಒಂದು ಕಡೆ ರಥಶಾಲೆಯನ್ನೂ, ಕೆಳಗಡೆ ಗರಡಿಮನೆಯನ್ನೂ ಕಟ್ಟಿದ್ದರು. ಒಂದೊಂದೂ ವಿದ್ಯೆಯಲ್ಲಿ ಪ್ರಖ್ಯಾತರಾದ ಪಂಡಿತರನ್ನು ದೇಶದೇಶಗಳಿಂದ ತರಿಸಿ, ಆ ಆ ವಿದ್ಯೆಯನ್ನು ಕಲಿಸುವುದಕ್ಕೆ ಅವರವರಿಗೆ ತಕ್ಕ ವೃತ್ತಿಯನ್ನು ಕೊಟ್ಟು, ಅವರನ್ನು ವಿದ್ಯಾಮಂದಿರದಲ್ಲಿಟ್ಟು, ಅರಸನು ಚಂದ್ರಾಪೀಡನನ್ನೂ, ವೈಶಂಪಾಯನನನ್ನೂ ಆ ಗುರುಗಳ ಕೈಯೊಳಗೆ ಕೊಟ್ಟನು. ಅಲ್ಲಿ ಅವರಿಗೆ ಗುರುಪುತ್ರರ ಹೊರತು ಬೇರೆ ಯಾರ ಗೆಳೆತನವೂ ಇದ್ದಿಲ್ಲ. ಆಟದ ಒಡವೆಗಳಂತೂ ಮೊದಲೇ ಇಲ್ಲ, ಆದುದರಿಂದ ಪಂಜರದೊಳಗೆ ಹಾಕಿದ ಸಿಂಹನ ಮರಿಯಂತೆ ಚಂದ್ರಾಪೀಡನು ಕಷ್ಟದೊಳಗೆ ಇದ್ದನು. ಅರಸನೂ ಅರಸಿಯೂ ದಿನಾಲು ಅಲ್ಲಿಗೆ ಹೋಗಿ ಆತನನ್ನು ನೋಡಿ ಬರುವರು. ಚಂದ್ರಾಪೀಡನಾದರೂ ಗುರುಗಳು ಹೇಳಿದಂತೆ ಮನಸ್ಸುಗೊಟ್ಟು ಕಲಿಯುತ್ತಿದ್ದನು. ಆತನ ಗ್ರಹಣ ಶಕ್ತಿಯನ್ನೂ, ಕುಶಾಗ್ರಬುದ್ಧಿಯನ್ನೂ ನೋಡಿ, ಗುರುಗಳು ಆತನಿಗೆ ಬಹು ಔತ್ಸುಕ್ಯದಿಂದ ಕಲಿಸುತ್ತಿದ್ದರು. ಈ ಮೇರೆಗೆ ಸ್ವಲ್ಪ ಕಾಲದಲ್ಲಿ ಚಂದ್ರಾಪೀಡನು ಧರ್ಮಶಾಸ್ತ್ರ, ಪ್ರಮಾಣಶಾಸ್ತ್ರ, ರಾಜನೀತಿ, ಶಸ್ತ್ರಾಸ್ತ್ರ ಮುಂತಾದ ವಿದ್ಯೆಗಳನ್ನು ಕಲಿತು, ಆನೆ, ಕುದುರೆ, ರಥಗಳೇರಾಟದಲ್ಲಿ ಬಲ್ಲಿದನೂ, ವೀಣೆ, ಮೃದಂಗ, ಜಲತರಂಗ ಮುಂತಾದ ವಾದ್ಯಗಳನ್ನು ಬಾರಿಸುವುದರಲ್ಲಿ ಬಲ್ಲವನೂ ಹಲವು ಭಾಷಾಲಿಪಿಗಳಲ್ಲಿ ಪ್ರವೀಣನೂ ಆದನು. ಭೀಮನ ಹಾಗೆ ಈತನ ಮೈಯೊಳಗೆ ಬಲವುಂಟಾಯಿತು. ಈತನು ಆನೆಯ ಮರಿಯ ಕಿವಿಯನ್ನು ಹಿಡಿದರೆ

ಅವುಗಳಿಗೆ ಅತ್ತಿತ್ತ ಉಲುಕಲಿಕ್ಕೆ ಸಹ ಬರುತ್ತಿದ್ದಿಲ್ಲ; ಖಡ್ಗದಿಂದ ಒಂದೇ ಕಡಿತಕ್ಕೆ ತಾಳಮರವನ್ನು ತಾವರೆಯ ದೇಂಟಿನ ಹಾಗೆ ಕಡಿದು ಕೆಡವುತ್ತಿದ್ದನು. ಈತನ ಬಾಣವು ಪರಶುರಾಮನ ಬಾಣದ ಹಾಗೆ ಬೆಟ್ಟದ ತುದಿಯೊಳಗಿಂದ ತಡಹಾಯ್ದು ಹೋಗುವುದು. ಗರಡಿ ಸಾಧಕ ಮಾಡುವಾಗ ನೆಗವುವ ಈತನ ಲೋಡು ಹತ್ತುಮಂದಿಗೆ ಆಯಾಸದಿಂದ ಎತ್ತುವದು. ಚಂದ್ರಾಪೀಡನಂತೆ ವೈಶಂಪಾಯನನೂ ಸಕಲವಿದ್ಯೆಗಳಲ್ಲಿ ನಿಪುಣನಾಗಿದ್ದನು. ಆದರೆ ಅವನಂತೆ ಕಸುವು ಮಾತ್ರ ಇವನಿಗೆ ಇದ್ದಿಲ್ಲ. ಇಬ್ಬರೂ ಕೂಡೇ ವಿದ್ಯೆ ಕಲಿತಿದ್ದುದರಿಂದಲೂ, ಕೂಡೇ ಇದ್ದುದರಿಂದಲೂ, ಸಮವಯಸ್ಕರಾದುದರಿಂದಲೂ ಒಬ್ಬರಿಗೊಬ್ಬರು ಜೀವದ ಗೆಳೆಯರಾಗಿದ್ದರು; ಒಬ್ಬರನ್ನೊಬ್ಬರು ಒಂದು ಕ್ಷಣ ಸಹ ಬಿಟ್ಟು ಅಗಲುತ್ತಿದ್ದಿಲ್ಲ. ಇದೇ ಮೇರೆಗೆ ಹಲವು ದಿವಸ ಹೋದ ಬಳಿಕ, ಒಂದು ದಿನ ಅರಸನು ಚಂದ್ರಾಪೀಡನಿಗೆ ವಿದ್ಯೆಯೂ, ಯೌವನವೂ ಪ್ರಾಪ್ತವಾದದ್ದನ್ನು ಕಂಡು ಗುರುಗಳ ಒಪ್ಪಿಗೆಯಿಂದ ಬಲಾಹಕನೆಂಬ ತನ್ನ ದಳಪತಿಯ ಕೂಡ ರಾವುತ ರಥಿಕರನ್ನೂ, ಕಾಲುದಳವನ್ನೂ ಕೊಟ್ಟು ಚಂದ್ರಾಪೀಡನನ್ನು ಅರಮನೆಗೆ ಕರೆತರಲು ಕಳುಹಿದನು.

ಬಲಾಹಕನು ಆ ವಿದ್ಯಾಮಂದಿರಕ್ಕೆ ಹೋಗಿ, ತಾನು ಬಂದದ್ದನ್ನು ರಾಜಪುತ್ರನಿಗೆ ದ್ವಾರಪಾಲಕನ ಮುಖದಿಂದ ಅರಿಕೆ ಮಾಡಿಸಿ, ಅಪ್ಪಣೆ ಪಡೆದುಕೊಂಡು, ಒಳಗೆ ಹೋಗಿ, ತಲೆಬಾಗಿ, ನೆಲಮುಟ್ಟಿ ಮುಜುರೆಮಾಡಿ, ಕುಳಿತುಕೊಳ್ಳಲಪ್ಪಣೆಯಾದ ಬಳಿಕ ಕೆಳಗೆ ಕುಳಿತುಕೊಂಡು, ವಿನಯದಿಂದ "ಜೀಯಾ, ನೀವು ಸಕಲ ವಿದ್ಯೆಗಳಲ್ಲಿ ಪ್ರವೀಣರಾದದ್ದನ್ನು ಕಂಡು ಅರಸರು ಇಂದಿಗೆ ತಮ್ಮ ಮನೋರಥವು ಪೂರ್ಣವಾಯಿತೆಂದು ಬಗೆದು, ನಿಮ್ಮನ್ನು ರಾಜಮಂದಿರಕ್ಕೆ ಕರೆದುಕೊಂಡು ಬರಬೇಕೆಂದು ನನ್ನನ್ನು ಕಳಿಸಿದ್ದಾರೆ. ಗುರುಗಳು ನಿಮಗೆ ಹೋಗಲಪ್ಪಣೆ ಕೊಟ್ಟರು. ಯಾವಾಗ ನಿಮ್ಮ ದರ್ಶನ ತಕ್ಕೊಂಡೇವೋ ಎಂದು ಸಾವಿರಾರು ಮಂದಿ ರಾಜಪುತ್ರರು ಮಾರ್ಗ ನಿರೀಕ್ಷಿಸುತ್ತ ಮಹಾದ್ವಾರದಲ್ಲಿ ಬಂದು ನಿಂತಿದ್ದಾರೆ. ನೀವು ಈ ವಿದ್ಯಾಮಂದಿರಕ್ಕೆ ಬಂದು ಹತ್ತು ವರ್ಷವಾಯಿತು; ಬರುವಾಗ ಆರು ವರ್ಷದವರಿದ್ದಿರಿ, ಈಗ ನಿಮಗೆ ಹದಿನಾರನೆಯ ವರ್ಷ ನಡೆಯುತ್ತಿದೆ; ಇನ್ನು ಪಟ್ಟಣಕ್ಕೆ ಬಂದು ಪ್ರಜೆಗಳನ್ನು ಪಾಲಿಸಿ, ಎಲ್ಲರಿಗೂ ಸುಖ ಕೊಟ್ಟು ನೀವೂ ರಾಜ್ಯ ಸುಖೋಪಭೋಗವನ್ನು ತಕ್ಕೊಳ್ಳಬೇಕು. ನಿಮ್ಮ ಸಲುವಾಗಿ ಇಂದ್ರಾಯುಧವೆಂಬ ಕುದುರೆಯು ಸಿದ್ಧವಾಗಿ ಬಂದು ಹೊರಗೆ ನಿಂತಿದೆ; ಈ ಅಶ್ವರತ್ನವನ್ನು ಪಾರಸೀದೇಶದ ಬಾದಶಹನು ನಮ್ಮ ಮಹಾರಾಜರಿಗೆ ಕಾಣಿಕೆ ಕೊಟ್ಟಿದ್ದಾನೆ; ಇದರ ವೇಗವು ವಾಯುವೇಗಕ್ಕಿಂತ ಮಿಗಿಲಾಗಿದೆ; ಇಂದ್ರನ ಉಚ್ಚೈಃಶ್ರವದ ಲಕ್ಷಣಗಳು ಇದಕ್ಕೆ ಉಂಟೆಂದು ಅಶ್ವಪರೀಕ್ಷಕರು ಹೇಳುತ್ತಾರೆ" ಎಂದು ಹೇಳಿ ಬಲಾಹಕನು ಸುಮ್ಮನಾದನು. ಚಂದ್ರಾಪೀಡನು ತಂದೆಯ ಆಜ್ಞೆಯನ್ನು ಶಿರಸಾವಹಿಸಿ ಹೊರಡಲುದ್ಯುಕ್ತನಾಗಿ ಇಂದ್ರಾಯುಧವನ್ನು ಒಳಗೆ ತರಹೇಳಿದನು. ಒಳಗೆ ಬಂದಕೂಡಲೇ ಸಕಲ ಲಕ್ಷಣಸಂಪನ್ನವಾದ ಆ ಕುದುರೆಯನ್ನು ನೋಡಿ ಚಂದ್ರಾಪೀಡನು ವಿಸ್ಮಿತನಾಗಿ ಮನದೊಳಗೆ—"ಸ್ವರ್ಗಾಧಿಪತಿಯಾದ ಇಂದ್ರನ ಐಶ್ವರ್ಯಕ್ಕಿಂತ ನಮ್ಮ ತಂದೆಯ ಐಶ್ವರ್ಯವು ಮಿಗಿಲಾಯಿತು. ಸ್ವರ್ಗಲೋಕದಲ್ಲಿ ಸಹ ದುರ್ಮಿಳವಾದ ರತ್ನಗಳು ಈತನ ಅರಮನೆಯಲ್ಲುಂಟು. ನೋಡಿರಿ, ಈ ಕುದುರೆಯ ತೇಜಸ್ಸನ್ನೂ, ಶಕ್ತಿಯನ್ನೂ

ನೋಡಿ ಇದರ ಮೇಲೆ ಹತ್ತುವುದಕ್ಕೆ ನನಗೆ ಸಂಶಯ ಬರುತ್ತದೆ. ಯಾವನಾದರೂ ಗಂಧರ್ವ ಪುರುಷನು ಋಷಿಗಳ ಶಾಪದಿಂದ ಕುದುರೆಯಾಗಿ ಹುಟ್ಟಿದ್ದಾನೋ ಏನೋ? ಸಾಧಾರಣ ಕುದುರೆಗಳಿಗೆ ಇಂಥ ಅಲೌಕಿಕ ಲಕ್ಷಣಗಳು ಇರುವುದಿಲ್ಲ. ಮುನಿಗಳ ಶಾಪದಿಂದ ದೇವತೆಗಳು ತಮ್ಮ ದಿವ್ಯ ಕಾಯವನ್ನು ಬಿಟ್ಟು, ಪಶ್ವಾದಿ ಕಾಯವನ್ನು ಕೈಕೊಳ್ಳುತ್ತಾರೆ. ಪೂರ್ವದಲ್ಲಿ ಸ್ಥೂಲಶಿರ ಎಂಬ ಮಹಾತಪಸ್ವಿಯ ಶಾಪದಿಂದ ರಂಭೆ ಎಂಬ ಅಪ್ಸರಾಂಗನೆಯು ಸ್ವರ್ಗಬಿಟ್ಟು ಇಹಲೋಕದಲ್ಲಿ ಅಶ್ವಿನೀರೂಪವನ್ನು ತಾಳಿ ಮತ್ತಿಕಾವತೀ ನಗರದೊಳಗೆ ಹುಟ್ಟಿ ಶತಧನ್ವ ರಾಜನ ಸೇವೆಯಲ್ಲಿ ಬಹು ಕಾಲ ಇದ್ದಳು. ಮತ್ತೂ ಹಲ ಕೆಲವು ದೇವತೆಗಳು ಶಾಪಮೂಲಕವಾಗಿ ಬೇರೆ ಬೇರೆ ರೂಪಗಳನ್ನು ತಾಳಿ ಭೂಮಿಯ ಮೇಲೆ ವಾಸಮಾಡುತ್ತಿದ್ದರೆಂಬುದಾಗಿ ಪುರಾಣಾಂತರ ಕಥೆಗಳುಂಟು. ಇದಾದರೂ ಶಾಪದ ಫಲವನ್ನು ಭೋಗಿಸುವಂತೆ ನನಗೆ ತಿಳಿಯಬರುತ್ತದೆ," ಎಂದು ಎದ್ದು ಮೇಲೆ ಹತ್ತಬೇಕೆಂಬ ಇಚ್ಛೆಯಿಂದ ಹತ್ತಿರ ಹೋಗಿ 'ಮಹಾತ್ಮನೇ, ನೀನು ಯಾವಾತನಿದ್ದೀಯೋ ಇರು, ನಿನ್ನ ಮೇಲೆ ಆರೋಹಣ ಮಾಡುತ್ತೇನೆ. ನನ್ನ ತಪ್ಪು ಕ್ಷಮಿಸು' ಎಂದು ಪುನಃ ಮನದೊಳಗೆ ಅಂದನು. ಆತನ ಅಭಿಪ್ರಾಯ ತಿಳಿದು ಆರೋಹಣ ಮಾಡುವುದಕ್ಕೆ ಆತನನ್ನು ಕರೆಯುತ್ತದೋ ಏನೋ ಅನ್ನುವಂತೆ ಇಂದ್ರಾಯುಧವು ತನ್ನ ಗೋಣು ಅಲ್ಲಾಡಿಸಿ, ಓರೆಗಣ್ಣಿನ ಸೂಕ್ಷ್ಮದೃಷ್ಟಿಯಿಂದ ನೋಡಿ, ಬಲಗಾಲಿನಿಂದ ನೆಲ ಕೆದರಿ ಹೇಕರಿಸಿತು! ಅದನ್ನು ಆರೋಹಿಸಿ ಚಂದ್ರಾಪೀಡನು ಹೊರಟು ಹೊರಗೆ ಬಂದ ಕೂಡಲೆ ದರ್ಶನಕ್ಕೆ ಬಂದ ರಾಜಪುತ್ರರು ನಾ ಮುಂಚೆ ನೀ ಮುಂಚೆ ಎಂದು ಮುಂದುವರಿದು ಬರಲು ಬಲಾಹಕನು ಅವರೆಲ್ಲರ ಹೆಸರಗಳನ್ನು ಕ್ರಮದಿಂದ ಬೇರೆ ಬೇರೆ ವಿವರಿಸಿದ ಬಳಿಕ ಚಂದ್ರಾಪೀಡನು ಆದರದಿಂದ ಅವರವರ ಭೆಟ್ಟಿಯನ್ನು ತಕ್ಕೊಂಡು ತಕ್ಕ ಸನ್ಮಾನಮಾಡಿ ಆ ರಾಜಪುತ್ರರನ್ನೊಡಗೊಂಡು, ವೈಶಂಪಾಯನನನ್ನು ಕರೆದುಕೊಂಡು ಆ ಚತುರಂಗಸೇನೆಯೊಡನೆ ವಂದಿಮಾಗಧರ ಸ್ತುತಿಪಾಠಗಳ ಉಗ್ಗಡಣೆಯಿಂದ ಊರಿಗೆ ಬಂದನು. ಇತ್ತ ಊರೊಳಗಿನ ಜನರೆಲ್ಲರು ತಮ್ಮ ತಮ್ಮ ಕೆಲಸಗಳನ್ನು ಬಿಟ್ಟು ಚಂದ್ರಾಪೀಡನನ್ನು ನೋಡಬೇಕೆಂಬ ಆಕಾಂಕ್ಷೆಯಿಂದ ಹಲವರು ಮಾಳಿಗೆ ಏರಿ, ಹಲವರು ಮೇಲುಪ್ಪರಿಗೆ ಹತ್ತಿ, ಕೆಲವರು ಕಿಡಿಕಿಗಳೊಳಗೆ, ಹಲವರು ಬಾಗಿಲುಗಳೊಳಗೆ, ಹಲವರು ಬಾಗಿಲ ಮುಂದಿನ ಕಟ್ಟೆಗಳ ಮೇಲೆ ಉತ್ಸಾಹದಿಂದ ನಿಂತು ನೋಡುತ್ತಿದ್ದರು. ಪಟ್ಟಣದೊಳಗಿದ್ದ ರಾಜಬೀದಿಗಳು ಬಹು ಅಗಲವಾಗಿದ್ದರೂ ಅಲ್ಲಿ ಕಾಲು ಇಡಲಿಕ್ಕೆ ಅನುವಿಲ್ಲದಷ್ಟು ದಟ್ಟಣೆಯಾಯಿತು.

ಚಂದ್ರಾಪೀಡನನ್ನು ನೋಡಿ ಆ ಪಟ್ಟಣದ ಜನರೆಲ್ಲರು—'ಇಂದಿಗೆ ನಮ್ಮ ಪುಣ್ಯವು ಫಲಿಸಿತು! ಈ ಹೊತ್ತಿಗೆ ನಮ್ಮ ಕಣ್ಣುಗಳು ತೃಪ್ತವಾದವು. ಈ ದೊರೆಯನ್ನು ನೋಡಿ ನಾವು ಧನ್ಯರಾದೆವು!' ಎಂದು ಸಂತೋಷದಿಂದ ನಿಂತನಿಂತಲ್ಲಿಯೇ ಆತನಿಗೆ ಕೈಮುಗಿದರು. ನಗರದೊಳಗಿನ ಸ್ತ್ರೀಯರಂತೂ ಚಂದ್ರಾಪೀಡನು ವಿದ್ಯಾಮಂದಿರದಿಂದ ಬಂದನೆಂದು ಸುದ್ದಿಯನ್ನು ಕೇಳಿದ ಕೂಡಲೇ ಕೈಯೊಳಗಿನ ಕೆಲಸವರ್ಧ ಕೈಯೊಳಗೇ ಬಿಟ್ಟು ಕುಂಕುಮ ಹಚ್ಚಿಕೊಳ್ಳುವುದಕ್ಕೆ ಎಡಗೈಯೊಳಗೆ ಹಿಡಿದ ಕನ್ನಡಿಯನ್ನೂ, ಬಲಗೈಯೊಳಗಿನ ಕುಂಕುಮದ ಕರಡಿಗೆಯನ್ನೂ ಹಾಗೇ ಹಿಡಿದುಕೊಂಡು ಹಲವು ಸ್ತ್ರೀಯರು ನೋಡುವ ಅವಸರದಿಂದ

ಹೊರಬಿದ್ದರು; ಕಾಲಿಗೆ ಹಚ್ಚಿದ ಅಲತಿಗೆಯ ರಸವು ಇನ್ನೂ ಆರಿದ್ದಿಲ್ಲ. ಅಷ್ಟರೊಳಗೆ ನೋಡುವ ಲವಲವಿಕೆಯಿಂದ ಹಲವು ತರುಣಿಯರು ಒಳಗಿಂದ ಓಡುತ್ತ ಹೊರಗೆ ಬಂದರು; ಕೊರಳೊಳಗೆ ಹಾಕಿಕೊಳ್ಳಬೇಕೆಂದು ಹಿಡಿದ ಮುತ್ತಿನ ಏಕಾವಳೀ ಸರಗಳು ಹಾಗೇ ಅವರ ಕೈಯೊಳಗೆ ಜೋತಾಡುತ್ತಿರುವವು; ಬಾಲೆಯರು ಹಾಲು ಕುಡಿಯುವುದಕ್ಕೆ ಬಾಯಿಗೆ ಹಚ್ಚಿದ ಚಿನ್ನದ ಬಟ್ಟಲುಗಳನ್ನು ಅಲ್ಲಿಂದಲ್ಲಿಯೇ ಬಿಟ್ಟು ನೋಡುವ ತವಕದಿಂದ ಓಡಿಬಂದರು; ಅವಸರದಿಂದ ಮೇಲುಪ್ಪರಿಗೆ ಏರುವಾಗ ಹಲವು ನಿತಂಬಿನಿಯರ ನಡುವಿನ ಪಟ್ಟಿಗಳು ಸಡಿಲಿ ಬಿದ್ದವು; ಹಲವರ ಕೊರಳೊಳಗಿನ ಹಾರಗಳು ಹರಿದು ಮುತ್ತುಗಳುದುರಿದವು; ಎಲ್ಲಿ ನೋಡಿದರೂ ಸ್ತ್ರೀಯರ ಕೈ ಕಾಲುಗಳೊಳಗಿನ ಕಂಕಣ-ಪೈಜಣಗಳ ಝಣತ್ಕಾರದ ಧ್ವನಿಯೇ ಕಿವಿಗೆ ಬೀಳುತ್ತಿರುವುದು. ಈ ಮೇರೆಗೆ ಆ ನಗರದೊಳಗಿನ ಸ್ತ್ರೀಯರು ಸೌಧಾಗ್ರಗಳ ಮೇಲೆ ಹತ್ತಿ ಚಂದ್ರಾಪೀಡನನ್ನು ನೋಡುವಾಗ ಉಂಟಾದ ಅಪ್ರತಿಮ ಶೋಭೆಯನ್ನು ಎಷ್ಟು ಬಣ್ಣಿಸಿದರೂ ತೀರದು; ಆ ಸ್ತ್ರೀಯರಲ್ಲಿ ಒಬ್ಬರಿಗೊಬ್ಬರು—'ಚಂದ್ರಾಪೀಡನ ಮೇಲೆ ಚೆಲ್ಲವರಿವ ಚೆಲುವ ಬಿಳಿಯ ಚಾಮರಗಳೊಳಗೆ ಎಷ್ಟು ಚಂದ ಕಾಣಿಸುತ್ತದೆ ನೋಡಿರೇ! ಅದು ನೋಡು! ಆತನ ಮುಂಡಾಸದ ಮೇಲಿನ ಮುತ್ತಿನ ತುರಾಯಿ ಎಷ್ಟು ಮನೋಹರವಾಗಿ ತೋರುತ್ತದೆ! ನೋಡು! ನೋಡು ವೈಶಂಪಾಯನನ ಕೂಡ ಮಾತಾಡುವಾಗ ಆತನ ಮುದ್ದು ಮುಖದ ಮುಗುಳ್ನಗೆಯು ನೋಡುವವರ ಮನಸ್ಸನ್ನು ಎಷ್ಟು ಸೊಗಸುಗೊಳಿಸುತ್ತದೆ; ಇಂಥ ಸೌಂದರ್ಯವೂ ಐಶ್ವರ್ಯವೂ ಜಗದೀಶನ ಕೃಪೆಯಿಂದ ಈತನಿಗೆ ಪ್ರಾಪ್ತವಾದವಲ್ಲದೆ ಕಂಡವರಿಗೆ ಬರುವವೇ? ಈ ಪುರುಷನನ್ನು ಪತಿಯಾಗಿ ವರಿಸುವ ಪುಣ್ಯವಂತಳು ಯಾವಾಕೆ ಇದ್ದಾಳೋ ತಿಳಿಯದು, ಆಕೆಯೇ ಲೋಕದೊಳಗೆ ಧನ್ಯಳು! ಅವಳ ಸುಕೃತಕ್ಕೆ ಸರಿ ಇಲ್ಲ; ಇಂಥ ಪುತ್ರರತ್ನವನ್ನು ಹೆತ್ತ ನಮ್ಮ ವಿಲಾಸವತೀ ರಾಣಿಯವರ ಪುಣ್ಯಕ್ಕೆ ಎಣೆಯೇ?' ಎಂದು ಮಾತಾಡುತ್ತಿರುವರು. ಅಷ್ಟರೊಳಗೆ ಸರ್ವರಿಗೂ ದರ್ಶನದಿಂದ ಆನಂದಕೊಡುತ್ತ ಚಂದ್ರಾಪೀಡನು ರಾಜಮಂದಿರದ ಮಹಾದ್ವಾರದ ಮುಂದೆ ಬಂದು ಕುದುರೆಯಿಳಿದು, ವೈಶಂಪಾಯನನ ಕೈಹಿಡಿದು, ಮುಂದೆ ಬಲಾಹಕನು ಮಾರ್ಗ ತೋರಿಸುತ್ತಾನೆ, ಚೋಪದಾರರು 'ಪರಾಕು' ಎಂದು ಎಚ್ಚರಗೊಳಿಸುತ್ತಾರೆ, ವಂದಿಗಳೂ, ಭಟ್ಟಂಗಿಗಳೂ ಹೊಗಳುತ್ತಾರೆ, ರೈತರೂ, ರಾವುತರೂ ಮುಜುರೆ ಕೊಡುತ್ತಾರೆ, ಹೆಜ್ಜೆ ಹೆಜ್ಜೆಗೆ ವೃದ್ಧನಾರಿಯರು ಅಂತಃಪುರದೊಳಗಿಂದ ಬಂದು ಆರತಿ ಮಾಡಿ ನಿವಾಳಿಯ ಚೆಲ್ಲುತ್ತಾರೆ; ಸಂಗಡಶೂರರಾದ ಪ್ರತಿಷ್ಠಿತ ಮುಕುಟವರ್ಧನರು ವಿನಯದಿಂದ ಬರುತ್ತಾರೆ. ಈ ಮೇರೆಗೆ ಚಂದ್ರಾಪೀಡನು ಬಂದು ಸರದಾರರ ಸಮೂಹದೊಡನೆ ಕುಳಿತುಕೊಂಡ ತಂದೆಯನ್ನು ನೋಡಿ ದೂರದಿಂದಲೇ ತಲೆವಾಗಿ ನೆಲಮುಟ್ಟಿ ವಂದನೆ ಮಾಡಿದನು.

ಆತನನ್ನು ನೋಡಿ ಅರಸನು ಅತ್ಯಾನಂದದಿಂದ "ಬಾ, ಮಗನೆ" ಎಂದು ಪ್ರೀತಿಯಿಂದ ಅಪ್ಪಿಕೊಂಡು, ಅದರಂತೆ ವೈಶಂಪಾಯನನನ್ನೂ ಅಪ್ಪಿಕೊಂಡು ಬಳಿಯಲ್ಲಿ ಕುಳ್ಳಿರಿಸಿಕೊಂಡನು. ಸ್ವಲ್ಪ ಹೊತ್ತು ಕುಳಿತ ಬಳಿಕ "ಮಗನೇ ನಿನ್ನ ಹಡೆದಾಕೆಯೂ, ಅಂತಃಪುರದೊಳಗಿನ ಸ್ತ್ರೀಯರೂ ಯಾವಾಗ ನಿನ್ನನ್ನು ನೋಡೇವೆಂದು ಹಾರೈಸಿಕೊಂಡು ಕುಳಿತಿದ್ದಾರೆ. ಹೋಗು ಅವರಿಗೆ ಭೆಟ್ಟಿಯಾಗು" ಎಂದು ಅರಸನು ಹೇಳಿದ ಕೂಡಲೆ,

ಚಂದ್ರಾಪೀಡನು ವೈಶಂಪಾಯನನನ್ನು ಕರೆದುಕೊಂಡು ಅಂತಃಪುರದೊಳಗೆ ಹೋಗಿ ಅರಸು ಮನೆತನದೊಳಗಿನ ಕುಲೀನ ಸ್ತ್ರೀಯರೊಡನೆ ಪುರಾಣ ಕೇಳುತ್ತ ಕುಳಿತ ತಾಯಿಯ ಬಳಿಗೆ ಹೋಗಿ ಕಾಲಿಗೆರಗಿದನು. ಮಗನನ್ನು ನೋಡಿ ವಿಲಾಸವತಿಯು ನೂರಾರು ಮಂದಿ ದಾಸಿಯರು ಬಳಿಯಲ್ಲಿ ಸೇವೆಗೆ ಕೈಜೋಡಿಸಿಕೊಂಡು ನಿಂತಿದ್ದರೂ ತಾನೇ ಆನಂದದಿಂದ ಆರತಿಯ ಮಾಡಿ, ನಿವಾಳಿಯ ತೆಗೆದು ಮಗನನ್ನು ಅಪ್ಪಿಕೊಂಡು ಮುದ್ದಾಡಿ, ವೈಶಂಪಾಯನನನ್ನೂ ಅಪ್ಪಿಕೊಂಡು ಬಳಿಯಲ್ಲಿ ಕುಳ್ಳಿರಿಸಿಕೊಂಡು, ಚಂದ್ರಾಪೀಡನ ಮೈಮೇಲೆ ಕೈ ಯಾಡಿಸಿ, "ಮಗನೇ, ನೀನು ಬಾಲ್ಯದಲ್ಲಿ ಆಡುವ ಆಟಗಳನ್ನು ಬಿಟ್ಟು ಇಷ್ಟು ದಿವಸ ವಿದ್ಯಾಮಂದಿರದೊಳಗೆ ಗುರುಗಳ ಶಿಕ್ಷೆಯನ್ನು ಅನುಭೋಗಿಸಿ, ಅವರ ಪ್ರಸಾದದಿಂದ ಸರ್ವ ವಿದ್ಯಾಸಂಪನ್ನನಾಗಿ ಬಂದು ನನ್ನ ಕಣ್ಣುಗಳ ಪುಣ್ಯವನ್ನು ದಿಟಗೊಳಿಸಿದಿ; ನಿನ್ನ ಧೈರ್ಯಕ್ಕೂ, ಪಿತೃಭಕ್ತಿಗೂ ತಕ್ಕ ಫಲವಾಯಿತು; ನಿನ್ನಿಂದ ಇಂದಿಗೆ ನಾನು ಧನ್ಯಳಾದೆನು! ಇನ್ನು ಸದ್ಗುಣ ಸೌಂದರ್ಯ-ಸಂಪನ್ನಳಾದ ಕುಲೀನ ಹೆಂಡತಿಯು ನಿನಗೆ ಪ್ರಾಪ್ತವಾದದ್ದನ್ನು ಎಂದಿಗೆ ನೋಡೇನು!" ಎಂದು ಮಾತಾಡಿ ಮಗನಿಗೆ ಮುದ್ದು ಕೊಟ್ಟಳು. ಬಳಿಕ ಚಂದ್ರಾಪೀಡನು ಅಲ್ಲಿಂದ ಎದ್ದು ಉಳಿದ ರಾಜಸ್ತ್ರೀಯರ ದರ್ಶನ ತಕ್ಕೊಂಡು, ಇಂದ್ರಾಯುಧವನ್ನು ಏರಿ ವೈಶಂಪಾಯನ ಸಹಿತ ಅರಸು ಮಕ್ಕಳೊಡಗೊಂಡು ಶುಕನಾಸ ಮಂತ್ರಿಯ ಮನೆಗೆ ಹೋದನು. ಆತನ ಮನೆಯ ಮಹಾದ್ವಾರದ ಮುಂದೆ ಆನೆಗಳು ಝುಲಾಯಿಸುತ್ತಿದ್ದವು; ಚೌಘಡೆಯ ವಾದ್ಯವಾಗುತ್ತಿತ್ತು; ಕುದುರೆಗಳೂ, ರಥಗಳೂ ಒಂದರ ಹಿಂದೊಂದು ಸಂದಣಿಗೊಂಡು ನಿಂತಿದ್ದವು; ರಾಜಸೇವಕರು ಕೆಲಸಗಳಲ್ಲಿ ತತ್ಪರರಾಗಿ ಇತ್ತಲಿಂದತ್ತ, ಅತ್ತಲಿಂದಿತ್ತ ಓಡಾಡುತ್ತಿದ್ದರು; ಭೆಟ್ಟಿಗೆ ಬಂದ ಕಾಪಾಲಿಕ, ಶೈವ, ಬೌದ್ಧ ಮುಂತಾದ ಮತಸ್ಥರು ಮಾರ್ಗ ನಿರೀಕ್ಷಿಸುತ್ತ ನಿಂತಿದ್ದರು. ಆ ಸಂದಣಿಯೊಳಗಿಂದ ಹೋಗಿ ಬಾಗಿಲ ಬಳಿಯಲ್ಲಿ ಕುದುರೆಯಿಳಿದು ಚಂದ್ರಾಪೀಡನು ವೈಶಂಪಾಯನನ ಕೈಹಿಡಿದುಕೊಂಡು, ಮುಂದೆ ಮುಂದೆ ಭಾಲದಾರರು ಮಾರ್ಗ ತೋರಿಸಲು, ಮಾಂಡಲಿಕ ಭೂಪಾಲರ ಸಮೂಹದೊಡನೆ ಶುಕನಾಸನು ಕುಳಿತುಕೊಂಡ ಮಂದಿರಕ್ಕೆ ಹೋಗಿ ದೂರದಿಂದಲೇ ಅರಸನಿಗೆ ಮಾಡಿದಂತೆ ನಮ್ರಭಾವದಿಂದ ಆತನಿಗೂ ವಂದನೆ ಮಾಡಿದನು. ಶುಕನಾಸನು ಎದ್ದು ಮುಂದಕ್ಕೆ ಬಂದು ಚಂದ್ರಾಪೀಡನನ್ನೂ ವೈಶಂಪಾಯನನನ್ನೂ ಪ್ರೀತಿಯಿಂದ ಆಲಿಂಗಿಸಿದನು. ಅಷ್ಟರೊಳಗೆ ಸೇವಕರು ರತ್ನಖಚಿತವಾದ ಆಸನವನ್ನು ತವಕದಿಂದ ತರಲು, ಅದನ್ನು ಒತ್ತಟ್ಟಿಗೆ ಸರಿಸಿ ಚಂದ್ರಾಪೀಡನು ಕೆಳಗೇ ಕುಳಿತುಕೊಂಡನು. ಬಳಿಕ ಶುಕನಾಸ ಮಂತ್ರಿಯು ಸಂತೋಷದಿಂದ— "ಜನ್ಮ ಜನ್ಮಾಂತರದಲ್ಲಿ ಮಾಡಿದ ನಮ್ಮ ಮಹಾರಾಜರ ಪುಣ್ಯವು ಇಂದಿಗೆ ಫಲಿಸಿತು; ಯಾವತ್ತೂ ಗುರುಹಿರಿಯರ ಆಶೀರ್ವಾದಗಳು ಈ ಹೊತ್ತಿಗೆ ನಿಜವಾದವು; ನಮ್ಮ ಹರಕೆಗಳೆಲ್ಲ ಇಂದಿಗೆ ಕೈಗೂಡಿದವು. ಭರತ, ಭಗೀರಥರನ್ನು ಹೋಲುವ ನಿಮ್ಮಂಥ ಪಾಲಕರು ಪ್ರಾಪ್ತರಾದುದರಿಂದ ಈ ಪೃಥ್ವಿಯೂ, ಪ್ರಜೆಗಳೂ ಧನ್ಯರೇ ಸರಿ. ತಾವು ಈ ಪೃಥ್ವಿಯನ್ನು ಚಿರಕಾಲವಾಳಬೇಕೆಂಬುದಾಗಿ ದೇವರನ್ನು ಬೇಡಿಕೊಳ್ಳುತೇನೆ" ಎಂದು ಮಾತಾಡಿದನು. ಬಳಿಕ ಚಂದ್ರಾಪೀಡನು ಆತನ ಅಪ್ಪಣೆ ತಕ್ಕೊಂಡು ಅಂತಃಪುರದೊಳಗೆ ಹೋಗಿ ವೈಶಂಪಾಯನನ ಮಾತೆಯಾದ ಮನೋರಮಾತಾಯಿಯ ದರ್ಶನ ತಕ್ಕೊಂಡು, ತನಗಾಗಿ ಸಿದ್ಧಮಾಡಿಸಿದ

ಕುಮಾರಭವನವೆಂಬ ಮಂದಿರಕ್ಕೆ ಹೋಗಿ ಅಲ್ಲಿ ವಿಧಿಪೂರ್ವಕವಾಗಿ ನಿತ್ಯಕರ್ಮಗಳನ್ನು ತೀರಿಸಿಕೊಂಡು, ತನ್ನ ಶಯನಸ್ಥಾನದ ಹತ್ತಿರವೇ ಇಂದ್ರಾಯುಧವನ್ನು ಕಟ್ಟಿಸಿ, ಮಣಿಮಂಚದ ಮೇಲೆ ಮಲಗಿದನು. ಮರುದಿವಸ ಮುಂಜಾವಿನಲ್ಲಿ ಚಂದ್ರಾಪೀಡನು ಅರಸನ ಅಪ್ಪಣೆ ತಕ್ಕೊಂಡು ಅರಣ್ಯಕ್ಕೆ ಬೇಟೆಯಾಡಹೋಗಿ ಮಧ್ಯಾಹ್ನಕ್ಕೆ ತಿರುಗಿ ಬಂದ ಕೂಡಲೆ ಸ್ನಾನಗೃಹದೊಳಗೆ ಎಲ್ಲ ಸಿದ್ಧಮಾಡಿ ಮಾರ್ಗ ನಿರೀಕ್ಷಿಸುತ್ತ ಕುಳಿತ ಕುಲವರ್ಧನೆ ಮೊದಲಾದ ದಾಸಿಯರು ಮಲ್ಲಿಗೆ ಎಣ್ಣೆ ಮುಂತಾದ ಅಂಗರಾಗಗಳನ್ನು ಚಂದವಾಗಿ ಚಂದ್ರಾಪೀಡನ ಮೈಗೆ ತೊಡೆದು, ಅಭ್ಯಂಗಸ್ನಾನ ಮಾಡಿಸಿದರು. ಬಳಿಕ ಕೆಲವು ಮಿತ್ರರಾದ ರಾಜಪುತ್ರರನ್ನು ಕರಕೊಂಡು ಚಂದ್ರಾಪೀಡನು ಷಡ್ರಸಯುಕ್ತವಾದ ಸುಗ್ರಾಸವನ್ನು ಭುಂಜಿಸಿದನು. ಈ ಮೇರೆಗೆ ಕೆಲವು ದಿವಸಗಳು ಹೋದ ತರುವಾಯ ಒಂದು ದಿನ ಮುಂಜಾವಿನಲ್ಲಿ ವಿಲಾಸ ವತೀದೇವಿಯರ ಅಪ್ಪಣೆಯಿಂದ ಕೈಲಾಸಕನೆಂಬ ಕಾರಕೂನನು ಪತ್ರಲೇಖೆಯೆಂಬ ಕನ್ಯೆಯನ್ನು ಕರಕೊಂಡು ಚಂದ್ರಾಪೀಡನ ಹತ್ತಿರ ಬಂದು ವಂದನೆಮಾಡಿ—“ಸ್ವಾಮೀ, ವಿಲಾಸವತೀ ಅಮ್ಮನವರ ಅಪ್ಪಣೆಯ ಮೇರೆಗೆ ತಮಗೆ ಅರಿಕೆ ಮಾಡಿಕೊಳ್ಳುತ್ತೇನೆ, ಚಿತ್ತವಿಡಬೇಕು. ಹಿಂದಕ್ಕೆ ನಮ್ಮ ದೊರೆಗಳು ಕುಲುತೇಶ್ವರ ರಾಜನ ಮೇಲೆ ದಂಡು ತಕ್ಕೊಂಡು ಹೋಗಿ ದಾಳಿಯ ಮಾಡಿ ಆತನನ್ನು ಜಯಿಸಿ, ರಾಜ್ಯಪದದಿಂದ ತಳ್ಳಿ, ಆತನ ಮಗಳಾದ ಈ ಪತ್ರಲೇಖೆಯೆಂಬ ಕನ್ಯೆಯನ್ನು ತೆಗೆದುಕೊಂಡು ಬಂದು ರಾಣಿಯವರ ವಶಕ್ಕೆ ಕೊಟ್ಟರು; ಇವಳು ತೀರ ಸಣ್ಣಾಕೆ ಇದ್ದುದರಿಂದಲೂ, ಅರಸನ ಮಗಳಾದುದರಿಂದಲೂ ದೇವಿಯವರು ಪ್ರೀತಿಯಿಂದ ಹೊಟ್ಟೆಯ ಮಗಳಂತೆ ಈಕೆಯನ್ನು ಜೋಕೆಮಾಡಿ, ಈಗ ತಮ್ಮ ತಾಂಬೂಲದ ಕರಡಿಗೆ ಹಿಡಿಯುವದಕ್ಕೆ ತಕ್ಕವಳೆಂದು ಕಳಿಸಿದ್ದಾರೆ. ಅಂಗೀಕರಿಸಬೇಕು; ಉಳಿದ ದಾಸಿಯರೊಳಗೆ ಈಕೆಯನ್ನು ಎಣಿಸಬಾರದೆಂತಲೂ, ಬಹುದಿವಸ ಜೋಪಾನ ಮಾಡಿದ ಕಾರಣ ಈಕೆಯ ಮೇಲೆ ತಮ್ಮ ಪ್ರೀತಿ ಪೂರ್ಣ ಉಂಟೆಂತಲೂ, ನೀವಾದರೂ ಈಕೆಯ ಕೂಡ ಸ್ನೇಹದಿಂದ ವರ್ತಿಸಬೇಕೆಂತಲೂ ನಿಮಗೆ ಹೇಳಿದ್ದಾರೆ. ಈಕೆ ದೊಡ್ಡ ಕುಲದಲ್ಲಿ ಹುಟ್ಟಿದಾಕೆ; ಮರ್‍ಯಾದಾಶೀಲಳು; ಈಕೆಯ ರೀತಿಗಳು ತಮಗೆ ಗೊತ್ತಿಲ್ಲದ ಮೂಲಕವಾಗಿ ಅರಿಕೆ ಮಾಡಿಕೊಳ್ಳುತ್ತೇನೆ” ಎಂದು ಕೈಲಾಸಕನು ಕೈಮುಗಿದು ಬಿನ್ನವಿಸಿದ ಬಳಿಕ ಪತ್ರಲೇಖೆಯು ರಾಜಪುತ್ರನಿಗೆ ತಲೆಬಾಗಿ ಮರ್ಯಾದೆಯಿಂದ ವಂದನೆ ಮಾಡಿದಳು. ಚಂದ್ರಾಪೀಡನು ಆಶ್ಚರ್ಯದಿಂದ ಅವಳನ್ನು ನೋಡಿ— “ಒಳ್ಳೆಯದು, ತಾಯಿಯ ಅಪ್ಪಣೆಯ ಮೇರೆಗೆ ನಡಕೊಳ್ಳುವೆನು” ಎಂದು ಹೇಳಿ ಕೈಲಾಸಕನಿಗೆ ಹೋಗಲಪ್ಪಣೆ ಕೊಟ್ಟನು. ಆ ಹೊತ್ತಿನಿಂದ ಪತ್ರಲೇಖೆಯು ಯಾವಾಗಲೂ ಎಡೆಬಿಡದೆ ಚಂದ್ರಾಪೀಡನ ಕೂಡ ಇರುತ್ತಿದ್ದಳು. ಆತನು ಕಾನನಕ್ಕೆ ಬೇಟೆಯಾಡಹೋಗಲಿ, ಅರಮನೆಗೆ ಅರಸನ ದರ್ಶನಕ್ಕೆ ಹೋಗಲಿ, ತನ್ನ ಸೌಧಾಗ್ರದಲ್ಲಿರಲಿ, ಚಂದ್ರಾಪೀಡನ ಮೈನೆಳಲಿನಂತೆ ಅವಳು ಒಂದು ಕ್ಷಣ ಹೊತ್ತೂ ಸಹ ಆತನನ್ನು ಬಿಟ್ಟು ಅಗಲುತ್ತಿದ್ದಿಲ್ಲ. ಚಂದ್ರಾಪೀಡನಾದರೂ ಆಕೆಯ ಮೇಲೆ ದಿನದಿನಕ್ಕೆ ಹೆಚ್ಚೆಚ್ಚು ಲೋಭ ಮಾಡುತ್ತ, ನಂಬಿಗೆಯಿಂದ ತನ್ನ ಹಿತದ ಮಾತುಗಳನ್ನು ಅವಳಿಗೆ ಹೇಳುತ್ತಿದ್ದನು.

ಕೆಲವು ದಿವಸಗಳ ತರುವಾಯ ಅರಸನು ಚಂದ್ರಾಪೀಡನಿಗೆ ಯುವರಾಜ ಪಟ್ಟಗಟ್ಟಬೇಕೆಂದು ಮನದೊಳಗೆ ಆಲೋಚಿಸಿ, ಶುಕನಾಸ ಮುಂತಾದ ಮುಂತ್ರಿಗಳಿಗೆ ತಿಳಿಸಿ, ಪಟ್ಟಾಭಿಷೇಕದ ಸಾಮಗ್ರಿಯನ್ನು ಸಿದ್ಧಮಾಡಲಪ್ಪಣೆಕೊಟ್ಟನು. ಯುವರಾಜ್ಯಾಭಿಷೇಕವಾಗುವದು ಮುಂದೆ ಒಂದೆರಡು ದಿನವಿರುವಾಗ ಚಂದ್ರಾಪೀಡನು ಶುಕನಾಸನ ದರ್ಶನಕ್ಕೆ ಹೋದನು. ಆಗ ಶುಕನಾಸನು— "ಯುವರಾಜರೇ, ನೀವು ಸಕಲ ಶಾಸ್ತ್ರಗಳನ್ನು ಓದಿದವರು. ಸರ್ವ ವಿಷಯಗಳನ್ನು ಬಲ್ಲವರು. ಇನ್ನು ಹೆಚ್ಚಿಗೆ ನಿಮಗೆ ಉಪದೇಶ ಮಾಡಬೇಕೆಂಬ ಹಾಗೇನು ಇಲ್ಲ; ಆದರೂ ಎರಡು ಮಾತುಗಳನ್ನು ಹೇಳುತ್ತೇನೆ, ಚಿತ್ತಗೊಟ್ಟು ಆಲಿಸಬೇಕು. ತಾರುಣ್ಯದ ಯೋಗದಿಂದ ಪ್ರಾಪ್ತವಾಗುವ ತಮವು (ಅಜ್ಞಾನವು) ಉಳಿದ ಅಂಧಕಾರದಂತೆ ಸೂರ್ಯನ ಕಿರಣಗಳಿಂದೇನೂ ನಷ್ಟವಾಗುವುದಿಲ್ಲ, ಅಂಥ ಗಹನವಾದದ್ದು. ಐಶ್ವರ್ಯದಿಂದ ಪ್ರಾಪ್ತವಾದ ಮದವು ಐಶ್ವರ್ಯ ಹೋದರೂ ಹೋಗುವುದಿಲ್ಲ, ಅಷ್ಟು ಕಷ್ಟಕರವಾದದ್ದು. ಗರ್ವದಿಂದ ಹುಟ್ಟಿದ ತಾಪವು ಶೀತೋಪಚಾರಗಳಿಂದೇನೂ ಶಾಂತವಾಗುವುದಿಲ್ಲ, ಅಂಥ ಉಗ್ರವಾದದ್ದು. ವಿಷಯವೆಂಬ ನಂಜಿನಿಂದ ಸಾಯುವುದು ನಿಶ್ಚಯವೆಂದು ತಿಳಿದರೂ ಮನುಷ್ಯರು ಅದರ ಸವಿ ತಕ್ಕೊಳ್ಳದೆ ಬಿಡುವದಿಲ್ಲ, ಅದು ಅಂಥ ಮೋಹಕವಾದದ್ದು. ಕಾಮಲಂಪಟವೆಂಬ ಮಲಕ್ಕೆ ಒಳಗಾದವರು ಈ ಭೂಮಿಯ ಮೇಲೆ ಬಹಳ ವಿರಳ; ದಿನಾಲು ಮಾಡುವ ಸ್ನಾನದಿಂದ ಈ ಮಲವು ಹೋಗುವದಲ್ಲ. ರಾಜ್ಯಸುಖವೆಂಬ ನಿದ್ದೆಹತ್ತಿದ ಬಳಿಕ ಬೆಳಗಾದರೂ ಎಚ್ಚರವಾಗುವುದಿಲ್ಲ; ಒಳ್ಳೆಯ ಪ್ರಬುದ್ಧರಾದ ಅರಸರು ಸಹ ಇನ್ನೂ ಈ ನಿದ್ರೆಯೊಳಗೇ ಆಕಳಿಸುತ್ತಾರೆ, ಇಂಥ ಘೋರ ನಿದ್ರೆ ಇದು. ಸ್ವಾಮೀ ಚಿತ್ತಗೊಟ್ಟು ಆಲಿಸಬೇಕು. ಗರ್ಭಶ್ರೀಮಂತತನ, ನೂತನ ತಾರುಣ್ಯ ಅನುಪಮಸೌಂದರ್ಯ, ಅಲೌಕಿಕಸಾಮರ್ಥ್ಯ ಇವುಗಳಲ್ಲಿ ಮನುಷ್ಯನಿಗೆ ಒಂದು ಇದ್ದರೂ ಅವನನ್ನು ನಾಶಗೊಳಿಸುವುದಕ್ಕಾಗಲಿ, ಅವಿಚಾರಕ್ಕೊಳಮಾಡುವುದಕ್ಕಾಗಲಿ ಸಾಕು; ಇವೆಲ್ಲ ಒಂದೇ ಸ್ಥಳದಲ್ಲಿ ಒಟ್ಟುಗೂಡಿದರಂತೂ ಕೇಳುವದೇನು? ಎಂಥ ಸುಶಿಕ್ಷಿತ ಮನುಷ್ಯನಾದರೂ ತಾರುಣ್ಯವೊದಗಿದ ಮೇಲೆ ಅವನಿಂದೇನಾದೀತು ಏನಾಗದೆಂಬ ನಿಯಮವಿಲ್ಲ. ವಿಷಯಾರಣ್ಯದೊಳಗೆ ಮನುಷ್ಯನ ಇಂದ್ರಿಯಗಳೆಂಬ ಎರಳೆಗಳು ಸುಖೋಪಭೋಗವೆಂಬ ಮೃಗಜಲಕ್ಕೆಳಸಿ ಹರಿದಾಡುತ್ತವೆ. ಮೊದಲು ತುಚ್ಛವಾಗಿಯೂ, ನೀರಸವಾಗಿಯೂ ತೋರುವ ವಿಷಯಗಳೇ ಮುಂದೆ ಯೌವನಮದದ ಮಬ್ಬು ತಲೆಗೇರಿದಾಗ ಇಂಪಾಗಿಯೂ ಪ್ರಿಯಕರವಾಗಿಯೂ ತೋರುವವು. ಇಂಥ ಸದುಪದೇಶವು ನಿಮ್ಮಂಥ ವಿಚಕ್ಷಣರ ಮನಸ್ಸಿಗೆ ಹತ್ತಿದ ಹಾಗೆ ಅಶಿಕ್ಷಿತರ ಮನಸ್ಸಿಗೂ, ದುಷ್ಟರ ಮನಸ್ಸಿಗೂ ಹತ್ತುವದಿಲ್ಲ. ಇದಲ್ಲದೆ ನಿಮಗೆ ಉಪದೇಶ ಮಾಡತಕ್ಕ ಕಾಲವು ಇದೇ ಸರಿ; ಯಾಕೆಂದರೆ ಇನ್ನೂ ನಿಮಗೆ ವಿಷಯರಸದ ಸವಿ ಹತ್ತಿಲ್ಲ. ಇಂಥ ಸದುಪದೇಶವು ಕಾಮನ ಕೂರಂಬುಗಳು ನಟ್ಟವರ ಮನಸ್ಸಿಗೆ ನಡುವದಿಲ್ಲ. ದೊಡ್ಡ ಮನೆತನದಲ್ಲಿ ಹುಟ್ಟಿದವರು ದುರ್ಮಾರ್ಗದಿಂದ ನಡೆಯುವದಿಲ್ಲೆಂದು ಅನ್ನಕೂಡದು; ಚಂದನವೃಕ್ಷದಿಂದ ಹುಟ್ಟಿದ ಬೆಂಕಿ ಸುಡುವದಿಲ್ಲೆನ್ನಬಹುದೋ? ಮತ್ತು ಸುಶಿಕ್ಷಿತ ಮನುಷ್ಯನು ಸನ್ಮಾರ್ಗದಿಂದಲೇ ನಡೆಯುವನೆಂಬ ನಿಶ್ಚಯವಿಲ್ಲ; ನೋಡಿರಿ ನೀರಿನಿಂದ ಬೆಂಕಿಯು ಆರುವದು; ಆ ನೀರಿನಿಂದಲೇ ವಡವಾಗ್ನಿಯು ಪ್ರಜ್ವಲಿಸುವದು. ಆದುದರಿಂದ ಮಾನವಪ್ರಾಣಿಗಳು

ಗುರುಗಳ, ಹಿರಿಯರ ಹಿತೋಪದೇಶಗಳಿಗೆ ಯಾವಾಗಲೂ ಕಿವಿಗೊಡುತ್ತ ನಾನು ನನ್ನದೆಂಬ ಅಹಂಕಾರ ಮಮಕಾರಗಳಿಗೆ ಒಳಗಾಗದೆ, ಬಹಳ ಎಚ್ಚರದಿಂದ ವರ್ತಿಸಬೇಕು. ಗುರೂಪದೇಶಗಳನ್ನು ಕೇಳುವದೇ ಕಿವಿಗೆ ಭೂಷಣವು. ಅರಸನ ಮಾತಿಗೆ ತಲೆದೂಗುವವರೇ ಬಹಳ ಮಂದಿ. ನಿಸ್ಪೃಹತೆಯಿಂದ ಅರಸನಿಗೆ ಅಂಜದೆ ಬುದ್ಧಿಯನ್ನು ಹೇಳುವವರು ಬಹಳ ಅಪರೂಪ. ಅಂಥದರೊಳಗೆ ದೈವಯೋಗದಿಂದ ಯಾವನಾದರೊಬ್ಬನು ಗಂಟುಬಿದ್ದರೂ ಪ್ರಯೋಜನವೇನು ? ಗರ್ವರೂಪಮಲದಿಂದ ಅರಸರ ಕಿವಿಗಳು ಗಡದು ಹಾಕಿರುತ್ತವೆ; ಅದರಿಂದ ಆತನು ಹೇಳಿದ ಬುದ್ಧಿಯ ಮಾತುಗಳು ವ್ಯರ್ಥವಾಗುವವು. ಮುಖಸ್ತುತಿ ಮಾಡುವವರ ಮರುಳು ಮಾತುಗಳಿಗೆ ಮೋಹಿತರಾದ ಅರಸರ ಮನಸ್ಸು ಗುರುಹಿರಿಯರ ಸದುಪದೇಶಕ್ಕೆ ಎಳಸುವುದಿಲ್ಲ. ಅಂಥವರಿಗೆ ಹೇಳುವ ಉಪದೇಶವು ಬುಡಮೇಲು ಮಾಡಿದ ಕೊಡದ ಮೇಲೆ ಹನಿಸಿದ ನೀರಿನಂತೆ ವ್ಯರ್ಥವೇ ಸರಿ; ಆದುದರಿಂದ ಉಪದೇಶಕನಿಗೆ ಮಾತ್ರ ಖೇದವಾಗುವುದೇ ಹೊರತು ಬೇರೆ ಏನೂ ಫಲವಿಲ್ಲ. ಜೀಯಾ, ಲಕ್ಷ್ಮಿಯು ಪ್ರಾಪ್ತವಾದಾಗ ಜನರು ಒಣ ಹೆಮ್ಮೆ ಮಾಡುತ್ತಾರೆ. ಲಕ್ಷ್ಮಿಯ ದುರ್ಗುಣಗಳನ್ನು ಹೇಳುತ್ತೇನೆ ಕೇಳಿರಿ! ಇಂಗಡಲೊಳಗಿಂದ ಹುಟ್ಟುವಾಗಲೇ ಈಕೆಗೆ ಒಡಹುಟ್ಟಿದವರ ನೆರಳು ಬಿತ್ತೋ ಏನೋ ಅನ್ನುವ ಹಾಗೆ ಚಂದ್ರನ ಕಲೆಯಿಂದ ವಕ್ರತ್ವವು, ಪಾರಿಜಾತ ವೃಕ್ಷದ ಪಲ್ಲವದಿಂದ ರಾಗವು, ಉಚ್ಚೈಃಶ್ರವದಿಂದ ಚಪಲತೆಯು, ಕಾಲಕೂಟವಿಷದಿಂದ ಮೋಹನಶಕ್ತಿಯು, ಮದ್ಯದಿಂದ ಮದವು, ಕೌಸ್ತುಭಮಣಿಯಿಂದ ಕಾಠಿಣ್ಯವು ಪ್ರಾಪ್ತವಾದವು. ಈಕೆ ಒಬ್ಬರನ್ನೂ ಲೆಕ್ಕಿಸುವುದಿಲ್ಲ. ನೋಡನೋಡಲು ಮಿಂಚಿನ ಹಾಗೆ ತೋರಿಯಡಗುವಳು. ಜಾಣರು ಸಿರಿಯನ್ನು ನೆಚ್ಚಬಾರದು. ಈ ಲಕ್ಷ್ಮಿಯ ಕುಟಿಲತನವನ್ನು ಎಷ್ಟು ಹೇಳಿದರೂ ತೀರದು. ಸ್ವಾಮೀ, ಇಂದು ಐಶ್ವರ್ಯದ ಶಿಖರಕ್ಕೆ ಏರಿಸಿದ ಮನುಷ್ಯನನ್ನೇ ನಾಳೆಗೆ ತೊಲಗಿ ಆತನನ್ನು ಮಣ್ಣುಪಾಲು ಮಾಡುತ್ತಾಳೆ. ಇಂಥ ದುಷ್ಟ ಲಕ್ಷ್ಮಿಯ ಗಾಳಿ ಒಮ್ಮೆ ಮೈ ಸೋಂಕಿದರೆ ಸಾಕು; ಆ ಪುರುಷನು ವಿದ್ವಾಂಸನಿರಲಿ, ಜಾಣನಿರಲಿ, ಪರಾಕ್ರಮಿ ಇರಲಿ, ಕುಲೀನನಿರಲಿ, ಸುಶೀಲನಿರಲಿ, ಎಂಥವನಿದ್ದರೂ ಅವನ ಗುಣಗಳನ್ನು ಲೋಪ ಮಾಡಿ ಅವನಿಗೆ ವಿಪರೀತ ಬುದ್ಧಿಯ ಹುಟ್ಟಿಸಿ, ಅವನನ್ನು ನಿಜವಾದ ಸುಖಕ್ಕೆ ಎರವು ಮಾಡುತ್ತಾಳೆ. ರಾಜಲಕ್ಷ್ಮಿಯು ಅಭಿಷೇಕದಿಂದಲೇ ಅರಸರ ಸೌಜನ್ಯವು ತೊಳೆದುಹೋಗುವುದು. ಆಗಿನ ಹೋಮಾಗ್ನಿಯ ಹೊಗೆಯಿಂದ ಅವರ ನಿರ್ಮಲವಾದ ಹೃದಯವು ಮಲಿನವಾಗುವದು; ಪುರೋಹಿತನು ದರ್ಭೆಯಿಂದ ಸಂಪ್ರೋಕ್ಷಣ ಮಾಡಿದ ಕೂಡಲೆ ಅರಸರ ಕ್ಷಮಾಗುಣವು ಲಯವಾಗುವದು. ತಲೆಯ ಮೇಲೆ ಕಿರೀಟ ಬಂದ ಕೂಡಲೇ ಮುಪ್ಪಿನಿಂದ ತಲೆ ಬೆಳ್ಳಗಾಗುವದನ್ನು ಮರೆಯುತ್ತಾರೆ. ಛತ್ರ ಹಿಡಿಸಿಕೊಂಡಾಗಲೇ ಅವರಿಗೆ ಪರಲೋಕವು ಮರೆಯಾಗುವದು. ಚಾಮರದ ಗಾಳಿಗೆ ಅವರ ಸತ್ಯಶೀಲತ್ವವು ಹಾರಿಹೋಗುವದು. ಚೋಪದಾರರ ಕೈಯೊಳಗಿನ ವೇತ್ರದಂಡದಿಂದ ಅರಸರ ಔದಾರ್ಯಾದಿ ಗುಣಗಳು ಅಡಗುವವು. ಭಟ್ಟಂಗಿಗಳ ಜಯಜಯಕಾರ ಶಬ್ದಗಳೊಳಗೆ ಅವರು ಸಾಧು ಜನರ ಕಥೆಗಳಿಗೆ ಕಿವಿಗೊಡುವದಿಲ್ಲ. ಇಷ್ಟೇ ಅಲ್ಲ, ಅವರು ಎಲ್ಲ ದುರ್ಗುಣಗಳಿಗೆ ತವರುಮನೆಯಾಗುವರು. ಜೂಜಾಡುವದೇ ವಿನೋದವೆಂದೂ, ವ್ಯಭಿಚಾರ ಮಾಡುವದೇ ಚತುರತನವೆಂದೂ, ಬೇಟೆಯಾಡುವದೇ ಶರೀರಕ್ಕೆ ಪರಿಶ್ರಮವೆಂದೂ, ಮದ್ಯಪಾನವೇ

ತಕ್ಕ ವಿಲಾಸವೆಂದೂ, ಗುರುಹಿರಿಯರ ಉಪದೇಶವನ್ನು ಅಲ್ಲಗಳೆಯುವದೇ ಸ್ವಾತಂತ್ರ್ಯವೆಂದೂ, ವೇಶ್ಯಾಂಗನೆಯರ ಗಾನ-ನೃತ್ಯಗಳಿಗೆ ಲುಬ್ಧರಾಗುವದೇ ರಸಿಕತನವೆಂದೂ, ದೊಡ್ಡ ದೊಡ್ಡ ತಪ್ಪುಗಳನ್ನು ಉಪೇಕ್ಷಿಸುವದೇ ಮನಸ್ಸಿನ ದೊಡ್ಡಸ್ತನವೆಂದೂ, ಜನರು ಹೇಳಿದಾಗ್ಯೂ ತಾವು ಸುಮ್ಮನೇ ಕಣ್ಣು ಮುಚ್ಚಿ ಕೊಂಡಿರುವದೇ ತಾಳ್ಮೆಯೆಂದೂ, ಮನಸ್ಸಿಗೆ ಬಂದಂತೆ ಮಾಡುವದೇ ಘನತೆಯೆಂದೂ, ದೇವರ ಭಯವನ್ನು ತೊರೆದು ನಿಲ್ಲುವದೇ ಪರಾಕ್ರಮವೆಂದೂ, ಸ್ತುತಿಪಾಠಕರ ಕೊಂಡಾಟವೇ ಕೀರ್ತಿಯೆಂದೂ, ಚಂಚಲತನವೇ ಉತ್ಸಾಹವೆಂದೂ, ತಾರತಮ್ಯವರಿಯದಿರುವದೇ ನಿಷ್ಪಕ್ಷಪಾತವೆಂದೂ ಅರಸರು ತಿಳಿದುಕೊಳ್ಳುತ್ತಾರೆ.

ರಾಜಕುಮಾರರೇ, ಇಂಥ ವಿಪರೀತಸ್ಥಿತಿಗೊಳಗಾದ ಅರಸರು ನಿಶ್ಚಯವಾಗಿ ಇಹಪರಸುಖಕ್ಕೆ ಎರವಾಗುವರು. ಸುಖೋಪಭೋಗಗಳನ್ನು ಭೋಗಿಸುತ್ತಿದ್ದರೂ ಈ ಲಕ್ಷ್ಮಿಯ ಸಂಗತಿಯಿಂದ ಒಂದು ಕ್ಷಣಮಾತ್ರವಾದರೂ ಆ ಅರಸರಿಗೆ ಸೊಗಸು ಇಲ್ಲ ಕಂಡಿರಾ! ಹಲವರು ಹಣದ ಕೆಟ್ಟಾಸೆಯಿಂದ, ಹಲವರು ದಿನಾಲು ಹೊಸ ಹೊಸ ಬಗೆಯ ಭೋಗಗಳನ್ನು ಭೋಗಿಸಬೇಕೆಂಬ ಮನಸ್ಸಿನ ಲವಲವಿಕೆಯಿಂದ, ಹಲವರು ಪರನಾಡುಗಳನ್ನು ಜಯಿಸಿ ಸಾರ್ವಭೌಮರಾಗಬೇಕೆಂಬ ಆಕಾಂಕ್ಷೆಯಿಂದ, ಕೆಲವರು ಸ್ವರಾಜ್ಯದೊಳಗಿನ ಒಳಸಂಚುಗಳನ್ನು ಮುರಿಯಬೇಕೆಂಬ ಆಲೋಚನೆಯಿಂದ, ಈ ಮೇರೆಗೆ ಒಂದಿಲ್ಲೊಂದು ಚಿಂತೆಯೊಳಗೆ ಕುದಿಯುತ್ತಲೂ, ಕುಕರ್ಮಗಳನ್ನು ಮಾಡುತ್ತಲೂ, ಅನ್ಯಾಯಗಳನ್ನು ಉಪೇಕ್ಷಿಸುತ್ತಲೂ, ಅವುಗಳ ಫಲಗಳನ್ನು ಅನುಭೋಗಿಸುತ್ತಲೂ ಕ್ಲೇಶಕ್ಕೊಳಗಾಗಿ ಕಡೆಗೆ ಪಶ್ಚಾತ್ತಾಪ ಪಡುತ್ತಾರೆ. ಬಹುತರವಾಗಿ ಅರಸರ ಸುತ್ತುಮುತ್ತು ದುಷ್ಟರೂ ದುರಾಚಾರಿಗಳೂ ನೆರೆದು, ಒಳಗೆ ಅವರ ಮೂರ್ಖತನಕ್ಕೆ ನಗುತ್ತಿದ್ದರೂ ಹೊರಗೆ ಮುಖಸ್ತುತಿಯನ್ನು ಮಾಡಿ ಅವರ ಚಿತ್ತವೃತ್ತಿಯನ್ನು ಸಂಪಾದಿಸುತ್ತಾರೆ. ಸ್ವಾರ್ಥ ಸಾಧಿಸುವ ಆ ದುಷ್ಟರ ಪದಿರನುಡಿಗಳಿಗೆ ಆ ಅರಸರು ಮರುಳಾಗಿ ಅವರು ಆಡುವ ಮಾತುಗಳೆಲ್ಲ ನಿಜವೆಂದು ನಂಬಿ, ವ್ಯರ್ಥವಾದ ಅಭಿಮಾನದಿಂದ ತಾವು ಮರಣಧರ್ಮಿಗಳೆಂಬುದನ್ನು ಮರೆತು, ಕೇವಲ ದೇವರ ಅವತಾರವೆಂದು ತಿಳಿದುಕೊಂಡು ಮಂದಿಗೆ ತಾವು ದರ್ಶನ ಕೊಡುವದೇ ಅವರ ಮೇಲಿನ ಅನುಗ್ರಹವೆಂತಲೂ, ಕಣ್ಣೆತ್ತಿ ಜನರನ್ನು ನೋಡುವದೇ ಅವರ ಮೇಲಿನ ಉಪಕಾರವೆಂತಲೂ, ಅವರಿಗೆ ಆಜ್ಞೆ ಮಾಡುವದೇ ವರ ಕೊಟ್ಟ ಹಾಗೆಂತಲೂ, ಅವರನ್ನು ಸೋಂಕುವದೇ ಅವರ ಪಾಪ ಪರಿಹಾರ ಮಾಡಿದ ಹಾಗೆಂತಲೂ ತಿಳಿದುಕೊಂಡು, ಮದದಿಂದ ಮುಂದುಗಾಣದವರಾಗಿ ದೇವರ ಭೀತಿಯನ್ನು ಬಿಟ್ಟುಬಿಡುತ್ತಾರೆ; ವಿದ್ವಾಂಸರ ಉಪಹಾಸ ಮಾಡುತ್ತಾರೆ; ಸದುಪದೇಶ ಮಾಡುವ ಹಿರಿಯರಿಗೆ ಮುದಿಹುಚ್ಚು ಹತ್ತಿ ಸುಮ್ಮನೇ ವಟವಟ ಹಚ್ಚುತ್ತಾರೆಂದು ಹಳಿಯುತ್ತಾರೆ; ಒಳಿತು ಹೇಳುವವರ ಮೇಲೆ ಕಣ್ಣು ತೆಗೆಯುತ್ತಾರೆ; ದೇವರನ್ನು ಸ್ತುತಿಸುವ ಹಾಗೆ ಯಾವಾಗಲೂ ಕೈ ಜೋಡಿಸಿಕೊಂಡು ತಮ್ಮ ಗುಣಗಳನ್ನು ಕೊಂಡಾಡಿ, ತಾವು ಅಂದದ್ದೇ ಪ್ರಮಾಣವೆಂದು ಅನ್ನುವವರಿಗೆ ಮಾತ್ರ ಮೆಚ್ಚುತ್ತಾರೆ. ಇಂಥವರೊಡನೆಯೇ ಅರಸರು ಪ್ರೀತಿಯಿಂದ ಮಾತಾಡುವರು; ಇಂಥವರಿಗೇ ಆಶ್ರಯ ಕೊಡುವರು; ಇಂಥ ಕೀಳರ

ಗೆಳೆತನ ಮಾಡಿ, ಅವರು ಹೇಳಿದ ಹಾಗೆ ಕೇಳುವರು; ಬಹಳ ಹೇಳುವದೇನು, ರಾಜ್ಯವೆಂಬುವದು ಮುಳ್ಳಿನ ಹಾಸಿಗೆ; ತಾರುಣ್ಯವು ಮದ್ಯಕ್ಕಿಂತ ಮದಗೊಳಿಸುವಂಥದು. ಆ ಕಾರಣ ಮಂದಿ ನಗದಂತೆ, ಸಾಧುಜನರು ಹಳಿಯದಂತೆ, ಗುರುಹಿರಿಯರು ಧಿಕ್ಕರಿಸದಂತೆ, ಇಷ್ಟಮಿತ್ರರಿಗೂ, ವಿದ್ವಜ್ಜನರಿಗೂ ಖೇದವಾಗದಂತೆ ನೀವು ವರ್ತಿಸಬೇಕು, ಕಂಡಿರಾ! ಧೂರ್ತರನ್ನೂ, ದುಷ್ಟರನ್ನೂ, ಜಾರರನ್ನೂ, ಚೋರರನ್ನೂ ಹತ್ತಿರ ಬರಗೊಡಬಾರದು; ಇಲ್ಲದ ದುರಾಲೋಚನೆಗಳನ್ನು ಕಲಿಸಿ ಮೋಸಗೊಳಿಸುವ ಠಕ್ಕರು ಸಾವಿರಾರು ಮಂದಿಯುಂಟು. ಇದರಂತೇ ಹೆಂಗಸರ ಮೊಗದಾವರೆಗೂ ಏಕಾಂತದಲ್ಲಿ ಮಾತಾಡುವ ಅವರ ಸವಿನುಡಿಗಳಿಗೂ ಮರುಳಾಗಬಾರದು. ವೈರಿಗಳ ಉಕ್ಕಿನ ಬಾಣವನ್ನು ಎದೆಗೊಟ್ಟು ತಾಳಬಹುದು. ಕಾಮನ ಕೋಮಲವಾದ ಹೂಬಾಣದ ಹೊಡೆತವ ತಾಳುವದು ದುಸ್ತರವು ನೀವು ಧೈರ್ಯಶಾಲಿಗಳು, ಮಹಾರಾಜರಂತೂ ಒಳ್ಳೇ ಪ್ರಯತ್ನದಿಂದ ದೊಡ್ಡ ದೊಡ್ಡ ಪಂಡಿತರನ್ನು ಇಟ್ಟು ನಿಮಗೆ ವಿದ್ಯೆ ಕಲಿಸಿದ್ದಾರೆ; ಐಶ್ವರ್ಯದಿಂದ ಮದಾಂಧರಾಗುವ ಅಶಿಕ್ಷಿತರಿಗೆ ಈ ಉಪದೇಶವು ಅವಶ್ಯವಾದದ್ದೆಂದು ನನ್ನ ಮನವರಿಕೆ ಇದ್ದರೂ ನಿಮ್ಮ ಗುಣಗಳನ್ನೂ, ಸರಳತನವನ್ನೂ ಕಂಡು ಅತ್ಯಾನಂದಪಟ್ಟು ನಿಮ್ಮ ಕೂಡ ಇವೆರಡು ಮಾತುಗಳನ್ನಾಡದೆ ಇರುವದಾಗಲಿಲ್ಲ. ಇನ್ನು ಮಹಾರಾಜರು ನಿಮ್ಮನ್ನು ಯುವರಾಜಪಟ್ಟಕ್ಕೆ ಕೂಡಿಸುತ್ತಾರೆ; ಪಟ್ಟಾಭಿಷೇಕದ ಸಮಾರಂಭವಾದ ಬಳಿಕ ಪರಂಪರೆಯಿಂದ ನಡೆಯುತ್ತ ಬಂದ ಈ ರಾಜ್ಯಭಾರವನ್ನು ಸಾಗಿಸಿ, ಹಗೆಗಳನ್ನು ಗೆದ್ದು, ಆಪ್ತರನ್ನು ಉತ್ಕರ್ಷಗೊಳಿಸಿ, ಮಹಾರಾಜರು ಮೊದಲೇ ಜಯಿಸಿದ ಈ ಯಾವತ್ತು ಪೃಥ್ವಿಯನ್ನು ದಂಡು ತಕ್ಕೊಂಡುಹೋಗಿ ತಿರುಗಿ, ಸಪ್ತದ್ವೀಪಗಳನ್ನು ಕೈವಶಮಾಡಿಕೊಂಡು ಕೀರ್ತಿ ಪಡೆಯಬೇಕು" ಎಂದು ಉಪದೇಶಿಸಿ ಶುಕನಾಸನು ಸುಮ್ಮನಾದನು.

ಶುಕನಾಸನ ಮುಖದಿಂದ ಈ ಉಪದೇಶವನ್ನು ಕೇಳಿ ಚಂದ್ರಾಪೀಡನು ಪ್ರಸನ್ನ ಹೃದಯನಾಗಿ ತನ್ನ ಅರಮನೆಗೆ ಬಂದನು. ಮುಂದೆ ಒಂದು ಶುಭ ದಿವಸ ಅರಸನು ಯಾವತ್ತು ಮಾಂಡಲಿಕ ಭೂಪಾಲರನ್ನೂ, ವಜೀರ ಉಮರಾವರನ್ನೂ ಕೂಡಿಸಿ, ಶುಕನಾಸ ಮುಂತಾದ ಮಂತ್ರಿಗಳಿಂದ ಸರ್ವಸಮಾರಂಭವನ್ನು ನೆರವೇರಿಸಿ ತಾನು ಸ್ವತಃ ಅಭಿಷೇಕ ಕಲಶವನ್ನು ತಕ್ಕೊಂಡು ವೇದ ಶಾಸ್ತ್ರೋಕ್ತ ಪ್ರಕಾರ ಚಂದ್ರಾಪೀಡನಿಗೆ ಯೌವರಾಜ್ಯಾಭಿಷೇಕ ಮಾಡಿದನು. ಆಗ ಮೇರುಪರ್ವತದ ಶಿಖರದ ಮೇಲೆ ಪೌರ್ಣಿಮಾಚಂದ್ರನು ಶೋಭಿಸುವಂತೆ ಕಾಂಚನಮಯವಾದ ಸಿಂಹಾಸನದ ಮೇಲೆ ಪೃಥ್ವೀಪತಿಯಾದ ಚಂದ್ರಾಪೀಡನು ಸರ್ವರಿಗೂ ಕಂಗೊಳಿಸಿದನು. ಊರತುಂಬ ಜಯ ಜಯ ಧ್ವನಿಯಾಯಿತು. ಪುರಜನರು ಪೂರ್ವದಲ್ಲಿಯೇ ಮನೆಮನೆಗೆ ಗುಡಿ ತೋರಣಗಳನ್ನು ನಿಲ್ಲಿಸಿ ಬೀದಿಬೀದಿಗೆ ಕುಂಕುಮೋದಕದ ತಳಿಗೊಟ್ಟಿದ್ದರು. ಈ ಮೇರೆಗೆ ಹಲವು ದಿನ ಆನಂದೋತ್ಸಾಹಗಳಾದ ಬಳಿಕ ಚಂದ್ರಾಪೀಡನು ರಾಜಾಜ್ಞೆಯಿಂದ ಚತುರಂಗ ಸೇನೆಸಹಿತ ವೈಶಂಪಾಯನನನ್ನು ಸಂಗಡ ಕರಕೊಂಡು, ಯಾವತ್ತು ಅರಸರಿಂದ ಕಪ್ಪಕಾಣಿಕೆ ತಕ್ಕೊಂಡು ಬರಬೇಕೆಂದು ಉಜ್ಜಯಿನೀ ಪಟ್ಟಣದಿಂದ ಹೊರಟನು. ಮುಂದೆ ಆತನು ಕ್ರಮದಿಂದ ಮೂಡ, ತೆಂಕ, ಪಡುವ, ಬಡಗ ದಿಕ್ಕುಗಳಲ್ಲಿ ಮಲೆತು ನಿಂತ ಅರಸರನ್ನು ಜಯಿಸಿ, ಅವರಿಂದ ಕಪ್ಪಕಾಣಿಕೆಗಳನ್ನು ತಕ್ಕೊಳ್ಳುತ್ತ ಮೂರು ವರ್ಷದೊಳಗೆ

ಪೃಥ್ವೀಪ್ರದಕ್ಷಿಣೆ ಮಾಡಿ, ಕೈಲಾಸಪರ್ವತದ ಹತ್ತರ ಹೇಮಜಟನೆಂಬ ಕಿರಾತನಾಳುವ ಸುವರ್ಣಪುರಕ್ಕೆ ಬಂದು, ಅದನ್ನು ಕೈವಶ ಮಾಡಿಕೊಂಡು, ತನ್ನ ದಣಿದ ದಂಡಿಗೆ ವಿಶ್ರಾಂತಿಯಾಗಲೆಂದು ಅಲ್ಲಿಯೇ ಬಿಡಾರಗೊಟ್ಟು, ಕೆಲವು ದಿನ ನಿಂತುಕೊಂಡನು.

ಅಲ್ಲಿ ದಂಡು ಇಳಿದಾಗ ಒಂದು ದಿವಸ ಚಂದ್ರಾಪೀಡನು ಬೇಟೆಯಾಡಹೊರಟು, ಹೋಗಹೋಗುತ್ತ ಕಾನನದೊಳಗೆ ಕಿನ್ನರ ದಂಪತಿಗಳನ್ನು ಕಂಡು ಸೋಜಿಗಗೊಂಡು, ಅವುಗಳನ್ನು ಹಿಡಿಯಬೇಕೆಂಬ ಲವಲವಿಕೆಯಿಂದ ಅವುಗಳ ಹತ್ತಿರ ಹೋದನು. ಚಂದ್ರಾಪೀಡನನ್ನು ನೋಡಿದ ಕೂಡಲೆ ಆ ಕಿನ್ನರ ಮಿಥುನಗಳು ಓಡಹತ್ತಿದವು. ಚಂದ್ರಾಪೀಡನು ತನ್ನ ಇಂದ್ರಾಯುಧವನ್ನು ಅತಿ ತ್ವರೆಯಿಂದ ಓಡಿಸಿ, "ಇಕೋ ಈಗ ಸಿಗುತ್ತವೆ, ಇಕೋ ಹಿಡಿದೆ," ಎಂಬ ಆಶೆಯಿಂದ ಅವುಗಳ ಬೆನ್ನು ಹತ್ತಿ ತನ್ನ ದಂಡು ಬಿಟ್ಟು ಒಂದೆರಡು ಗಳಿಗೆಯೊಳಗೇ ಐವತ್ತು ಗಾವುದ ದೂರ ಹೋದನು. ಅಷ್ಟರೊಳಗೆ ಆ ಕಿನ್ನರ ದಂಪತಿಗಳು ಕೈಯೊಳಗಿಂದ ಪಾರಾಗಿ ಎದುರಿಗಿದ್ದ ಒಂದು ಬಹು ಎತ್ತರವಾದ ಶಿಖರದ ಮೇಲೆ ಏರಿ ಹೋದವು. ಅದನ್ನು ಕಂಡು ಚಂದ್ರಾಪೀಡನು ಕುದುರೆಯನ್ನು ನಿಲ್ಲಿಸಿ ಮನದೊಳಗೆ— ಇನ್ನು ಮೇಲೆ ಇವು ನನ್ನ ಕೈವಶವಾಗುವ ಯತ್ನ ಮೀರಿತು; ವಿಚಾರಗೆಟ್ಟು ವ್ಯರ್ಥವಾಗಿ ಇವುಗಳ ಬೆನ್ನುಹತ್ತಿ ಬಂದೆನು! ನನ್ನಿಂದ ಮೂರ್ಖತನವಾಯಿತು! ಈ ಕಿನ್ನರ ದಂಪತಿಗಳು ನನಗೆ ಯಾತಕ್ಕೆ ಬೇಕಾಗಿದ್ದವು? ಇವು ಸಿಕ್ಕಿದ್ದರೂ ಅಷ್ಟೇ ಸಿಗದೆ ಹೋಗಿದ್ದರೂ ಅಷ್ಟೇ! ಇಂಥ ನಿಷ್ಫಲವಾದ ಕೆಲಸಕ್ಕೆ ಮನಸ್ಸು ಹಾಕಿ ದಂಡು ಬಿಟ್ಟು ಈ ದಟ್ಟವಾದ ಘೋರಾರಣ್ಯದೊಳಗೆ ಮೋಸಗೊಂಡು ಇಷ್ಟು ದೂರ ಬಂದೆನು; ಸುವರ್ಣಪುರವೆತ್ತ ಉಳಿಯಿತೋ ನಾನೆತ್ತ ಬಂದೆನೋ ನನ್ನದು ನನಗೇ ತಿಳಿಯದ ಹಾಗಾಯಿತು! ಇನ್ನು ಈ ಕಟ್ಟಡವಿಯೊಳಗೆ ದಾರಿಯ ತೋರಿಸುವವರು ಯಾರು? ಶಿವಶಿವಾ ಎಂಥ ದಡ್ಡತನವಾಯಿತು! ಈ ಪೃಥ್ವಿಯ ಬಡಗಣ ಮೇರೆಯಲ್ಲಿ ಸುವರ್ಣಪುರವುಂಟೆಂತಲೂ, ಅಲ್ಲಿಂದ ಮುಂದೆ ಒಂದು ನಿರ್ಮಾನುಷವಾದ ಅರಣ್ಯವು ಹತ್ತುತ್ತದೆಂತಲೂ ಅದರ ಆಚೆಗೆ ಕೈಲಾಸಪರ್ವತವುಂಟೆಂತಲೂ ಹೇಳುತ್ತಾರೆ; ಇದೇ ಕೈಲಾಸಪರ್ವತವೋ ಏನೋ! ಇನ್ನು ನಾನು ದಕ್ಷಿಣಕ್ಕೆ ತಿರುಗಿ ನೆಟ್ಟಗೇ ಹೋಗತಕ್ಕದ್ದು. "ತನ್ನ ಮೂರ್ಖತನದ ಫಲವನ್ನು ತಾನೇ ಅನುಭೋಗಿಸಬೇಕು" ಎಂದು ಚಿಂತಿಸಿ ಎಡಗೈಯಿಂದ ಕಡಿವಾಣ ಜಗ್ಗಿ ಕುದುರೆಯನ್ನು ತಿರುಗಿಸಿ, ಮರಳಿ ಮನದೊಳಗೆ— ಮಧ್ಯಾಹ್ನವಾಯಿತು, ಬಿಸಿಲೇರಿ ನೆಲ ಕಾಯಿತು, ಕುದುರೆಯು ದಣಿಯಿತು, ಇದಕ್ಕೆ ಮೇವು ತಿನಿಸಿ ನೀರು ಕುಡಿಸಿ, ತಾನೂ ದಣುವಾರಿಸಿಕೊಳ್ಳಬೇಕು—ಎಂದು ಆಲೋಚಿಸಿ, ಸುತ್ತುಮುತ್ತ ನೋಡುವಷ್ಟರಲ್ಲಿ ಕೆರೆಯೊಳಗೆ ಕ್ರೀಡಿಸಿ ಅದೇ ಹೋದ ಕಾಡಾನೆಗಳ ಹೆಜ್ಜೆಗಳನ್ನೂ, ಆ ಆನೆಗಳು ಸೊಂಡಿಲಿಂದ ಬೇರು ಸಹಿತ ಕಿತ್ತು ಕಿತ್ತು ಚೆಲ್ಲಿ ತುಳಿದಾಡಿದ ತಾವರೆಗಳನ್ನೂ, ಆ ರಸದಿಂದ ತೊಯ್ದು ನೆನೆದ ನೆಲವನ್ನೂ, ಎಡಬಲ ಪ್ರದೇಶಗಳಲ್ಲಿ ಹುಟ್ಟಿದ ಎಳೆಯ ಹುಲ್ಲನ್ನೂ, ಸುವಾಸನೆಗೆ ಸೊಕ್ಕಿದ ತುಂಬಿಗಳು ಮೊರೆದೆರಗುವ ಹೂಗೊಂಚಲುಗಳನ್ನೂ, ದಾರಿಗುಂಟ ಬಿದ್ದ ಮೆಲ್ಲೆಲೆಗಳನ್ನೂ, ಕಾಡಾನೆಗಳ ಕಿವಿಯೊಳಗಿಂದ ಸೋರಿದ ಸುಗಂಧದಿಂದ ನೆನೆದು ಸುಗಂಧಮಯವಾದ ಮಾರ್ಗವನ್ನೂ ನೋಡಿ, ಸಮೀಪದಲ್ಲಿಯೇ

ಸರೋವರವಿದ್ದೀತೆಂದು ಮನದೊಳಗೆಣಿಸಿ ಚಂದ್ರಾಪೀಡನು ಅದೇ ಮಾರ್ಗ ಹಿಡಿದು ಹೋಗಲು—ಅಲ್ಲಲ್ಲಿಗೆ ಹಲವು ತರದ ಕಲ್ಲುಗಳು ಬಿದ್ದಿದ್ದವು; ಅವುಗಳ ಮೇಲೆಲ್ಲ ಪಾಷಾಣಭೇದಿ ಎಂಬ ಬಳ್ಳಿಗಳು ಚಲ್ಲವರಿದು ಹಬ್ಬಿದ್ದವು; ಶಿಲಾಜಿತುವೃಕ್ಷಗಳ ರಸದಿಂದಲೂ, ಗುಗ್ಗುಳ ಗಿಡಗಳ ರಸದಿಂದಲೂ ತೊಯ್ದು ಅಲ್ಲಿಯ ಕಲ್ಲುಗಳು ಎಣ್ಣೆ ಮಜ್ಜನ ಮಾಡಿದಂತೆ ಕಂಗೊಳಿಸುತ್ತಿರುವವು. ಮಳಲ ಮಾರ್ಗದಲ್ಲೆಲ್ಲ ಕಸ್ತೂರೀಮೃಗಗಳ ಹೆಜ್ಜೆಗಳೂ, ಕಾಡಾಕಳ ಹೆಜ್ಜೆಗಳೂ ಮೂಡಿರುವವು; ಕಾಡಮಿಕಗಳು ಕೆದರಿದ ಅರದಾಳದ ಪುಡಿಯು ಬಿದ್ದ ಮಾರ್ಗವು ಹೊಂಬಣ್ಣದಿಂದ ಒಪ್ಪುತ್ತಿರುವದು; ಕೆಲವೆಡೆಯಲ್ಲಿ ಗಂಧಕದ ಉಗ್ರವಾಸನೆಯು ಬರುತ್ತಿರುವದು; ಕೆಲವು ಗವಿಗಳೊಳಗೆ ವನಮನುಷ್ಯರು ಕುಳಿತಿರುವರು; ಬಿಕ್ಕಟ್ಟಿನ ಸ್ಥಳಗಳಲ್ಲಿ ಜೀವಜ್ಜೀವಕ ಪಕ್ಷಿಗಳು ಧ್ವನಿ ಮಾಡುತ್ತಿದ್ದವು; ಕೆಲವೆಡೆಗಳಲ್ಲಿ ಬೆತ್ತದ ಮೆಳೆಗಳೂ, ಬಿದಿರ ಮೆಳೆಗಳೂ, ಗಿಡದ ಗುಂಪುಗಳೂ 'ಜಿರ್' ಅನ್ನುತ್ತಿರುವವು. ಇಂಥ ಅಭಿನಂದನೀಯವಾದ ಕೈಲಾಸಪರ್ವತದ ಈಶಾನ್ಯದಿಕ್ಕಿನ ಕಾಲುದಾರಿಯ ಹಿಡಿದು ಆ ಗಿಡದ ಗುಂಪಿನೊಳಗೆ ಹೋಗಲು, ಹೂಗೊಳದ ನೀರಮೇಲಿಂದ ಹಾಯ್ದು ಮಂದವಾದ ತಂಗಾಳಿಯು ಹೂವುಗಳೊಳಗಿನ ತನಿಗಂಪು ತಂದು, ಮೆಲ್ಲಗೆ ಮೈಗೆ ಸೋಂಕಿ, ಮೂಗಿಗೆ ಸುಗಂಧವನ್ನು ಬೀರಿ, ಮನಸ್ಸಿಗೆ ಆಹ್ಲಾದಗೊಳಿಸಿ ಸುಳಿಯಿತು; ಅರಳಿದ ತಾವರೆಗಳೊಳಗಿನ ಮಕರಂದರಸವನ್ನು ಕುಡಿದು ಮತ್ತವಾದ ಮರಾಳಪಕ್ಷಿಗಳ ಕಿಲಕಿಲಾಟವು ಕಿವಿಗೆ ಬಿತ್ತು. ಈ ಮೇರೆಗೆ ಮನೋಹರವಾದ ಬನದೊಳಗಿಂದ ಮುಂದಕ್ಕೆ ಹೋಗಲು, ತ್ರೈಲೋಕ್ಯ ಲಕ್ಷ್ಮಿಯು ತನ್ನ ಸೌಂದರ್ಯವನ್ನು ನೋಡಿಕೊಳ್ಳುವದಕ್ಕೆ ಮಾಡಿಟ್ಟ ಕನ್ನಡಿಯೋ: ಭೂದೇವಿಯು ಕ್ರೀಡಿಸುವದಕ್ಕೆ ನಿರ್ಮಾಣ ಮಾಡಿದ ಸ್ಫಟಿಕದ ನೆಲಮನೆಯೋ; ಮಹಾಸಾಗರಗಳ ಉಗಮಸ್ಥಾನವೋ; ಉದಕದ ಅವತಾರವನ್ನು ತಾಳಿ ನೆಲಕ್ಕಿಳಿದ ಆಕಾಶವೋ; ಕರಗಿ ಮಡುಗಟ್ಟಿದ ಚಳಿ ಬೆಟ್ಟವೋ; ಒಬ್ಬುಳಿಗೂಡಿ ಸರೋವರದ ರೂಪ ತಾಳಿದ ತ್ರಿಭುವನದ ಪುಣ್ಯರಾಶಿಯೋ ಏನೋ ಅನ್ನುವ ಹಾಗೆ ತುಂಬಿ ತುಳುಕುವಂಥ ವಿಸ್ತೀರ್ಣವಾದದ್ದೊಂದು ನೆಲೆಯಿಲ್ಲದ ತಂಗೊಳವು ಅತಿ ರಮಣೀಯವಾಗಿ ಕಂಗೊಳಿಸಿತು. ಆ ಸರೋವರದ ನೀರು ಅತಿ ಸ್ವಚ್ಛವಿದ್ದುದರಿಂದ ತಳದೊಳಗಿನ ವಸ್ತುಗಳೆಲ್ಲ ಸ್ಪಷ್ಟವಾಗಿ ಕಾಣಿಸುತ್ತಿರುವವು. ಇದೇ ಕಾರಣದಿಂದ ಅದಕ್ಕೆ ಅಚ್ಛೋದಸರೋವರವೆಂಬ ಹೆಸರು ಪ್ರಾಪ್ತವಾಗಿತ್ತು. ಗಾಳಿಯ ಹೊಡೆತಕ್ಕೇಳುವ ತೆರೆಗಳಿಂದ ಸಿಡಿವ ನೀರ್ವನಿಗಳೊಳಗೆ ಸೂರ್ಯನ ಕಿರಣಗಳು ಪ್ರತಿಬಿಂಬಿಸಿ ಇಂದ್ರಧನುಷ್ಯದ ಶೋಭೆಯನ್ನುಂಟುಮಾಡುತ್ತಿರುವವು. ಇದರ ದಡದಲ್ಲಿ ಕಡುದಟ್ಟವಾಗಿ ಬೆಳೆದ ತಮಾಲವೃಕ್ಷಗಳ ನೀಲಚ್ಛವಿಯನ್ನು ನಿರೀಕ್ಷಿಸಿ, ಇರುಳೆಂದು ಮರುಳುಗೊಂಡು ಚಕ್ರವಾಕಪಕ್ಷಿಗಳು ಹಗಲೇ ವಿಯೋಗದುಃಖವನ್ನು ಅನುಭೋಗಿಸುವವು. ಎಷ್ಟು ಬಣ್ಣಿಸಿದರೂ ಈ ಸರೋವರದ ಮಹಿಮೆ ತೀರದು! ಇದರಲ್ಲಿ ವಾಲಖಿಲ್ಯ ಋಷಿಗಳು ಅನೇಕ ಸಾರೆ ಸಂಧ್ಯೋಪಾಸನೆ ಮಾಡಿದ್ದಾರೆ' ಸಾವಿತ್ರಿಯು ಎಷ್ಟೋ ಸಾರೆ ಇದರೊಳಗಿನ ಕಮಲಗಳನ್ನು ದೇವತಾರ್ಚನೆಗೆ ಎತ್ತಿಕೊಂಡು ಒಯ್ದಿದ್ದಾಳೆ; ಪಾರ್ವತೀ-ಪರಮೇಶ್ವರರ ಸ್ನಾನದಿಂದಲೂ, ಸಪ್ತಋಷಿಗಳ ಅಘಮರ್ಷಣದಿಂದಲೂ ಇದರೊಳಗಿನ ಉದಕವು ಪವಿತ್ರವಾಗಿದೆ. ಇಂದ್ರನ ಐರಾವತವೂ, ಯಮನ ಕೋಣವೂ ಇದರ ದಂಡೆಯ ಮೇಲೆ ಯಾವಾಗಲೂ ವಿನೋದಿಸುತ್ತವೆ. ಎಷ್ಟೆಂದು ಇದರ

ಸೌಂದರ್ಯವನ್ನು ವರ್ಣಿಸಲಿ! ನೋಡಿದತ್ತೆಲ್ಲ ಕೆಂದಾವರೆ, ಹೊಂದಾವರೆ, ಬೆಳ್ದಾವರೆಗಳು ವಿಕಸಿತವಾಗಿ ಶೋಭಿಸುತ್ತವೆ; ಅವುಗಳ ಮಕರಂದಕ್ಕೆ ಭ್ರಮರಗಳೆರಗಿ ಝೇಂಕಾರ ಸ್ವರ ಮಾಡುತ್ತವೆ; ನಡುನೀರೊಳಗೆ ದೊಡ್ಡ ದೊಡ್ಡ ಮೊಸಳೆಗಳೂ, ಆಮೆಗಳೂ, ಮೀನುಗಳೂ ಆನಂದದಿಂದ ಆಡುತ್ತವೆ; ದಂಡೆಯ ಮೇಲೆ ಹಲವು ತರದ ಹೂವಿನ ಗೊಂಚಲುಗಳು ಒಪ್ಪುತ್ತವೆ; ಕ್ರೌಂಚಪಕ್ಷಿಗಳು ಕಿಲಿಕಿಲಿಸುತ್ತವೆ; ನವಿಲುಗಳು ನರ್ತಿಸುತ್ತವೆ; ಮರಗಳ ಟೊಂಗೆಗಳ ಮೇಲಿಂದ ಮಂಗಗಳು ನೀರಮಡುಗಳೊಳಗೆ ಧಡಧಡನೆ ಹಾರುತ್ತವೆ. ನೀರು ಕುಡಿಯಬಂದ ವನ್ಯ ಮೃಗಗಳು ಭೋರ್ಗರೆಯುತ್ತವೆ; ಇದನ್ನೆಲ್ಲ ಕಣ್ಣಾರೆ ನೋಡಿದರೆ, ಕಿವಿ ಮುಟ್ಟಿ ಕೇಳಿದರೆ ಮನಸ್ಸಿಗೆ ಆಹ್ಲಾದವೂ ಅಂಜಿಕೆಯೂ ಒಮ್ಮೆಲೆ ಉಂಟಾಗುವವು. ಇಂಥ ಅಚ್ಛೋದ ಸರೋವರವನ್ನು ನೋಡಿದ ಕೂಡಲೆ ದಣಿದ ಶ್ರಮವು ಪರಿಹಾರವಾಗಿ ಚಂದ್ರಾಪೀಡನು ಆನಂದಭರಿತನಾಗಿ ಮನದೊಳಗೆ— "ಆ ಕಿನ್ನರ ಮಿಥುನಗಳ ಬೆನ್ನು ಹತ್ತಿದ್ದು ನಿರರ್ಥಕವಾದರೂ ಈ ಸರೋವರಕ್ಕೆ ನಾನು ಬಂದದ್ದೊಂದು ಸಾರ್ಥಕವಾಯಿತು. ಈ ತಂಗೊಳವನ್ನು ನೋಡಿದ್ದರಿಂದ ನನ್ನ ಕಣ್ಣುಗಳ ಪುಣ್ಯವು ಇಂದಿಗೆ ಸಫಲವಾಯಿತು. ಅಹಹಾ ಎಂಥ ಮನೋಹಾರಕವಿದು!" ಎಂದು ಚಂದ್ರಾಪೀಡನು ಆ ಸರೋವರದ ಸಮೀಪಕ್ಕೆ ಹೋಗಿ, ಅದರ ದಕ್ಷಿಣ ತಟಾಕದ ಮೇಲೆ ಕುದುರೆಯಿಳಿದು, ಅದರ ಬೆನ್ನ ಮೇಲಿನ ಹಲ್ಲಣ ತೆಗೆದು ಆ ಇಂದ್ರಾಯುಧವನ್ನು ಸರೋವರದೊಳಗೆ ಒಯ್ದು ಸ್ವಚ್ಛವಾಗಿ ಮೈದೊಳೆದು, ನೀರು ಕುಡಿಸಿ, ಮೇಲೆ ತಂದು ಒಂದು ಗಿಡಕ್ಕೆ ಕಟ್ಟಿ, ಸುತ್ತು ಮುತ್ತು ಹುಟ್ಟಿದ ಎಳೆಯೆಳೆ ಕರಿಕೆಯನ್ನು ಕಿತ್ತು ಅದರ ಮುಂದೆ ಹಾಕಿ ತಾನೂ ಆ ಸರೋವರದೊಳಗಿಳಿದು ಸ್ನಾನ ಮಾಡಿ, ನೀರು ಕುಡಿದು ಒಳಗಿನ ಕೆಲವು ಕಮಲ ಪುಷ್ಪಗಳನ್ನು ಕೈಯೊಳಗೆ ಹಿಡಿದುಕೊಂಡು ಮೇಲೆ ಬಂದು, ಒಂದು ಗಿಡದ ನೆಳಲಿಗೆ ಕುಳಿತುಕೊಂಡು ಆ ಸರೋವರವನ್ನು ನೋಡುತ್ತ ಮನದೊಳಗೆ—"ಅಹಹಾ ಎಂಥ ರಮಣೀಯ ಸರೋವರವಿದು! ಎಷ್ಟು ಸಂತೋಷದಾಯಕವಿದು! ಈ ತಂಗೊಳದ ನೈರ್ಮಲ್ಯಕ್ಕೆ ನನ್ನ ಕಣ್ಣುಗಳು ಇಲ್ಲಿಯೇ ಕೀಲಿಸುತ್ತವೆ; ಕಾವೇರಿದ ನನ್ನ ಮೈಯೆಲ್ಲ ಇದರ ಸಂಪರ್ಕಸುಖದಿಂದ ತಂಪಾಯಿತು. ಹಂಸಪಕ್ಷಿಗಳ ಕೂಜಿತಧ್ವನಿಯು ಕಿವಿಗೆ ಇಂಪಾಯಿತು; ಈ ಉದಕದ ಸ್ವಾದವೆಷ್ಟೆಂದು ಹೇಳಲಿ! ಎಷ್ಟು ಕುಡಿದರೂ ಸಾಕಾಗದು" ಎಂದು ಒಂದೆರಡು ಗಳಿಗೆ ವಿಶ್ರಮಿಸುವಷ್ಟರಲ್ಲಿ ಆ ಸರೋವರದ ಉತ್ತರ ದಿಕ್ಕಿನಲ್ಲಿ ಸ್ವಲ್ಪ ದೂರದಿಂದ ಗಾಯನದ ಸುಸ್ವರವು ಕೇಳಬಂತು. ನೋಡುತ್ತಾನೆ, ಇಂದ್ರಾಯುಧವು ಹುಲ್ಲು ತಿನ್ನುವದನ್ನು ಬಿಟ್ಟು, ಕಿವಿ ನಿಗರಿಸಿಕೊಂಡು ಆ ಗಾಯನದ ಮಧುರಸ್ವರವು ಬರುವತ್ತ ಮೋರೆಮಾಡಿ ಮನಸ್ಸುಗೊಟ್ಟು ಧ್ವನಿಯನ್ನು ಆಲಿಸುತ್ತ ನಿಂತಿದೆ. ಮನುಷ್ಯರ ಸಂಚಾರವಿಲ್ಲದಂಥ ಈ ಪ್ರದೇಶದಲ್ಲಿ ಯಾರು ಹಾಡುತ್ತಾರೋ ಎಂದು ಕೌತುಕದಿಂದ ಚಂದ್ರಾಪೀಡನು ಎದ್ದು ಆ ಗಾಯನದ ಸ್ವರವು ಬರುವತ್ತ ಹುಬ್ಬುಗೈಹಚ್ಚಿ ನೋಡಿದನು. ಆದರೆ ಆ ಧ್ವನಿಯ ಉತ್ಪತ್ತಿ ಸ್ಥಾನವು ಆತನಿಗೆ ಕಾಣಿಸಲಿಲ್ಲ. ಅದನ್ನು ಗೊತ್ತುಹಚ್ಚಬೇಕೆಂದು ಚಂದ್ರಾಪೀಡನು ಇಂದ್ರಾಯುಧದ ಮೇಲೆ ಕುಳಿತುಕೊಂಡು ಆ ಸರೋವರದ ಪಡುವಣ ಪ್ರದೇಶದ ಸಪ್ತಪರ್ಣ, ಕದಳಿ, ಬಕುಳ, ಲವಂಗ, ತಾಳ, ಹಿಂತಾಳ, ನಾರಿಕೇಳ, ತಮಾಲತರುಗಳ ಬನಗಳೊಳಗಿಂದ

ಹಾಯ್ದು ಆ ಗಾಯನದ ಸ್ವರವು ಬರುವತ್ತ ನಡೆದನು. ಮುಂದೆ ಹೋಗಹೋಗುತ್ತ ಚಂದ್ರಪ್ರಭೆ ಎಂಬ ಪ್ರದೇಶದ ಮುಂಭಾಗದಲ್ಲಿ ಒಂದು ಭವ್ಯವಾದ ಸ್ಫಟಿಕದ ಶಿವಾಲಯವನ್ನು ಕಂಡನು. ಅದರೊಳಗೆ ನಾಲ್ಕೂ ದಿಕ್ಕಿಗೂ ನಾಲ್ಕು ಶಿವಮೂರ್ತಿಗಳಿದ್ದು, ಅವುಗಳೊಳಗಿನ ದಕ್ಷಿಣ ದಿಕ್ಕಿನ ಮೂರ್ತಿಯ ಮುಂದೆ ಹದಿನೆಂಟು ವರ್ಷದ ಹರೆಯದ ಸುಂದರ ಕನ್ನಿಕೆಯೊಬ್ಬಳು ಬ್ರಹ್ಮಾಸನ ಹಾಕಿಕೊಂಡು, ಮೈಗೆಲ್ಲ ಭಸ್ಮವನ್ನು ಲೇಪಿಸಿಕೊಂಡು ಕೊರಳೊಳಗೆ ರುದ್ರಾಕ್ಷಮಾಲೆಯನ್ನು ಧರಿಸಿಕೊಂಡು, ಮಂದಾಕಿನಿಯೊಳಗಿನ ಇಂದೀವರಗಳಿಂದ ಪರಮೇಶ್ವರನನ್ನು ಪೂಜಿಸಿ, ತೊಡೆಯ ಮೇಲೆ ವೀಣೆಯನ್ನಿಟ್ಟುಕೊಂಡು ಶ್ರುತಿಗೊಳಿಸಿ, ಕೊರಳು ಬೆರಳು ಸಂಚುಗೂಡಿ ಪಂಚಮದಿಂಚರದೊಡನೆ ಪ್ರಭುವಿನ ಮಹಿಮೆಗಳನ್ನು ಹಾಡುತ್ತ ಆ ಜಗನ್ನಿಯಂತ್ರನ ಧ್ಯಾನದಲ್ಲಿ ತತ್ಪರಳಾಗಿದ್ದಳು. ಚಂದ್ರಾಪೀಡನು ಇದನ್ನು ನೋಡಿ ಕುದುರೆಯಿಂದಿಳಿದು ಭಕ್ತಿಭಾವದಿಂದ ಶಿವಮೂರ್ತಿಗೆ ಶಿರಬಾಗಿ ದಂಡಪ್ರಣಾಮಂಗೈದು, ಆ ಕನ್ನಿಕೆಯನ್ನು ಕಣ್ಣೆವೆ ಹಳಚದೆ ದಿಟ್ಟಿಸಿ ನೋಡುತ್ತ ನಿಂತುಕೊಂಡು, ಅವಳ ಸೌಂದರ್ಯಕ್ಕೂ ತಪಃಪ್ರಭೆಗೂ ವಿಸ್ಮಿತನಾಗಿ ಮನದೊಳಗೆ— “ಈ ಜಗತ್ತಿನಲ್ಲಿ ಪ್ರಾಣಿಮಾತ್ರಕ್ಕೆ ಯಾವಾಗ ಏನು ಬಂದೀತೆಂಬುವದು ನಿಯಮದ್ದಲ್ಲ. ಬೇಟೆಯಾಡಲಿಕ್ಕೆಂದು ನಾನು ಹೊರಟು ಕಿನ್ನರ ದಂಪತಿಗಳನ್ನು ಕಂಡೆನು. ಅವುಗಳ ಬೆನ್ನುಹತ್ತಿ ಈ ನಿರ್ಮಾನುಷ ಪ್ರದೇಶಕ್ಕೆ ಬಂದೆನು. ಇಲ್ಲಿ ತೃಷ್ಣೆಯಿಂದ ಬಳಲಿ ಬಾಯಾರಿ ನೀರು ಹುಡುಕುವದರೊಳಗೆ ಸಿದ್ಧ ಪುರುಷರಿಂದ ಸೇವ್ಯವಾದ ಅಚ್ಛೋದ ಸರೋವರವನ್ನು ಕಂಡೆನು. ಅದರ ದಂಡೆಯ ಮೇಲೆ ದಣುವಾರಿಸಿಕೊಳ್ಳಬೇಕೆಂದು ಕುಳಿತಾಗ ಈ ಮಧುರಗಾಯನಧ್ವನಿಯು ಕಿವಿಗೆ ಬಿತ್ತು. ಈ ಸ್ವರವು ಎಲ್ಲಿಂದ ಬರುತ್ತದೋ ಎಂದು ಶೋಧಿಸುತ್ತಿರಲಾಗಿ, ಮಾನವರು ದರ್ಶನ ತಕ್ಕೊಂಡೇವೆಂದರೆ ದುರ್ಲಭಳಾದ ಈ ಕನ್ನಿಕೆಯು ಕಂಗೊಳಿಸಿದಳು. ಕಾಯಕಾಂತಿಯನ್ನು ನೋಡುತ್ತಿರಲಾಗಿ, ಇವಳು ದೇವಕನ್ನಿಕೆ ಇರಬಹುದಾಗಿ ತೋರುತ್ತಾಳೆ. ಮರ್ತ್ಯಲೋಕದವರಿಗೆ ಇಂಥ ಗಾಯನವೆಲ್ಲಿಯದು!” ಎಂದು ಆಲೋಚಿಸುತ್ತ ಚಂದ್ರಾಪೀಡನು ಅದೇ ಶಿವಾಲಯದೊಳಗೆ ಹೊಕ್ಕು ಒಂದು ಕಂಬದ ಹತ್ತರ ಆಕೆಯ ಗಾಯನ ಮುಗಿಯುವ ಮಾರ್ಗ ನಿರೀಕ್ಷಿಸುತ್ತ ಕುಳಿತುಕೊಂಡನು. ಗಾಯನ ಮುಗಿದ ಬಳಿಕ ಆಕೆ ಎದ್ದು ದೇವರಿಗೆ ಪ್ರದಕ್ಷಿಣೆ ನಮಸ್ಕಾರಗಳನ್ನು ಮಾಡಿ, ಚಂದ್ರಾಪೀಡನನ್ನು ನೋಡಿ— “ಸ್ವಾಮಿಾ,ಇಂಥ ಅಮಾನುಷ ಸ್ಥಳಕ್ಕೆ ತಾವು ಏನು ಕಾರಣ ಬಂದಿರಿ? ನನ್ನ ಸಂಗಡ ಬರಬೇಕು. ನಾನು ಮಾಡುವ ಆತಿಥ್ಯಸತ್ಕಾರವನ್ನು ದಯಮಾಡಿ ಅಂಗೀಕರಿಸಬೇಕು” ಎಂದಳು. ಈ ವಿನಯೋಕ್ತಿಗಳನ್ನು ಕೇಳಿ ಚಂದ್ರಾಪೀಡನು ಪರಮಹರ್ಷಿತನಾಗಿ ಎದ್ದು ಭಕ್ತಿಯಿಂದ ಆಕೆಗೆ ನಮಿಸಿ — “ಒಳ್ಳೇದು ತಾಯೀ, ಮಹಾಪ್ರಸಾದ” ಎಂದು ಆಕೆಯ ಹಿಂದಿನಿಂದ ಒಂದು ಗವಿಗೆ ಹೋದನು, ಆ ಗವಿಯಲ್ಲಿ ಆಕೆ ತನ್ನ ವಲ್ಕಲದ ಹಾಸಿಗೆಯ ಹತ್ತಿರ ಕೈಯೊಳಗಿನ ವೀಣೆಯನ್ನಿಟ್ಟು, ನೆರೆಯಲ್ಲಿ ಹರಿಯುವ ಝುರಿಯೊಳಗಿನ ನೀರನ್ನು ತಾವರೆಯೆಲೆಯ ದೊನ್ನೆಯೊಳಗೆ ತುಂಬಿಕೊಂಡು ಬಂದು ಚಂದ್ರಾಪೀಡನು ಕುಳಿತ ಹಾಸುಗಲ್ಲಿನ ಮೇಲೆ ಆತನ ಮುಂದೆ ಇಟ್ಟು, ಆ ಗುಡಿಯ ಪೌಳಿಯೊಳಗಿನ ಗಿಡಗಳ ಬುಡಕ್ಕೆ ಹೋಗಿ ಭಿಕ್ಷಾಪಾತ್ರೆಯನ್ನು ಒಡ್ಡಿದ ಕೂಡಲೆ, ಗಿಡಗಳ ತುದಿಯಿಂದ ಹಣ್ಣುಗಳು

ತಮ್ಮಿಂದ ತಾವೇ ಬೇಕಾದಷ್ಟು ಆ ಪಾತ್ರೆಯೊಳಗೆ ಬಿದ್ದವು. ಅವುಗಳನ್ನು ತಂದು ಚಂದ್ರಾಪೀಡನ ಮುಂದೆ ಆದರದಿಂದಿಟ್ಟು — "ಸ್ವಾಮೀ ಕ್ಷುಧೆಯಿಂದ ತಾವು ಬಹಳ ಬಳಲಿದ್ದೀರಿ, ಇವುಗಳನ್ನು ಸೇವಿಸಬೇಕು" ಎಂದು ಆಗ್ರಹ ಮಾಡಲು ಆತನು — "ತಾಯೀ, ತಮ್ಮ ದರ್ಶನಮಾತ್ರದಿಂದಲೇ ನನ್ನ ಪಾಪಗಳೆಲ್ಲ ಪರಿಹಾರವಾದವು ತಾವು ಕಷ್ಟ ಪಟ್ಟು ನನ್ನ ಮೇಲೆ ಇಷ್ಟು ಅನುಗ್ರಹ ಮಾಡಿದ್ದರಿಂದಂತೂ ನಾನು ಪುನೀತನೇ ಸರಿ" ಎಂದು ವಿನಯದಿಂದ ಹೇಳಿ ಆ ಫಲಗಳನ್ನು ಬಹು ಕೃತಜ್ಞತೆಯಿಂದ ಕೈಕೊಂಡು ಸೇವಿಸಿ, ನೀರು ಕುಡಿದು ಶಾಂತನಾದನು. ಬಳಿಕ ಆ ಕನ್ನಿಕೆಯು ಒಂದು ಹಾಸುಗಲ್ಲಿನ ಮೇಲೆ ಕುಳಿತುಕೊಂಡು —"ಸ್ವಾಮೀ, ತಾವು ಯಾರು? ಇಲ್ಲಿಗೆ ಬಂದ ಕಾರಣವೇನು?" ಎಂದು ಕೇಳಲು ಚಂದ್ರಾಪೀಡನು ದಿಗ್ವಿಜಯಾರ್ಥವಾಗಿ ತಾನು ಹೊರಟಂದಿನಿಂದ ಸಂಭವಿಸಿದ ಸರ್ವ ವೃತ್ತಾಂತವನ್ನು ವಿವರಿಸಿದನು. ಅದನ್ನು ಕೇಳಿ ಆ ಕನ್ನಿಕೆಯು ಝರಿಗೆ ಹೋಗಿ, ಅಲ್ಲಿ ಫಲಮೂಲಗಳನ್ನು ಸೇವಿಸಿ, ತಿರುಗಿ ಬಂದು ಅದೇ ಹಾಸುಗಲ್ಲಿನ ಮೇಲೆ ಕುಳಿತಳು. ಆಗ ಚಂದ್ರಾಪೀಡನು, "ತಾಯೀ, ತಾವು ನನ್ನ ಮೇಲೆ ಇಂದು ಅನುಗ್ರಹ ಮಾಡಿದ್ದರಿಂದಲೂ, ಮಾನವರಾದ ನಮಗೆ ಅಷ್ಟು ವಿವೇಕವಿಲ್ಲದ್ದರಿಂದಲೂ ನಾನು ತಮ್ಮನ್ನು ಒಂದು ಮಾತು ಕೇಳಿಕೊಳ್ಳುತ್ತೇನೆ, ಕ್ಷಮಿಸಬೇಕು. ಒಡೆಯರು ಲೇಶಮಾತ್ರ ಕೃಪೆಮಾಡಿದರೆ ಸಾಕು. ಅಧೀರ ಸ್ವಭಾವದ ಭೃತ್ಯರು ದಿಟ್ಟರಾಗುವರು. ಒಂದೇ ಸ್ಥಳದಲ್ಲಿ ಕ್ಷಣಮಾತ್ರವಾದರೂ ಕೂಡಿಯಿದ್ದರೆ ಸಾಕು, ಗುರುತು ಆಗುತ್ತದೆ. ಸ್ವಲ್ಪ ಸತ್ಕಾರವಾದರೂ, ಅದರಿಂದ ಪ್ರೀತಿ ಹುಟ್ಟುತ್ತದೆ. ನಾನು ಕೇಳುವದರಿಂದ ತಮಗೆ ಖೇದವಾಗದ ಹಾಗಿದ್ದರೆ ದಯಮಾಡಿ ನನ್ನ ಕೌತುಕವನ್ನು ನೆರವೇರಿಸಬೇಕು. ತಾವೇನು ದೇವಕನ್ನಿಕೆಯರೋ, ಋಷಿಕನ್ನಿಕೆಯರೋ? ಇಂಥ ಸುಕುಮಾರ ಸ್ಥಿತಿಯೊಳಗೆ ಈ ಉಗ್ರ ತಪಸ್ಸನ್ನು ಕೈಕೊಂಡ ಕಾರಣವೇನು? ತಾವು ಸ್ವರ್ಗಲೋಕ ಬಿಟ್ಟು, ಈ ನಿರ್ಮಾನುಷಾರಣ್ಯದೊಳಗೆ ಒಬ್ಬರೇ ಇರುವ ಕಾರಣವೇನು? ನಿಮ್ಮ ಮೈಬಣ್ಣವು ಪಂಚಭೂತಾತ್ಮಕ ಪ್ರಾಣಿಗಳ ಕಾಯಕಾಂತಿಯಂತಿರದೆ ಇಷ್ಟು ಬೆಳ್ಳಗೆ ಇರುವ ಬಗೆ ಏನು? ತಮ್ಮ ಸೌಂದರ್ಯ ಸುಕುಮಾರತನಗಳೆತ್ತ! ಈ ಇಂದ್ರಿಯನಿಗ್ರಹ ಶಾಂತಿಗಳೆತ್ತ! ನಿಮ್ಮನ್ನು ನೋಡಿ ಕುತೂಹಲ ಚಿತ್ತನಾಗಿ ಬಹು ಲವಲವಿಕೆಯಿಂದ ಕೇಳಿಕೊಳ್ಳುತ್ತೇನೆ, ದಯವಿಟ್ಟು ಹೇಳಬೇಕು ಎಂದು ಕೇಳಲು, ಆ ಕನ್ನಿಕೆಯು ಒಂದು ಕ್ಷಣ ಹೊತ್ತು ಸುಮ್ಮನೆ ಕುಳಿತುಕೊಂಡು ಬಿಸುಸುಯ್ದು ಅಳಹತ್ತಿದಳು! ಅದನ್ನು ನೋಡಿ ಚಂದ್ರಾಪೀಡನು ಮನದೊಳಗೆ — "ಶಿವಶಿವಾ! ದುಃಖವು ಎಂಥವರನ್ನಾದರೂ ಬಿಟ್ಟಿಲ್ಲ. ಈಕೆ ಅತ್ತ ಅತ್ತ ಹಾಗೆ ಏನು ಇದ್ದೀತು ಕೇಳಬೇಕೆಂಬ ಇಚ್ಛೆಯು ಹೆಚ್ಚಾಗುತ್ತದೆ. ಇಂಥವಳು ಇಷ್ಟು ಅಳಬೇಕಾದರೆ ಏನಾದರೂ ದೊಡ್ಡ ಕಾರಣವಿರಬೇಕು." ಎಂದು ಬಗೆದು ತಾನೇ ಈಕೆಗೆ ದುಃಖದ ನೆನಪು ಮಾಡಿಕೊಟ್ಟ ಹಾಗಾಯಿತೆಂದು ಮರಮರನೆ ಮರುಗಿ — " ತಾಯೀ, ತಮ್ಮಂಥವರು ಕಣ್ಣೀರು ಸುರಿಸಬಾರದು! ಮುಖಪ್ರಕ್ಷಾಲನ ಮಾಡಿಕೊಳ್ಳಬೇಕು" ಎಂದು ವಿನಯದಿಂದ ಹೇಳಿಕೊಂಡು, ಝರಿಯೊಳಗಿನ ನೀರು ತಂದುಕೊಟ್ಟನು. ಅದರಿಂದ ಆಕೆ ದುಃಖಿಸುವದನ್ನು ಬಿಟ್ಟು, ವಲ್ಕಲದ ಸೆರಗಿನಿಂದ ಕಣ್ಣೀರು ಒರಿಸಿಕೊಂಡು, ಆತನು ಕೊಟ್ಟ ಉದಕದಿಂದ ಮುಖ ತೊಳಕೊಂಡು, ನಿಟ್ಟುಸಿರು ಬಿಟ್ಟು ಮೆಲ್ಲಗೆ ಆತನಿಗೆ ಹೇಳಲನುವಾದಳು — "ರಾಜಪುತ್ರನೇ,

ನಾನು ಹತಭಾಗ್ಯಳು, ಮಹಾ ಪಾಪಾತ್ಮಳು, ನನ್ನಂಥ ಚಾಂಡಾಲಿಯ ಕಥೆಯನ್ನು ಕೇಳುವ ಪ್ರಯೋಜನವೇನು? ಆದರೂ ಇಚ್ಛೆಯಿದ್ದರೆ ಹೇಳುತ್ತೇನೆ ಕೇಳಬೇಕು. ಸ್ವರ್ಗದೊಳಗೆ ಅಪ್ಸರ ಕನ್ನಿಕೆಯರಿರುತ್ತಾರೆಂಬುದು ತಮಗೆ ಅರಿಕೆ ಇದ್ದೀತು. ಅವರೊಳಗೆ ಹದಿನಾಲ್ಕು ಕುಲಗಳುಂಟು. ಮೊದಲನೆಯ ಕುಲವು ಬ್ರಹ್ಮನಿಂದ ಹುಟ್ಟಿತು. ಎರಡನೆಯದು ವೇದಗಳಿಂದ, ಮೂರನೆಯದು ಅಗ್ನಿಯಿಂದ. ನಾಲ್ಕನೆಯದು ವಾಯುವಿನಿಂದ, ಐದನೆಯದು ಅಮೃತದಿಂದ, ಆರನೆಯದು ನೀರಿನಿಂದ, ಏಳನೆಯದು ಸೂರ್ಯನ ಕಿರಣಗಳಿಂದ, ಎಂಟನೆಯದು ಚಂದ್ರನ ಕಿರಣಗಳಿಂದ, ಒಂಬತ್ತನೆಯದು ಭೂಮಿಯಿಂದ, ಹತ್ತನೆಯದು ವಿದ್ಯುಲ್ಲತೆಯಿಂದ, ಹನ್ನೊಂದನೆಯದು ಮೃತ್ಯುವಿನಿಂದ, ಹನ್ನೆರಡನೆಯದು ಮದನನಿಂದ, ಹದಿಮೂರನೆಯ ಹದಿನಾಲ್ಕನೆಯ ಕುಲಗಳು ದಕ್ಷಬ್ರಹ್ಮನ ಹೆಣ್ಣು ಮಕ್ಕಳಾದ ಮುನಿ ಹಾಗೂ ಅರಿಷ್ಟೆ ಎಂಬ ಗಂಧರ್ವ ಪತ್ನಿಯರಿಂದ ಹುಟ್ಟಿದವು. ಅವರಲ್ಲಿ ಮುನಿ ಎಂಬವಳಿಗೆ ಹದಿನಾರು ಮಂದಿ ಮಕ್ಕಳು ಹುಟ್ಟಿದರು. ಹದಿನಾರನೆಯ ಮಗನು ಸಕಲ ಸದ್ಗುಣಸಂಪನ್ನನಾದ ಚಿತ್ರರಥನೆಂಬವನು. ಇವನ ಪರಾಕ್ರಮವನ್ನು ಕಂಡು ಇಂದ್ರನು ಇವನನ್ನು ತನ್ನ ಗೆಳೆಯನನ್ನು ಮಾಡಿಕೊಂಡು ಇವನಿಗೆ ಸನ್ಮಾನ ಮಾಡುತ್ತಾನೆ. ಇವನು ಚಿಕ್ಕಂದಿನಲ್ಲಿಯೇ ಎಲ್ಲ ಗಂಧರ್ವರಿಗೆ ಅರಸನಾದನು. ಇಲ್ಲಿಗೆ ಸಮೀಪದಲ್ಲಿ ಕಿಂಪುರುಷವೆಂಬ ದೇಶವಿದೆ; ಆ ದೇಶದಲ್ಲಿ ಹೇಮಕೂಟವೆಂಬ ಪರ್ವತದಲ್ಲಿ ಆತನು ಸಾವಿರಾರು ಮಂದಿ ಗಂಧರ್ವರನ್ನು ಕೂಡಿಕೊಂಡು ಇರುತ್ತಾನೆ. ಆ ಚಿತ್ರರಥ ಗಂಧರ್ವರಾಜನೇ ಈ ಚೈತ್ರರಥವೆಂಬ ಮನೋಹರವಾದ ಅರಣ್ಯವನ್ನು ನಿರ್ಮಿಸಿ, ಈ ಅಗಾಧವಾದ ಅಚ್ಛೋದಸರೋವರವನ್ನು ಅಗಿಸಿ, ಈ ಸ್ಫಟಿಕದ ಶಿವಾಲಯವನ್ನು ಕಟ್ಟಿಸಿದನು. ಅರಿಷ್ಟೆಯೆಂಬವಳು ಆರು ಮಕ್ಕಳನ್ನು ಹೆತ್ತಳು. ಅವರಲ್ಲಿ ಜ್ಯೇಷ್ಠಪುತ್ರನಾದ ಹಂಸನೆಂಬವನು ಗಂಧರ್ವರೊಳಗೆ ಪ್ರಸಿದ್ಧನಾದನು. ಈ ಹಂಸನಿಗೆ ಆ ಚಿತ್ರರಥರಾಜನು ಎರಡನೆಯ ಕುಲದ ಗಂಧರ್ವರ ರಾಜ್ಯವನ್ನು ಕೊಟ್ಟನು. ಈ ಹಂಸನೂ ತನ್ನ ಪರಿವಾರದೊಡನೆ ಅದೇ ಹೇಮಕೂಟಪರ್ವತದಲ್ಲಿ ಇರುತ್ತಾನೆ. ಚಂದ್ರನ ಕಿರಣಗಳಿಂದ ಅಪ್ಸರರದೊಂದು ಕುಲವು ಹುಟ್ಟಿತೆಂದು ಮೊದಲು ಹೇಳಿದ್ದೇನಷ್ಟೇ; ಆ ಕುಲದಲ್ಲಿ ಗೌರಿಯೆಂಬವಳು ಹುಟ್ಟಿದಳು. ಆಕೆಯನ್ನು ಹಂಸನು ಮದುವೆಮಾಡಿಕೊಂಡನು. ಈ ದಂಪತಿಗಳಿಂದ ನಾನೊಬ್ಬಳೇ ಮಗಳು ಹುಟ್ಟಿದೆನು. ಹನ್ನೆರಡನೆಯ ದಿವಸ ನಮ್ಮ ತಂದೆ ಹಂಸರಾಜನು ಕಡುಸಡಗರದಿಂದ ಶುಭ ಸಂಸ್ಕಾರಗಳನ್ನು ಮಾಡಿ ನನಗೆ "ಮಹಾಶ್ವೇತೆ" ಎಂದು ಹೆಸರಿಟ್ಟನು. ತಂದೆಯ ಮನೆಯಲ್ಲಿ ಎಲ್ಲರ ಮುದ್ದಿಗೂ ಈಡಾಗಿ ಬೆಳೆದು, ಶೈಶವಾಸ್ಥೆಯನ್ನು ಸುಖದಿಂದ ಕಳೆದ ಬಳಿಕ, ನನಗೆ ನೂತನ ತಾರುಣ್ಯವೊದಗಿತು. ಒಂದು ದಿನ ವಸಂತಕಾಲದಲ್ಲಿ ನಾನು ತಾಯಿಯ ಕೂಡ ಅಚ್ಛೋದಸರೋವರಕ್ಕೆ ಹೋದಾಗ, ಸಂಗಡ ಬಂದ ಸಖಿಯರೂ ನಾನೂ ಸರೋವರದ ದಂಡೆಯ ಮೇಲಿನ ಹೂದೋಟದ ಸೌಂದರ್ಯವನ್ನು ನೋಡುತ್ತ ಲತಾಮಂಟಪಗಳೊಳಗೆ ಹೊಕ್ಕು ಮುಂದಕ್ಕೆ ಹೋಗಿ —"ಹೂವಿನ ಭಾರದಿಂದ ಮಾವಿನ ಮರವೆಷ್ಟು ಬಾಗಿದೆ ನೋಡಿರೆ! ಇಲ್ಲಿ ನರ್ತಿಸುವ ನವಿಲುಗಳನ್ನು ನೋಡಿ ಆ ಸರ್ಪಗಳು ಹೇಗೆ ಓಡಿಹೋಗುತ್ತಿವೆ! ಅಹಹಾ! ಈ ಚಂದನವನದೊಳಗೆ ತಂಪು ಎಷ್ಟು ಸೊಗಸುಗೊಳಿಸುತ್ತದೆ ನೋಡಿರೇ!" ಎಂದು

ಗೆಳತಿಯರ ಕೂಡ ಒಬ್ಬರಿಗೊಬ್ಬರು ಮಾತಾಡುತ್ತ ಆ ಹೂಗೊಳದ ದಂಡೆಯ ಹಿಡಿದು ವಿಹರಿಸುತ್ತಿದ್ದೆವು. ಅಷ್ಟರಲ್ಲಿ ಒಮ್ಮಿಂದೊಮ್ಮೆ ಒಂದು ಮನೋಮೋಹನವಾದ ಪರಿಮಳವು ಗಾಳಿಯ ಕೂಡ ಬಂದು, ನನ್ನ ಘ್ರಾಣೇಂದ್ರಿಯಕ್ಕೆ ಸೋಂಕಿ ನನ್ನನ್ನ ಮೋಹಗೊಳಿಸಿತು. ಅಂಥ ಸುಗಂಧವು ಮನುಷ್ಯಪ್ರಾಣಿಗಳಿಗೆ ದುರ್ಲಭವೇ ಸರಿ. ಹಿಂದಕ್ಕೆ ಎಂದೆಂದೂ ಅಂಥ ಸುವಾಸನೆಯನ್ನು ನಾನು ಕಂಡಿದ್ದಿಲ್ಲ. ಈ ಅನುಪಮವಾದ ಆಮೋದವು ಎಲ್ಲಿಂದ ಬರುತ್ತದೋ ಅದನ್ನು ಗೊತ್ತುಹಚ್ಚಬೇಕೆಂಬ ಲವಲವಿಕೆಯಿಂದ ನಾನು ಸಖಿಯರನ್ನು ಮುಂದೆ ಹೋಗಬಿಟ್ಟು, ಮುಗುಳುಗಳಿಂದೊರಗುವ ಒಂದು ಮಲ್ಲಿಗೆಯ ಬಳ್ಳಿಯ ಮಂಟಪದ ನೆರೆಯಲ್ಲಿ ನಿಂತುಕೊಳ್ಳುವಷ್ಟರಲ್ಲಿ ಸಖನೊಡನೆ ಸ್ನಾನಕ್ಕೆ ಬಂದ ಒಬ್ಬ ಮುನಿಕುಮಾರನನ್ನು ಕಂಡೆನು. ಸ್ವಾಮಿ, ಆತನ ಚೆಲ್ವಿಕೆಯನ್ನು ಎಷ್ಟೆಂದು ಬಣ್ಣಿಸಲಿ! ಕಂಡ ಕೂಡಲೆ ಆ ಸುಂದರಮೂರ್ತಿಯ ಮೇಲೆ ಸಾವಿರಾರು ಮದನರನ್ನು ನಿವಾಳಿಯ ತೆಗೆಯಬೇಕೆಂಬುವ ಹಾಗಾಯಿತು. ಆತನ ಕಾಯಕಾಂತಿಗೆ ನನ್ನ ಕಣ್ಣುಗಳೇ ಕುಕ್ಕಿದವು; ಆತನ ಕೆಂಜೆಡೆಗಳೂ, ಕುಡಿಹುಬ್ಬುಗಳೂ, ಸೋಗೆಗಣ್ಣುಗಳೂ, ನಿಡುಮೂಗೂ, ಕೆಂದುಟಿಗಳೂ, ನಗೆಮೊಗವೂ ನನ್ನ ಕಣ್ಣಮುಂದೇ ಕಟ್ಟಿವೆ. ಇನ್ನೂ ಮೊಕಮೀಸೆ ಒಡೆದಿದ್ದಿಲ್ಲ. ಆದುದರಿಂದ ಆತನ ಮುಖವು ಭ್ರಮರವೆರಗದ ಬಾಲಕಮಲದಂತೆ ಒಪ್ಪುತ್ತಿರುವದು. ಆ ಮನೋಮೋಹನ ಮೂರ್ತಿಯು ನನ್ನ ಹೃದಯದಲ್ಲಿ ನೆಲೆಗೊಂಡಿದೆ. ಬಲಗೈಯೊಳಗೆ ಜಪಮಾಲೆಯನ್ನು, ಎಡಗೈಯೊಳಗೆ ಕಮಂಡಲವನ್ನು ಹಿಡಿದುಕೊಂಡು ಎದುರಿಗೆ ಬರುವಾಗ ಸರಸ್ವತಿಯ ವಿಲಾಸಮಂದಿರವೋ, ಸರ್ವಶ್ರುತಿಗಳ ಸಂಕೇತಸ್ಥಾನವೋ ಅನ್ನುವಂತೆ ಶೋಭಿಸಿದನು. ಆತನ ಕಿವಿಯ ಮೇಲೆ ಪುಷ್ಪಮಂಜರಿ ಇತ್ತು. ನನ್ನನ್ನು ಮೋಹಗೊಳಿಸಿದ ಮಕರಂದವು ಇದೇ ಮಂಜರಿಯದೋ ಏನೋ ಎಂದು ನಾನು ಆ ಮುನಿಕುಮಾರನನ್ನು ದಿಟ್ಟಿಸಿ ನೋಡುತ್ತ ನಿಂತಾಗ, ಸೃಷ್ಟಿಕರ್ತನಾದ ಬ್ರಹ್ಮದೇವನು ಈ ಮೋಹಕಮೂರ್ತಿಯನ್ನು ನಿರ್ಮಾಣ ಮಾಡುವದಕ್ಕಿಂತ ಮುಂಚೆ ಅಭ್ಯಾಸದ ಸಲುವಾಗಿ ಜಗದಾನಂದಕರನಾದ ಚಂದ್ರನನ್ನೂ, ಲಕ್ಷ್ಮೀವಿಲಾಸಸ್ಥಾನವಾದ ಕಮಲವನ್ನೂ ಮಾಡಿರಬಹುದು; ಇಲ್ಲದಿದ್ದರೆ ಸುಮ್ಮಸುಮ್ಮನೆ ಸದೃಶ ಪದಾರ್ಥಗಳನ್ನು ಮಾಡಿಟ್ಟ ಕಾರಣವೇನು? ಎಂಬ ಕಲ್ಪನೆಗಳು ನನ್ನ ಮನದೊಳಗೆ ಹುಟ್ಟಿದವು. ಅಷ್ಟರೊಳಗೆ ಗುಣದೋಷಗಳನ್ನು ವಿಚಾರ ಮಾಡದೆ, ಬರಿಯ ರೂಪಕ್ಕೆ ಮರುಳು ಮಾಡುವ ಮದನನು ತನ್ನ ಕೂರಂಬುಗಳನ್ನು ನನ್ನ ಎದೆಗೆಸೆದು ನನ್ನನ್ನು ಪರವಶಮಾಡಿದನು. ಆಗ ನಾಚಿಕೆದೊರೆದು ಎಚ್ಚರಗೆಟ್ಟು ಎವೆ ಹಳಕದೆ ಒಂದೇಸವನೆ ಕಡೆಗಣ್ಣಿನ ನೋಟದಿಂದ ಆತನನ್ನು ನೋಡುತ್ತ ನಿಂತುಕೊಂಡೆನು. ಆತನ ರೂಪವ ಕಂಡು ಹೀಗಾಯಿತು! ಮನಸ್ಸಿನೊಳಗೆ ಹುಟ್ಟಿದ ಪ್ರೀತಿಯಿಂದಲೋ! ತಾರುಣ್ಯದ ಧರ್ಮವೇ ಹೀಗೋ! ಏನು ಕಾರಣ ನನ್ನ ಅವಸ್ಥೆ ಹೀಗಾಯಿತೆಂಬುವುದು ನನ್ನದು ನನಗೇ ತಿಳಿಯದ ಹಾಗಾಯಿತು! ಪ್ರೀತಿಯು ನನ್ನ ಮನಸ್ಸನ್ನು ಆತನೆಡೆಗೆ ಬಲುಮೆಯಿಂದ ಎಳೆದೊಯ್ಯಿತು. ಮೈಯೊಳಗೆ ಬೆವರು ಹುಟ್ಟಿ ನಡುಗಹತ್ತಿದೆನು, ರೋಮಾಂಚಗಳೆದ್ದವು. ಬಹಳ ಹೇಳುವದೇನು ಸ್ವಾಮೀ, ಆ ಋಷಿಕುಮಾರನ ಮೇಲೆ ನನ್ನ ಮನಸ್ಸಾಯಿತು. ಆಗ — ನನ್ನನ್ನು ದುಷ್ಟ ಕಾಮನು ವಿಷಯಸುಖನಿರಿಚ್ಛನಾದ ಈ ಋಷಿಕುಮಾರನ ವಶಮಾಡಿ ಎಂಥ ಕೆಟ್ಟ ಕೆಲಸವ

ಮಾಡಿದನು! ಯಾರ ಮೇಲೆ ಪ್ರೀತಿ ಮಾಡಬೇಕು, ಯಾರ ಮೇಲೆ ಮಾಡಬಾರದು ಎಂಬ ಸಾರಾಸಾರಾ ವಿಚಾರ ಸಹ ಸ್ತ್ರೀಯರಿಗೆ ಇಲ್ಲ. ಇಂಥ ಪಾಮರರು ನಾವು! ಈ ಮಹಾಮಹಿಮನ ತಪಸ್ತೇಜವೆತ್ತ? ಮರುಳ ಮಾನವರನ್ನು ಮೋಹಗೊಳಿಸುವ ಈ ದುರುಳ ಕಾಮನ ಚೇಷ್ಟೆಯೆತ್ತ? ನನ್ನ ಈ ಅವಸ್ಥೆಯನ್ನು ಕಂಡು ಆ ಋಷಿಕುಮಾರನು ಮನದೊಳಗೆ ನಗುತ್ತಿದ್ದಾನು ಎಂದು ತಿಳಿದರೂ ಮನಸ್ಸು ತಿರುಗಲೊಲ್ಲದು; ಇದೇ ಒಂದು ಸೋಜಿಗವು! ಮೈ ಮೇಲೆ ಎಚ್ಚರಿರುವದರೊಳಗೇ, ಆ ಮುನಿಕುಮಾರನು ನನ್ನನ್ನು ನೋಡುವದರೊಳಗೇ, ನಾನು ಇಲ್ಲಿಂದ ಬೇಗನೆ ಹೊರಟುಹೋಗುವದು ಮಾನವು; ಒಂದು ವೇಳೆ ಕಾಮಪೀಡಿತಳಾದ ನನ್ನನ್ನು ನೋಡಿದರೆ, ಆತನು ನನಗೆ ಶಾಪ ಕೊಟ್ಟಾನು, ತಪಸ್ವಿಗಳು ಶೀಘ್ರಕೋಪಿಗಳಿರುತ್ತಾರೆ! — ಎಂಬ ಸಂಗತಿಗಳನ್ನು ಮನದೊಳಗೆ ತಂದ ನಾನು ಹಿಂದಿರುಗುತ್ತಿದ್ದೆನು; ಆದರೆ ಋಷಿಗಳನ್ನು ಕಂಡು ನಮಸ್ಕಾರ ಮಾಡದೆ, ಹಾಗೇ ಹೋಗಬಾರದೆಂದು ಸಮೀಪಕ್ಕೆ ಹೋಗಿ ಆತನಿಗೆ ನಮಿಸಿದೆನು. ಸ್ವಾಮೀ, ಯೌವನ ಭರದಲ್ಲಿ ವಿವೇಕವು ಕಡಿಮೆ; ಮನೋವೃತ್ತಿಯು ಬಲು ಚಂಚಲವು; ಹರಿಯುವ ಇಂದ್ರಿಯಗಳನ್ನು ತಡೆಯುವದು ಪರಮ ದುಸ್ತರವು; ವಿಷಯಸುಖಗಳಂತೂ ಬಹು ಸವಿದೋರುವವು; ಅದರೊಳಗೆ ಮುಂದೆ ಈ ಕಷ್ಟವನ್ನು ಅನುಭೋಗಿಸುವದು ನನ್ನ ಅದೃಷ್ಟದೊಳಗಿತ್ತು! ಆದುದರಿಂದ ನನ್ನನ್ನು ನೋಡಿದ ಕೂಡಲೆ ಆತನ ಧೈರ್ಯವೂ ನಷ್ಟವಾಯಿತು. ಕಾಮನಂತೂ ನೋಡಿಕೊಂಡೇ ಕುಳಿತಿದ್ದನು. ಆ ಕ್ಷಣವೇ ಆತನ ಹೃದಯದೊಳಗೆ ಪ್ರವೇಶಿಸಿ ಆತನನ್ನು ಕೈವಶಮಾಡಿಕೊಂಡನು. ಬಳಿಕ ಹೇಳುವದೇನು! ಆತನ ಮೈ ಮೇಲೆ ರೋಮಾಂಚಗಳೆದ್ದವು; ಶ್ವಾಸ ಬಿಡಹತ್ತಿದನು; ಮೈಯೊಳಗೆ ನಡುಗು ಹುಟ್ಟಿ ಜೋರನೆ ಬೆವತನು; ಪ್ರೀತಿಯಿಂದ ನಗೆಗಣ್ಣೆತ್ತಿ ನನ್ನನ್ನು ನೋಡಹತ್ತಿದನು. ಈ ಪ್ರಕಾರ ಕಾಮವಿಕಾರಕ್ಕೊಳಗಾದ ಋಷಿಕುಮಾರನನ್ನು ಕಣ್ಣಾರೆ ನೋಡಿದ್ದರಿಂದಂತೂ ನನ್ನ ವಿಕಾರವು ಇಮ್ಮಡಿಸಿತು. ಆಗ ನಾನು ಮನದೊಳಗೆ —'ವಿಲಾಸಸಂಬಂಧವಾದ ಅನೇಕ ಲೀಲೆಗಳನ್ನು ಕಾಮದೇವನೇ ಈ ಋಷಿಕುಮಾರನಿಗೆ ಕಲಿಸುತ್ತಿರಬಹುದು. ಇಲ್ಲದಿದ್ದರೆ ಇಂಥ ಸಂಗತಿಗಳಿಗೆ ಇನ್ನೂ ಮನಸ್ಸು ಕೊಡದಿದ್ದ ಈ ಕುಮಾರನಿಗೆ ಈ ಸುಖಾನಂದಮಯವಾದ ಶೃಂಗಾರರಸವನ್ನು ಸುರಿಸುತ್ತಿರುವ ಚಂಚಲವಾದ ಕಡೆಗಣ್ಣಿನ ಸವಿನೋಟದಿಂದ ನೋಡುವ ಜಾಣತನವು ಹೇಗೆ ಬರಬೇಕು? ನೋಡು! ಮಾತಾಡದೆ ಪ್ರೇಮಾವಲೋಕನದಿಂದಲೇ ತನ್ನ ಮನದೊಳಗಿನ ಇಚ್ಛೆಯನ್ನು ನನಗೆ ಹೇಗೆ ತಿಳಿಸುತ್ತಾನೆ!' ಎಂದು ಯೋಚಿಸುತ್ತ ನಾನು ಆತನ ಸಂಗಡ ಬಂದ ಋಷಿಬಾಲಕನ ಹತ್ತರ ಹೋಗಿ ವಂದಿಸಿ —"ಅಯ್ಯಾ, ಈ ಮುನಿಕುಮಾರನ ಹೆಸರೇನು? ಈತನು ಯಾರ ಮಗನು? ಈತನ ಕಿವಿಯ ಮೇಲಿನ ಪೂಗೊಂಚಲವೆಲ್ಲಿಯದು? ದಯಮಾಡಿ ಹೇಳಬೇಕು" ಎಂದು ಆತನಿಗೆ ಬಿನ್ನವಿಸಿದೆನು. ಇದನ್ನು ಕೇಳಿ ಅವನು ಮುಗುಳ್ನಗೆ ನಕ್ಕು —"ತಾಯೀ, ಇದನ್ನು ಕೇಳುವದರಿಂದ ನಿಮಗೇನು ಪ್ರಯೋಜನವು? ಇಚ್ಛೆಯಿದ್ದರೆ ಹೇಳುತ್ತೇನೆ ಕೇಳಿರಿ. 'ಸ್ವರ್ಗಲೋಕದಲ್ಲಿ ಶ್ವೇತಕೇತು ಎಂಬ ಮಹಾತಪಸ್ವಿಯು ಇರುತ್ತಾನೆ. ಆತನ ತಪೋಮಹಿಮೆಗೆ ಸುರ-ಸಿದ್ಧರು ಸಹ ಭಯಪಟ್ಟು ಭಕ್ತಿಯಿಂದ ಆತನ ಚರಣಾರವಿಂದಗಳನ್ನು ವಂದಿಸುತ್ತಾರೆ.

ಒಂದು ದಿನ ಆ ಶ್ವೇತಕೇತು ಮುನೀಶ್ವರನು ಶಿವನ ಪೂಜೆಗೆಂದು ಮಂದಾಕಿನಿಯೊಳಗಿನ ಕಮಲಪುಷ್ಪಗಳನ್ನು ಎತ್ತುತ್ತಿದ್ದನು. ಆಗ ಅಲ್ಲಿಯ ಪುಂಡರೀಕದೊಳಗಿನ ಲಕ್ಷ್ಮಿಯು ಆತನನ್ನು ಕಂಡು, ಅವನ ಲೋಕೋತ್ತರ ಸೌಂದರ್ಯಕ್ಕೆ ಮೆಚ್ಚಿ, ಕಾಮಿಸಿ ಪ್ರೇಮಾವಲೋಕನ ಮಾತ್ರದಿಂದಲೇ ಆ ಯತೀಶ್ವರನ ಸಮಾಗಮಸುಖ ಪಡೆದು ಆ ಕ್ಷಣವೇ ಒಬ್ಬ ಕುಮಾರನನ್ನು ಹೆತ್ತು, ಆ ಶಿಶುವನ್ನು ತೊಡೆಯ ಮೇಲಿಟ್ಟುಕೊಂಡು ಶ್ವೇತಕೇತು ಮುನೀಶ್ವರನನ್ನು ಹತ್ತಿರ ಕರೆದು ಸ್ವಾಮೀ, ಈತನು ತಮ್ಮ ಮಗನು, ತಕ್ಕೊಳ್ಳಬೇಕೆಂದು ಹೇಳಿ ಆ ಶಿಶುವನ್ನು ಆತನ ಕೈಯೊಳಗೆ ಕೊಟ್ಟಳು. ಆ ಋಷೀಶ್ವರನು ಆ ಶಿಶುವಿನ ಜಾತಕರ್ಮವನ್ನು ಮಾಡಿ ಪುಂಡರೀಕ (ಬಿಳೀ ಕಮಲ) ದಿಂದ ಹುಟ್ಟಿದ ಕಾರಣ ಪುಂಡರೀಕನೆಂದು ನಾಮಕರಣಂಗೈದು ಮುಂದೆ ಕೆಲವು ಕಾಲದ ತರುವಾಯ ಆತನ ವ್ರತಬಂಧವನ್ನು ಮಾಡಿ ಸಂಪೂರ್ಣ ವಿದ್ಯೆ ಕಲಿಸಿದನು. ಅದೇ ಪುಂಡರೀಕನಿವನು. ಆತನ ಕಿವಿಯ ಮೇಲಿನ ಮಂಜರಿಯು ಪಾರಿಜಾತ ಪುಷ್ಪಮಂಜರಿಯು, ಈ ಹೊತ್ತು ಶಿವನ ಪಾದಪೂಜೆಗೆಂದು ನಾನೂ ಈತನೂ ನಂದನವನದೊಳಗಿಂದ ಹಾಯ್ದು ಕೈಲಾಸಕ್ಕೆ ಹೋಗುತ್ತಿದ್ದೆವು; ಆಗ ನಂದನವನದೇವತೆಯು ಈ ಪುಂಡರೀಕನ ದರ್ಶನದ ಸಲುವಾಗಿ ಕೈಯೊಳಗೆ ಈ ಪುಷ್ಪಮಂಜರಿಯನ್ನು ಹಿಡಿದುಕೊಂಡು ಬಂದು, ಈತನ ಚರಣಕ್ಕೆ ವಂದಿಸಿ, "ಸ್ವಾಮೀ, ತಮ್ಮ ರೂಪಕ್ಕೆ ಈ ಪಾರಿಜಾತ ಪುಷ್ಪಮಂಜರಿಯು ಯೋಗ್ಯವದೆ; ಇದನ್ನು ತಾವು ಅಂಗೀಕರಿಸಿ, ದಯಮಾಡಿ ಕರ್ಣಾಭರಣ ಮಾಡಿಕೊಳ್ಳಬೇಕು! ಪಾರಿಜಾತವೃಕ್ಷದ ಜನ್ಮವು ಕೃತಾರ್ಥವಾಗಲಿ!" ಎಂದು ವಿನಯಪೂರ್ವಕವಾಗಿ ವಿಜ್ಞಾಪಿಸಿದಳು. ಆ ವನದೇವತೆಯ ಸ್ತುತಿಪರ ವಚನಗಳಿಗೆ ಈ ಪುಂಡರೀಕನು ಕಿವಿಗೊಡದೆ ಪುಷ್ಪಮಂಜರಿಯ ತಕ್ಕೊಳ್ಳದೆ ಮುಂದಕ್ಕೆ ಸಾಗಿದನು. ಆಕೆ ಹಿಂದಿಂದೇ ಬರಹತ್ತಿದಳು. ಅದನ್ನು ಕಂಡು ನಾನು — 'ಆಕೆಯ ಪ್ರೀತಿದಾನವನ್ನು ಯಾಕೆ ಗ್ರಹಣ ಮಾಡಬಾರದು' ಎಂದು ಆ ವನದೇವತೆಯ ಕೈಯೊಳಗಿನ ಪುಷ್ಪಮಂಜರಿಯ ತಕ್ಕೊಂಡು ಬೇಡಬೇಡವೆಂದರೂ ಆಗ್ರಹದಿಂದ ಈತನ ಕಿವಿಯ ಮೇಲೆ ಇಟ್ಟೆನು" ಎಂದು ಎರಡನೆಯ ಋಷಿಬಾಲಕನು ಹೇಳುವಾಗ ಆ ಪುಂಡರೀಕನು ಮುಗುಳ್ನಗೆ ನಕ್ಕು ನನ್ನ ಮುಖ ನೋಡಿ —"ಕೌತುಕವತಿಯೇ, ಇಷ್ಟೆಲ್ಲ ಕೇಳುವ ಆಯಾಸವೇಕೆ? ಇದರ ಸುವಾಸನೆಯು ನಿನಗೆ ಪ್ರಿಯಕರವಾಗಿದ್ದರೆ ಇದನ್ನೇ ಹಿಡಿ," ಎಂದು ಹತ್ತಿರ ಬಂದು, ತನ್ನ ಕಿವಿಯ ಮೇಲಿನ ಪುಷ್ಪ ಮಂಜರಿಯನ್ನು ತೆಗೆದು ನನ್ನ ಕಿವಿಯ ಮೇಲೆ ತಾನೇ ತನ್ನ ಕೈಮುಟ್ಟಿ ಇಟ್ಟನು. ಆಗ ನನ್ನ ಗಲ್ಲಕ್ಕೆ ಆತನ ಅಂಗೈ ಸೋಂಕಿದುದರಿಂದ ನನಗೆ ಅನುಪಮವಾದ ಆನಂದವಾಯಿತು. ನನ್ನ ಕಪೋಲ-ಸ್ಪರ್ಶಸುಖದಿಂದ ಆತನೂ ಮೋಹಿತನಾದನು. ಆ ಭರದೊಳಗೆ ಕಂಪ ಹುಟ್ಟಿದ್ದರಿಂದ ಆತನ ಕೈಯೊಳಗಿನ ಜಪಮಾಲೆಯು ಸಡಿಲಿ ಅವನಿಗೆ ತಿಳಿಯದೆ ಬೀಳುತ್ತಿತ್ತು. ಅಷ್ಟರೊಳಗೆ ನಾನು ಬಾಗಿ, ಕೈಚಾಚಿ, ಅದನ್ನು ನೆಲಕ್ಕೆ ಬೀಳಗೊಡದೆ ತಕ್ಕೊಂಡು ಕೊರಳೊಳಗೆ ಹಾಕಿಕೊಂಡೆನು.

ಈ ಮೇರೆಗೆ ಒಬ್ಬರ ಮೇಲೊಬ್ಬರು ಮೋಹಿತರಾದದ್ದನ್ನು ನನ್ನ ಅಪ್ತಾಗಿರಿ ಹಿಡಿಯುವ ದಾಸಿ ಕಂಡು —"ಗಂಧರ್ವ ರಾಜಕನ್ನಿಕೆಯೇ, ಅವ್ವನವರ ಸ್ನಾನವಾಗಿದ್ದೀತು, ಮನೆಗೆ ಹೋಗುವ ಹೊತ್ತು ಆಯಿತು; ಇನ್ನು ನೀವು ಸರೋವರಕ್ಕೆ ನಡೆಯಿರಿ!" ಎಂದು

ಅಂದಳು. ಅವಳ ಈ ನುಡಿಯು ನನ್ನ ಕಿವಿಗೆ ಬಿದ್ದಕೂಡಲೆ ಹೊಸದಾಗಿ ಹಿಡಿದು ತಂದ ಆನೆಗೆ ಅಂಕುಶದ ಮೊದಲನೆಯ ಹೊಡೆತವು ಬಿದ್ದಹಾಗಾಯಿತು. ಆ ಮನೋಮೋಹನ ಮೂರ್ತಿಯ ಲಾವಣ್ಯವನ್ನು ಎಷ್ಟು ನೋಡಿದರೂ ಸಾಕಾಗಲಿಲ್ಲ. ಅಲ್ಲಿಂದ ನನ್ನ ಕಾಲುಗಳೇ ಏಳಲೊಲ್ಲವು. ಆದರೂ ಆತನ ಮುಖದಲ್ಲಿ ನಟ್ಟ ನನ್ನ ದೃಷ್ಟಿಯನ್ನು ಬಹು ಕಷ್ಟದಿಂದ ಕಿತ್ತುಕೊಂಡು, ಸರೋವರದ ಮಾರ್ಗ ಹಿಡಿದೆನು. ನಾನು ಹೊರಟದ್ದು ತಿಳಿದ ಮಾತ್ರವೇ ಆ ಋಷಿಕುಮಾರನ ಧೈರ್ಯವೇ ಹೋಯಿತು. ಅವನ ಅವಸ್ಥೆಯನ್ನು ಕಂಡು ಎರಡನೆಯ ಋಷಿಕುಮಾರನು ಪ್ರಣಯ ಕೋಪದಿಂದ 'ಎಲೈ ಪುಂಡರೀಕನೇ ಇದು ನಿನಗೆ ಸಲ್ಲದು; ಕೀಳರು ಹಿಡಿಯುವ ಹೊಲ್ಲದ ಹಾದಿಯ ಹಿಡಿದಿ; ಸಾಧುಗಳಿಗೆ ಧೈರ್ಯವೇ ಧನವು. ನಾಡಾಡಿಗರಂತೆ ನೀನು ಕಾಮವಿಹ್ವಲನಾಗುವದುಚಿತವೇ? ನೀನು ಎಂದೂ ಭ್ರಾಂತನಾದವನಲ್ಲ; ಇಂದು ನಿನ್ನ ಅವಸ್ಥೆ ಹೀಗಾದ ಕಾರಣವೇನು? ನಿನ್ನ ಮುಂಚಿನ ಧೈರ್ಯವೂ, ಇಂದ್ರಿಯನಿಗ್ರಹವೂ, ಶಾಂತಿಯೂ, ಬ್ರಹ್ಮಚರ್ಯವೂ, ವೈರಾಗ್ಯವೂ ಇಂದು ಎಲ್ಲಿ ಹೋದವು? ಗುರುಗಳ ಉಪದೇಶವೂ ಇಂದಿನ ವರೆಗೆ ನೀನು ಮಾಡಿದ ಅಧ್ಯಯನವೂ, ಪರಲೋಕಸಾಧನವೂ, ಇಂದು ಎಲ್ಲಿ ಅಡಗಿದವು? ಜ್ಞಾನದಿಂದ ನಿನಗೇನೂ ಫಲವಾಗಲಿಲ್ಲ; ನೀನು ಧರ್ಮಶಾಸ್ತ್ರವನ್ನು ಕಲಿತದ್ದು ಸಾರ್ಥಕವಾಗಲಿಲ್ಲ; ನಿನ್ನ ಸಂಸ್ಕಾರವೂ, ಜಾಣತನವೂ ಇಂದಿಗೆ ನಿರರ್ಥಕವಾದವು; ನಿನ್ನ ವಿವೇಕ ನಿನ್ನ ಮೇಲೆ ಏನೂ ಉಪಕಾರ ಮಾಡಲಿಲ್ಲ. ನೋಡು, ನಿನ್ನಂಥವರು ಸಹ ಇಂಥ ಮೋಹಪಾಶದೊಳಗೆ ಬೀಳುತ್ತಾರೆ. ನಿನ್ನ ಕೈಯೊಳಗಿನ ಜಪಮಾಲೆ ಸಡಿಲಿ ಬಿದ್ದದ್ದೂ, ಅದನ್ನು ಆಕೆ ಒಯ್ದದ್ದೂ ನಿನಗೆ ತಿಳಿದೇ ಇಲ್ಲ. ಇಷ್ಟು ಅರಿವುಗೆಟ್ಟಿ! ನಿನಗೇನು ಅನ್ನಬೇಕು? ಎಲೈ ಮೂಢನೇ, ನಿನ್ನ ಜಪಮಾಲೆಯನ್ನು ಆಕೆ ಒಯ್ದರೂ ಒಯ್ಯಲಿ, ಈಗ ನಿನ್ನ ಹೃದಯವನ್ನು ಸಹ ಒಯ್ಯುತ್ತಾಳೆ; ಅದನ್ನಾದರೂ ಬಿಡಸಿಕೊಳ್ಳಬಾರದೇ?' ಎಂದ ಮಾತುಗಳಿಗೆ ಪುಂಡರೀಕನು ನಾಚಿ —'ಕಪಿಂಜಲಾ ಹಾಗೆ ತಿಳಿದುಕೊಳ್ಳಬೇಡ. ಆಕೆ ನನ್ನ ಜಪಮಾಲೆಯನ್ನು ಒಯ್ದಳೇ? ಹಾಗಾದರೆ ಅವಳನ್ನು ಬಿಡುವದಿಲ್ಲ!' ಎಂದು ಬಹಳ ಸಿಟ್ಟಿಗೆದ್ದವನ ಹಾಗೆ ಮಾಡಿ ನನಗೆ — 'ಎಲೈ ಕನ್ನಿಕೆಯೇ, ಎಲ್ಲಿ ಹೋಗುತ್ತೀ ನಿಲ್ಲು! ನನ್ನ ಜಪಮಾಲೆಯನ್ನು ಕೊಟ್ಟು ಮುಂದಕ್ಕೆ ಹೆಜ್ಜೆಯ ಇಡು!' ಅಂದನು. ಅದನ್ನು ಕೇಳಿ ನಾನು ನನ್ನ ಕೊರಳೊಳಗಿನ ಮುತ್ತಿನ ಏಕಾವಳೀ ಸರವನ್ನು ತೆಗೆದು— 'ಸ್ವಾಮೀ, ನಿಮ್ಮ ಈ ಜಪಮಾಲೆಯ ಹಿಡಿಯಿರಿ' ಎಂದು ಆತನ ಕೈಯೊಳಗೆ ಕೊಟ್ಟು ಸರೋವರಕ್ಕೆ ಹೋದೆನು. ಸರೋವರದೊಳಗಿಳಿದು ಸ್ನಾನಮಾಡಿ, ಸಖಿಯರ ಆಗ್ರಹದಿಂದಲೇ ತಾಯಿಯ ಸಂಗಡ ನಾನು ಆ ಋಷಿಕುಮಾರನನ್ನು ನೆನೆಸುತ್ತ ಸೆಳೆವಿನ ಕೂಡ ಹೋಗುವ ಹರಗೋಲನ್ನು ಎದುರೇರಿಸುವಂತೆ ಮನೆಗೆ ಹೋದೆನು. ಅಯ್ಯಾ ಚಂದ್ರಾಪೀಡಾ, ಕನ್ಯಾಂತಃಪುರದೊಳಗೆ ಪ್ರವೇಶಿಸಿದ ಬಳಿಕ ಆದ ನನ್ನ ಅವಸ್ಥೆಯನ್ನು ಏನು ಹೇಳಲಿ! ನಾನು ತಿರುಗಿ ಬಂದೆನೋ, ಅಲ್ಲೇ ನಿಂತೆನೋ, ಒಬ್ಬಳೇ ಇದ್ದೆನೋ, ಸಖಿಯರ ಸಮೂಹದೊಡನೆ ಇದ್ದೆನೋ, ಇದೇನು ಸುಖವೋ, ದುಃಖವೋ, ಹಗಲೋ ಇರುಳೋ ಎಂಬುದು ಸಹ ನನಗೆ ತಿಳಿಯದ ಹಾಗಾಯಿತು. ಇದೆಲ್ಲ ಮದನನ ಚೇಷ್ಟೆ ಎಂಬುವದು. ನನಗೆ ತಿಳಿಯದ್ದರಿಂದ ಇನ್ನು ಎಲ್ಲಿಗೆ ಹೋಗಬೇಕು, ಏನು ಮಾಡಬೇಕು,

ಏನು ಹೇಳಬೇಕು, ಏನು ಕೇಳಬೇಕು ಎಂಬುವದು ನನಗೇನೂ ತಿಳಿಯಲಿಲ್ಲ. ಆದುದರಿಂದ ಎಲ್ಲ ಸಖಿಯರಿಗೆ ಹೋಗಹೇಳಿ, ಹೊರಗಿನ ಸೇವಕರಿಗೆ ಒಳಗೆ ಬಾರದಂತೆ ಬಿಗಿಮಾಡಿ, ಒಬ್ಬಳೇ ಸೌಧಾಗ್ರದ ಮೇಲೆ ಹತ್ತಿ, ಹುಬ್ಬುಗೈ ಹಚ್ಚಿ, ಕಿಡಿಕಿಯೊಳಗಿಂದ ಆ ಋಷಿಕುಮಾರನಿರುವ ಪ್ರದೇಶದ ಕಡೆಗೆ ನೋಡುತ್ತ, ನಿಶ್ಚಲಳಾಗಿ ನಿಂತುಕೊಂಡೆನು. ಅಷ್ಟರೊಳಗೆ ನನ್ನ ಕೂಡ ಸರೋವರಕ್ಕೆ ಬಂದು ಹಿಂದುಳಿದಿದ್ದ ನನ್ನ ತಾಂಬೂಲದ ಕರಡಿಗೆ ಹಿಡಿಯುವ ತರಲಿಕೆ ಎಂಬ ದಾಸಿಯು ಬೇಗ ಬಂದು ನನ್ನ ಅವಸ್ಥೆ ನೋಡಿ ನನಗೆ — "ರಾಜಕನ್ನಿಕೆಯೇ, ಅಚ್ಛೋದಸರೋವರದ ದಂಡೆಯ ಮೇಲಿನ ಹೂದೋಟದೊಳಗೆ ನಿನಗೆ ಭೆಟ್ಟಿಯಾದ ಇಬ್ಬರು ಋಷಿಕುಮಾರರಲ್ಲಿ ನಿನ್ನ ಕಿವಿಯ ಮೇಲೆ ಪುಷ್ಪಗುಚ್ಛವಿಟ್ಟ ಕುಮಾರನು ಆ ಎರಡನೆಯವನಿಗೆ ತಿಳಿಯಗೊಡದೆ ಅವನ ಕಣ್ಣು ತಪ್ಪಿಸಿ ಮೆಲ್ಲಗೆ ಮಲ್ಲಿಗೆಯ ಬಳ್ಳಿಯ ಮಂಟಪದೊಳಗಿಂದ ಹಾಯ್ದು ನನ್ನ ಹತ್ತಿರ ಬಂದು— 'ಆ ಕನ್ನಿಕೆ ಯಾರು? ಅವಳ ಹೆಸರೇನು? ಎಲ್ಲಿಗೆ ಹೋಗುತ್ತಾಳೆ?' ಎಂದು ನನ್ನನ್ನು ವಿಚಾರಿಸಲು, 'ಆಕೆಯ ಹೆಸರು ಮಹಾಶ್ವೇತೆ, ತಾಯಿ ಗೌರಿ, ತಂದೆ ಹಂಸರಾಜನು, ಈಗ ತಮ್ಮ ಹೇಮಕೂಟ ಸ್ಥಳಕ್ಕೆ ಹೋಗುತ್ತಾಳೆ,' ಎಂದು ಹೇಳಿದೆನು. ಅದನ್ನು ಕೇಳಿ ಸ್ವಲ್ಪ ಹೊತ್ತು ಸುಮ್ಮನೆ ನಿಂತು ಆಲೋಚಿಸಿ, ನನ್ನ ಮುಖ ನೋಡಿ — 'ತಂಗೀ ನೀನು ಸಣ್ಣವಳಾದರೂ ಬಹು ಜಾಣಳಿದ್ದೀ; ನನ್ನದೊಂದು ಮಾತು ಕೇಳೀಯಾ?' ಅಂದನು. ಆಗ ನಾನು ಆತನಿಗೆ ನಮ್ರಭಾವದಿಂದ ಕೈಮುಗಿದು—'ಸ್ವಾಮಿಾ, ತಮ್ಮಂಥ ಮಹಾತ್ಮರ ದರ್ಶನವಾಗುವದೇ ಪರಮ ಪುಣ್ಯವು. ಅದರೊಳಗೆ ತಮ್ಮ ಆಜ್ಞಾರೂಪ ಪ್ರಸಾದ ದೊರೆತ ಬಳಿಕ ನಾನು ಕೃತಾರ್ಥಳೇ ಸರಿ. ಅದೇನು ತಮ್ಮ ಮಾತು, ಸೇವಕಳಿಗೆ ಅರುಹಬೇಕು,' ಅಂದೆನು. ನನ್ನ ಮಾತು ಕೇಳಿ ಆತನು ಆನಂದಪಟ್ಟು ಬಳಿಯಲ್ಲಿದ್ದ ತಮಾಲವೃಕ್ಷದ ಎಳೆದಳಿರುಗಳನ್ನು ತಕ್ಕೊಂಡು ತಿಕ್ಕಿ ರಸ ತೆಗೆದು ತನ್ನ ಉತ್ತರೀಯದ ಸೆರಗು ಹರಿದು, ಆ ತುಣುಕಿನ ಮೇಲೆ ಆ ರಸದಿಂದ ತನ್ನ ಕಿರಿಬೆರಳಿನಿಂದ ಈ ಪತ್ರಿಕೆಯ ಬರೆದು—'ಇದನ್ನು ಆ ಕನ್ನಿಕೆಗೆ ಏಕಾಂತದಲ್ಲಿ ಕೊಡು' ಎಂದು ನನ್ನ ಕೈಯಲ್ಲಿ ಕೊಟ್ಟನು" ಎಂದು ಹೇಳಿ ತನ್ನ ತಾಂಬೂಲದ ಕರಡಿಗೆಯೊಳಗಿಂದ ಆ ಪತ್ರಿಕೆಯನ್ನು ತೆಗೆದಳು; ಅದನ್ನು ಕಂಡು ಯಾವಾಗ ಓದೇನು ಎಂಬ ತವಕದಿಂದ ಸಾಗರಬಿದ್ದು ಆಕೆಯ ಕೈಯೊಳಗಿಂದ ತಕ್ಕೊಂಡು ಓದುತ್ತೇನೆ, ಅದರೊಳಗೆ —'ತಾವರೆಯ ತಂತುಗಳೋಪಾದಿಯಲ್ಲಿ ಶುಭ್ರವಾದ ಮುತ್ತಿನ ಸರವು ಮಾನಸಹಂಸವನ್ನು ಆಶೆಗೊಳಿಸಿ ದೂರ ಒಯ್ಯುವಂತೆ ನೀನು ನನ್ನ ಮಾನಸಹಂಸವನ್ನು ಒಯ್ದಿ' ಎಂದು ಬರೆದಿದ್ದನು.

ಅದನ್ನು ಓದಿದ್ದರಿಂದಂತೂ ನನ್ನ ಕಾಮವಿಕಾರವು ಅತಿಶಯವಾಯಿತು. ನನ್ನ ದಾಸಿಯು ಎರಡನೆಯ ಸಾರೆ ಆ ಋಷಿಕುಮಾರನ ದರ್ಶನ ತಕ್ಕೊಂಡು ಆತನ ಕೂಡ ಮಾತಾಡಿ ಬಂದುದರಿಂದ, ಅವಳು ಅತಿ ಭಾಗ್ಯವಂತಳೆಂದು ಎಣಿಸಿದೆನು. ದಾಸಿಯಾದರೂ, ಆಕೆಯ ಕೂಡ ಆದರದಿಂದಲೂ, ಪ್ರೀತಿಯಿಂದಲೂ ಮಾತಾಡಿದೆನು. ಆಕೆಯನ್ನು ಜೀವದ ಗೆಳತಿಯನ್ನು ಮಾಡಿಕೊಂಡು, ಗಲ್ಲವ ಹಿಡಿದು, ಮುಂಗುರುಳು ತೀಡಿ, 'ತರಲಿಕೇ, ಆ ಋಷಿಕುಮಾರನು ಮತ್ತೇನೇನು ಅಂದನು? ನೀನು ಎಷ್ಟು ಹೊತ್ತು ಆತನ ಬಳಿಯಲ್ಲಿದ್ದಿ?

ಆತನು ಎಲ್ಲಿಯತನಕ ನಮ್ಮ ಹಿಂದಿಂದೆ ಬಂದನು?' ಎಂದು ಮತ್ತೆ ಮತ್ತೆ ಆ ಋಷಿಕುಮಾರನ ಮಾತುಗಳನ್ನೇ ಆಕೆಯ ಕೂಡ ಆಡುತ್ತ ಸೌಧಾಗ್ರದ ಮೇಲೆಯೇ ಸಂಜೆಯ ತನಕ ಹೊತ್ತುಗಳೆದೆನು.

ಅಷ್ಟರೊಳಗೆ ಅಸ್ತಮವಾಯಿತು. ಬಳಿಕ ನನ್ನ ಸತ್ತಿಗೆ ಹಿಡಿಯುವ ತೊತ್ತು ಬಂದು— 'ಅವ್ವನವರೇ, ಆ ಋಷಿಕುಮಾರರಲ್ಲಿ ಒಬ್ಬನು ಜಪಮಾಲೆಯನ್ನು ಬೇಡ ಬಂದು ಬಾಗಿಲಲ್ಲಿ ನಿಂತಿದ್ದಾನೆ. ಚಿತ್ತಕ್ಕೆ ಅರಿಕೆಯಾಗಬೇಕು' ಎಂದ ಮಾತು ಕೇಳಿದ ಕೂಡಲೆ ಆ ನನ್ನ ಪ್ರಿಯ ಋಷಿಕುಮಾರನೇ ಬಂದನೇನೋ ಎಂದು ನಾನು ಒಬ್ಬ ಕಂಚುಕಿಗೆ ಅವನನ್ನು ಒಳಗೆ ಕರಕೊಂಡು ಬರುವದಕ್ಕೆ ಅಪ್ಪಣೆ ಮಾಡಿದೆನು. ಆಗ ಆ ಕಂಚುಕಿಯ ಹಿಂದಿಂದೆ ನನ್ನ ಪ್ರಿಯನ ಗೆಳೆಯನಾದ ಕಪಿಂಜಲನು ಏನೋ ಬೇಡುವವನ ಹಾಗೆ ಸಣ್ಣ ಮೋರೆಯ ಮಾಡಿಕೊಂಡು ಬಂದನು. ನಾನು ಎದ್ದು ಆದರಪೂರ್ವಕವಾಗಿ ಆತನಿಗೆ ನಮಸ್ಕಾರ ಮಾಡಿ ಆಸನವನ್ನು ಕೊಟ್ಟೆನು. ಆತನು ಆಸನದ ಮೇಲೆ ಕುಳಿತುಕೊಂಡ ಬಳಿಕ, ಅವನ ಇಚ್ಛೆ ಇಲ್ಲದಿದ್ದರೂ ಆಗ್ರಹದಿಂದ ನಾನೇ ಆತನ ಪಾದಪ್ರಕ್ಷಾಳನ ಮಾಡಿ ನನ್ನ ಸೀರೆಯ ಸೆರಗಿನಿಂದ ಆತನ ಕಾಲುಗಳನ್ನೊರಸಿ ಬಳಿಯಲ್ಲಿ ನೆಲದ ಮೇಲೆ ಕುಳಿತುಕೊಂಡೆನು.

ಬಳಿಕ ಅವನು ಒಂದು ಕ್ಷಣ ಹೊತ್ತು ಸುಮ್ಮನೆ ಕುಳಿತು ಏನೋ ಮಾತಾಡುವ ಇಚ್ಛೆಯಿಂದ ನನ್ನ ಹತ್ತಿರ ನಿಂತ ತರಲಿಕೆಯ ಮೋರೆ ನೋಡಹತ್ತಿದನು. ನಾನು ಆತನ ಅಭಿಪ್ರಾಯ ತಿಳಿದು 'ಸ್ವಾಮೀ, ಈಕೆ ನನ್ನ ಜೀವದ ಗೆಳತಿಯು, ನಮ್ಮ ಶರೀರಗಳೇ ಬೇರೆಯಲ್ಲದೆ ಪ್ರಾಣವೊಂದೇ; ಆದ್ದರಿಂದ ತಾವು ಏನಾದರೂ ಮಾತಾಡುವದಿದ್ದರೆ ನಿಃಶಂಕೆಯಿಂದ ಮಾತಾಡಬೇಕು' — ಎಂದು ಹೇಳಿಕೊಂಡೆನು.

ಆಮೇಲೆ ಕಪಿಂಜಲನು—'ತಾಯೀ, ರಾಜಪುತ್ರೀ, ಏನು ಹೇಳಲಿ? ಈ ವಿಷಯವಾಗಿ ಮಾತಾಡೇನೆಂದರೆ ನಾಚಿಕೆಯಿಂದ ನನ್ನ ನಾಲಿಗೆಯೇ ಏಳಲೊಲ್ಲದು. ನೋಡು, ಕಂದಮೂಲಗಳನ್ನು ತಿಂದು ವನದಲ್ಲಿ ವಾಸ ಮಾಡುವ ಶಾಂತಚಿತ್ತರಾದ ತಪೋನಿಷ್ಠರೆತ್ತ? ವಿಷಯಾಸಕ್ತರಾದ ಕಾಮುಕರು ಅಂಗೀಕರಿಸುವ ಮಲಿನವಾದ ವಿಷಯಪ್ರಪಂಚವೆತ್ತ? ಒಂದಕ್ಕೊಂದು ಸಂಬಂಧವೇ ಇಲ್ಲ. ಹೀಗಿರಲಾಗಿ ನೋಡು, ದೈವವು ನಮ್ಮನ್ನು ಏನು ಮಾಡಹಚ್ಚಿತು! ಎರಡನೆಯ ಉಪಾಯವೇ ಇಲ್ಲ; ಹೇಳದಿದ್ದರೆ ಬಹಳ ಅನರ್ಥವಾಗುವಂತಿದೆ. ಪ್ರಾಣವನ್ನು ಸಹ ಕೊಟ್ಟು ಮಿತ್ರನನ್ನು ಉಳಿಸಿಕೊಳ್ಳಬೇಕೆಂದು ನೀತಿಯುಂಟು. ನಾನು ಅವನಿಗೆ ಸಿಟ್ಟಿನಿಂದಲೂ ನಿಷ್ಠುರತೆಯಿಂದಲೂ ಬುದ್ಧಿಯ ಹೇಳಿದ್ದು ನೀನು ಕೇಳಿರಬಹುದು. ಅವನ ನಡತೆ ನನಗೆ ಸರಿಬಾರದ್ದರಿಂದ ನಾನು ಅವನನ್ನು ಅಲ್ಲಿಯೇ ಬಿಟ್ಟು ಹೂವುಗಳನ್ನೆತ್ತುವ ನೆವಮಾಡಿ ಒತ್ತಟ್ಟಿಗೆ ಹೋದೆನು. ಬಳಿಕ ನೀನೂ ಅಲ್ಲಿಂದ ಹೋದದ್ದು ತಿಳಿದು, ಇವನೊಬ್ಬನೇ ಏನು ಮಾಡುತ್ತಾನೋ ನೋಡಬೇಕೆಂದು ಒಂದು ಗಿಡದ ಮರೆಗೆ ನಿಂತು ನೋಡಿದೆನು; ಆದರೆ ಅವನು ಅಲ್ಲಿ ಕಾಣಲಿಲ್ಲ. ಆಗ ನನ್ನ ಮನದೊಳಗೆ ಇವನು ಕಾಮವಶನಾಗಿ ನಿನ್ನ ಬೆನ್ನು ಹತ್ತಿ ಬಂದನೋ ಅಥವಾ ನೀನು ಇತ್ತ ಬಂದ ಬಳಿಕ ಮೈಮೇಲೆ ಎಚ್ಚರಹುಟ್ಟಿ ಲಜ್ಜೆಯಿಂದ ಇನ್ನೇನು ಮೋರೆಯ ತೋರಿಸಲೆಂದು

ಎಲ್ಲಿಗಾದರೂ ಎದ್ದು ಹೋದನೋ, ನನ್ನ ನಿಷ್ಠುರ ಮಾತಿಗೆ ಸಿಟ್ಟಿಗೆದ್ದು ಇನ್ನು ಇವನ ಸಂಗತಿಯೇ ಸಾಕೆಂದು ನನ್ನನ್ನು ತೊರೆದು ಹೋದನೋ, ಅಥವಾ ನನ್ನನ್ನೇ ಹುಡುಕುತ್ತ ಎರಡನೆಯ ಪ್ರದೇಶಕ್ಕೆ ಹೋದನೋ ಎಂಬ ಹಲವು ಕಲ್ಪನೆಗಳು ಹುಟ್ಟಿದವು. ಹುಟ್ಟಿದಂದಿನಿಂದ ನಾನೂ ಅವನೂ ಎಂದೂ ಅಗಲಿದ್ದಿಲ್ಲ; ಆದುದರಿಂದ ನಾನು ಮನದೊಳಗೆ ಖೇದಗೊಂಡು ಧೈರ್ಯಗೆಟ್ಟದ್ದರಿಂದ ವ್ಯಾಕುಲನಾಗಿ, ಮಾಡಿದ ಕರ್ಮಕ್ಕೆ ಪಶ್ಚಾತ್ತಾಪ ಪಟ್ಟು ಜೀವಕ್ಕೇನಾದರೂ ಮಾಡಿಕೊಂಡನೋ ಏನೋ' ಎಂದು ಆತನನ್ನು ಹುಡುಕಲಾರಂಭಿಸಿದೆನು. ಎಷ್ಟು ಹುಡುಕಿದರೂ ಆತನು ನನ್ನ ಕಣ್ಣಿಗೇ ಬೀಳದ್ದರಿಂದ ನಾನು ಎದೆಯೊಡಕೊಂಡು ಚಿಂತಿಸುತ್ತ ಹೂದೋಟದೊಳಗೂ, ಗಿಡದ ಗುಂಪಿನೊಳಗೂ ನೋಡಿ ಸರೋವರದ ದಂಡೆಯ ಹಿಡಿದು ನಾಲ್ಕೂ ಕಡೆಗೆ ಹುಡುಕುವಷ್ಟರೊಳಗೆ ಅರಳುಮಲ್ಲಿಗೆಯ ಮಂಟಪದೊಳಗೆ ಒಂದು ಹಾಸುಕಲ್ಲಿನ ಮೇಲೆ ಕುಳಿತಿದ್ದನು. ಹತ್ತಿರ ಹೋಗಿ ನೋಡುತ್ತೇನೆ — ಸಣ್ಣ ಮೋರೆಯ ಮಾಡಿಕೊಂಡು, ತೇಲುಗಣ್ಣು ಹಾಕುತ್ತ, ಕಣ್ಣೀರು ಸುರಿಸುತ್ತ, ಆಗಾಗ ಬಿಸುಸುಯ್ಯುತ್ತ, ಎಡಗಲ್ಲಕ್ಕೆ ಎಡಗೈ ಹಚ್ಚಿಕೊಂಡು, ಕೊರಳೊಳಗಿನ ಮುತ್ತಿನ ಸರವನ್ನು ಎದೆಗೆ ಅವಚಿಕೊಂಡು, ಮೋಹಿತನೋ, ಮೂರ್ಛಿತನೋ, ಮರುಳು ಹಿಡಿದಾತನೊ, ನಿದ್ರಿತನೋ, ಸಮಾಧಿಸ್ಥನೋ, ಭೂತಗ್ರಸ್ತನೋ ಅನ್ನುವ ಹಾಗೆ ಅತ್ತಿತ್ತ ನೋಡದೆ, ಬಾಯಿಂದ ಆಡದೆ, ಎಲ್ಲ ವ್ಯಾಪಾರಗಳನ್ನು ತೊರೆದು ಸ್ತಬ್ಧನಾಗಿ ಗೊಂಬೆಯಂತೆ ಕುಳಿತಿದ್ದನು. ಆತನ ಮುಖವು ಬೆಳ್ಳಗಾಗಿ ಕಂದಿತ್ತು. ಇಂಥ ಅವಸ್ಥೆಗೊಳಗಾದ ನನ್ನ ಗೆಳೆಯನಾದ ಪುಂಡರೀಕನನ್ನು ದಿಟ್ಟಿಸಿ ನೋಡಿ ನನ್ನ ಮನಸ್ಸು ಬಹಳ ಮರುಗಿತು. ಇಂಥ ವಿರಕ್ತನನ್ನು ಒಂದು ಕ್ಷಣದೊಳಗೇ ಈ ಹಾಡು ಮಾಡಿದ ಮದನನು ಎಂಥ ಸಮರ್ಥನು! ಇಂಥ ಜ್ಞಾನರಾಶಿಯು ಒಮ್ಮಿಂದೊಮ್ಮೆಲೇ ಹೀಗೆ ಬರಿದಾಯಿತಲ್ಲವೇ! ಇದಕ್ಕೇನೆನ್ನಬೇಕು? ಎಷ್ಟು ಆಶ್ಚರ್ಯವಿದು!! ಚಿಕ್ಕಂದಿನಿಂದ ಈ ಪುಂಡರೀಕನ ಗುಣಗಳನ್ನು ಬಲ್ಲೆನು. ಈತನ ನಿಶ್ಚಲಚಿತ್ತವೂ, ಸುಸ್ವಭಾವವೂ, ಸದಾಚಾರವೂ ನನಗೂ ಉಳಿದ ಋಷಿಕುಮಾರರಿಗೂ ಬಹು ಪ್ರಿಯಕರವಾಗಿದ್ದವು. ಕಾಮನು ಇಂಥವನ ಜ್ಞಾನವನ್ನು ಲೆಕ್ಕಿಸದೆ, ತಪಃಪ್ರಭಾವವನ್ನು ಅಂದಗೆಡಿಸಿ, ಗಾಂಭೀರ್ಯವನ್ನು ಬೇರುಸಹಿತ ಕಿತ್ತು, ನಾಡಾಡಿಗರನ್ನು ಭಂಗಿಸುವಂತೆ ಇವನನ್ನು ಈ ಹೊತ್ತು ಪೂರಾ ವಿಷಯಲಂಪಟನನ್ನು ಮಾಡಿಬಿಟ್ಟನು. ಯೌವನಾವಸ್ಥೆಯಲ್ಲಿ ಮನಸ್ಸು ನಿಲುಕಡೆಗೊಳ್ಳುವದು ಬಹಳ ವಿರಳ ಎಂದು ಚಿಂತಿಸುತ್ತ ಅದೇ ಹಾಸುಗಲ್ಲಿನ ಮೇಲೆ ಒತ್ತಟ್ಟಿಗೆ ಮೈಗೆ ಮೈಹಚ್ಚಿ ಕುಳಿತು, ಅವನ ಹೆಗಲ ಮೇಲೆ ಕೈಹಾಕಿ, 'ಗೆಳೆಯಾ ಪುಂಡರೀಕಾ, ಇದೇನು ಮಾಡಿಕೊಂಡು ಕುಳಿತೆ? ಎಲಾ, ಕಣ್ಣು ತೆರೆದು ತುಸು ನನ್ನ ಕಡೆಗೆ ನೋಡು!' ಎಂದು ನಾನು ಆಗ್ರಹ ಮಾಡಿದ ಬಳಿಕ ಆತನು ಆಯಾಸದಿಂದ ಮೆಲ್ಲನೆ ಕಣ್ಣು ತೆರೆದು ಬಹಳ ಹೊತ್ತು ನನ್ನ ಮುಖವನ್ನು ಮಂದದೃಷ್ಟಿಯಿಂದ ನೋಡಿ, ನಿಟ್ಟುಸಿರುಬಿಟ್ಟು, ನಾಚಿಕೆಯಿಂದ ತೊದಲುತ್ತ— 'ಕಪಿಂಜಲಾ, ನೀನು ಎಲ್ಲ ವೃತ್ತಾಂತವನ್ನು ಬಲ್ಲವನಾಗಿ ನನ್ನನ್ನು ಏನು ಕೇಳುತ್ತೀ!' ಎಂದು ಸಂಕಟದಿಂದ ಮೆಲ್ಲನೆ ಅಂದನು. ಆ ಮಾತು ಕೇಳಿ, ಇನ್ನು ಮೇಲೆ ಈ ವಿಚಾರವು ಶಾಂತವಾಗುವದು ದುಸ್ತರವೆಂದು ತಿಳಿದು, ಹೇಗಾದರೂ ಕೈಲಾದಮಟ್ಟಿಗೆ ಅಸನ್ಮಾರ್ಗದೊಳಗಿಂದ ಮಿತ್ರನನ್ನು ಎಳಕೊಳ್ಳಬೇಕೆಂದು ನಿಶ್ಚಯಿಸಿ—'ಪುಂಡರೀಕಾ,

ನನಗೆಲ್ಲ ಗೊತ್ತುಂಟು; ಆದರೆ ಮೊದಲು ಸವಿದೋರಿ ಕಡೆಗೆ ವಿರಸವಾಗುವಂಥ ವಿಷಯೋಪಭೋಗವು ಸುಖಕರವೆಂದು ತಿಳಿಯುವದು, ಧರ್ಮಬುದ್ಧಿಯಿಂದ ವಿಷವೃಕ್ಷಕ್ಕೆ ನೀರೆರೆದಂತೆ, ಕಮಲದ ಮಾಲೆಯೆಂದು ಖಡ್ಗವನ್ನು ಕೊರಳೊಳಗೆ ಹಾಕಿಕೊಂಡಂತೆ, ರತ್ನವೆಂದು ಸೆರಗಿನೊಳಗೆ ಬೆಂಕಿಯ ಕಟ್ಟಿಕೊಂಡಂತೆ ಆಗುವದು. ನೀನು ವಿಷಯಗಳ ತತ್ವವನ್ನು ತಿಳಿದೂ ತಿಳಿದೂ ಯಾಕೆ ಅಜ್ಞಾನದೊಳಗೆ ಬೀಳುತ್ತೀ? ಹರಿಯುವ ಇಂದ್ರಿಯಗಳನ್ನು ಯಾಕೆ ತಡೆಯಲೊಲ್ಲಿ? ಮನ್ಮಥನೆಂದರೆ ಯಾವ ದೊಡ್ಡ ಪದಾರ್ಥ! ಧೈರ್ಯ ಹಿಡಿದು ಆ ದುಷ್ಟನನ್ನು ಧಿಕ್ಕರಿಸು; ಕೀಳನಂತೆ ಅವನ ವಶನಾಗಬೇಡ' ಎಂದು ಹೇಳಲು ಅವನು ಈ ನನ್ನ ಮಾತುಗಳನ್ನು ಹಳಿದು, ಕಣ್ಣೀರು ಒರಿಸಿಕೊಳ್ಳುತ್ತ, 'ಕಪಿಂಜಲಾ, ನಿನಗೆ ಇನ್ನೂ ಕಾಮನ ಕೂರಂಬಿನ ಹೊಡೆತವು ತಗಲಿಲ್ಲ. ಆದುದರಿಂದ ನೀನು ಸ್ವಸ್ಥ ಚಿತ್ತನಾಗಿ ಸುಖದಿಂದ ನನಗೆ ಉಪದೇಶ ಮಾಡುತ್ತೀ. ಆದರೆ ಬುದ್ಧಿ, ಮನಸ್ಸು ಸದ ಸದ್ವಿಚಾರಶಕ್ತಿಗಳಿದ್ದವನಿಗೇ ನಿನ್ನ ಈ ಉಪದೇಶವು ಸಲ್ಲುವದು. ನಾನಂತೂ ಇವುಗಳಿಗೆ ಎರವಾಗಿದ್ದೇನೆ. ಧೈರ್ಯ, ಸ್ಥೈರ್ಯ, ಜ್ಞಾನ, ಇಂದ್ರಿಯನಿಗ್ರಹಗಳು ಆಗಲೇ ನನ್ನ ಕೈಬಿಟ್ಟವು. ಜೀವ ಮಾತ್ರ ಒಂದು ಉಳಿದಿದೆ; ಇಂಥ ಸಮಯದಲ್ಲಿ ನಿನ್ನ ಹೊರತು ನನಗೆ ಹಿತವಂತರೂ ಒಳಿತು ಹೇಳುವವರೂ ಯಾರು? ನಿನ್ನ ಹೊರತು ಯಾರ ಮಾತು ಕೇಳಲಿ? ಈ ಜಗದಲ್ಲಿ ನಿನ್ನ ವ್ಯತಿರಿಕ್ತ ನನಗೆ ಬಂಧುಗಳು ಯಾರು? ಏನು ಮಾಡಲಿ? ನನ್ನಿಂದ ಮಾತ್ರ ತಡೆಯುವದಾಗದು. ನನ್ನ ಮೈಯೆಲ್ಲ ಸುಡುತ್ತದೆ; ಹೃದಯವು ಕುದಿಯುತ್ತದೆ; ದೃಷ್ಟಿಗಳು ಬೆಂದವು. ನನ್ನ ಯತ್ನವು ಮೀರಿತು. ಇನ್ನು ಇಂಥ ಪ್ರಸಂಗದಲ್ಲಿ ಯೋಗ್ಯ ಉಪಾಯವನ್ನು ನೀನೇ ಮಾಡಿ ನನ್ನನ್ನು ಉಳಿಸಿಕೊಳ್ಳಬೇಕು' ಎಂದು ಹೇಳಿ ಸುಮ್ಮನಾದನು.

ಇನ್ನು ನನ್ನ ಗೆಳೆಯನನ್ನು ಬದುಕಿಸಿಕೊಳ್ಳುವದಕ್ಕೆ ಏನು ಮಾಡಲಿ? ಯಾರಿಗೆ ಮೊರೆ ಹೋಗಲಿ, ಯಾರಿಗೆ ಹೇಳಲಿ, ಯಾವ ಉಪಾಯದಿಂದ ಈತನ ಪ್ರಾಣವು ಉಳಿದೀತು! ಎಂದು ಮನದೊಳಗೆ ಹಲವು ಹಂಚಿಕೆಗಳನ್ನು ಹಾಕುತ್ತ ಕುಳಿತೆನು. ಕಡೆಗೆ ಹೀಗೆ ಚಿಂತೆ ಮಾಡುತ್ತ ಕುಳಿತರೇನಾಗುವದು? ಒಳ್ಳೆಯ ಮಾರ್ಗದಿಂದಾಗಲಿ, ಕೀಳು ಮಾರ್ಗದಿಂದಾಗಲಿ ಇವನನ್ನು ಬದುಕಿಸುವ ಯತ್ನವನ್ನು ಮಾಡತಕ್ಕದ್ದು ಎಂದು ನಿಶ್ಚಯಿಸಿ ನಿಮ್ಮ ಬಳಿಗೆ ಬಂದೆನು. ನಿಂದ್ಯ ಕರ್ಮವನ್ನಾದರೂ ಮಾಡಿ ಮಿತ್ರನ ಜೀವವುಳಿಸಬೇಕೆಂದು ದೊಡ್ಡವರು ಹೇಳುತ್ತಾರೆ; ಇದರ ಸಲುವಾಗಿ ಲಜ್ಜಾಸ್ಪದವಾದ ನಿಂದ್ಯಕರ್ಮಕ್ಕೆ ಒಳಗಾಗುವ ಪ್ರಸಂಗವು ಬಂತು. ಮತ್ತೊಂದು ಮಾರ್ಗವೇ ಇಲ್ಲ, ಎಂದು ಚಿಂತಿಸಿ ನಾನು ಆಕೆಯ ಬಳಿಗೆ ಹೋಗಿ ನಿನ್ನ ಅವಸ್ಥೆಯನ್ನು ಆಕೆಗೆ ತಿಳಿಸುತ್ತೇನೆ ಎಂದು ಅವನಿಗೆ ಹೇಳಿದರೆ, ನನ್ನ ಮಿತ್ರನು ನನ್ನ ಸಲುವಾಗಿ ಅಯೋಗ್ಯ ವ್ಯಾಪಾರವನ್ನು ಮಾಡಪ್ರವರ್ತಿಸಿದನೆಂದು ತಿಳಿದುಕೊಂಡು ಲಜ್ಜಿತನಾಗಿ ನನ್ನನ್ನು ತಡೆದಾನೆಂದು ತಿಳಿದು ಅವನಿಗೆ ನಾನು ಹೇಳದೆ ನಿನ್ನ ಬಳಿಗೆ ಬಂದೆನು. ಆತನ ಅವಸ್ಥೆಯನ್ನಾಂತೂ ನಿನಗೆ ತಿಳಿಸಿದೆನು. ಇನ್ನು ಮೇಲೆ ನನ್ನ ಮಿತ್ರನನ್ನು ಉಳಿಸಿಕೊಳ್ಳುವದು ನಿನ್ನ ಕೈಯೊಳಗುಂಟು; ನಿನ್ನ ದರ್ಶನದ ಹೊರತು ಅವನು ಉಳಿಯುವ ಹಾಗಿಲ್ಲ. ಇನ್ನು ನಾನು ಹೆಚ್ಚಿಗೆ ಹೇಳಲಾರೆನು" ಎಂದು ಅಂದು ನನ್ನ ಬಾಯಿಂದ ಏನು ಉತ್ತರ ಬರುತ್ತದೋ ಕೇಳಬೇಕೆಂದು ನನ್ನ ಮೋರೆಯ ನೋಡುತ್ತ

ಸುಮ್ಮನೆ ಕುಳಿತನು.

ಈ ಮಾತು ಕೇಳಿ ನಾನು ಪ್ರೀತಿರಸದ ಸಮುದ್ರದೊಳಗೆ ಈಸಾಡಿ ಸುಖವೆಂಬ ಅಮೃತದ ಮಡುವಿನಲ್ಲಿ ಮುಳುಗಿ, ಇನ್ನು ನನ್ನ ಮನೋರಥವು ಕೈಗೂಡಿತೆಂದು ಆನಂದದೊಳಗೆ ಮಗ್ನಳಾದೆನು; ಆ ಸುಖಾತಿಶಯದೊಳಗೆ ನನ್ನ ನೇತ್ರದಿಂದ ಆನಂದಬಾಷ್ಪಗಳುದುರಿದವು. ಕಾಮನು ಅವನನ್ನೂ ಪರವಶ ಮಾಡಿ, ನನಗೆ ಅನುಕೂಲಿಸಿ, ನಿಜವಾಗಿ ನನ್ನ ಮೇಲೆ ಉಪಕಾರ ಮಾಡಿದನೆಂದೂ, ಇಂಥ ಪ್ರಸಂಗದಲ್ಲಿ ನಾನು ಏನು ಉತ್ತರ ಕೊಡಬೇಕೆಂದೂ ಆಲೋಚಿಸುತ್ತ ಕುಳಿತಿರುವಷ್ಟರಲ್ಲಿ ಒಬ್ಬ ದ್ವಾರಪಾಲಕನು ತವಕದಿಂದ ಬಂದು, 'ರಾಜಕನ್ನಿಕೆಯೇ, ನೀವು ಅಸ್ವಸ್ಥರಾಗಿದ್ದ ಸುದ್ದಿಯನ್ನು ಕೇಳಿ ಮಹಾರಾಣಿಯವರು ನಿಮ್ಮ ಸಮಾಚಾರಕ್ಕೆ ಬಂದರು' ಎಂದು ಹೇಳಿದನು. ಅದನ್ನು ಕೇಳಿ ಕಪಿಂಜಲ ಋಷಿಯು ಅಂಜಿ ಎದ್ದು ನಿಂತು, 'ರಾಜಪುತ್ರೀ, ಇನ್ನು ನಾನು ಕುಳಿತುಕೊಳ್ಳುವ ಸಮಯವಿಲ್ಲ, ಹೊತ್ತು ಮುಳುಗಿತು, ಹೋಗುತ್ತೇನೆ; ಆದರೆ ಎಲ್ಲ ಪರಿಯಿಂದ ನಿನ್ನ ಪ್ರಿಯನ ಪ್ರಾಣವನ್ನು ರಕ್ಷಿಸು ಕಂಡೆಯಾ!' ಎಂದು ಕೈಮುಗಿದು ಬೇಡಿಕೊಂಡು, ನನ್ನ ಪ್ರತ್ಯುತ್ತರದ ಮಾರ್ಗವ ನೋಡದೆ ನಮ್ಮ ತಾಯಿಯ ಸೇವಕರ ದಟ್ಟಣೆಯೊಳಗಿಂದ ನುಸುಳಿ, ಯುಕ್ತಿಯಿಂದ ಹೊರಬಿದ್ದು ಹೊರಟುಹೋದನು.

ನಮ್ಮ ತಾಯಿಯು ನನ್ನ ಹತ್ತಿರ ಬಂದು, ತುಸುಹೊತ್ತು ಕುಳಿತು ತಿರುಗಿ ತನ್ನ ಮಂದಿರಕ್ಕೆ ಹೋದಳು. ಆಗ ನನ್ನ ಮನಸ್ಸೆಲ್ಲ ಆ ಋಷಿ ಕುಮಾರನಲ್ಲಿಯೇ ತೊಡಗಿದ್ದರಿಂದ ಆಕೆ ಬಂದು ಏನು ಮಾತಾಡಿದಳೋ ನನಗೇನೂ ಅರಿವು ಇದ್ದಿಲ್ಲ. ಅವಳು ಹೋದ ಬಳಿಕ ಸೂರ್ಯಾಸ್ತ ಸಮಯವಾಗಿ ಮುಂಗಾವಳು ಕವಿಯಿತು. ಇನ್ನು ಮುಂದೆ ಏನು ಮಾಡಬೇಕೆಂಬುವದು ತಿಳಿಯದೆ ನಾನು ಮೂಢಳಾಗಿ ತರಲಿಕೆಯನ್ನು ಕುರಿತು — 'ತರಲಿಕೇ, ನನ್ನ ಮನಸ್ಸು ತರಹರಗೊಳ್ಳದು, ಇನ್ನೇನು ಮಾಡಲಿ! ನೀನಾದರೂ ತಕ್ಕ ಹಂಚಿಕೆಯನ್ನು ಹೇಳೇ, ಆ ಕಪಿಂಜಲನು ಹೇಳಿದ್ದನ್ನೆಲ್ಲ ನೀನು ಕೇಳಿದಿಯಷ್ಟೇ. ಉಳಿದ ಕನ್ಯೆಯರಂತೆ ನಾಚಿಕೆದೊರೆದು, ಧೈರ್ಯಗೆಟ್ಟು, ಸದಾಚಾರ ಬಿಟ್ಟು, ಕುಲವನ್ನು ಲೆಕ್ಕಿಸದೆ, ಲೋಕಾಪವಾದಕ್ಕೆ ಹೆದರದೆ, ವಿಷಯಾಂಧಳಾಗಿ, ತಂದೆ ತಾಯಿಗಳ ಅನುಜ್ಞೆ ತಕ್ಕೊಳ್ಳದೆ, ಆತನ ಬಳಿಗೆ ಹೋಗಿ, ಅವನ ಪಾಣಿಗ್ರಹಣ ಮಾಡಿದರೆ, ಗುರುಹಿರಿಯರನ್ನು ಧಿಕ್ಕರಿಸಿದ ದೋಷವು ಬರುವದು. ಧರ್ಮದ ಪ್ರತಿಬಂಧದ ಮೂಲಕವಾಗಿ ಆತನ ಬಳಿಗೆ ಹೋಗದೆ, ನಾನೇ ಮೃತ್ಯುವಿಗೆ ತುತ್ತಾದರೆ ತಾನಾಗಿ ಬಂದ ಕಪಿಂಜಲನ ಮನೋಭಂಗ ಮಾಡಿದಂತಾಗುವದು. ಒಂದು ವೇಳೆ ಆಶಾಭಂಗ ಮಾಡಿದಳೆಂದು ನನ್ನ ಸಲುವಾಗಿ ಆ ಪುಂಡರೀಕನು ಪ್ರಾಣ ಕೊಟ್ಟರೆ, ಆ ಪಾಪವು ನನಗೆ ಜನ್ಮಜನ್ಮಾಂತರಕ್ಕೂ ಬಿಡದು. ಇನ್ನು ಮುಂದೆ ಏನು ಮಾಡಬೇಕು? ನೀನೇ ಹೇಳು' ಎಂದು ಮಾತಾಡುವಷ್ಟರಲ್ಲಿ ಮೂಡಣದಿಕ್ಕು ಬೆಳ್ಳಗಾಗಿ ಚಂದ್ರೋದಯವಾಯಿತು. ಚಂದ್ರನು ಮೇಲಕ್ಕೇರಿದ ಹಾಗೆ ನನ್ನ ಹೃದಯದೊಳಗಿನ ಮದನಾಗ್ನಿಯು ಪ್ರಜ್ವಲಿಸಿದ್ದರಿಂದ ವ್ಯಾಕುಲಚಿತ್ತಳಾಗಿ, ಕೂಡಲಾರದೆ ತರಲಿಕೆಯ ತೊಡೆಯ ಮೇಲೆ ತಲೆಯಿಟ್ಟು ಚಂದ್ರನನ್ನು ನೋಡುತ್ತ — 'ಮದನ, ಮಧುಮಾಸ, ಮಲಯಮಾರುತರು ಒಂದು ಕಡೆ, ಈ ಚಂದ್ರನು ಒಂದು ಕಡೆ; ನೋಡು,

ಕಾಮವ್ಯಥೆಯಿಂದ ನಾನು ಬಳಲುವಾಗಲೇ ಈತನು ಉದಿತನಾಗಿ, ಜ್ವರ ಬಂದವರ ಮೈಮೇಲೆ ಬೆಂಕಿಯ ಮಳೆಗರೆದಂತೆ ಮಾಡುತ್ತಾನೆ' ಎಂದು ಚಿಂತಿಸುತ್ತ, ಚಂದ್ರೋದಯದಿಂದ ಪದ್ಮಿನಿಯು ಮುಕುಳಿತವಾಗುವಂತೆ ಮೂರ್ಛೆ ಬಂದು ಕಣ್ಣು ಮುಚ್ಚಿದೆನು. ಆಗ ತರಲಿಕೆಯು ಗಾಬರಿಯಾಗಿ, ಚಂದನರಸವನ್ನು ನನ್ನ ಎದೆಗೆ ತೊಡೆದು, ತಾಲವೃಂತದಿಂದ ನನಗೆ ಗಾಳಿಯ ಹಾಕಿದಳು. ಆಗ ಎಚ್ಚರಗೊಂಡು ನನ್ನ ಅವಸ್ಥೆಗೆ ಕಣ್ಣೀರುಸುರಿಸುವ ತರಲಿಕೆಯ ಮುಖವನ್ನು ಕಣ್ದೆರೆದು ನೋಡಹತ್ತಿದೆನು. ನಾನು ಕಣ್ಣು ತೆರೆದದ್ದನ್ನು ನೋಡಿ ತರಲಿಕೆಯು ನನಗೆ ಕೈಮುಗಿದು — 'ಭರ್ತೃದಾರಿಕೇ, ಇನ್ನು ಲಜ್ಜೆ ಯಾಕೆ? ಗುರುಹಿರಿಯರಿಗೆ ಇನ್ನು ಅಂಜಿ ಪ್ರಯೋಜನವೇನು? ಅಪ್ಪಣೆ ಕೊಡು. ನಿನ್ನ ಪ್ರಿಯನನ್ನು ಇಲ್ಲಿಗೆ ಕರತರುವೆನು. ಇಲ್ಲವೆ ನೀನೇ ಆತನ ಬಳಿಗೆ ಹೋಗುವ ಉದ್ಯೋಗ ಮಾಡು. ಇನ್ನು ಚಂದ್ರನು ಮೇಲಕ್ಕೇರಿದ ಹಾಗೆಲ್ಲ ನಿನ್ನ ಸಂತಾಪವು ಹೆಚ್ಚಾಗುತ್ತದೆ; ಆ ಸಂತಾಪವನ್ನು ನೀನು ಸೈರಿಸಲಾರೆ; ಇನ್ನು ತಡಮಾಡಬೇಡ, ಬೇಗನೇ ಏಳು' ಎಂದ ತರಲಿಕೆಯ ನುಡಿಗಳನ್ನು ಕೇಳಿ, ನಾನು — 'ಗೆಳತೀ, ನೀನು ಆಡುವದು ನಿಜವು; ಈ ದೋಷಾಕರನಾದ ಚಂದ್ರನು ನನ್ನನ್ನು ಆ ಪ್ರಿಯನ ಬಳಿಗಾಗಲಿ ಒಯ್ಯಬೇಕೆಂದೇ ಉದಿತನಾಗಿದ್ದಾನೆ; ಇನ್ನು ತಾಳಲಾರೆನು. ಏಳು, ಜೀವವಿರುವದರೊಳಗೆ ಹೇಗಾದರೂ ಹೋಗಿ ಆ ಪ್ರಿಯನ ಮುಖವ ನೋಡುವಾ' ಎಂದು ಹೇಳಿ ಮನ್ಮಥವ್ಯಥೆಯಿಂದ ಅಶಕ್ತಳಾಗಿದ್ದರೂ ತರಲಿಕೆಯ ಕೈಹಿಡಿದು ಚಟ್ಟನೆ ಎದ್ದು ನಿಂತೆನು.

ನಾನು ಎದ್ದ ಕೂಡಲೆ ನನ್ನ ಬಲಗಣ್ಣು ಹಾರಿತು. ಆ ದುಶ್ಚಿಹ್ನದಿಂದ ಮತ್ತೇನು ಅರಿಷ್ಟವು ಪ್ರಾಪ್ತವಾಗುತ್ತದೋ ಎಂದು ನನಗೆ ಸಂಶಯವು ತಟ್ಟಿತು.

ಅಷ್ಟರಲ್ಲಿ ಚಂದ್ರಬಿಂಬವು ಚೆನ್ನಾಗಿ ಮೇಲಕ್ಕೇರಿ ಭೂಮಂಡಲವನ್ನೆಲ್ಲ ಬೆಳದಿಂಗಳಿಂದ ಶೋಭೆಗೊಳಿಸಲಾಗಿ, ನಾನು ಕೊರಳೊಳಗೆ ರುದ್ರಾಕ್ಷಮಾಲೆಯನ್ನು ಹಾಕಿಕೊಂಡು, ಕಿವಿಯಲ್ಲಿ ಪಾರಿಜಾತಪುಷ್ಪಮಂಜರಿಯನ್ನಿಟ್ಟುಕೊಂಡು, ಕೆಂಪು ಶಾಲಜೋಡಿಯನ್ನು ತಲೆಯ ಮೇಲಿಂದ ಮೈತುಂಬ ಹೊದ್ದುಕೊಂಡು, ಯಾರಿಗೂ ತಿಳಿಯಗೊಡದೆ ಸೌಧಾಗ್ರದಿಂದ ಕೆಳಗೆ ಇಳಿದೆನು. ಆಗ ನನ್ನ ಸಂಗಡ ಹೂವುಗಳನ್ನೂ, ತಾಂಬೂಲವನ್ನೂ, ಸುಗಂಧದ್ರವ್ಯಗಳನ್ನೂ ತೆಗೆದುಕೊಂಡು ತರಲಿಕೆಯೂ ಬಂದಳು. ಆಕೆಯೂ ನಾನೂ ಪ್ರಮದವನದ ದಾರಿಯ ಹಿಡಿದು, ತೀವ್ರವಾಗಿ ಪುಂಡರೀಕನ ಬಳಿಗೆ ಹೋಗಬೇಕೆಂಬ ಲವಲವಿಕೆಯಿಂದ ಹೊರಟೆವು. ದಾರಿಯೊಳಗೆ ನಾನು — 'ತರಲಿಕೇ, ಈ ಚಂದ್ರನು ನನ್ನನ್ನು ಮಂದಿರದೊಳಗೆ ಕೂಡಗೊಡದೆ ಹೊರಡಿಸಿದಂತೆ ಆ ಪುಂಡರೀಕನನ್ನೂ ನಮ್ಮ ಎದುರಿಗೆ ತಂದಾನೇನೆ?' ಎಂದು ನಾನು ಕೇಳಿದ್ದಕ್ಕೆ ಆಕೆ ಮುಗುಳ್ನಗೆ ನಕ್ಕು, ವಿನೋದದಿಂದ ನನಗೆ 'ರಾಜಕನ್ಯೇ, ನೀನು ಹುಚ್ಚಳು. ಈ ಚಂದ್ರನಿಗೆ ಆ ಪುಂಡರೀಕನಿಂದೇನು ಪ್ರಯೋಜನ? ನೋಡು, ತಾನೇ ಕಾಮಾತುರನಾಗಿ ನಿನ್ನ ಗಲ್ಲದ ಮೇಲಿನ ಬೆವರಹನಿಯೊಳಗೆ ಪ್ರತಿಬಿಂಬರೂಪದಿಂದ ಬಂದು ನಿಂತು, ನಿನಗೆ ಹೇಗೆ ಮುದ್ದು ಕೊಡುತ್ತಾನೆ! ನಿನ್ನ ಕಾಲ ಉಗುರೊಳಗೆ ಪ್ರತಿಬಿಂಬರೂಪದಿಂದ ಮೂಡಿ ನಿನ್ನ ಚರಣಕ್ಕೆರಗಿ, ದೈನ್ಯದಿಂದ ಹೇಗೆ ಬೇಡಿಕೊಳ್ಳುತ್ತಾನೆ ನೋಡು! ಸ್ತ್ರೀಯರಿಗೆ ಮೋಹಿತ

ರಾಗದವರು ಯಾರು!' ಎಂದು ನಗೆ ಮಾತುಗಳನ್ನು ಆಡುತ್ತಿರಲು, ಸಖಿಯೂ ನಾನೂ ಅದೇ ಪ್ರದೇಶದ ಸಮೀಪದ ಚಂದ್ರಕಾಂತಮಣಿಯ ಝರಿಗೆ ಹೋಗಿ, ಹಾದಿಯ ಹುಡಿಯಿಂದಲೂ ಪುಷ್ಪ ಪರಾಗದಿಂದಲೂ ಮಲಿನವಾದ ಕಾಲು ತೊಳೆದುಕೊಂಡು ಮುಂದಕ್ಕೆ ಹೋಗಲು, ಪುಂಡರೀಕನಿದ್ದ ಸ್ಥಳದಿಂದ ಪುರುಷನ ಅಳು ಧ್ವನಿಯು ಕೇಳಬಂತು. ಮೊದಲೇ ನನ್ನ ಬಲಗಣ್ಣು ಹಾರಿದ್ದರಿಂದ ಮನಸ್ಸಿನೊಳಗೆ ಸಂಶಯವಿದ್ದೇ ಇತ್ತು; ಆಮೇಲೆ ಆ ರೋದನಧ್ವನಿಯನ್ನು ಕೇಳಿದ್ದರಿಂದಂತೂ ನನ್ನ ಹರಣವೇ ಹಾರಿತು; ಕಾಲುಗಳೇ ಏಳದ ಹಾಗಾದವು, ಏನು ಅನಿಷ್ಟವಾಯಿತೋ ಏನೋ ಎಂದು ಎದೆಯೊಡಕೊಂಡು, 'ತರಲಿಕೇ ಇದೇನಿದ್ದೀತು' ಎಂದು ನಡುಗುತ್ತ ತತ್ತರಿಸುತ್ತ ಮುಂದಕ್ಕೆ ಹೋಗಲು —"ಅಯ್ಯಯ್ಯೋ, ಏನು ಮೋಸವಾಯಿತು! ಒಮ್ಮಿಂದೊಮ್ಮೆಲೆ ಎಂಥ ಸಂಕಟ ಬಂತು! ಎಲಾ, ದುರಾತ್ಮಾ ಕಾಮಾ ನೀನು ಎಂಥ ನಿರ್ದಯನೊ, ಇಂಥ ಹೊಲ್ಲದ ಕೆಲಸ ಮಾಡಿದಿಯಾ! ಎಲೈ ನಿರ್ಘೃಣ ಮನಸ್ಕಳಾದ ಮಹಾಶ್ವೇತೇ, ನಿನಗೆ ಈತನು ಅಂಥದೇನು ಮಾಡಿದ್ದನೇ! ಪಾಪಾತ್ಮನಾದ ಚಾಂಡಾಳಾ ಚಂದ್ರಾ, ನಿನ್ನ ಹರಕೆ ಇಂದಿಗೆ ಕೈಗೂಡಿತೇ! ಈಗ ತಣ್ಣಗಾದೆಯಾ! ಮಲಯ ಮಾರುತಾ, ಈಗ ನಿನ್ನ ಮನೋರಥವು ಪೂರ್ಣವಾಯಿತೇ! ಇನ್ನು ಬೇಕಾದಷ್ಟು ಬೀಸು! ಎಲೈ ಪುತ್ರವತ್ಸಲನಾದ ಶ್ವೇತಕೇತೂ, ಮಗನು ಸತ್ತದ್ದು ನಿನಗೆ ಗೋಚರವೇ ಇಲ್ಲ. ಧರ್ಮವೇ, ಇಂದಿಗೆ ನೀನು ಬಯಲಾದಿ! ತಪವೇ, ಇಂದಿಗೆ ನೀನು ನಿರಾಶ್ರಯವಾದಿ! ಸರಸ್ವತಿಯೇ ಇಂದಿಗೆ ನೀನು ಪತಿಹೀನಳಾದಿ! ಸುರಲೋಕವೇ, ಇಂದಿಗೆ ನಮ್ಮ ಪಾಲಿಗೆ ಶೂನ್ಯವಾದಿ! ಅಯ್ಯೊ, ನನ್ನ ಜೀವದ ಗೆಳೆಯನೇ, ನಿನ್ನ ಬಿಟ್ಟು ನಾನು ಹೇಗೆ ಇಲ್ಲಿ ಇರಲಿ! ನಿನ್ನನ್ನು ಆಗಲಿ ನಾನೊಬ್ಬನೇ ಎಂದೂ ಒಂದು ನಿಮಿಷ ಸಹ ಇರುತ್ತಿದ್ದಿಲ್ಲ. ನನ್ನ ಮಾರ್ಗ ನಿರೀಕ್ಷಿಸು! ನಿನ್ನ ಬೆನ್ನ ಹಿಂದಿಂದಲೇ ಬಂದೇನು! ಇನ್ನು ನನ್ನೊಬ್ಬನನ್ನೇ ಇಲ್ಲಿ ಬಿಟ್ಟು ಅಪರಿಚಿತನಂತೆ ಒಮ್ಮಿಂದೊಮ್ಮೆಲೆ ನಿನಗೆ ಹೋಗಬೇಕೆನಿಸಿತೇ? ನನ್ನ ಮೇಲೆ ಇಂದು ಇಷ್ಟು ಬೇಸರವಾದ ಕಾರಣವೇನು? ಇನ್ನು ನಾನು ಯಾರ ಸಂಗಡ ತಿರುಗಾಡಲಿ? ಯಾರ ಕೂಡ ಮಾತಾಡಲಿ? ಯಾರಿಗೆ ಹೇಳಿಕೊಳ್ಳಲಿ? ಯಾರಿಗೆ ಮೊರೆಹೋಗಲಿ? ಇಂದಿಗೆ ನಾನು ಮುಂದುಗಾಣದವನಾದೆನು; ನಿರಾಶ್ರಿತನಾದೆನು; ಸುಖಹೀನನಾದೆನು. ಮಿತ್ರನೇ, ಇಷ್ಟು ಪ್ರಲಾಪಿಸುತ್ತೇನೆ. ನನಗೆ ಸ್ವಲ್ಪವಾದರೂ ಸಮಾಧಾನ ಹೇಳೋ! ಎಲೈ ಪುಂಡರೀಕಾ, ನನ್ನ ಮೇಲಿನ ನಿನ್ನ ಪ್ರೇಮವು ಎತ್ತ ಹೋಯಿತು? ಮುಂಚೆ ನನ್ನ ಕೂಡ ಮಾತಾಡುವ ನಿನ್ನ ಸವಿ ಮಾತುಗಳು ಎತ್ತ ಹೋದವು?" ಎಂದು ಕಪಿಂಜಲನು ಹಾಡಿ ಹಾಡಿ ಅಳುವ ಧ್ವನಿಯು ನನ್ನ ಕಿವಿಗೆ ಬಿದ್ದ ಕೂಡಲೆ, ನಾನು ಎದೆ ಎದೆ ಬಡೆದುಕೊಳ್ಳುತ್ತ, ಅವಸರದಿಂದ ತೆಗ್ಗು ಮುಗ್ಗುಗಳನ್ನು ನೋಡದೆ ಓಡಿ ಬರುವಾಗ ನನ್ನ ಸೀರೆಯ ಸೆರಗು ಬಳ್ಳಿಗೆ ಸಿಕ್ಕು ಹರಿಯಿತು. ಆದರೂ ಅದನ್ನು ಲೆಕ್ಕಿಸದೆ ಆದಷ್ಟು ತ್ವರೆಮಾಡಿ, ಯಾರೋ ಎತ್ತಿಕೊಂಡು ಒಯ್ದರೊ ಏನೋ ಅನ್ನುವ ಹಾಗೆ ಆ ಸ್ಥಳಕ್ಕೆ ಹೋಗಿ ಮುಟ್ಟಿದೆನು. ನೋಡುತ್ತೇನೆ — ಚಂದ್ರಕಾಂತಶಿಲಾತಲದ ಮೇಲೆ ಕಮಲ ಪುಷ್ಪಗಳನ್ನೂ, ಮೃಣಾಳಗಳನ್ನೂ ಹರವಿ ಹಾಸಿಗೆ ಮಾಡಿ, ಅದರ ಮೇಲೆ ಪುಂಡರೀಕನನ್ನು ಮಲಗಿಸಿ ಹತ್ತಿರ ಕಪಿಂಜಲನು ಅಳುತ್ತ ಕುಳಿತಿದ್ದನು. ಆಗ ಇವನೇನು ನಿದ್ರಿತನೋ, ಮೂರ್ಛಿತನೋ, ಎಂದು ಸಂಶಯಗೊಳ್ಳುತ್ತ, ತೀರ ಸಮೀಪಕ್ಕೇ ಹೋದೆನು. ಕಪಿಂಜಲನು

ಆತನ ಮೈತುಂಬ ಕರ್ಪೂರಚೂರ್ಣವ ತೊಡೆದು; ಕೊರಳೊಳಗೆ ಮೃಣಾಲಗಳನ್ನು ಹಾಕಿ, ಎದೆಯ ಮೇಲೆ ಬಾಳೆಯೆಲೆಗಳನ್ನು ಇಟ್ಟಿದ್ದನು; ಎದೆಗೆ ಎಡಗೈ ಹಚ್ಚಿಕೊಂಡು, ತಾವರೆಯ ತಲ್ಪದ ಮೇಲೆ ಬಲಗೈ ಚೆಲ್ಲಿ ಅದೇ ಜೀವ ಹೋದದ್ದರಿಂದ ನಿಶ್ಚೇಷ್ಟಿತನಾಗಿ ಅಂಗಾತ ಬಿದ್ದುಕೊಂಡ ಪುಂಡರೀಕನನ್ನು ಈ ಪಾಪದ ಕಣ್ಣುಗಳು ನೋಡಿದವು. ನನ್ನನ್ನು ಕಂಡಕೂಡಲೇ ಆ ಕಪಿಂಜಲನು ಅತಿ ದುಃಖದಿಂದ ದೊಡ್ಡ ಧ್ವನಿ ತೆಗೆದು ಪುಂಡರೀಕನ ಕೊರಳಿಗೆ ತೆಕ್ಕೆ ಬಿದ್ದು ಅಳಹತ್ತಿದನು. ಆಗ ಪುಂಡರೀಕನು ಸತ್ತನೆಂದು ತಿಳಿದು ನಾನು ಪಾತಾಳಕ್ಕೇ ಇಳಿದೆನು; ಮೂರ್ಛೆ ಬಂದು ಕಣ್ಣಿಗೆ ಕತ್ತಲೆಗವಿಯಿತು. ನಾನೂ ಆಗಲೇ ಸತ್ತು ಹೋಗತಕ್ಕದ್ದು, ಆದರೆ ಮೂಢರ ಹೃದಯವು ಬಹು ಕಠಿಣವು. ಜನ್ಮಾಂತರದ ಪಾಪದ ಫಲವನ್ನು ಯಾರು ಅನುಭೋಗಿಸಬೇಕು? ದುಃಖದ ಸಂತಾಪದಿಂದ ಭೂಮಿಯ ಮೇಲೆ ಬಿದ್ದು ಹೊರಳಾಡಿ, ಹಲುಬಿ, ಹಂಬಲಿಸಿ, ಕಂಬನಿ ಸುರಿಸಿ, ಪುಂಡರೀಕನು ಸತ್ತು ನಾನು ಜೀವದಿಂದ ಇದ್ದದ್ದು ನನ್ನದು ನನಗೇ ಆಶ್ಚರ್ಯವಾಗಿ, ಇದು ಏನಾಯಿತೆಂದು ಗೋಳಿಟ್ಟು, 'ಎಲೈ ಪ್ರಾಣಕಾಂತಾ, ಪುಂಡರೀಕಾ, ನಿಷ್ಕರುಣೆಯೇ ನಿನ್ನ ಸಲುವಾಗಿ ತಾಯಿ, ತಂದೆ, ಬಂಧು, ಬಳಗದವರನ್ನು ತೊರೆದು ಇಲ್ಲಿಗೆ ಬಂದೆನು; ನಿನ್ನನ್ನು ಅಗಲಿದಾಗ ಒಂದು ದಿನವೆಂಬುವದು ನನಗೆ ಒಂದು ಯುಗವಾಯಿತು. ಈ ತರಲಿಕೆಯನ್ನು ಕೇಳು ಬೇಕಾದರೆ; ಇಂಥಾಕೆಯನ್ನು ಬಿಟ್ಟು ಹೋಗುವದುಚಿತವೆ? ಮಾತಾಡು, ಇದೆಯೋ ನಿನ್ನ ಭಕ್ತವತ್ಸಲತೆ? ಕಣ್ಣು ತೆರೆದು ಸ್ವಲ್ಪಾದರೂ ನನ್ನನ್ನು ನೋಡು, ನಾನು ನಿನ್ನಲ್ಲಿ ಅನುರಕ್ತಳಾದ ದಾಸಿಯು, ದೀನಳು, ಅನಾಥಳು, ನಿನ್ನನ್ನು ನಂಬಿದ ತೊತ್ತು; ಇಂಥವಳಿಗೆ ದಯೆ ತೋರಿಸುವದು ನಿನ್ನ ಮನಸ್ಸಿಗೆ ಬರಲಿಲ್ಲವೇ? ನಾನು ಮಾಡಿದ ಅಪರಾಧವೇನು? ಹೇಳು; ನೀನು ಹೇಳಿದ್ದನ್ನು ನಾನು ಏನು ಕೇಳಲಿಲ್ಲ? ನಿನ್ನ ಪ್ರೀತಿಗೆ ನಾನು ಪ್ರತಿಕೂಲಳಾದದ್ದೇನು? ಸುಮ್ಮನೆ ಇಷ್ಟು ಮುನಿಸು ಯಾಕೆ? ನಚ್ಚಿದವಳನ್ನು ಕಾರಣವಿಲ್ಲದೆ ನಿರಾಕರಿಸಿದರೆ ನಿನಗೆ ಲೋಕಾಪವಾದವು ಬಾರದೆ? ಇದು ನಿಜವೇ ಸರಿ, ಸುಳ್ಳೇ ಅನುರಾಗ ತೋರಿಸಿ ಮೋಸಗೊಳಿಸುವ ಸ್ತ್ರೀಯಿಂದ ನಿನಗೇನು ಪ್ರಯೋಜನವು! ಅಯ್ಯೋ ದೈವವೇ, ಇನ್ನೂ ನಾನು ಜೀವ ಹಿಡಿದಿರಬೇಕೆ! ಎಲೈ ಪ್ರಾಣಪ್ರಿಯನೇ, ನೀನು ನನಗೆ ಇಲ್ಲವಾದುದರಿಂದ ತಾಯಿ, ತಂದೆ, ಬಂಧು, ಬಳಗ, ಇಹಲೋಕ, ಪರಲೋಕವೆಲ್ಲ ನನ್ನ ಪಾಲಿಗೆ ಇಲ್ಲದ ಹಾಗಾದವು; ನೀನು ನನ್ನ ಕೈಬಿಟ್ಟು ಹೋದುದರಿಂದ ಎಲ್ಲರೂ ನನ್ನ ಕೈ ಬಿಟ್ಟರು. ಏನಾಯಿತು ನನ್ನ ಜನ್ಮ! ನನ್ನ ಸಲುವಾಗಿ ನಿನ್ನ ಅವಸ್ಥೆ ಹೀಗಾದ ಬಳಿಕ ನಾನು ಎಂಥ ಪಾಪಿಷ್ಠಳು! ನಿನ್ನನ್ನು ಬಿಟ್ಟು ಮನೆಗೆ ಹೋದ ನನ್ನಂಥ ಕ್ರೂರ ಹೃದಯಳು ಇನ್ನಾವಳಿರುವಳು! ನಿನಗಿಂತ ಹೆಚ್ಚಿನದು ಅಂಥದೇನು ನನಗೆ ಮನೆಯೊಳಗಿತ್ತು! ನನ್ನ ಬಾಳ್ವೆ ಸುಡಲಿ! ಇನ್ನು ಯಾರಿಗೆ ಶರಣು ಹೋಗಲಿ! ಯಾರಿಗೆ ಮೊರೆಯಿಡಲಿ! ಯಾರು ನನ್ನ ಪ್ರಲಾಪವನ್ನು ಕೇಳುವರು!' ಎಂದು ಹಲುಬುತ್ತ, ಆತನ ಗಲ್ಲವನ್ನೂ, ಹಣೆಯನ್ನೂ, ಹೃದಯವನ್ನೂ, ಕೈಯಿಂದ ಮುಟ್ಟಿ ಮುಟ್ಟಿ, 'ಪುಂಡರೀಕಾ, ನೀನು ಬಹು ನಿರ್ದಯನು! ನಿಷ್ಠುರನು! ಇಷ್ಟು ಪರಿಯಿಂದ ಹಲುಬಿ ಹಂಬಲಿಸುವವಳನ್ನು ನೀನು ಲೆಕ್ಕಿಸಲೊಲ್ಲಿ! ಇಂಥ ಕಲ್ಲು ಮನಸ್ಸಿನವನೆಂಬುದನ್ನು ನಾನು ತಿಳಿಯದೆ ಮೋಸ ಹೋದೆನು.' ಎಂದು ಅವನನ್ನು ಜರೆದು, ಅವನ ಮುಖಕ್ಕೆ ಮುದ್ದು ಕೊಟ್ಟು ಎದೆಗೆ ಎದೆ ಹಚ್ಚಿ ಅಪ್ಪಿಕೊಂಡಾಗ ಆತನ ಕೊರಳೊಳಗಿನ ಮುತ್ತಿನ

ಸರವು ನನ್ನ ಎದೆಗೆ ನಟ್ಟಿತು. ಆಗ ಆ ಮಾತು ನೆನಪಾದುದರಿಂದಂತೂ ನಾನು ಕಿಚ್ಚಿನೊಳಗೆ ಬಿದ್ದ ಕಿಡಿಯಾಗಿ 'ಅಯ್ಯೋ, ನನ್ನ ಮುತ್ತಿನ ಏಕಾವಳಿಯೇ, ನೀನು ಸಹ ಇಷ್ಟು ನನ್ನ ಮೇಲೆ ಮುನಿದಿಯಾ? ಕೊರಳು ಕೊಟ್ಟವರ ಕುತ್ತಿಗೆಯ ಕೊಯ್ಯಬೇಕೆ? ನಾನು ತಿರುಗಿ ಬರುವತನಕ ನನ್ನ ಪ್ರಿಯನ ಪ್ರಾಣವನ್ನು ಉಳಿಸಿಕೊಳ್ಳುವದು ನಿನ್ನಿಂದಾಗಲಿಲ್ಲ! ಕಡೆಗೆ ನಿನ್ನ ಕಠಿಣ ಗುಣವನ್ನು ತೋರಿಸಿಕೊಂಡಿ! ಕಪಿಂಜಲಾ, ನಿನ್ನ ಕಾಲು ಬೀಳುತ್ತೇನೆ; ತರಲಿಕೇ, ನಿನಗೆ ಸೆರಗೊಡ್ಡಿ ಬೇಡಿಕೊಳ್ಳುತ್ತೇನೆ; ಹೇಗಾದರೂ ಮಾಡಿ ನನ್ನ ಮನೋವಲ್ಲಭನನ್ನು ಉಳಿಸಿಕೊಳ್ಳಿರಿ!' ಎಂದು ಭೂಮಿಯ ಬಗಿದು ಶೋಕಿಸಿದೆನು" ಎಂದು ಮಹಾಶ್ವೇತೆಯು ಹೇಳುತ್ತ ಆ ದುಃಖದ ಭರದೊಳಗೆ ಮೈಮರೆದು ಮೂರ್ಛಿತಳಾಗಿ ನೆಲದ ಮೇಲೆ ಬಿದ್ದಳು; ಅದನ್ನು ಕಂಡು ಚಂದ್ರಾಪೀಡನು ಗಾಬರಿಯಾಗಿ ತ್ವರೆಯಿಂದ ಆಕೆಯ ನೆತ್ತಿಗೆ ನೀರು ಬಡಿದು, ಗಾಳಿಯ ಹಾಕಿ ಆಕೆಯನ್ನು ಎಚ್ಚರಗೊಳಿಸಿದನು. ಚಂದ್ರಾಪೀಡನೂ ಆ ವೃತ್ತಾಂತವನ್ನು ಕೇಳಿ ದುಃಖಿತನಾಗಿ — "ತಾಯೀ ಮಹಾಶ್ವೇತೇ, ಇನ್ನು ಸಾಕುಮಾಡು! ನಿನ್ನ ದುಃಖಕ್ಕೆ ನಾನೇ ಕಾರಣವಾದೆನು. ನಾನು ಮಹಾ ಪಾಪಾತ್ಮನು, ಇನ್ನು ನಿನ್ನ ಕಥೆ ಸಾಕು. ನಾನು ಕೇಳಲಾರೆನು. ಯಾಕೆಂದರೆ ತೀರಿಹೋದ ದುಃಖಗಳನ್ನು ಕಥನ ಮಾಡುತ್ತ ಕುಳಿತರೆ, ಆ ದುಃಖಗಳು ಸುಹೃಜ್ಜನರ ಹೃದಯಕ್ಕೆ ಪುನಃ ಹೊಸ ನೋವನ್ನು ಮಾಡುತ್ತವೆ. ಈಗ ಸದ್ಯಕ್ಕೆ ಅವುಗಳನ್ನು ದಿಟವಾಗಿ ಅನುಭೋಗಿಸುತ್ತೇವೋ ಏನೋ, ಅನ್ನುವ ಹಾಗೆ ಮನಸ್ಸಿಗೆ ಆಗುತ್ತದೆ. ಆ ಕಾರಣ ಕಷ್ಟದಿಂದ ಹೇಗಾದರೂ ಹಿಡಿದ ಪ್ರಾಣವನ್ನು ಆಗಾಗ ಸ್ಮರಣದಿಂದ ಹುಟ್ಟುವ ಶೋಕಾಗ್ನಿಯೊಳಗೆ ಹಾಕುವದು ಯೋಗ್ಯವಲ್ಲವು" ಎಂದು ಹೇಳಿದನು.

ಬಳಿಕ ಮಹಾಶ್ವೇತೆ ನಿಟ್ಟುಸುವ ಬಿಟ್ಟು ಕಣ್ಣೀರು ಸುರಿಸುತ್ತ ಖಿನ್ನಮುಖಳಾಗಿ- "ಎಲೈ ರಾಜಪುತ್ರನೇ, ಅಂಥ ಭಯಂಕರವಾದ ಇರುಳೊಳಗೆ ಹೋಗದ ಈ ಪಾಪಿಯ ಪ್ರಾಣವು ಇನ್ನು ಹೋಗುವದು ದೂರವು. ಯಮನು ಕೂಡ ನನ್ನ ದರ್ಶನಕ್ಕೆ ಬೇಸರಗೊಂಡ ಹಾಗಾಯಿತು. ಇಂಥ ಪಾಪಾತ್ಮಳಾದ ನಾನು ಕೊನೆಗೆ ಜೀವಕೊಡಬೇಕೆಂದು ನಿಶ್ಚೈಸಿ, 'ತರಲಿಕೇ, ಇನ್ನೆಷ್ಟು ಪ್ರಲಾಪಿಸಲಿ? ಏಳು, ಬೇಗನೆ ಕಾಷ್ಟಗಳನ್ನು ಕೂಡಿಸಿ ಚಿತೆಯನ್ನು ಸಿದ್ಧಮಾಡು. ನನ್ನ ಪ್ರಾಣವಲ್ಲಭನ ಕೂಡ ನಾನೂ ಹೋಗುತ್ತೇನೆ' ಎಂದು ಅವಳಿಗೆ ಹೇಳುವಷ್ಟರೊಳಗೆ ಚಂದ್ರಮಂಡಲದೊಳಗಿಂದ ಶುಭ್ರ ಶರೀರದ ದಿವ್ಯಾಕೃತಿಯ ಒಬ್ಬ ಪುರಷನು, ಕಿರೀಟ ಹಾಕಿಕೊಂಡು, ಕನಕಕುಂಡಲ ಮುಕ್ತಾಹಾರಗಳನ್ನು ಧರಿಸಿಕೊಂಡು, ಮೈಗೆ ಸುಗಂಧ ದ್ರವ್ಯಗಳನ್ನು ಪೂಸಿ ಕಳೇವರವನ್ನೆತ್ತಿಕೊಂಡು ಗಂಭೀರವಾಣಿಯಿಂದ-'ಎಲೈ ಮಹಾಶ್ವೇತೆ, ನೀನು ಪ್ರಾಣ ಕೊಡಬೇಡ, ನಿನಗೆ ಪುನಃ ಈತನ ಸಮಾಗಮವಾಗುವದು' ಎಂದು ತಂದೆಯಂತೆ ನನಗೆ ಆದರದಿಂದ ಪ್ರಸಾದವಚನ ಕೊಟ್ಟು, ಪುಂಡರೀಕನನ್ನು ತಕ್ಕೊಂಡು ಆಕಾಶಕ್ಕೆ ಹಾರಿಹೋದನು. ನಾನು ಅದನ್ನು ನೋಡಿ ಭಯಕೌತುಕಗೊಂಡಿರಲು ಕಪಿಂಜಲನೂ ನನಗೆ ಉತ್ತರ ಸಹ ಕೊಡದೆ ತವಕದಿಂದೆದ್ದು, 'ಎಲೈ ದುಷ್ಟ ಅಂತಕಾ, ನನ್ನ ಗೆಳೆಯನನ್ನು ಎಲ್ಲಿಗೆ ಒಯ್ಯುತ್ತೀ' ಎಂದು ನಡ ಕಟ್ಟಿಕೊಂಡು ಕೋಪಾವಿಷ್ಟನಾಗಿ ಆ ಮಹಾಪುರುಷನ ಬೆನ್ನುಹತ್ತಿ ತಾನೂ ಆಕಾಶಕ್ಕೆ ಹಾರಿಹೋದನು. ನೋಡುನೋಡುವಷ್ಟರೊಳಗೆ ಅವರಿಬ್ಬರೂ ತಾರಾಮಂಡಲದೊಳಗೆ ಪ್ರವೇಶಿಸಿದರು. ಕಪಿಂಜಲನು ಸಹ

ಹೋದುದರಿಂದಂತೂ ನನಗೆ ಇಮ್ಮಡಿ ದುಃಖವಾಯಿತು. ತರಲಿಕೆಯಂತೂ ಗದಗದನೆ ನಡುಗಿ ನೆಲಕ್ಕೆ ಬಿದ್ದು, ಇನ್ನು ಈಕೆ ಸಾಯುತ್ತಾಳೆಂದು ಖಿನ್ನಳಾಗಿ, ದೀನವಾಣಿಯಿಂದ ನನಗೆ- 'ಎಲೈ ರಾಜಕನ್ಯೇ, ಇದು ಹೇಳಲಸದಳವಾದ ಸೋಜಿಗವಾಯಿತು! ಬಂದವನು ದಿವ್ಯಪುರುಷನಿದ್ದನು; ಬಹುತರವಾಗಿ ಇಂಥವರು ಆಡಿದ್ದು ಸಟೆಯಾಗುವದಿಲ್ಲ, ಇನ್ನು ಮೇಲೆ ನೀನು ಪ್ರಾಣ ಕೊಡುವದೇನೂ ಉಚಿತವಲ್ಲ. ಆತನ ಹಿಂದಿಂದೇ ಕಪಿಂಜಲನೂ ಹೋಗಿದ್ದಾನೆ. ಅವನು ತಿರುಗಿ ಬಂದ ಬಳಿಕ ಆ ದಿವ್ಯಪುರುಷನು ಯಾವಾತನು? ಎಲ್ಲಿಂದ ಬಂದನು? ಪುಂಡರೀಕನ ಶವವನ್ನು ಎಲ್ಲಿಗೆ ಯಾತಕ್ಕೆ ಒಯ್ದನು? ಆತನು ನಿನಗೆ ಪ್ರಸಾದವಚನ ಕೊಟ್ಟ ಕಾರಣವೇನು? ಇದನ್ನೆಲ್ಲ ತಿಳಿದುಕೊಂಡು ಮುಂದೆ ನೀನು ಮಾಡತಕ್ಕದ್ದನ್ನು ಮಾಡಬೇಕಲ್ಲದೆ ಸುಮ್ಮನೆ ಪ್ರಾಣತ್ಯಾಗ ಮಾಡುವದರಿಂದೇನು ಪ್ರಯೋಜನವು? ಹಾಗೆ ಮಾಡುವದೇನು ದೊಡ್ಡ ಮಾತಲ್ಲ. ಕೈಯೊಳಗೇ ಇದೆ; ಬೇಕಾದಾಗ ಮಾಡಬಹುದು. ಕಪಿಂಜಲನು ಜೀವದಿಂದಿರುವದರೊಳಗೆ ನಿನಗೆ ದರ್ಶನ ಕೊಡದೆ ಇರನು. ಕಾರಣ ಅವನು ತಿರುಗಿ ಬರುವವರೆಗಾದರೂ ಮಾರ್ಗ ನೋಡು' ಎಂದು ಹೇಳಿ ನನ್ನ ಕಾಲಿಗೆರಗಿದಳು. ಆಗ ಅವಳ ಮಾತು ಕೇಳಿ ವಿಚಾರ ಮಾಡಿ, ಆಶೆಯಿಂದ ಇನ್ನೂ ಜೀವ ಹಿಡಿದಿದ್ದೇನೆ; ಆಶೆಯ ಸಲುವಾಗಿ ಯಾರು ಏನು ಮಾಡರು? ಬಳಿಕ ಅದೇ ಸರೋವರದ ದಂಡೆಯ ಮೇಲೆ, ಆ ದಿನ ಇರುಳು ಕಳೆಯಬೇಕಾದರೆ ನನಗೂ ತರಲಿಕೆಗೂ ಒಂದು ಯುಗ ಕಳೆದ ಹಾಗಾಯಿತು.

ಬೆಳಿಗ್ಗೆ ಎದ್ದು ಅದೇ ಸರೋವರದಲ್ಲಿ ಮೈ ತೊಳೆದುಕೊಂಡು ಆ ಪುಂಡರೀಕನ ಮೇಲಿನ ಪ್ರೀತಿಯ ಸಲುವಾಗಿ ನಾನು ಅವನ ಕಮಂಡಲ, ವಲ್ಕಲ, ಅಕ್ಷಮಾಲೆಗಳನ್ನು ತಕ್ಕೊಂಡು, ಇನ್ನು ಮೇಲೆ ಈ ನಿಃಸಾರ ಸಂಸಾರ ಮಾಡಬೇಕೇ! ಎಂದು ವೈರಾಗ್ಯದಿಂದ ತಾಯಿತಂದೆಗಳನ್ನು ತೊರೆದು, ಇಂದ್ರಿಯಗಳನ್ನು ತಡೆದು, ದೀನಬಂಧು ಪತಿತಪಾವನನಾದ ಪರಮೇಶ್ವರನಿಗೆ ಶರಣು ಹೋಗಿ, ಆತನನ್ನು ಆರಾಧಿಸುತ್ತ ಇಲ್ಲಿ ನಿಂತುಕೊಂಡೆನು. ಮರುದಿನ ಈ ಸುದ್ದಿಯನ್ನು ಕೇಳಿ, ನನ್ನ ತಾಯಿತಂದೆಗಳು ಇಲ್ಲಿಗೆ ಬಂದು, ಪರಿಪರಿಯಿಂದ ಶೋಕ ಮಾಡಿ, ಅನೇಕ ಉಪಾಯುಗಳಿಂದಲೂ ಉಪದೇಶದಿಂದಲೂ, ಪ್ರಾರ್ಥನೆಗಳಿಂದಲೂ ನನಗೆ ಸಮಾಧಾನ ಹೇಳಿ, ಮನೆಗೆ ಬರಬೇಕೆಂದು ಆಗ್ರಹ ಮಾಡಿದರು. ನಾನು ಅವರ ಮಾತು ಲೆಕ್ಕಿಸದೆ ಅವರನ್ನು ನಿರಾಕರಿಸಿದೆನು; ಆದರೂ ಮಗಳೆಂಬ ಕರುಳಿನ ಸಲುವಾಗಿ ಅವರು ಹಲವು ದಿವಸ ಇಲ್ಲಿ ನಿಂತು ನನ್ನ ದೃಢನಿಶ್ಚಯವನ್ನು ಕಂಡು, ಕಡೆಗೆ ಆಶೆದೊರೆದು, ಮನೆಗೆ ಹೋದರು.

ತಂದೆತಾಯಿಗಳು ಹೋದ ಬಳಿಕ ಪ್ರಿಯನ ಸಲುವಾಗಿ ಕಣ್ಣೀರು ಸುರಿಸುವದರಿಂದಲೇ ಕೃತಜ್ಞತೆ ತೋರಿಸುತ್ತ ಶೋಕದಗ್ಧವಾದ ಈ ಶರೀರವನ್ನು ಹಲವು ನಿಯಮಗಳಿಂದ ಸವೆಸುತ್ತ ಈ ಸರೋವರದೊಳಗೆ ತ್ರಿಕಾಲ ಸ್ನಾನ ಮಾಡುತ್ತ ಪರಮೇಶ್ವರನನ್ನು ಆರಾಧಿಸತ್ತ, ವನದೊಳಗಿನ ಫಲ-ಮೂಲಗಳನ್ನು ಸೇವಿಸುತ್ತ, ಈ ಗವಿಯೊಳಗೆ ತರಲಿಕೆ ಸಹಿತ ಅತಿಶಯ ದುಃಖವನ್ನು ಅನುಭೋಗಿಸುತ್ತ ನಿಂತುಕೊಂಡಿದ್ದೇನೆ. ಇಂಥ ಪಾಪಾತ್ಮಳ ದರ್ಶನದಿಂದ ನಿಮ್ಮಂಥ ಭಾಗ್ಯಶಾಲಿಗಳಿಗೆ ಫಲವೇನು? ನನ್ನಂಥ

ನಿಂದ್ಯಳ ವೃತ್ತಾಂತ ಕೇಳುವದರಿಂದ ಪ್ರಯೋಜನವೇನು" ಎಂದು ಮೋರೆಗೆ ಸೆರಗು ಹಾಕಿಕೊಂಡು ದೊಡ್ಡ ಧ್ವನಿ ತೆಗೆದು ಅಳಹತ್ತಿದಳು.

ಚಂದ್ರಾಪೀಡನು ಮೊದಲೇ ಆಕೆಯ ವಿನಯಗುಣಕ್ಕೂ, ಮಧುರಭಾಷಣಕ್ಕೂ, ಶಾಂತಸ್ವಭಾವಕ್ಕೂ, ಗೌರವಕ್ಕೂ, ಪ್ರಸನ್ನಹೃದಯನಾಗಿದ್ದನು. ಮೇಲಾಗಿ ಆಕೆಯ ಸದ್ಭಾವಗರ್ಭಿತವಾದ ಈ ವೃತ್ತಾಂತ ಕೇಳಿದ್ದರಿಂದಂತೂ ಮನಸ್ಸು ಕರಗಿ ಅವಳ ವಿಷಯವಾಗಿ ಭಕ್ತಿಯೂ, ಪ್ರೀತಿಯೂ ಜನಿಸಿದ್ದರಿಂದ "ತಾಯೀ ನೀನು ಪ್ರಿಯನ ಮೇಲಿನ ಪ್ರೇಮಕ್ಕೆ ಸರಿಯಾಗಿ ಆಚರಿಸತಕ್ಕವುಗಳನ್ನೆಲ್ಲ ಆಚರಿಸಿದಿ; ತಾಯಿ ತಂದೆ ಬಂಧುಬಳಗವನ್ನು ತ್ಯಜಿಸಿದಿ; ಸಂಪತ್ತಿನ ಸುಖಗಳನ್ನು ತೊರೆದಿ; ಕಷ್ಟಕಾರಕವಾದ ಈ ಅರಣ್ಯವಾಸವನ್ನೂ, ಬ್ರಹ್ಮಚರ್ಯ ವ್ರತವನ್ನೂ ಕೈಕೊಂಡು ಕಾಯವನ್ನು ಕಂದಿಸಿದಿ; ಇನ್ನು ಉಳಿಯಿತೇನು? ಪತಿ ತೀರಿದನೆಂಬ ಶೋಕದಿಂದ ಪ್ರಾಣ ಕೊಡುವದು ಮಾತ್ರ ಮೂರ್ಖತನವು, ವಿಚಾರಮಾಡಿ ನೋಡಿದರೆ ಇಂಥ ಪ್ರಾಣತ್ಯಾಗವು ಸಾರ್ಥಪರವೆನ್ನಬಹುದು. ಯಾಕೆಂದರೆ ಪ್ರಿಯನ ಸಲುವಾಗಿ ಆಗುವ ಶೋಕವೇದನೆಯನ್ನು ತಾನು ತಾಳಲಾರದೆ ಪ್ರಾಣ ಕೊಟ್ಟ ಹಾಗಾಗುತ್ತದಲ್ಲದೆ, ಅದರಿಂದ ಸತ್ತ ಪ್ರಿಯನಿಗೇನು ಪ್ರಯೋಜನವು? ಸತ್ತವನು ಪರಾಧೀನನಾಗಿ ಕರ್ಮಾರ್ಜಿತ ಭೂಮಿಗೆ ಹೋಗುವನು. ಅವನ ಸಲುವಾಗಿ ಈ ಪ್ರಾಣತ್ಯಾಗ ಮಾಡಿದವರು ಆತ್ಮಹತ್ಯಾ ದೋಷದಿಂದ ನರಕದೊಳಗೆ ಬೀಳುವರು. ಇನ್ನೂ ಜೀವದಿಂದ ಇದ್ದು ಸತ್ತವನಿಗಾಗಿ ಜಲಾಂಜಲಿದಾನ, ಪಿಂಡದಾನ ಮುಂತಾದವುಗಳನ್ನು ಮಾಡುತ್ತಿದ್ದರೆ, ಆತನ ಉಪಕಾರ ಸ್ಮರಿಸಿ, ಆತನಿಗೆ ಸದ್ಗತಿಯಾಗಲೆಂಬ ಇಚ್ಛೆಯಿಂದ, ಸತ್ಕೃತ್ಯ ಮಾಡಿದಂತೆ ಆಗುವದು. ಇಂಥವರಿಂದ ಉಭಯತಃ ಪ್ರಯೋಜನವು. ಹೀಗೆ ಮಾಡದೆ ಸುಮ್ಮನೆ ಆತ್ಮಘಾತ ಮಾಡಿಕೊಳ್ಳುವದರಿಂದ ಯಾವ ಸತ್ಕೃತ್ಯವನ್ನು ಮಾಡಿದ ಹಾಗಾಯಿತು? ಇದರಿಂದ ಯಾರಿಗೂ ಪ್ರಯೋಜನವಿಲ್ಲ. ಜಯಶಾಲಿಯಾದ ಪಾಂಡುರಾಜನು ಕಿಂದಮ ಋಷಿಯ ಶಾಪದಿಂದ ಮೃತನಾಗಲು, ಆತನ ಪತ್ನಿ ಕುಂತಿಯು ಜೀವ ಕೊಡದೆ ಧೈರ್ಯ ಮಾಡಲಿಲ್ಲವೇ? ಬಾಲಚಂದ್ರನಂತೆ ಆನಂದ ಕೊಡುವ ಅಭಿಮನ್ಯುವು ಭಾರತ ಯುದ್ಧದಲ್ಲಿ ಕಲಿತನದಿಂದ ಕಾದಿ ಮಡಿದ ಬಳಿಕ ಆತನ ಪ್ರಿಯಪತ್ನಿಯಾದ ಉತ್ತರೆಯು ಆತ್ಮಹತ್ಯ ಮಾಡಿಕೊಂಡಳೇ? ಈ ಮೇರೆಗೆ ದೇವ-ದೈತ್ಯ-ಮನುಷ್ಯ-ಗಂಧರ್ವರಲ್ಲಿ ಸಾವಿರಾರು ತರುಣಿಯರು ಪತಿರಹಿತರಾಗಿ ಪ್ರಾಣಕೊಡದೆ ಇದ್ದದ್ದನ್ನು ಕೇಳಿಬಲ್ಲೆವು. ಮತ್ತು ಪುಂಡರೀಕನ ಸಮಾಗಮವಾಗುವದೆಂದು ಆ ದಿವ್ಯ ಪುರಷನು ಹೇಳಿದ್ದು ಎಂದಿಗೂ ಸಟೆಯಾಗದು. ಯಾಕೆಂದರೆ, ನಿನ್ನಲ್ಲಿ ದಯೆಹುಟ್ಟಿ ಆತನ ಪುನರುಜ್ಜೀವನ ಮಾಡಬೇಕೆಂತಲೇ ಆ ದಿವ್ಯ ಪುರುಷನು ಆತನನ್ನು ದೇವಲೋಕಕ್ಕೆ ಒಯ್ದಿದ್ದಾನೆ. ದೈವವು ಬಲವತ್ತರವು; ನಾವೆಲ್ಲರೂ ದೈವಾಧೀನರೇ ಸರಿ, ಬಂದುದನ್ನು ಅನುಭೋಗಿಸಿ ತೀರಿಸಬೇಕು. ಈ ಸಂಸಾರ ಮಾರ್ಗವು ಅತಿ ಗಹನವು. ಇದರಲ್ಲಿ ಅಡಿಗಡಿಗೆ ಹಲವು ತರದ ಎಡರುಗಳು ಬರುತ್ತವೆ; ಧೈರ್ಯದಿಂದ ಅವುಗಳಿಗೆ ಈಡಾಗಿ ಅವುಗಳನ್ನು ನೀಗಬೇಕು" ಎಂದು ಬಗೆಬಗೆಯ ಮೃದುಭಾಷಣಗಳಿಂದ ಚಂದ್ರಾಪೀಡನು ಆಕೆಗೆ ಸಮಾಧಾನ ಹೇಳಿದನು.

ಅಷ್ಟರೊಳಗೆ ಸೂರ್ಯನು ಪಡುವಣ ಕಡಲ ಮರೆಯಾಗಿ, ಕತ್ತಲಾಯಿತು. ಮಹಾಶ್ವೇತೆಯು ಮೆಲ್ಲಗೆ ಎದ್ದು ಕಮಂಡಲದೊಳಗಿನ ಉದಕದಿಂದ ಕರಚರಣಮುಖ ಪ್ರಕ್ಷಾಳನ ಮಾಡಿಕೊಂಡು, ಸಂಧ್ಯೋಪಾಸನ ತೀರಿಸಿ ದುಃಖದಿಂದ ಬಿಸುಸುಯ್ಯುತ್ತ ವಲ್ಕಲದ ಹಾಸಿಗೆಯ ಮೇಲೆ ಕುಳಿತುಕೊಂಡಳು. ಚಂದ್ರಾಪೀಡನೂ ಎದ್ದು, ನೆರೆಯ ಝರಿಗೆ ಹೋಗಿ ಕೈಕಾಲು, ಮುಖ ತೊಳೆದುಕೊಂಡು, ಸಂಧ್ಯಾವಂದನೆ ತೀರಿಸಿಕೊಂಡು ತಿರುಗಿ ಬಂದು, ಒಂದು ಹಾಸುಗಲ್ಲಿನ ಮೇಲೆ ಚಿಗುರೆಲೆಗಳನ್ನು ಹಾಸಿ, ಅದರ ಮೇಲೆ ಕುಳಿತುಕೊಂಡು, ಮನದೊಳಗೆ ಆ ಮಹಾಶ್ವೇತೆಯ ವೃತ್ತಾಂತವನ್ನು ನೆನೆದು "ತಾಯೀ, ನಿನ್ನ ವನವಾಸದೊಳಗಿನ ಗೆಳತಿ ತರಲಿಕೆ ಎಂಬವಳು ಎಲ್ಲಿದ್ದಾಳೆ?" ಎಂದು ಕೇಳಿದನು. ಮಹಾಶ್ವೇತೆಯು "ಎಲೈ ಭಾಗ್ಯವಂತನೇ, ಅಮೃತದಿಂದ ಅಪ್ಸರರದೊಂದು ಕುಲವು ಹುಟ್ಟಿದ್ದು ನಿನಗೆ ಮೊದಲೇ ಅರಿಕೆ ಮಾಡಿಕೊಂಡಿದ್ದೇನೆ; ಅದೇ ಕುಲದೊಳಗೆ ಮದಿರಾ ಎಂಬ ಕನ್ನಿಕೆಯು ಹುಟ್ಟಿದಳು. ಆಕೆಯನ್ನು ಗಂಧರ್ವರಾಜನಾದ ಚಿತ್ರರಥನು ಮದುವೆ ಮಾಡಿಕೊಂಡನು. ಅವರ ಉದರದಿಂದ ಲೋಕೋತ್ತರ ಲಾವಾಣ್ಯಾದಿ ಗುಣಗಳಿಂದ ಸಂಪನ್ನಳಾದ ಕಾದಂಬರಿ ಎಂಬವಳೊಬ್ಬಳೇ ಮಗಳು ಹುಟ್ಟಿದಳು. ಆ ಕಾದಂಬರಿಯೂ ನಾನೂ ಚಿಕ್ಕಂದಿನ ಓರಗೆಯ ಗೆಳತಿಯರು. ಆಕೆಯೂ ನಾನೂ ಒಂದೇ ಶಾಲೆಯಲ್ಲಿ ನೃತ್ಯ, ಗೀತಾದಿ ಕಲೆಗಳನ್ನು ಕಲಿತೆವು; ಕೂಡಿಯೇ ಉಣ್ಣುವೆವು, ಕೂಡಿಯೇ ಆಡುವೆವು, ಒಂದೇ ಹಾಸಿಗೆಯ ಮೇಲೆ ಮಲಗುವೆವು. ನನ್ನ ಹೊರತು ಆಕೆಗೆ, ಆಕೆಯ ಹೊರತು ನನಗೆ, ಒಂದು ಕ್ಷಣ ಸಹ ಹೊತ್ತು ಹೋಗುತ್ತಿದ್ದಿಲ್ಲ; ಆ ನನ್ನ ಗೆಳತಿ ಕಾದಂಬರಿಯು, ಈ ನನ್ನ ದುಃಖದ ಸುದ್ದಿಯ ಕೇಳಿ ಬಳಲಿ ಬೆಂಡಾಗಿ, ನಾನು ದುಃಖದೊಳಗಿರುವ ತನಕ ತಾನು ಮದುವೆ ಮಾಡಿಕೊಳ್ಳಲಿಕ್ಕಿಲ್ಲೆಂದು ಕಟ್ಟುಮಾಡಿಕೊಂಡಿದ್ದಾಳೆ. ಮಗಳು ಈ ಮೇರೆಗೆ ದೃಢನಿಶ್ಚಯ ಮಾಡಿದ ಸುದ್ದಿಯನ್ನು ಕೇಳಿ, ಆಕೆಯ ತಂದೆಯು ಬಹು ಚಿಂತಾಕ್ರಾಂತನಾಗಿದ್ದಾನೆ. ಆಕೆಯ ನೇಮವನ್ನು ಆಗಾಗ್ಗೆ ನೆನಸಿಕೊಂಡು, ಇರುವ ಒಬ್ಬ ಮಗಳ ಗತಿ ಹೀಗಾಯಿತಲ್ಲ! ಎಂದು ಬಹಳ ಹಳಹಳಿಸುತ್ತಾನೆ; ಒಂದು ಕ್ಷಣವಾದರೂ ಆತನ ಮನಸ್ಸಿಗೆ ಸುಖವಿಲ್ಲ. ತಾನೇ ಮಗಳಿಗೆ ಹೇಳಲಾರದೆ, ಹೆಂಡತಿ ಮದಿರಾದೇವಿಯೂ ತಾನೂ ಕೂಡಿ ಮಾತಾಡಿಕೊಂಡು ಕ್ಷೀರೋದ ಎಂಬ ಕಂಚುಕಿಯ ಕೂಡ ನನಗೆ - 'ಮಗಳೇ ಮಹಾಶ್ವೇತೇ, ನಿನ್ನ ವರ್ತಮಾನ ಕೇಳಿ ನಾವು ತಳಮಳಗೊಂಡೆವು. ಅದರೊಳಗೆ ಇದೂ ಒಂದು ಎರಡನೆಯ ದುಃಖವು ಪ್ರಾಪ್ತವಾಯಿತು; ಈ ಪ್ರಸಂಗದಲ್ಲಿ ಕಾದಂಬರಿಗೆ ಬುದ್ಧಿಯನ್ನು ಹೇಳುವದಕ್ಕೆ ನೀನೇ ಸಮರ್ಥಳು. ನಿನ್ನ ಹೊರತು ಎರಡನೆಯವರಿಂದ ಆಗದು' ಎಂದು ಅಪ್ಪಣೆ ಕಳಿಸಿದ್ದರು. ಅವರ ವಚನ ಗೌರವದ ಸಲುವಾಗಿಯೂ, ಗೆಳತಿಯ ಮೇಲಿನ ಪ್ರೇಮದ ಸಲುವಾಗಿಯೂ ನಾನು ಈ ಹೊತ್ತು ಮುಂಜಾನೆ ಆ ಕಂಚುಕಿಯ ಸಂಗಡ ತರಲಿಕೆಯನ್ನು ಕಾದಂಬರಿಯ ಬಳಿಗೆ - 'ಸಖೀ ಕಾದಂಬರೀ, ದುಃಖಿತರಾದ ಪ್ರಿಯಜನರಿಗೆ ಮತ್ತೆ ಆಗಾಗ್ಗೆ ನೋವಿನ ಮೇಲೆ ಬರೆ ಕೊಟ್ಟ ಹಾಗೆ ಯಾಕೆ ಮಾಡುತ್ತೀ? ಮಾಡಬೇಡ, ನಾನು ಜೀವದಿಂದಿರಬೇಕೆಂಬುವದು ನಿನ್ನ ಮನಸ್ಸಿನೊಳಗಿದ್ದರೆ ತಾಯಿತಂದೆಗಳು ಹೇಳಿದಂತೆ ಕೇಳಿ, ಮದುವೆ ಮಾಡಿಕೊಳ್ಳು' ಎಂದು ಹೇಳಿ ಕಳಿಸಿದ್ದೇನೆ. ಈ ನನ್ನ ಮಾತು ಹೇಳಲಿಕ್ಕೆ ತರಲಿಕೆಯು ಅತ್ತ ಹೊರಟು ಹೋದ ಕೂಡಲೆ ತಾವು ಇಲ್ಲಿಗೆ ಬಂದಿರಿ" ಎಂದು ಹೇಳಿದಳು.

ಅಷ್ಟರೊಳಗೆ ಚಂದ್ರೋದಯವಾಗಿ ಆಕಾಶವೆಲ್ಲ ಚಂದ್ರಿಕೆಯಿಂದ ಧವಲಿತವಾಗಿ ಶೋಭಾಯಮಾನವಾಯಿತು. ಬಳಲಿಕೆಯಿಂದ ಮಗ್ಗಲು ಹಚ್ಚಿ ಕಣ್ಣು ಮುಚ್ಚುವ ಮಹಾಶ್ವೇತೆಯನ್ನು ನೋಡಿ, ಮಲಗಿಕೊಳ್ಳಲೆಂದು ಚಂದ್ರಾಪೀಡನು ತಳಿರ ಹಾಸಿಗೆಯ ಮೇಲೆ ಒರಗಿ ತನ್ನನ್ನು ಕಳೆದುಕೊಂಡ ವೈಶಂಪಾಯನನ ಪ್ರಧಾನನೂ, ಆ ಪ್ರಾಣಿ ಪತ್ರಲೇಖೆಯೂ ಆ ಅರಸು ಮಕ್ಕಳೂ ಏನು ಮಾಡುತ್ತಿದ್ದಾರು? ಎಂದು ಅವರನ್ನು ನೆನಸಿ ಚಿಂತಿಸುತ್ತ ನಿದ್ರೆಗೊಳಗಾದನು. ಬೆಳಗಾದ ಬಳಿಕ ಮಹಾಶ್ವೇತೆಯು ಪರಮೇಶ್ವರನ ಧ್ಯಾನ ಮಾಡುತ್ತ ಎದ್ದು, ಪ್ರಾತಃಸಂಧ್ಯೋಪಾಸನವನ್ನು ತೀರಿಸಿಕೊಂಡು, ಶಿಲಾತಲದ ಮೇಲೆ ಜಪ ಮಾಡುತ್ತ ಕುಳಿತಿರಲು, ಚಂದ್ರಾಪೀಡನೂ ದೇವರನ್ನು ಸ್ಮರಿಸುತ್ತ ಎದ್ದು ಪ್ರಾತರಾಹ್ನಿಕವನ್ನು ತೀರಿಸಿಕೊಂಡು, ಮತ್ತೊಂದು ಶಿಲಾತಲದ ಮೇಲೆ ಕುಳಿತನು. ಆಗ ಹದಿನಾರು ವರ್ಷದ ಹರೆಯದ ಭವ್ಯಾಕೃತಿಯ ಒಬ್ಬ ಗಂಧರ್ವಕುಮಾರನನ್ನು ಸಂಗಡ ಕರಕೊಂಡು ತರಲಿಕೆಯು ಬಂದು, ಇವನಾರು ಎಂದು ಕೌತುಕದಿಂದ ಚಂದ್ರಾಪೀಡನನ್ನು ದಿಟ್ಟಿಸಿ ನೋಡುತ್ತ, ಮಹಾಶ್ವೇತೆಯ ಬಳಿಗೆ ಹೋಗಿ, ಅತಿ ವಿನಯದಿಂದ ಆಕೆಗೆ ನಮಿಸಿ ಕುಳಿತಳು. ಬಳಿಕ ಆ ಗಂಧರ್ವಕುಮಾರನು ಭಕ್ತಿಭಾವದಿಂದ ಮಹಾಶ್ವೇತೆಗೆ ಪ್ರಣಾಮಂಗೈದು ಅವಳ ದೃಷ್ಟಿಯಿಂದ ಸೂಚಿತವಾದ ಶಿಲಾತಲದ ಮೇಲೆ ಕುಳಿತು, ಪೂರ್ವದಲ್ಲೆಂದೂ ನೋಡದಂಥ ಸುಂದರಕಾಯದ ಚಂದ್ರಾಪೀಡನನ್ನು ನೋಡಿ ವಿಸ್ಮಿತನಾದನು.

ಬಳಿಕ ಮಹಾಶ್ವೇತೆಯು ಜಪವನ್ನು ಮುಗಿಸಿ-"ತರಲಿಕೇ, ನೀನು ಕಾದಂಬರಿಯನ್ನು ಕಂಡೆಯಾ? ಆಕೆ ಸುಖದಿಂದಿರುವಳೇ? ನನ್ನ ಮಾತು ಮನ್ನಿಸುವಳೇ?' ಎಂದು ಕೇಳಿದ್ದಕ್ಕೆ ತರಲಿಕೆಯು- "ತಾಯೀ, ಕಾದಂಬರೀದೇವಿಯನ್ನು ನೋಡಿದೆನು. ಆಕೆ ಸುಖವಾಗಿ ಇದ್ದಾಳೆ. ನಿನ್ನ ಸಂದೇಶವನ್ನು ಅವಳಿಗೆ ನಿವೇದಿಸಿದೆನು. ಅದಕ್ಕೆ ಆಕೆ ಕಣ್ಣೀರು ಸುರಿಸಿ, ತಿರುಗಿ ಹೇಳಿದ ಸಂದೇಶವನ್ನು ನನ್ನ ಸಂಗಡ ಬಂದ ಆಕೆಯ ವೀಣೆ ಹಿಡಿಯುವ ಈ ಕೇಯೂರಕನೇ ಹೇಳುವನು" ಎಂದು ಸುಮ್ಮನಾದ ಕೂಡಲೆ, ಆತನು ಮುಂದೆ ಬಂದು- "ತಾಯೀ, ಮಹಾಶ್ವೇತೆ, ಕಾದಂಬರೀದೇವಿಯು ನಿಮಗೆ ಆಲಿಂಗಿಸಿ, ವಿಜ್ಞಾಪಿಸುವದೇನೆಂದರೆ, 'ತರಲಿಕೆಯ ಕೂಡ ನೀವು ಹೇಳಿಕಳುಹಿದ ಸಂದೇಶವು ನನ್ನ ಮನಸ್ಸು ಪರೀಕ್ಷಿಸುವದಕ್ಕೋ, ಅಥವಾ ನಾನು ಮನೆಯಲ್ಲಿ ನಿಂತುಕೊಂಡದ್ದಕ್ಕೆ ನನ್ನ ಮೇಲಿನ ಪ್ರಕೋಪಕ್ಕೊ, ನನಗಂತೂ ತಿಳಿಯದು. ನಿನ್ನ ಸಲುವಾಗಿ ನನ್ನ ಹೃದಯವು ಪ್ರೇಮಭರಿತವಾದದ್ದೆಂದು ನಿನಗೆ ಮನವರಿಕೆಯಾಗಿದ್ದೂ ಇಂಥ ನಿಷ್ಠುರ ಸಂದೇಶ ಹೇಳಿ ಕಳುಹಿಸಿದ ಬಗೆ ಏನು? ಮಧುರ ಮಾತಿನ ಮಾನಿನೀ, ನಿನಗೆ ಇಂಥ ಕಠೋರಭಾಷಣವನ್ನು ಯಾರು ಕಲಿಸಿದರು? ಸುಹೃಜ್ಜನರ ದುಃಖದಿಂದ ದುಃಖಿತರಾದವರ ಮನಸ್ಸಿಗೆ ಸುಖದ ಆಶೆಯೂ ಶಾಂತಿಯೂ ಇನ್ನೆಲ್ಲಿಯವು? ಸೂರ್ಯನ ವಿಯೋಗದಿಂದ ಮ್ಲಾನವಾದ ಪದ್ಮಿನಿಯನ್ನು ಕಂಡು ಚಕ್ರವಾಕ ಪಕ್ಷಿಯು ಸಹ ಖಿನ್ನವಾಗಿ ಸುಖ ತೊರೆಯುತ್ತದೆ; ನಮ್ಮಂಥ ಸ್ತ್ರೀಯರು ಸುಮ್ಮನಿರುವರೇ? ಪ್ರಿಯನ ವಿರಹದಿಂದ ದುಃಖಿತ ಪ್ರಿಯಸಖಿಯಾದ ನಿನಗೆ ಹಗಲೂ ಇರುಳೂ ಮನೆಯಾದ ನನ್ನ ಮನಸ್ಸು ಪುರುಷನನ್ನು ಇಚ್ಛಿಸುವ ಬಗೆ ಯಾವುದು? ವಿರಹದುಃಖ ಮೂಲಕವಾಗಿ ನೀನು ತಪಶ್ಚರ್ಯ ಮಾಡುತ್ತ ದೇಹವನ್ನು ಸಣ್ಣೆಸಿ ಕಷ್ಟಗಳನ್ನು ಅನುಭೋಗಿಸುವಾಗಲೇ

ನಾನು ನಿನ್ನ ದುಃಖಗಳನ್ನು ಲೆಕ್ಕಿಸದೆ ಮದುವೆ ಮಾಡಿಕೊಳ್ಳಬೇಕೇ? ಆ ಮಾತು ಕನಸುಮನಸಿನಲ್ಲಿ ಸಹ ತೆಗೆಯಬೇಡ. ನನ್ನ ಜೀವವು ನಿನ್ನ ಕೂಡ ವನದಲ್ಲಿಯೇ ಇದೆ ಎಂದು ತಿಳಿ', ಎಂದು ನಿಮಗೆ ಕೈಮುಗಿದು ಕಾಲುಬಿದ್ದು ಬಿನ್ನವಿಸಿದಳು" ಎಂದು ಹೇಳಿದನು.

ಮಹಾಶ್ವೇತೆಯು ಆ ಮಾತು ಕೇಳಿ ಮನದೊಳಗೆ ಸ್ವಲ್ಪ ಹೊತ್ತು ಆಲೋಚಿಸಿ, "ನೀನು ಹೋಗು, ನಾನೇ, ಅಲ್ಲಿಗೆ ಬರುತ್ತೇನೆ" ಎಂದು ಹೇಳಿ ಕೇಯೂರಕನಿಗೆ ತಿರುಗಿ ಹೋಗಲಪ್ಪಣೆಕೊಟ್ಟು, ಚಂದ್ರಾಪೀಡನಿಗೆ "ಎಲೈ ಭಾಗ್ಯಶಾಲಿಯಾದ ರಾಜಕುಮಾರನೇ, ನೀನು ಹೇಮಕೂಟಪರ್ವತವನ್ನು ನೋಡಿರಲಿಕ್ಕಿಲ್ಲ! ಅದರ ಮೇಲೆ ಚಿತ್ರರಥ ಗಂಧರ್ವರಾಜನ ಅತಿ ರಮಣೀಯವಾದ ರಾಜಧಾನಿಯುಂಟು. ಕಿಂಪುರುಷರೂ ಗಂಧರ್ವರೂ ಇರುವ ಕೌತುಕದ ಸುಂದರಲೋಕವು ಅದು. ಅಲ್ಲಿ ಸರಳ ಮನಸ್ಸಿನ ನನ್ನ ಜೀವದ ಗೆಳತಿ ಕಾದಂಬರಿಯು ಇದ್ದಾಳೆ. ದಾರಿಯ ನಡೆಯುವದರಿಂದ ತಮಗೆ ಶ್ರಮವಾಗದ ಹಾಗಿದ್ದರೆ, ತಮ್ಮ ಕಾರ್ಯಕ್ಕೆ ಅಡ್ಡಿಯಾಗದಂತಿದ್ದರೆ, ಆ ಅಪೂರ್ವಲೋಕವನ್ನು ನೋಡುವ ಕೌತುಕವನ್ನು ನೆರವೇರಿಸಬೇಕೆಂಬ ಇಚ್ಛೆಯಿದ್ದರೆ, ನನ್ನ ಪ್ರಾರ್ಥನೆಯನ್ನು ವ್ಯರ್ಥಮಾಡದ ಹಾಗಿದ್ದರೆ, ಅನುಗ್ರಹಕ್ಕೆ ನಾವು ಪಾತ್ರರೆಂದು ಮನವರಿಕೆಯಾದರೆ, ನೀವು ದಯಮಾಡಿ ನನ್ನ ಸಂಗಡ ಅಲ್ಲಿಯವರೆಗೆ ಬಂದು, ಕಾದಂಬರಿಯ ದರ್ಶನ ತಕ್ಕೊಂಡು, ಆಕೆಯ ಹಟವನ್ನು ನಿರಸನ ಮಾಡಿ, ಅಲ್ಲಿ ಒಂದ ದಿನ ವಿಶ್ರಮಿಸಿಕೊಂಡು ನಾಳೆಗೆ ಇಲ್ಲಿಗೆ ತಿರುಗಿ ಬರಬೇಕು. ಕಾರಣವಿಲ್ಲದೆ ನಮ್ಮ ನಿಮ್ಮ ಬಂಧುತ್ವವು ಘಟಿಸಿತು; ನಿಮ್ಮ ದರ್ಶನವಾದಾಗಿನಿಂದ ನನ್ನ ಚಿತ್ತವು ಸ್ವಸ್ಥವಾಗಿದೆ; ನಿಮಗೆ ನನ್ನ ವೃತ್ತಾಂತವನ್ನೆಲ್ಲ ಹೇಳಿಕೊಂಡದ್ದರಿಂದ ನನ್ನ ಶೋಕವು ಕಡಿಮೆಯಾಯಿತು; ಸಜ್ಜನರ ಸಮಾಗಮದಿಂದ ದುಃಖಿಗಳಿಗೆ ಸಹ ಸಮಾಧಾನವಾಗುತ್ತದೆ. ನಿಮ್ಮಂಥ ಮಹಾಪುರುಷರ ಗುಣೋದಯವು ಎರಡನೆಯವರಿಗೆ ಸುಖಕೊಡುವದರಲ್ಲಿಯೇ ತತ್ಪರವಾಗಿರುತ್ತದೆ" ಎಂದು ಹೇಳಿಕೊಂಡಳು. ಮಹಾಶ್ವೇತೆಯ ಈ ಮಾತುಗಳನ್ನು ಕೇಳಿ ಚಂದ್ರಾಪೀಡನು- "ತಾಯೀ, ನಿನ್ನ ದರ್ಶನವಾದಾಗಿನಿಂದ ಈ ದೇಹವು ನಿನ್ನದಾಗಿದೆ; ನಿನ್ನ ಇಚ್ಛೆಯೇ ನನ್ನ ಇಚ್ಛೆಯು" ಎಂದು ಹೇಳಿ ಆಕೆಯ ಸಂಗಡ ಹೇಮಕೂಟಪರ್ವತಕ್ಕೆ ಹೊರಟನು.

ಚಂದ್ರಾಪೀಡನೂ ಮಹಾಶ್ವೇತೆಯೂ ಗಮನಕ್ರಮದಿಂದ ಹೇಮಕೂಟ ಪರ್ವತವನ್ನೇರಿ ಹೋಗಿ, ಗಂಧರ್ವರಾಜನ ಕೋಟೆಯನ್ನು ದಾಟಿ, ಕನಕ ತೋರಣಗಳಿಂದ ಶೋಭಿಸುವ ಏಳು ಚೌಕುಗಳೊಳಗಿಂದ ಕನ್ಯಾಂತಃಪುರದ ಮಹಾದ್ವಾರದ ಹತ್ತಿರ ಹೋದರು. ಅಲ್ಲಿ ಮಹಾಶ್ವೇತೆಯನ್ನು ನೋಡಿದ ಕೂಡಲೇ, ಬಂಗಾರದ ಬೆತ್ತ ಹಿಡಿಯುವ ಕಂಚುಕಿಗಳು ಓಡಿ ಮುಂದೆ ಬಂದು ತಲೆಬಾಗಿ, ನೆಲ ಮುಟ್ಟಿ ವಂದನೆ ಮಾಡಿ ಮುಂದೆ ಮುಂದೆ ಮಾರ್ಗ ತೋರಿಸಲು, ಆ ಮಾರ್ಗದಿಂದ ಮಹಾಶ್ವೇತೆಯೊಡನೆ ಚಂದ್ರಾಪೀಡನು ಒಳಗೆ ಹೊಕ್ಕು ನೋಡುತ್ತಾನೆ- ಆ ಕನ್ಯಾಂತಃಪುರದೊಳಗೆ ವಸ್ತ್ರಾಲಂಕಾರಗಳಿಂದ ಭೂಷಿತರಾದ ಸುಂದರ ಸ್ತ್ರೀಯರೇ ಇದ್ದರು; ಪುರುಷರ ಸಂಪರ್ಕ ಕೂಡ ಅಲ್ಲಿ ಇದ್ದಿಲ್ಲ. ಆದುದರಿಂದ ಅದೊಂದು ಸ್ತ್ರೀಮಯವಾದ ಎರಡನೆಯ ಲೋಕವೋ ಏನೋ ಅನ್ನುವಂತೆ ಅವನಿಗೆ ತೋರಿತು.

ಆ ಕನ್ಯಾಂತಃಪುರದೊಳಗೆ ಕಾದಂಬರಿಯ ಸೇವೆ ಮಾಡುವದಕ್ಕೆ ನೆರೆದಿದ್ದ ನೂರಾರು ದಾಸಿಯರು ತಟ್ಟನೆ ಇಬ್ಭಾಗವಾಗಿ ಕೊಟ್ಟ ಮಾರ್ಗದಿಂದ ಹಾಯ್ದು, ಚಂದ್ರಾಪೀಡನು ಕಾದಂಬರಿಯು ಕುಳಿತ ಮಂಟಪದ ಹತ್ತಿರ ಹೋದನು. ಸುತ್ತುಮುತ್ತು ನೂರಾರು ಸುಂದರ ಕನ್ಯೆಯರು ಉಲ್ಲಾಸದಿಂದ ಕುಳಿತಿದ್ದಾರೆ; ಎಡಬಲದಲ್ಲಿ ಬಡನಡು ಬಳಕುವ ಚೆನ್ನೆಯರಿಬ್ಬರು ನಿಂತುಕೊಂಡು ರತ್ನಖಚಿತವಾದ ಕಾವಿನ ಚಾಮರಗಳನ್ನು ಹಿಡಿದು ಸೂಳ್ವರಿದು ತೋಳುಗಳನ್ನು ನೆಗವಿ ಢಾಳಿಸುತ್ತಾರೆ; ಬಾಯಿಯಿಂದ ಬಂದ ಸೇವೆಯನ್ನು ಮುಂದುವರಿದು ಮಾಡಬೇಕೆಂದು ಹಾರೈಸಿಕೊಂಡು, ಹಲವು ಹೆಂಗಸರು ಸಂದಣಿಗೊಂಡು ಮುಂಭಾಗದಲ್ಲಿ ನಿಂತಿದ್ದಾರೆ; ಆ ಮಂಟಪದ ಮಧ್ಯದಲ್ಲಿ ಹಸ್ತಿದಂತದ ಮಂಚದ ಮೇಲೆ ರೇಶಿಮೆಯ ದಿಂಬುಗಳಿಗೆ ಆತು ಸಖಿಯರ ಕೂಡ ವಿನೋದದ ಮಾತುಗಳನ್ನಾಡುತ್ತ, ಹಾಗು ತನ್ನ ಎದುರಿಗೆ ಕುಳಿತುಕೊಂಡು ತನ್ನನ್ನು ವರ್ಣಿಸುವ ಕೇಯೂರಕನ ಕೂಡ "ಆತನು ಯಾರು? ಯಾರ ಮಗನು? ಎಷ್ಟು ವಯಸ್ಸಿನವನು? ಆತನ ಹೆಸರೇನು? ಏನು ಅನ್ನುತ್ತಿದ್ದನು? ಆತನ ಕೂಡ ಮಾತಾಡಿದಿಯಾ? ಎಷ್ಟು ಹೊತ್ತು ಆತನ ಬಳಿಯಲ್ಲಿದ್ದಿ? ಅವನಿಗೂ ಮಹಾಶ್ವೇತೆಗೂ ಹೇಗೆ ಗುರುತಾಯಿತು? ಆತನು ಇಲ್ಲಿಗೆ ಬರುವನೋ? ಇಲ್ಲಿಗೆ ಬರುವಂತೆ ಏನು ಉಪಾಯ ಮಾಡಬೇಕು?" ಎಂದು ತನ್ನ ಸಂಬಂಧದ ಮಾತುಗಳನ್ನೇ ಮಾತಾಡುತ್ತ ಕುಳಿತ ಕಾದಂಬರಿಯನ್ನು ಚಂದ್ರಾಪೀಡನು ನೋಡಿದನು.

ಲೋಕೋತ್ತರ ಲಕ್ಷಣಯುಕ್ತಳಾಗಿ, ರೂಪ-ಯೌವನಸಂಪನ್ನಳಾದ ಕಾದಂಬರಿಯನ್ನು ಪ್ರತಿಬಂಧವಿಲ್ಲದೆ ಯಥೇಚ್ಛವಾಗಿ ನೋಡುವಂಥ ತನ್ನ ಕಣ್ಣುಗಳು ಜನ್ಮಾಂತರದಲ್ಲಿ ಎಷ್ಟು ಪುಣ್ಯ ಮಾಡಿದ್ದಾವು! ಇದೇನು ಕಾದಂಬರಿಯ ರೂಪವೋ ಬ್ರಹ್ಮನು ನಿರ್ಮಿಸಿದ ಲಾವಣ್ಯದ ನಿಧಿಯೋ! ಎಂದು ಮನದೊಳಗೆ ಆಲೋಚಿಸುತ್ತ ಆಶ್ಚರ್ಯಗೊಂಡು ಆದರದಿಂದ ದಿಟ್ಟಿಸಿ ನೋಡುವ ಚಂದ್ರಾಪೀಡನ ಕಡೆಗೆ ಕಾದಂಬರಿಯ ದೃಷ್ಟಿ ಹೋಯಿತು. ಆಗ ಆತನ ರೂಪಾತಿಶಯವನ್ನು ಕಂಡು ಇಷ್ಟು ಹೊತ್ತಿನ ತನಕ ಕೇಯೂರಕನು ವರ್ಣಿಸಿದ ಚಂದ್ರಾಪೀಡನು ಈತನೇ ಆದಾನು ಎಂದು ತಿಳಿದು, ಬೆರಗಾಗಿ ಪ್ರೀತಿಯಿಂದ ಆತನ ಮುಖವನ್ನು ನೋಡುವಾಗ, ಅವಳ ನೇತ್ರಗಳು ಪ್ರಫುಲ್ಲಿತವಾದವು; ಮೇಮೇಲೆ ರೋಮಾಂಚಗಳೆದ್ದವು; ಹೃದಯದೊಳಗೆ ನಡುಗೂ ನಾಚಿಕೆಯೂ ಹುಟ್ಟಿದವು. ಇದರಂತೆಯೇ ಚಂದ್ರಾಪೀಡನಿಗೂ ಕಾಮಭಾವಗಳಾದವು.

ಬಹಳ ದಿವಸಕ್ಕೆ ಮಹಾಶ್ವೇತೆಯ ದರ್ಶನವಾಯಿತೆಂದು ಕಾದಂಬರಿಯು ಆನಂದಭರಿತಳಾಗಿ ಎದ್ದು ಮುಂದಕ್ಕೆ ಬಂದು ಪ್ರೇಮದಿಂದ ಆಕೆಯ ಕೊರಳಿಗೆ ತೆಕ್ಕೆಬೀಳಲು, ಅವಳು ಈಕೆಯನ್ನು ಅಪ್ಪಿಕೊಂಡಳು. ಬಳಿಕ ಮಹಾಶ್ವೇತೆಯು-"ಸಖೀ ಕಾದಂಬರೀ, ಭೂಲೋಕದಲ್ಲಿ ಸಮುದ್ರ ವಲಯಾಂಕಿತ ಪೃಥ್ವಿಯನ್ನು ಆಳುವಂಥ, ಉತ್ತಮ ರೀತಿಯಿಂದ ಪ್ರಜೆಗಳನ್ನು ಪಾಲಿಸುವಂಥ ತಾರಾಪೀಡನೆಂಬ ಸಾರ್ವಭೌಮ ರಾಜನಿದ್ದಾನೆಂದು ನೀನು ಕೇಳಿ ಬಲ್ಲಿಯಷ್ಟೇ; ಆತನ ಮಗನು ಈ ಚಂದ್ರಾಪೀಡನು. ಈ ಪರಾಕ್ರಮಶಾಲಿಯು ದಿಗ್ವಿಜಯಾರ್ಥವಾಗಿ ಹೊರಟು ಈ ಲೋಕಕ್ಕೆ ಬಂದಿದ್ದಾನೆ. ಈತನ ದರ್ಶನವಾದ ಬಳಿಕ

ಕಾರಣವಿಲ್ಲದೆ ಈತನಿಗೂ ನನಗೂ ಬಂಧುತ್ವವು ಘಟಿಸಿತು. ಸರ್ವಸಂಗಪರಿತ್ಯಾಗ ಮಾಡಿ ವಿರಕ್ತವಾದ ನನ್ನ ಚಿತ್ತವೃತ್ತಿಯನ್ನು ಈತನು ತನ್ನ ಸರಳ ಸ್ವಭಾವದಿಂದ ಪ್ರಸನ್ನ ಮಾಡಿಕೊಂಡನು. ಚತುರನಿದ್ದು ಅನುಕೂಲತನದಿಂದ ವರ್ತಿಸುವಂಥ, ಕಾರಣವಿಲ್ಲದೆ ಮಿತ್ರತ್ವವನ್ನು ಕಾಯುವಂಥ, ನಿಷ್ಕೃತ್ರಿಮ ಅಂತಃಕರಣವುಳ್ಳಂಥ ಪುರುಷನು ದೊರೆಯುವದು ಬಹಳ ವಿರಳ. ಆದುದರಿಂದ ಈತನನ್ನು ನೋಡಿ ರೂಪದ ನಿರುಪಮತ್ವವನ್ನೂ, ಲಕ್ಷ್ಮಿಯ ಯೋಗ್ಯ ನಿವಾಸವನ್ನೂ, ಸತ್ಪತಿನಿಮಿತ್ತದಿಂದ ಪೃಥ್ವಿಗೆ ಉಂಟಾದ ಸೌಭಾಗ್ಯವನ್ನೂ, ದೇವಲೋಕಕ್ಕಿಂತ ಮರ್ತ್ಯಲೋಕದ ಮೇಲನ್ನೂ, ಸ್ತ್ರೀಯರ ಕಣ್ಣುಗಳ ಸಾಫಲ್ಯವನ್ನೂ, ಒಂದೇ ಸ್ಥಳದಲ್ಲಿ ಒಟ್ಟುಗೂಡಿದ ಸಕಲ ಕಲೆಗಳನ್ನೂ, ಬ್ರಹ್ಮನ ಚಾತುರ್ಯ, ಔದಾರ್ಯಗಳನ್ನೂ ನೀನೂ ನನ್ನಂತೆಯೇ ತಿಳಕೊಳ್ಳಬೇಕು ಎಂದು ನಾನು ಆಗ್ರಹದಿಂದ ಈತನನ್ನು ನಿನ್ನೆಡೆಗೆ ಕರಕೊಂಡು ಬಂದೆನು. ಆದರೆ ಹೊಸದಾಗಿ ದರ್ಶನವಾದುದರಿಂದ ಉಂಟಾಗುವ ನಾಚಿಕೆಗೆ ಇಂಬುಗೊಡದೆ, ಪರಿಚಯವಿಲ್ಲದ ಮೂಲಕವಾಗಿ ತೋರುವ ಅವಿಶ್ವಾಸವನ್ನು ತೊರೆದು, ಸ್ವಭಾವವು ಗೊತ್ತಿಲ್ಲದ ಕಾರಣ ಹುಟ್ಟುವ ಶಂಕೆಯನ್ನು ಬಿಟ್ಟು, ನನ್ನ ಕೂಡ ವರ್ತಿಸಿದಂತೆಯೇ ಈತನ ಕೂಡ ವರ್ತಿಸು. ಈತನು ನಿನ್ನ ಆಪ್ತನು" ಎಂದು ಅರಿಕೆ ಮಾಡಿಕೊಂಡ ಕೂಡಲೇ ಚಂದ್ರಾಪೀಡನು ಕಾದಂಬರಿಗೆ ಅತಿ ವಿನಯದಿಂದ ತಲೆಬಾಗಿದನು. ಕಾದಂಬರಿಯೂ ಕಡುಮಮತೆಯ ಕಡೆಗಣ್ಣಿನ ನೋಟದಿಂದ ಅವನ ಮುಖ ನೋಡುತ್ತ, ಮುಗುಳ್ನಗೆ ನಗುತ್ತ ಚಂದ್ರಾಪೀಡನ ಚರಣಕ್ಕೆರಗಿದಳು. ಆಗ ಸುತ್ತುಮುತ್ತು ಕುಳಿತ ಕನ್ನಿಕೆಯರು ಕೌತುಕದಿಂದ ಚಂದ್ರಾಪೀಡನನ್ನೇ ನೋಡಹತ್ತಿದರು.

ಕಾದಂಬರಿಯು ಮಹಾಶ್ವೇತೆಯ ಕೈಹಿಡಿದು ಕರಕೊಂಡು ತನ್ನ ಮಂಚದ ಮೇಲೆ ಕೂಡಿಸಿಕೊಂಡಳು. ಅಷ್ಟರೊಳಗೆ ದಾಸಿಯರು ತವಕದಿಂದ ತಂದಿಟ್ಟ ಮಣಿಮಂಚದ ಮೇಲೆ ಚಂದ್ರಾಪೀಡನು ಕುಳಿತನು. ಆ ಸಮಯದಲ್ಲಿ, ಕಾದಂಬರಿಯ ಇಂಗಿತವನ್ನು ತಿಳಿಯುವ ದ್ವಾರಪಾಲಿಕೆಯರು ಅಲ್ಲಿ ಆಗುವ ವೀಣಾವೇಣುಮೃದಂಗಧ್ವನಿಗಳನ್ನೂ, ಗಾನಗಾರ್ತಿಯರ ಗಾಯನವನ್ನೂ, ಸ್ತುತಿಪಾಠಗೈಯುವ ಸುಂದರಿಯರ ಜಯಜಯಕಾರವನ್ನೂ ಕಣ್ಸನ್ನೆಯಿಂದ ಕಟ್ಟುಮಾಡಿದರು.

ಆಗ ಕಾದಂಬರಿಯು ಎದ್ದು ದಾಸಿಯರು ತಂದುಕೊಟ್ಟ ಪನ್ನೀರು ತಕ್ಕೊಂಡು ತಾನೇ ಮಹಾಶ್ವೇತೆಯ ಕಾಲ್ತೊಳೆದು ಮೇಲುದದಿಂದ ಒರಸಿ ಆಸನದ ಮೇಲೆ ಹೋಗಿ ಕುಳಿತುಕೊಂಡಳು. ಕಾದಂಬರಿಯ ಜೀವದ ಗೆಳತಿ ಮದಲೇಖೆ ಎಂಬವಳು ಚಂದ್ರಾಪೀಡನ ಇಚ್ಛೆಯಿಲ್ಲದಿದ್ದರೂ ಆಗ್ರಹದಿಂದ ಕೋಮಲ ಹಸ್ತವ ಚಾಚಿ ಆತನ ಕಾಲಹೆಬ್ಬೆರಳು ಹಿಡಿದು ಚೆನ್ನಾಗಿ ಪನ್ನೀರಿನಿಂದ ಪಾದಪ್ರಕ್ಷಾಳನ ಮಾಡಿ ತನ್ನ ಸೀರೆಯ ಸೆರಗಿನಿಂದ ಒರಸಿದಳು.

ಮಹಾಶ್ವೇತೆಯು ಪ್ರೇಮದಿಂದ ಕಾದಂಬರಿಯ ಹೆಗಲ ಮೇಲೆ ತನ್ನ ಎಡದೋಳು ಹಾಕಿ, ಚಾಮರದ ಗಾಳಿಗೆ ಹಾರಿ ಹಣೆಯ ಮೇಲೆ ಬಂದ ಆಕೆಯ ಮುಂಗುರುಳುಗಳನ್ನು ಬಲಗೈ ಬೆರಳುಗಳಿಂದ ತಿದ್ದಿ ಸುಕ್ಷೇಮವನ್ನು ಕೇಳಿದಳು. ಸಖಿಯು ಸಂಕಟದಲ್ಲಿದ್ದಾಗ ತಾನು ಮನೆಯಲ್ಲಿಯೇ ನಿಂತುಕೊಂಡದ್ದೊಂದು ತಪ್ಪಾಗಿದೆ ಎಂದು ಕಾದಂಬರಿಯು ನಾಚುತ್ತ

ಸುಖರೂಪವಾಗಿದ್ದೇನೆಂದು ಕಷ್ಟದಿಂದ ಉತ್ತರ ಕೊಟ್ಟು ಮಹಾಶ್ವೇತೆಯ ದುಃಖವನ್ನು ಮನದೊಳಗೆ ನೆನನೆನಸಿ, ಅಂತಃಕರಣದೊಳಗೆ ಶೋಕಾವಿಷ್ಟಳಾಗಿ ಅವಳ ಮೋರೆ ನೋಡುತ್ತ ನಡುನಡುವೆ ಚಂದ್ರಾಪೀಡನ ಮುಖವನ್ನು ಓರೆನೋಟದಿಂದ ನೋಡಿ ನೋಡಿ ಆತನ ರೂಪಕ್ಕೆ ಮೋಹಿತಳಾದಳು. ಈ ಪರಿಯಾಗಿ ಎರಡು ಗಳಿಗೆ ಹೊತ್ತು ಹೋದ ಬಳಿಕ, ಕಾದಂಬರಿಯು ಮಹಾಶ್ವೇತೆಗೆ ತಾಂಬೂಲ ಕೊಡಲನುವಾಗಲು, ಮಹಾಶ್ವೇತೆಯು —"ಸಖೀ ಕಾದಂಬರೀ, ನಾವೆಲ್ಲರೂ ಹೊಸದಾಗಿ ಮನೆಗೆ ಬಂದ ಚಂದ್ರಾಪೀಡನಿಗೆ ಸನ್ಮಾನ ಮಾಡತಕ್ಕದ್ದು, ಮೊದಲು ಅವನಿಗೆ ತಾಂಬೂಲ ಕೊಡು," ಎಂದು ಹೇಳಲು ಮಹಾಶ್ವೇತೆಯ ಮುಖ ನೋಡುತ್ತ ಕಾದಂಬರಿಯು "ಅವರಿಗೂ ನನಗೂ ಪರಿಚಯವಿಲ್ಲದ ಮೂಲಕ ಅವರಿಗೆ ತಾಂಬೂಲ ಕೊಡಲಿಕ್ಕೆ ನಾನು ಸಂಕುಚಿತಳಾಗುತ್ತೇನೆ, ನೀನೇ ಈ ತಾಂಬೂಲ ತಕ್ಕೊಂಡು ಅವರಿಗೆ ಕೊಡು" ಎಂದು ಮೆಲ್ಲನೆ ನುಡಿಯಲು ಅವಳು ಕಾದಂಬರಿಗೆ, "ನೀನೇ ಕೊಡತಕ್ಕದ್ದು" ಎಂದು ಬಹಳ ಆಗ್ರಹ ಮಾಡಿದಳು. ಆದುದರಿಂದ ಕಾದಂಬರಿಯು ಕಷ್ಟದಿಂದ ಗ್ರಾಮ್ಯಸ್ತ್ರೀಯಂತೆ ಅಂಜುತ್ತ ಮಹಾಶ್ವೇತೆಯ ಮುಖ ನೋಡುತ್ತ ಚಂದ್ರಾಪೀಡನ ಕಡೆಗೆ ತಾಂಬೂಲದ ಕೈಯನ್ನು ಸಾವಕಾಶ ಚಾಚಿದಳು; ಅದನ್ನು ಕಂಡು ಚಂದ್ರಾಪೀಡನು ವಿನಯದಿಂದ ಮುಂದಕ್ಕೆ ಸಾಗುಬಿದ್ದು ಕೈಯೊಡ್ಡಲು, ಅವಳು ತನ್ನ ಮನಸ್ಸನ್ನೇ ಆತನ ವಶ ಮಾಡುತ್ತಾಳೋ ಏನೋ ಅನ್ನುವಂತೆ ಅವನ ಕೈಯೊಳಗೆ ತನ್ನ ಕೈಮುಟ್ಟಿ ತಾಂಬೂಲ ಕೊಟ್ಟು, ಸ್ಪರ್ಶಸುಖದಿಂದ ಅತಿ ಹರ್ಷಿತಳಾಗಿ, ಕೃತಾರ್ಥಳಾದೆನೆಂದು ಭಾವಿಸಿಕೊಂಡು, ಎರಡನೆಯ ತಾಂಬೂಲವನ್ನು ತೆಗೆದುಕೊಂಡು ಮಹಾಶ್ವೇತೆಗೆ ಕೊಟ್ಟಳು.

ಅಷ್ಟರೊಳಗೆ ಒಬ್ಬ ಕಂಚುಕಿಯು ಬಂದು ಮಹಾಶ್ವೇತೆಗೆ ತಲೆಬಾಗಿ— "ತಾಯೀ ಆಯುಷ್ಮತೀ, ಚಿತ್ರರಥರಾಜನೂ, ಮದಿರಾದೇವಿಯೂ ನಿಮ್ಮನ್ನು ನೋಡಲುತ್ಕಂಠಿತರಾಗಿ ನಿಮ್ಮ ಮಾರ್ಗ ನಿರೀಕ್ಷಿಸುತ್ತಾರೆ" ಎಂದು ಹೇಳಿದ ಕೂಡಲೆ ಮಹಾಶ್ವೇತೆಯು ಅತ್ತ ಹೋಗಲನುವಾಗಿ — "ಸಖೀ ಕಾದಂಬರೀ, ಇನ್ನು ಈ ಚಂದ್ರಾಪೀಡನು ಎಲ್ಲಿರಬೇಕು?" ಎಂದು ಕೇಳಿದಳು. ಅದಕ್ಕೆ ಕಾದಂಬರಿಯು ಮನದೊಳಗೆ ನನ್ನ ಹೃದಯವೇ ಇವನಿಗೀಗ ಮಂದಿರವಾಗಿರಲು, ಇನ್ನು ಬೇರೆ ಸ್ಥಳವೇಕೆ? ಎಂದು ತುಸು ನಕ್ಕು —"ಸಖೀ ಮಹಾಶ್ವೇತೇ, ನೀನು ಹೀಗೆ ಕೇಳುವ ಬಗೆಯೇನು? ಮನಸ್ಸಿಗೆ ಬಂದಲ್ಲಿ ಇರಲಿ, ಇದ್ದಲ್ಲಿ ಸರ್ವಸಾಹಿತ್ಯದ ಸಿದ್ಧತೆಯುಂಟು" ಎಂದು ಹೇಳಿದಳು. ಕಾದಂಬರಿಯ ಈ ಮಾತು ಕೇಳಿ, ಮಹಾಶ್ವೇತೆಯು—"ನಿನ್ನ ಪ್ರಾಸಾದದ ಬಳಿಯ ಪ್ರಮದವನದೊಳಗಿನ ಕ್ರೀಡಾಪರ್ವತದ ಮೇಲಿನ ಮಣಿಮಯಗೃಹದೊಳಗೆ ಚಂದ್ರಾಪೀಡನು ಇರಲಿ" ಎಂದು ಹೇಳಿ ಗಂಧರ್ವರಾಜನ ದರ್ಶನಕ್ಕೆ ಹೋದಳು. ಚಂದ್ರಾಪೀಡನೂ ಅವಳೊಡನೆ ಹೊರಬಿದ್ದು ಕೇಯೂರಕನು ತೋರಿಸಿದ ಮಾರ್ಗದಿಂದ ಆ ಕ್ರೀಡಾಪರ್ವತದ ಮೇಲಿನ ಮಣಿಮಯ ಮಂದಿರಕ್ಕೆ ಹೋದನು. ಇತ್ತ ಕಾದಂಬರಿಯು ಸರ್ವಸಖಿಯರಿಗೆ ಹೋಗಲಪ್ಪಣೆ ಕೊಟ್ಟು ಒಬ್ಬ ಗೆಳತಿಯನ್ನು ಕರೆದುಕೊಂಡು ತನ್ನ ಮೇಲುಪ್ಪರಿಗೆಯನ್ನೇರಿದಳು.

ಪ್ರಾಸಾದದ ಶಿಖರವನ್ನು ಹತ್ತಿ, ಕಾದಂಬರಿಯು ಆಗಾಗ ಆ ಕ್ರೀಡಾಪರ್ವತದ ಕಡೆಗೆ ನೋಡಿ ನೋಡಿ, ತಿರುತಿರುಗಿ ಬಂದು, ತನ್ನ ಮಂಚದ ಮೇಲೆ ಒರಗುವಳು;

ಹೊತ್ತು ಹೋಗುವದಕ್ಕಾಗಿ ಗೆಳತಿಯು ಹೇಳುವ ಕಥೆಗೆ ಕಿವಿಗೊಡದೆ ಮೆಲ್ಲನೆ ಕಣ್ಣು ಮುಚ್ಚುವಳು. ಒಮ್ಮಿಂದೊಮ್ಮೆ ಎದ್ದು ಕುಳಿತು "ಈತನನ್ನು ಪೂರ್ವದಲ್ಲಿ ನಾನು ಎಂದೂ ನೋಡಿದ್ದಿಲ್ಲ, ಎಂದೂ ಕೇಳಿದ್ದಿಲ್ಲ. ಇಂಥ ಅಪರಿಚಿತನನ್ನು ಬಯಸುವದಕ್ಕೆ ನಾನು ಸ್ವಲ್ಪವಾದರೂ ಶಂಕಿಸಿದೆನೇ! ಹತ್ತಿರಿರುವ ಗೆಳತಿಯರು ನನಗೆ ಮಾತು ಇಟ್ಟಾರೆಂಬುದನ್ನು ಬಗೆದೆನೇ? ನನ್ನ ಮೇಲೆ ಈ ಪುರುಷನ ಮನಸ್ಸು ಹೇಗಿರುವದೆಂಬುದನ್ನು ಪರೀಕ್ಷಿಸಿದೆನೇ? ಏನೂ ಇಲ್ಲ. ಒಮ್ಮಿಂದೊಮ್ಮೆಲೆ ಅವನಿಗೆ ಮನಸ್ಸು ಒಪ್ಪಿಸಿದೆನು; ಎಂಥ ಮೂಢಳು ನಾನು! ಗುರುಹಿರಿಯರ ಅಂಜಿಕೆಯನ್ನೂ, ಜನರು ಏನೆಂಬುವರೆಂಬ ಅಭಿಮಾನವನ್ನೂ ತೊರೆದೆನು; ಇಂದು ನನ್ನ ಮನಸ್ಸಿನ ಚಾಂಚಲ್ಯವನ್ನು ಜನರಿಗೆ ತೋರಿಸಿಕೊಂಡೆನು; ಮೋಹದಿಂದ ಕಂಗೆಟ್ಟೆನು. ಮಹಾಶ್ವೇತೆಯ ದುಃಖವನ್ನು ಸಹ ಮರೆತುಬಿಟ್ಟೆನು; ನಾನು ಎಂಥ ಮಂದಮತಿಯು! ಈ ನನ್ನ ದಡ್ಡತನವೂ ಮರುಳತನವೂ ಈ ಚತುರ ಸಖಿಯರಿಗೂ ಮದನವ್ಯಥೆಯನ್ನು ಅನುಭವಿಸಿದ ಆ ಮಹಾಶ್ವೇತೆಗೂ ತಿಳಿಯವೋ? ಅಲ್ಪ ಪುಣ್ಯದ ಸಲುವಾಗಿ ನಾನು ಎಲ್ಲತರದಿಂದ ಗತಿಗೆಟ್ಟೆನು; ಈ ಸುದ್ದಿ ಹತ್ತಿದರೆ ನನಗೆ ನನ್ನ ತಾಯಿ ತಂದೆಗಳೇನೆಂದಾರು? ಗಂಧರ್ವರೇನೆಂದಾರು? ಇನ್ನೇನು ಮಾಡಲಿ? ಯಾರಿಗೆ ಹೇಳಲಿ? ಕಾಮನಂತೂ ಕೂರಂಬುಗಳನ್ನು ಎಸೆದು ನನ್ನ ಎದೆ ಹೋಳುಮಾಡಿದನು. ಮಹಾಶ್ವೇತೆಯ ದುಃಖದ ವೃತ್ತಾಂತ ಕೇಳಿ ಮಾಡಿಕೊಂಡ ನೇಮವೇನಾಯಿತು! ಕೇಯೂರಕನ ಕೂಡ ಮಹಾಶ್ವೇತೆಗೆ ದೊಡ್ಡಿಸ್ತನದ ಪ್ರತಿಸಂದೇಶ ಹೇಳಿ ಕಳಿಸಿದೆನೇನು! ಈಗ ಈ ಅವಸ್ಥೆಗೆ ಒಳಗಾದೆನೇನು! ನಾನು ಎಂಥ ಚಂಚಲಮನಸ್ಕಳು?" ಎಂದು ಮನದೊಳಗೆ ಆಲೋಚಿಸುತ್ತ, ನಾಚಿ ತನ್ನನ್ನು ತಾನೇ ಹಳಿದುಕೊಳ್ಳುವಳು. "ಇನ್ನೊಮ್ಮೆ ಚಂದ್ರಾಪೀಡನು ನನ್ನ ಮಂದಿರಕ್ಕೆ ಬಂದಾನೇ? ನನ್ನ ಕಣ್ಣಿಗೆ ಬಿದ್ದಾನೇ?" ಎಂದು ಆಲೋಚಿಸುತ್ತ, ಚಟ್ಟನೆ ಎದ್ದು, ಕಿಟಕಿಯ ಜಾಳಿಗೆಯೊಳಗಿಂದ ಕ್ರೀಡಾಪರ್ವತದ ಕಡೆಗೆ ಮರಮರಳಿ ನೋಡುತ್ತ ನಿಲ್ಲುವಳು.

ಅತ್ತ ಆ ರಮಣೀಯ ಮಣಿಮಯಗೃಹದೊಳಗೆ, ಮೃದುವಾದ ತಿವಾಸಿಗೆಯನ್ನು ಹಾಸಿ, ಅದರ ಮೇಲೆ ರತ್ನಗಂಬಳಿಯ ಹಾಕಿ, ದಿಂಬುಗಳನ್ನು ಇಟ್ಟಿದ್ದರು. ಅದರ ಮೇಲೆ ಚಂದ್ರಾಪೀಡನು ಸ್ವಚ್ಛಂದದಿಂದ ಕಾಲು ಚಾಚಿಕೊಂಡು ಅಡ್ಡಾಗಿದ್ದನು; ಕೇಯೂಕರನೂ ಪಾದಸಂವಾಹನ ಮಾಡುತ್ತಿದ್ದನು; ಕುಲಕನ್ನಿಕೆಯರು ಸುತ್ತು ಮುತ್ತು ಕುಳಿತುಕೊಂಡು ವೀಣಾಮೃದಂಗಗಳನ್ನು ಶ್ರುತಿಗೊಳಿಸಿ ಬಾರಿಸುತ್ತ, ಸುಸ್ವರದಿಂದ ಹಾಡುತ್ತಿದ್ದರು; ಆಗ ಚಂದ್ರಾಪೀಡನು ಕಾದಂಬರಿಯ ಎರಡನೆಯ ಹೃದಯವೋ ಏನೋ ಅನ್ನುವ ಹಾಗೆ ಮನಸ್ಸಿನೊಳಗೆ — " ಈ ಕಾದಂಬರಿಯ ಸ್ವಾಭಾವಿಕ ವಿಲಾಸಗಳು ಎಷ್ಟು ಬೇಗ ನನ್ನ ಅಂತಃಕರಣವನ್ನು ಎಳಕೊಂಡವು! ಓರೆನೋಟದಿಂದ ನನ್ನನ್ನು ನೋಡುವಾಗ, ನಾನು ನೋಡಿದ ಕೂಡಲೆ ಮುಸುಕಿನೊಳಗೆ ಮುಗುಳ್ನಗೆ ನಕ್ಕು ನಾಚಿ ಮೋರೆದಿರುವುತ್ತಿದ್ದದ್ದು ನನ್ನ ಮನಸ್ಸು ಪರೀಕ್ಷಿಸುವದಕ್ಕೋ? ಕಾಮಪ್ರೇರಿತಳಾಗಿಯೋ? ತಿಳಿಯದು" ಎಂದು ಚಿಂತಿಸುತ್ತ "ಮೋಹಿತಳಾದದ್ದೇ ನಿಜವಾದರೆ ಮನ್ಮಥನೇ ಅದನ್ನು ಹೊರಗೆಡವಿ, ನನ್ನ ಸಂಶಯವನ್ನು ಪರಿಹರಿಸುವನು. ಈಗ ವ್ಯರ್ಥವಾಗಿ ಆಯಾಸಗೊಂಡು ಫಲವಿಲ್ಲೆಂದು ನಿಶ್ಚಯಿಸಿ, ಎದ್ದು ಕುಳಿತು, ಆ ಕನ್ನಿಕೆಯರ ಕೂಡ ಪಗಡೆ, ಚದುರಂಗ, ವಾದ್ಯವಾದನ, ಗಾಯನ, ಸುಭಾಷಿತ ಮುಂತಾದ ಕಲಾವಿಲಾಸಗಳಿಂದ ಕೆಲಹೊತ್ತು ಕಳೆದ ಬಳಿಕ,

ಅಲ್ಲಿಂದ ಎದ್ದು, ಉಪವನದೊಳಗೆ ವಿಹರಿಸಿ, ಕ್ರೀಡಾಪರ್ವತದ ಶಿಖರದ ಮೇಲೆ ಆರೋಹಿಸಿ ಕಾದಂಬರಿಯನ್ನು ದಿಟ್ಟಿಸಿ ನೋಡುತ್ತ ನಿಂತುಕೊಂಡನು.

ಇತ್ತ ಕಾದಂಬರಿಯೂ ಆ ಚಂದ್ರಾಪೀಡನನ್ನು ನೋಡಿ ಮಹಾಶ್ವೇತೆ ಬರುವ ಮಾರ್ಗ ಪ್ರತೀಕ್ಷಿಸುವ ನೆವ ಮಾಡಿಕೊಂಡು, ಸೌಧಾಗ್ರದ ಮೇಲೆ ಹತ್ತಿ, ಚಂದ್ರಾಪೀಡನ ಕಡೆಗೆ ನೋಡುತ್ತ ಬಹಳ ಹೊತ್ತು ನಿಂತುಕೊಂಡಳು.

ಅಷ್ಟರೊಳಗೆ ಒಬ್ಬ ದ್ವಾರಪಾಲಿಕೆಯು ಬಂದು, ಮಹಾಶ್ವೇತೆಯು ತಿರುಗಿ ಬಂದಳೆಂದು ಅರಿಕೆ ಮಾಡಿಕೊಂಡದ್ದರಿಂದ, ಕಾದಂಬರಿಯು ಸೌಧಾಗ್ರದಿಂದಿಳಿದು ಕೆಳಗೆ ಬಂದು, ತನ್ನ ಮನಸ್ಸಿಲ್ಲದಿದ್ದರೂ ಮಹಾಶ್ವೇತೆಯ ಆಗ್ರಹದಿಂದ ಸ್ನಾನ ಮುಂತಾದ ಕಾರ್ಯಗಳನ್ನು ಮಾಡಿದಳು. ಇತ್ತ ಚಂದ್ರಾಪೀಡನೂ ಆ ಕ್ರೀಡಾಶೈಲದ ಶಿಖರದಿಂದ ಕೆಳಗಿಳಿದು ಬರುವಷ್ಟರಲ್ಲಿ ಕಾದಂಬರಿಯ ಕಡೆಯಿಂದ ಬಂದ ಸೇವಕರು ಸರ್ವ ಸಿದ್ಧತೆಯಾದದ್ದನ್ನು ಸೂಚಿಸಲು ಸ್ನಾನ ಸಂಧ್ಯಾ ದೇವತಾರ್ಚನ ಭೋಜನ ಮುಂತಾದ ವಿಧಿಗಳನ್ನು ಅಲ್ಲಿಯೇ ತೀರಿಸಿಕೊಂಡು, ಮರಕತಮಣಿಯ ಶಿಲಾತಲದ ಮೇಲೆ ಸ್ವಸ್ಥ ಕುಳಿತುಕೊಂಡನು.

ಅಷ್ಟರೊಳಗೆ ಕಾದಂಬರಿಯ ಪ್ರಿಯಸಖಿಯಾದ ಮದಲೇಖೆಯೂ, ಮಹಾಶ್ವೇತೆಯ ಗೆಳತಿ ತರಲಿಕೆಯೂ ಹಲವು ಸ್ತ್ರೀಯರನ್ನೊಡಗೂಡಿ, ಛತ್ರ ಚಾಮರ ಸಹಿತರಾಗಿ ಬಂಗಾರದ ಬೆತ್ತದ ದ್ವಾರಪಾಲಿಕೆಯರ ಕೈಯೊಳಗೆ ಅಂಗರಾಗ ದ್ರವ್ಯ ತುಂಬಿದ ಕರಡಿಗೆಗಳನ್ನು, ತಮಾಲಿಕೆ ಎಂಬವಳ ಕೈಯಲ್ಲಿ ಮಾಲತೀಕುಸುಮದ ಹಾರತುರಾಯಿಗಳನ್ನು ಹಿಡಿಸಿಕೊಂಡು, ಮಂಜಿನಂಥ ಅತಿ ಸೂಕ್ಷ್ಮವಾದ ಎರಡು ಬಿಳಿಯ ಶೆಲ್ಲೆಗಳನ್ನೂ, ಪ್ರಕಾಶಿಸುವ ತೋರ ಮುತ್ತಿನ ಹಾರವನ್ನೂ, ರತ್ನಖಚಿತವಾದ ಪೊಂಬರಿವಾಣದೊಳಗೆ ಇಟ್ಟುಕೊಂಡು, ಮೇಲೆ ಮಡಿಬಟ್ಟೆಯನ್ನು ಮುಚ್ಚಿಕೊಂಡು, ಚಂದ್ರಾಪೀಡನ ಬಳಿಗೆ ಬಂದರು. ಚಂದ್ರಾಪೀಡನು ತನ್ನೆಡೆಗೆ ಬರುವ ಮದಲೇಖಾ ತರಲಿಕೆಯರನ್ನು ಕಂಡು ಎದ್ದು, ಆದರದಿಂದ ಇಬ್ಬರಿಗೂ ಸನ್ಮಾನ ಮಾಡಿದನು. ಆಗ ಮದಲೇಖೆಯು ಅದೇ ಶಿಲಾತಲದ ಮೇಲೆ ಸ್ವಲ್ಪ ಹೊತ್ತು ಕುಳಿತು, ಬಳಿಕ ಎದ್ದು ಕರಡಿಗೆಯೊಳಗಿನ ಪರಿಮಳದ್ರವ್ಯವನ್ನು ಚಂದ್ರಾಪೀಡನ ಮೈಗೆ ತಾನೇ ಪೂಸಿ, ಅವೆರಡೂ ಶೆಲ್ಲೆಗಳನ್ನು ಆತನಿಗೆ ಹೊದಿಸಿ, ಪೂಮಾಲೆಯನ್ನು ಕೊರಳೊಳಗೆ ಹಾಕಿ, ಮುಂಡಾಸದಲ್ಲಿ ತುರಾಯಿ ಇಟ್ಟು, ಮುತ್ತಿನ ಸರವನ್ನು ಕೈಯೊಳಗೆ ತಕ್ಕೊಂಡು —"ಎಲೈ ರಾಜಪುತ್ರನೇ, ಈ ನಿನ್ನ ಸೌಂದರ್ಯಕ್ಕೆ ಮೋಹಿತರಾಗದವರು ಯಾರು? ನಿನ್ನ ಸೌಜನ್ಯವೇ ನಮ್ಮಂಥವರಿಗೆ ನಿನ್ನ ಬಳಿಗೆ ಬರುವದಕ್ಕೆ ಧೈರ್ಯ ಕೊಡುತ್ತದೆ. ನಿನ್ನ ಸ್ವಭಾವವೂ, ಸಮ್ಯಗ್ವ್ಯವಹಾರವೂ ಯಾರನ್ನು ಒಲಿಸವು? ಪ್ರಥಮ ದರ್ಶನವಾದ ಕೂಡಲೆ ನಿನ್ನ ಮೂರ್ತಿಯೇ ವಿಶ್ವಾಸವನ್ನು ಹುಟ್ಟಿಸುತ್ತದೆ. ಇಂಥ ಮಹಿಮಾಶಾಲಿಯ ಸಲುವಾಗಿ ಯೋಚಿಸಿದ್ದೆಲ್ಲ ಅನುಚಿತವಾಗಿ ತೋರುತ್ತದೆ. ನನ್ನ ಸಖಿ ಕಾದಂಬರಿಯು— 'ತಾನಾಗಿ ನನ್ನ ಹರಣ ಮಾಡಿ, ನನ್ನ ಪ್ರಾಣಕ್ಕೆ ಒಡೆಯನಾದವನಿಗೆ ಏನು ಕೊಡಬೇಕು? ಪ್ರಥಮಾಗಮನದಿಂದಲೇ ಮಹೋಪಕಾರ ಮಾಡಿದವನಿಗೆ ಯಾವ ಪ್ರತ್ಯುಪಕಾರ

ಮಾಡಬೇಕು? ದರ್ಶನಮಾತ್ರದಿಂದ ನನ್ನ ಜನ್ಮವನ್ನು ಸಫಲ ಮಾಡಿದವನ ಆಗಮನದ ಸಾಫಲ್ಯವನ್ನು ಯಾತರಿಂದ ಮಾಡಬೇಕು?' ಎಂದು ಪರ್ಯಾಲೋಚಿಸಿ ಈ ಮುಕ್ತಾಮಾಲೆಯನ್ನು ಕೊಡುವ ನೆವದಿಂದ ತನ್ನ ನಿರ್ಮಲ ಪ್ರೀತಿಯನ್ನೇ ನಿನಗೆ ಸಮರ್ಪಿಸುತ್ತಾಳೆ. ಈ ಕಾಣಿಕೆಯು ಅವಳ ವೈಭವ ದ್ಯೋತಕವೆಂದು ತಾವು ತಿಳಿಯಕೂಡದು. ತಮ್ಮಂಥವರು ಈ ಲೋಕಕ್ಕೆ ಬರುವದೇ ದುರ್ಲಭವಿದ್ದು ತಾವು ಬಂದಿರಲೂ ತನ್ನ ಕೈಯಿಂದ ತಕ್ಕ ಸತ್ಕಾರವಾಗಲಿಲ್ಲೆಂದು ಕಾದಂಬರಿಯು ತನ್ನನ್ನು ಕೃತಾಪರಾಧಳೆಂದು ಎಣಿಸುತ್ತಾಳೆ. ತಮಗೆ ತನ್ನ ಆತ್ಮವನ್ನು ಅರ್ಪಿಸಿದ್ದರಿಂದ ನನ್ನ ಗೆಳತಿ ಕಾದಂಬರಿಯು ಮೋಸಗೊಳ್ಳಲಿಲ್ಲೆಂತಲೂ, ಮುಂದೆ ಪಶ್ಚಾತ್ತಾಪಪಡಳೆಂತಲೂ ನಾವು ತುಂಬಾ ನಂಬಿದ್ದೇವೆ. ಸಮುದ್ರನಾಥನು ತನ್ನಲ್ಲಿದ್ದ ಉತ್ಕೃಷ್ಟ ಮುತ್ತುಗಳೊಳಗೆ ಒಂದೊಂದನ್ನು ಆರಿಸಿ, ಈ ಹಾರ ಮಾಡಿ ಇದಕ್ಕೆ ಶೇಷವೆಂಬ ಹೆಸರಿಟ್ಟು ವರುಣನಿಗೆ ಆದರದಿಂದ ಕೊಟ್ಟಿದ್ದನು; ಆ ವರುಣನು ಚಿತ್ರರಥ ಗಂಧರ್ವರಾಜನಿಗೆ ಇದನ್ನು ಸನ್ಮಾನಾರ್ಥವಾಗಿ ಕಾಣಿಕೆ ಸಲ್ಲಿಸಿದ್ದನು. ಆತನು ತನ್ನ ಪ್ರೀತಿಯ ಮಗಳಾದ ಕಾದಂಬರಿಗೆ ಒಪ್ಪಿಸಿದ್ದನು. ಅಂಥ ಈ ಹಾರಕ್ಕೆ ತಾವು ತಕ್ಕವರೆಂದು ತಿಳಿದು, ಕಾದಂಬರಿಯು ಅತಿ ಪ್ರೀತಿಯಿಂದ ಇದನ್ನು ತಮಗೆ ಕಳಿಸಿದ್ದಾಳೆ. ದಯಮಾಡಿ ಸ್ವೀಕರಿಸಬೇಕು. ಸದ್ಗುಣರೂಪವಾದ ಅಲಂಕಾರಗಳಿಂದ ಭೂಷಿತರಾದ ತಮ್ಮಂಥ ಪುರುಷರು ಇಂಥ ಕ್ಲೇಶಕಾರಕವಾದ ಜಡಭೂಷಣಗಳನ್ನು ಧರಿಸುವದಿಲ್ಲ. ಆದರೂ ಕಾದಂಬರಿಯ ಪ್ರೀತಿಯ ಸಲುವಾಗಿ ಈ ಹಾರವನ್ನು ತಾವು ಧಾರಣ ಮಾಡಬೇಕು. ಒಂದು ಪಕ್ಷದಲ್ಲಿ ತಾವು ಆಕೆಯ ಪ್ರೀತಿಗೆ ಪ್ರತಿಕೂಲರಾದರೆ, ಅವಳು ತನ್ನನ್ನು ಹಳಿದು ಪ್ರಾಣತ್ಯಾಗ ಮಾಡಿಕೊಂಡಾಳೆಂಬ ಅಂಜಿಕೆಯಿಂದ ಮಹಾಶ್ವೇತೆಯು ಈ ತರಲಿಕೆಯ ಕೂಡ — 'ಕಾದಂಬರಿಯ ಪ್ರೀತಿ ದಾನವನ್ನು ಉಪೇಕ್ಷಿಸೀಯೇ ಕಂಡೆಯಾ' ಎಂದು ತಮಗೆ ಸಂದೇಶ ಕಳಿಸಿದ್ದಾಳೆ, ಎಂದು ಹೇಳಿ ಚಂದ್ರಾಪೀಡನ ಕೊರಳೊಳಗೆ ಆ ಹಾರವನ್ನು ಹಾಕಿದಳು.

ಚಂದ್ರಾಪೀಡನು ಆಕೆಯ ಜಾಣ್ನುಡಿಗೆ ಆಶ್ಚರ್ಯಪಟ್ಟು — "ಎಲೈ ಮದಲೇಖೆಯೇ, ನೀನು ಬಹು ಚತುರಳು; ಹೆರವರಿಗೆ ಒಡವೆಗಳನ್ನು ಸಲ್ಲಿಸುವ ಜಾಣ್ಮೆ ನಿನಗೆ ಸಲ್ಲುವದು. ಮಾತಾಡಗೊಡದೆ ಮಾತಾಡುವ ಇಂಥ ಪ್ರೌಢಿಮೆಯನ್ನು ಎಲ್ಲಿ ಕಲಿತಿ? ಮಾನಿನೀ, ನಿಮ್ಮ ಸೌಜನ್ಯದ ಮುಂದೆ ನನ್ನದೇನು ಸಾಗೀತು? ಅದೇ ನನ್ನನ್ನು ತೀರ ಕೈವಶ ಮಾಡಿಕೊಂಡಿದೆ. ಇನ್ನು ಇಷ್ಟವಾಗಲಿ, ಅನಿಷ್ಟವಾಗಲಿ ನಿಮ್ಮ ಮನಸ್ಸಿಗೆ ಬಂದಂತೆ ನೀವೇ ಮಾಡಬೇಕಲ್ಲದೆ ನಾನು ಹೇಳಲು ಸಮರ್ಥನಲ್ಲ. ಕಾದಂಬರಿಯ ಗುಣಕ್ಕೆ ಯಾರು ದಾಸರಾಗರು?" ಎಂದು ಆದರದ ಮಾತುಗಳನ್ನಾಡಿ, ಮದಲೇಖೆಗೆ ಮನೆಗೆ ಹೋಗಲಪ್ಪಣೆ ಕೊಟ್ಟನು.

ಬಳಿಕ ಹೊತ್ತು ಮುಳುಗಿ ಚಂದ್ರೋದಯವಾಗಲು, ಚಂದ್ರಾಪೀಡನು ಕೆಳಗಿಳಿದು ಕಾದಂಬರಿಯ ಸೇವಕರು ಸಿದ್ಧಮಾಡಿಕೊಟ್ಟ ಅಂಚೆದುಪ್ಪಳ ಹಾಸಿಗೆಯ ಮೇಲೆ ಅಡ್ಡಾದನು. ಆಗ ಕೇಯೂಕರನು ಓಡುತ್ತ ಬಂದು— "ಜೀಯಾ ಮಹಾಶ್ವೇತೆಯು ಕಳಿಸಿಕೊಟ್ಟದ್ದರಿಂದ ಕಾದಂಬರೀದೇವಿಯು ತಮ್ಮ ದರ್ಶನಕ್ಕೆ ಬಂದಳು" ಎಂದು ಆತನಿಗೆ ಬಿನ್ನವಿಸಿದನು.

ಈ ಮಾತು ಕೇಳಿದ ಕೂಡಲೆ ಚಂದ್ರಾಪೀಡನು ಚಟ್ಟನೆ ಎದ್ದು ಕುಳಿತನು. ಅಷ್ಟರಲ್ಲಿ ಕಾದಂಬರಿಯು ಹಲವು ಸಖಿಯರೊಡನೆ ಮದಲೇಖೆಯ ಮುಂಗೈ ದಂಡೆವಿಡಿಯುತ್ತ, ಬೇಸರದಿಂದ ಛತ್ರಚಾಮರಗಳನ್ನು ಓರೆ ಮಾಡುತ್ತ ಸಾಮಾನ್ಯ ಸ್ತ್ರೀಯಂತೆ ಕೊರಳೊಳಗೆ ಮುತ್ತಿನ ಏಕಾವಳೀ ಸರವೊಂದನ್ನೇ ಹಾಕಿಕೊಂಡು, ಮೈಗೆ ಚಂದನವನ್ನು ಪೂಸಿಕೊಂಡು, ಒಂದು ಕಿವಿಯ ಮೇಲೆ ಹಣೆಗೆಯನ್ನೂ, ಮತ್ತೊಂದರ ಮೇಲೆ ತಾವರೆಯ ಹೂವನ್ನೂ ಇಟ್ಟುಕೊಂಡು ಕಲ್ಪವೃಕ್ಷದ ಶ್ವೇತಾಂಬರವನ್ನುಟ್ಟುಕೊಂಡು ಬಂದು ಅತಿ ವಿನಯದಿಂದ ತಲೆವಾಗಿ ಆತನಿಗೆ ಪೊಡಮಟ್ಟು, ನೆಲದ ಮೇಲೆ ಕುಳಿತುಕೊಂಡಳು. ಚಂದ್ರಾಪೀಡನಿಗೆ ಮಂಚದ ಮೇಲೆಯೇ ಕುಳಿತುಕೊಳ್ಳುವದಕ್ಕೆ ಮದಲೇಖೆಯು ಎಷ್ಟು ಆಗ್ರಹ ಮಾಡಿದರೂ ಕೇಳದೆ, ಆತನೂ ನೆಲದ ಮೇಲೆಯೇ ಕುಳಿತನು. ಬಳಿಕ ಕಾದಂಬರಿಯ ಸಂಗಡ ಬಂದ ಸಖಿಯರೆಲ್ಲರು ಕೆಳಗೇ ಕುಳಿತರು; ಚಂದ್ರಾಪೀಡನು— "ದೇವೀ, ಕಾದಂಬರೀ, ನೀವು ಇಲ್ಲಿಯ ತನಕ ಅನುಗ್ರಹ ಮಾಡಿ ಬಂದದ್ದಕ್ಕೆ ನಿಮ್ಮ ಸುಸ್ವಭಾವವೂ ನಿರಭಿಮಾನತೆಯೂ, ಸೌಜನ್ಯವೂ ಕಾರಣವಲ್ಲದೆ, ನನ್ನಲ್ಲಿ ಅಂಥ ಗುಣವೇನೂ ಇಲ್ಲ. ನಿಮ್ಮ ಅವಲೋಕನ ಮಾತ್ರದಿಂದ ಆನಂದಪಡುವವನು ನಾನು; ಇನ್ನು ನೀವೇ ಇಲ್ಲಿಯವರೆಗೆ ಬಂದು ಮಾತಾಡಿಸಿದ್ದರಿಂದಂತೂ ನಾನು ಧನ್ಯನೇ ಸರಿ" ಎಂದು ಕೃತಾರ್ಥ ಭಾವವನ್ನು ಕೈಕೊಂಡು ಮನಸ್ಸಿನಲ್ಲಿ ಉಂಟಾದದ್ದನ್ನು ಉಪಚಾರವಿಲ್ಲದೆ ಮಾತಾಡಲು, ಕಾದಂಬರಿಯೂ, ಮದಲೇಖೆಯೂ ಆತನ ವಿನಯೋಕ್ತಿಗೆ ಹರ್ಷನಿರ್ಭರಿತರಾಗಿ ಮೆಲ್ಲನೆ ಒಂದು ಪ್ರಸಂಗ ತೆಗೆದು "ತಾರಾಪೀಡ ದೊರೆಯು ಹೇಗಿದ್ದಾನೆ; ವಿಲಾಸವತೀ ರಾಣಿಯು ಹೇಗಿದ್ದಾಳೆ? ಶುಕನಾಸ ಪ್ರಧಾನನು ಹೇಗಿದ್ದಾನೆ? ಉಜ್ಜಯಿನೀಪಟ್ಟಣವು ಇಲ್ಲಿಗೆ ಎಷ್ಟು ದೂರವಿದೆ? ಹೇಗಿದೆ? ಭರತಖಂಡದ ಸ್ಥಿತಿಯು ಹೇಗಿದೆ? ಮರ್ತ್ಯಲೋಕವು ರಮಣೀಯವಿದೆಯೋ ಹೇಗೆ" ಎಂದು ಹಲವು ಸಂಗತಿಗಳನ್ನು ಕೇಳಲು, ಆತನು ಅವುಗಳಿಗೆಲ್ಲ ಉತ್ತರ ಕೊಟ್ಟನು. ಇಂಥ ಮಾತುಗಳಿಂದ ಕೆಲಹೊತ್ತುಗಳೆದು, ಕಾದಂಬರಿಯು ಚಂದ್ರಾಪೀಡನ ಅಪ್ಪಣೆ ತಕ್ಕೊಂಡು ತನ್ನ ಮಂದಿರಕ್ಕೆ ಹೋಗಿ, ಮೇಲುಪ್ಪರಿಗೆಯ ಸೆಜ್ಜೆವನೆಯೊಳಗೆ ಹಂಸತೂಲಿಕಾತಲ್ಪದ ಮೇಲೆ ಮಲಗಿಕೊಂಡಳು. ಇತ್ತ ಚಂದ್ರಾಪೀಡನು ತನ್ನ ಹಾಸಿಗೆಯ ಮೇಲೆ ಮಲಗಿಕೊಂಡು ಕಾದಂಬರಿಯ ನಿರಭಿಮಾನತೆಯನ್ನೂ, ಅಭಿರೂಪವನ್ನೂ, ಗಾಂಭೀರ್ಯವನ್ನೂ, ಮಹಾಶ್ವೇತೆಯ ನಿಷ್ಕಾರಣವತ್ಸಲತೆಯನ್ನೂ, ಮದಲೇಖೆಯ ಸೌಜನ್ಯವನ್ನೂ, ಸೇವಕರ ಮಹಾನುಭಾವತೆಯನ್ನೂ, ಗಂಧರ್ವಲೋಕದ ವೈಭವವನ್ನೂ, ಕಿಂಪುರುಷ ದೇಶದ ರಮ್ಯತನವನ್ನೂ ಮನದೊಳಗೆ ನೆನಸುತ್ತ, ಒಂದು ನಿಮಿಷದಂತೆ ಇರುಳುಗಳೆದನು.

ಬಳಿಕ ಚಂದ್ರನು ಅಸ್ತನಾಗಿ ಬೆಳಗುಮುಂಜಾವಿನ ತಂಗಾಳಿಯು ಮಕರಂದವನ್ನು ಹರವುತ್ತ ಮೆಲ್ಲನೆ ಸುಳಿಯಹತ್ತಿತು; ಸೊಡರುಗಳು ಬೆಳ್ಳಗಾದವು; ಚುಕ್ಕಿಗಳು ಕಾಣದಾದವು; ಸೂರ್ಯನು ಮೂಡಣಿಂದ ಮೇಲಕ್ಕೇರಿ ತನ್ನ ಹೊಂಬಣ್ಣದ ಕಿರಣಗಳನ್ನು ಹರವುತ್ತ ಬಂದನು. ಆಗ ಚಂದ್ರಾಪೀಡನು ಶಿವಸ್ಮರಣೆಯೊಡನೆ ಹಾಸಿಗೆಯಿಂದೆದ್ದು ಮುಖಪ್ರಕ್ಷಾಳನ ಮಾಡಿ, ಸ್ನಾನಸಂಧ್ಯಾದಿಗಳನ್ನು ತೀರಿಸಿ— "ಎಲೈ ಕೇಯೂರಕಾ, ಕಾದಂಬರೀದೇವಿಯು ಎದ್ದಳೋ ಇಲ್ಲವೋ? ಎದ್ದಿದ್ದರೆ ಎಲ್ಲಿ ಕುಳಿತಿದ್ದಾಳೆ ನೋಡಿ ಬಾ" ಎಂದು ಅಪ್ಪಣೆ

ಮಾಡಿದನು. ಆ ಮೇರೆಗೆ ಕೇಯೂರಕನು ನೋಡಿ ಬಂದು — "ಸ್ವಾಮೀ, ಕಾದಂಬರೀದೇವಿಯು ಸುಂದರ ಪ್ರಾಸಾದದ ಕೆಳಗಿನ ಮಲ್ಲಿಗೆಯ ಬಳ್ಳಿಯ ಮಂಟಪದಲ್ಲಿ ಚಂದ್ರಕಾಂತದ ಕಟ್ಟೆಯ ಮೇಲೆ ಮಹಾಶ್ವೇತೆಯ ಕೂಡ ಮಾತಾಡುತ್ತ ಕುಳಿತಿದ್ದಾಳೆ" ಎಂದು ಅರಿಕೆ ಮಾಡಿಕೊಳ್ಳಲು, ಚಂದ್ರಾಪೀಡನು ಕಾದಂಬರಿಯ ದರ್ಶನ ತಕ್ಕೊಂಡು ತಿರುಗಿ ಹೋಗುವ ಅಪ್ಪಣೆ ಕೇಳಬೇಕೆಂದು ಅಲ್ಲಿಗೆ ಹೋಗಿ ಮಹಾಶ್ವೇತೆಯ ಮುಖ ನೋಡಿ ಮುಗುಳ್ನಗೆ ನಗಲು, ಅಷ್ಟರಿಂದಲೇ ಅವಳು ರಾಜಪುತ್ರನ ಮನೋಭಾವವನ್ನು ತಿಳಿದು — " ಸಖೀ ಕಾದಂಬರೀ, ಈ ಚಂದ್ರಾಪೀಡನು ನಿನ್ನ ಗುಣಗಳಿಗೆ ಮನಸ್ಸು ಕರಗಿ ನಿನ್ನ ಕೂಡ ಮಾತಾಡಲಾರನು; ಆದರೆ ಈ ರಾಜಕುಮಾರನ ಮನಸ್ಸಿನೊಳಗೆ ತಿರುಗಿ ಹೋಗಬೇಕೆಂದು ಇಚ್ಛೆ ಹುಟ್ಟಿದೆ. ಯಾಕೆಂದರೆ, ಈತನ ಹಿಂದೆ ಬಂದ ರಾಜಕುಮಾರರಿಗೆ ಇವನ ಗೊತ್ತು ಹತ್ತದ ಮೂಲಕವಾಗಿ ಬಹಳ ದುಃಖವಾಗುತ್ತಿದ್ದೀತು; ಆದುದರಿಂದ ಇವನಿಗೆ ನೀನು ಅಪ್ಪಣೆ ಕೊಡಬೇಕು. ದೂರ ಹೋಗುವನೆಂದು ಚಿಂತಿಸಬೇಡ. ಪದ್ಮಿನಿಯೂ, ಸೂರ್ಯನೂ ಇರುವಂತೆ ನೀವು ಯಾವಾಗಲೂ ಒಬ್ಬರ ಮೇಲೊಬ್ಬರು ಪ್ರೀತಿಮಾಡುತ್ತ ಇರಬೇಕು" ಎನಲು ಕಾದಂಬರಿಯು — "ಅಕ್ಕಾ ಮಹಾಶ್ವೇತೆ, ಈ ರಾಜಕುಮಾರನ ಅಂಕೆಗೊಳಗಾದ ಈ ತೊತ್ತು ಈತನ ಇಚ್ಛೆಗೆ ಪ್ರತಿಕೂಲಳಾಗಲು ಸಮರ್ಥಳೇ?" ಎಂದು, ಗಂಧರ್ವಕುಮಾರನನ್ನು ಕರೆದು, ಚಂದ್ರಾಪೀಡನನ್ನು ಸುರಕ್ಷಿತವಾಗಿ ಮುಟ್ಟಿಸಿ ಬರಬೇಕೆಂದು ಆಜ್ಞಾಪಿಸಿದಳು.

ಬಳಿಕ ಚಂದ್ರಾಪೀಡನು ಮೊದಲು ಮಹಾಶ್ವೇತೆಗೆ ನಮಿಸಿ, ಬಳಿಕ ಕಾದಂಬರಿಗೆ ಪ್ರೀತಿಯಿಂದ ತಲೆಬಾಗಿ, ಕಣ್ತುಂಬ ನೀರು ತಂದು— "ದೇವೀ ಕಾದಂಬರೀ ಹೆಚ್ಚಿಗೆ ಹೇಳುವದೇನು? ಬಹಳ ಮಾತಾಡುವವರ ಮಾತುಗಳನ್ನು ಯಾರೂ ಆದರದಿಂದ ಆಲಿಸುವದಿಲ್ಲ. ಕಾರಣ ಸ್ವಲ್ಪದರಲ್ಲಿ ಹೇಳುತ್ತೇನೆ. ನಿನ್ನ ಸೇವಕರೊಳಗೆ ನನ್ನನ್ನು ಎಣಿಸಿ ನನಗೆ ಏನಾದರೂ ಸಂದೇಶ ಕಳಿಸುತ್ತಿರಬೇಕು" ಎಂದು ಹೇಳಿ ಕನ್ಯಾಂತಃಪುರದಿಂದ ಹೊರಟನು. ಆಗ ಕಾದಂಬರಿಯ ಹೊರತು ಎಲ್ಲ ಸ್ತ್ರೀಯರು ಅವನನ್ನು ಆದರದಿಂದ ಕಳಿಸುವದಕ್ಕೆ ಆತನ ಹಿಂದಿಂದೆ ನಡೆಯುತ್ತ ವಿನಯದಿಂದ ಆತನ ಸದ್ಗುಣಗಳನ್ನು ತಮ್ಮತಮ್ಮೊಳಗೆ ಕೊಂಡಾಡುತ್ತ ಹೆಬ್ಬಾಗಿಲ ತನಕ ಹೋದರು. ಬಳಿಕ ಅವನು ಆ ಸ್ತ್ರೀಯರಿಗೆ ತಿರುಗಿ ಹೋಗಲು ವಿನಯದಿಂದ ಹೇಳಿ, ಕೇಯೂಕರನು ತಂದ ಅಶ್ವವನ್ನು ಆರೋಹಿಸಿ, ಗಂಧರ್ವಕುಮಾರನನ್ನೊಡಗೊಂಡು ಹೇಮಕೂಟಪರ್ವತವನ್ನಿಳಿದು ಪಯಣ ಗತಿಯಿಂದ ಬರುವಾಗ ಕೂಡ ಆತನ ಹೃದಯವೇ ಕಾದಂಬರೀಮಯವಾಗಿದ್ದರಿಂದ ಎತ್ತ ನೋಡಿದರೂ ಆತನಿಗೆ ಕಾದಂಬರಿಯೇ ಕಾಣಿಸಹತ್ತಿದಳು.

ಈ ಮೇರೆಗೆ ಚಂದ್ರಾಪೀಡನು ಗಮನಕ್ರಮದಿಂದ ಮಹಾಶ್ವೇತೆಯ ಆಶ್ರಮಕ್ಕೆ ಬರುವಷ್ಟರೊಳಗೆ ಆತನ ಸೇನೆಯು ಇಂದ್ರಾಯುಧದ ಹೆಜ್ಜೆ ಹಿಡಿದು ಬಂದು, ಅಚ್ಛೋದ ಸರೋವರದ ದಂಡೆಯ ಮೇಲೆ ಬೀಡಾರಗೊಂಡಿತು; ಅದನ್ನು ಕಂಡು ಪರಮಹರ್ಷಿತನಾಗಿ, ತನ್ನ ಸಂಗಡ ಬಂದ ಗಂಧರ್ವಕುಮಾರನನ್ನು ತಿರುಗಿ ಕಳುಹಿ, ತನ್ನ ಪಾಳಯದೊಳಗೆ ಹೋಗಲು, ಜನರು ಅವನನ್ನು ಕಂಡು ಆನಂದಾಶ್ಚರ್ಯಗಳಿಂದ ಆತನಿಗೆ ನಮಿಸಹತ್ತಿದರು.

ಚಂದ್ರಾಪೀಡನು ಅವರ ಶರಣುಗಳನ್ನು ಕೈಕೊಳ್ಳುತ್ತ ಆನಂದದ ನೋಟದಿಂದವರನ್ನು ನೋಡುತ್ತ ತನ್ನ ಪಟಗೃಹವನ್ನು ಪ್ರವೇಶಿಸಿ, ಬಂದ ಯಾವತ್ತು ರಾಜಕುಮಾರರಿಗೆ ದರ್ಶನಲಾಭ ಕೊಟ್ಟು ಅವರವರಿಗೆ ತಕ್ಕ ಸನ್ಮಾನಮಾಡಿ, ವೈಶಂಪಾಯನ ಪತ್ರಲೇಖೆಯರ ಕೂಡ, ಮಹಾಶ್ವೇತೆ ಇಂಥಾಕೆ, ಕಾದಂಬರಿ ಇಂಥವಳು, ಮದಲೇಖೆ ಇಂಥವಳು, ತಮಾಲಿಕೆ ಇಂಥಾಕೆ, ಕೇಯೂರಕನಿಂಥವನು, ಗಂಧರ್ವಲೋಕವಿಂಥದು ಎಂದು ಮಾತಾಡುತ್ತ ಹೊತ್ತುಗಳೆದನು. ಮರುದಿನ ಮುಂಜಾನೆ ಚಂದ್ರಾಪೀಡನು ಓಲಗದಲ್ಲಿ ಕುಳಿತಾಗ, ಕೇಯೂರಕನು ದ್ವಾರಪಾಲಕನ ಸಂಗಡ ಅಕಸ್ಮಾತ್ತಾಗಿ ಬಂದು, ದೂರದಿಂದಲೇ ತಲೆಬಾಗಿ, ನೆಲಮುಟ್ಟಿ ವಂದಿಸಲು, ಚಂದ್ರಾಪೀಡನು ಆತನನ್ನು ನೋಡಿ ಆನಂದದಿಂದ— “ಕೇಯೂರಕಾ, ಯಾವಾಗ ಬಂದಿ, ಬಾ” ಎಂದು ಎದ್ದು ಬಂದು, ಆಲಂಗಿಸಿ, ಬಳಿಯಲ್ಲಿ ಕುಳ್ಳಿರಿಸಿಕೊಂಡು ಆದರಪೂರ್ವಕವಾಗಿ — “ಕಾದಂಬರೀದೇವಿಯು ಪರಿವಾರದೊಡನೆ ಸುಕ್ಷೇಮದಿಂದಿರುವಳೇ? ಮಹಾಶ್ವೇತೆಯು ಹೇಗಿದ್ದಾಳೆ?” ಎಂದು ಕೇಳಲು, ಕೇಯೂರಕನು— “ಜೀಯಾ, ತಮ್ಮ ದಯೆಯಿಂದ ಸರ್ವರೂ ಸುಖದಲ್ಲಿ ಇರುವರು” ಎಂದು ಹೇಳಿ, ಕಾದಂಬರಿಯು ಕೊಟ್ಟ ಕಮಲಪತ್ರದ ಪುಡಿಕೆಯನ್ನು ಬಿಚ್ಚಿ ಮುಂದಿಟ್ಟು ಅದರೊಳಗಿನ ಪಚ್ಚದ ತೆನೆಗಳನ್ನೂ, ಕೇದಿಗೆಯ ಬಣ್ಣದ ವೀಳೆಯದೆಲೆಗಳನ್ನೂ, ಪಚ್ಚಕರ್ಪೂರವನ್ನೂ, ಕಸ್ತೂರಿ ಬೆರಸಿದ ಯಕ್ಷಕರ್ದಮವನ್ನೂ, ಬೇರೆ ಬೇರೆ ತೆಗೆದು ತೋರಿಸಿ, “ಸ್ವಾಮೀ, ಕಾದಂಬರೀದೇವಿಯು ಕೈಜೋಡಿಸಿಕೊಂಡು ಈ ಉಪಕರಣಗಳಿಂದ ತಮ್ಮನ್ನು ಬಹುವಾಗಿ ಅರ್ಚಿಸುತ್ತಾಳೆ; ಮಹಾಶ್ವೇತೆಯು ತಮ್ಮನ್ನು ಬಹಳ ನೆನಸುತ್ತಾಳೆ; ಮದಲೇಖೆ, ತಮಾಲಿಕೆ ಮುಂತಾದ ಕನ್ನಿಕೆಯರು ಒಡೆಯರ ಅಡಿದಾವರೆಗಳಿಗೆ ಪೊಡಮಡುತ್ತಾರೆ. ಮಹಾಶ್ವೇತೆಯು ನನ್ನ ಮುಖಾಂತರವಾಗಿ— ‘ನಿನ್ನನ್ನು ಇನ್ನೂ ನೋಡದ ಹೆಂಗಸರೇ ಧನ್ಯರು; ಯಾಕೆಂದರೆ, ನೀನು ಕಣ್ಣ ಮುಂದೆ ಇದ್ದಾಗ ನಿನ್ನ ಗುಣಗಳು ಚಂದ್ರನ ಚಂದ್ರಿಕೆಯಂತೆ ತಣ್ಣಗೆ ಸುಖ ಕೊಡುತ್ತವೆ; ಆದರೆ ಅವೇ ನಿನ್ನ ಗುಣಗಳು ನೀನು ಅಗಲಿದ ಕೂಡಲೆ ಸೂರ್ಯಕಿರಣಗಳ ಹಾಗೆ ತಾಪವನ್ನೂ, ದುಃಖವನ್ನೂ ಕೊಡುತ್ತವೆ; ನೀನು ಇಲ್ಲಿ ಇದ್ದಾಗಿನ ಕಾಲವು ಇಲ್ಲಿಯವರೆಗೆ ಅಮೃತಮಯವಾಗಿತ್ತು; ಹಾಗೆಯೇ ಇನ್ನೊಮ್ಮೆ ಆಗಬೇಕೆಂದು ಎಲ್ಲರೂ ಇಚ್ಛಿಸುತ್ತಾರೆ. ಬಹಳ ಹೇಳುವದೇನು, ನೀನು ಇಲ್ಲಿಂದ ಹೋದಂದಿನಿಂದ ಗಂಧರ್ವನಗರವು ಹಾಳು ಸುರಿಸುತ್ತದೆ; ನಾನು ಸರ್ವಸಂಗ ಪರಿತ್ಯಾಗ ಮಾಡಿದವಳಾದರೂ ಇನ್ನೊಮ್ಮೆ ನಿನ್ನ ದರ್ಶನವನ್ನು ತಕ್ಕೊಳ್ಳಬೇಕೆಂದು ನನ್ನ ಮನಸ್ಸು ಹರಿಯುತ್ತದೆ; ನಿನ್ನ ವಿಯೋಗದಿಂದ ಕಾದಂಬರಿಯ ಮನಸ್ಸು ಸ್ವಸ್ಥವಿಲ್ಲ; ಆಕೆ ಯಾವಾಗಲೂ ನಿನ್ನನ್ನೇ ನೆನಸುತ್ತಾಳೆ. ಆದುದರಿಂದ ಇನ್ನೊಮ್ಮೆ ಬಂದು ಎಲ್ಲರ ಇಚ್ಛೆಯನ್ನು ಪೂರ್ಣಮಾಡಬೇಕು’ ಎಂದು ಬಿನ್ನವಿಸಿರುವಳು” ಎಂದು ಹೇಳಿ, “ಈ ಶೇಷವೆಂಬ ಮುಕ್ತಾಹಾರವನ್ನು ತಾವು ತಮ್ಮ ಹಾಸಿಗೆಯ ಮೇಲೆ ಮರೆತು ಬಂದಿದ್ದಿರಿ; ತಕ್ಕೊಳ್ಳಬೇಕು” ಎಂದು ತನ್ನ ಶೆಲ್ಲೆಯ ಸೆರಗಿನೊಳಗೆ ಕಟ್ಟಿದ ಹಾರವನ್ನು ತೆಗೆದು ಮುಂದಿಟ್ಟನು.

ಬಳಿಕ ಚಂದ್ರಾಪೀಡನು—“ಇದೆಲ್ಲ ಮಹಾಶ್ವೇತೆಯ ಕೃಪೆಯ ಫಲವು; ನಮ್ಮಂಥ ಬಡಸೇವಕರ ನೆನಪು ಕೃಪೆಯ ಹೊರತು ಆಗಾಗ ಹೇಗಾದೀತು; ಕಾದಂಬರೀದೇವಿಯು

ಅಂತಃಕರಣಪೂರ್ವಕವಾಗಿ ಕಳಿಸಿದ ಪ್ರಸಾದವಿದು" ಎಂದು ಆ ಪರಿಮಳಿಸುವ ಪಚ್ಚದ ತೆನೆಗಳನ್ನು ತಲೆಯ ಮೇಲೆ ಇಟ್ಟುಕೊಂಡು, ಕಾದಂಬರಿಯ ಅಂತಃಕರಣದೊಳಗಿನ ಪ್ರೇಮರಸವಿದೆಂದು ಆ ಆಹ್ಲಾದಕಾರಕವಾದ ವಿಲೇಪನದ್ರವ್ಯವನ್ನು ಮೈಗೆಲ್ಲ ಪೂಸಿಕೊಂಡು, ಮುತ್ತಿನ ಸರವನ್ನು ಕೊರಳೊಳಗೆ ಹಾಕಿಕೊಂಡು, ಎಲ್ಲರಿಗೂ ತಾಂಬೂಲ ಕೊಡಿಸಿ, ತಾನೂ ಸವಿದು, ರಾಜಕುಮಾರರಿಗೆ ಸನ್ಮಾನಪೂರ್ವಕವಾಗಿ ಹೋಗಲಪ್ಪಣೆ ಕೊಟ್ಟು, ಕೇಯೂರಕನ ಹೆಗಲ ಮೇಲೆ ಎಡದೋಳು ಹಾಕಿ, ಅವನನ್ನು ಕರಕೊಂಡು ಮೆಲ್ಲಮೆಲ್ಲನೆ ಅಡ್ಡಾಡುತ್ತ, ಗಂಧಮಾದನವೆಂಬ ಆನೆಯ ಹತ್ತರ ಹೋಗಿ, ಕ್ಷಣಹೊತ್ತು ಅದನ್ನು ನೊಡಿ, ತನ್ನ ಕೈಮುಟ್ಟ ಅದಕ್ಕೆ ಕೋಮಲ ತೃಣಗ್ರಾಸವನ್ನು ಕೊಟ್ಟು, ಅಲ್ಲಿಂದ ಮುಂದೆ ಸಾಗಿ ತನ್ನ ಪ್ರೀತಿಯ ಇಂದ್ರಾಯುಧದ ಹತ್ತಿರ ಹೋಗಿ ಅದರ ಬೆನ್ನ ಮೇಲಿನ ಜೂಲು ಒತ್ತಟ್ಟಿಗೆ ಸರಿದು ಓರೆಯಾದದ್ದನ್ನು ಕಂಡು, ಅದನ್ನು ತಾನೇ ತನ್ನ ಕೈಯಿಂದ ನೆಟ್ಟಗೆ ಸರಿಸಿ, ಮೇಲಕ್ಕೆ ಹಾರಿದ ಗೋಣ್ಣೂದಲುಗಳನ್ನು ಕೈಯಾಡಿಸಿ ನೆಟ್ಟಗೆ ಮಾಡಿ, ಸೇವಕರ ಕಡೆಗೆ ಮುಖದಿರುವಿ ನೋಡಿದ ಕೂಡಲೆ ಅರಸನ ಇಂಗಿತವನ್ನರಿತು ಅವರೆಲ್ಲರೂ ದೂರಹೋಗಲು ಕೇಯೂರಕನೊಬ್ಬನೇ ಹತ್ತಿರ ಉಳಿದನು. ಆಗ ಚಂದ್ರಾಪೀಡನು ಇಂದ್ರಾಯುಧದ ಹೆಡಕಿನ ಮೇಲೆ ತೋಳು ಹಾಕಿಕೊಂಡು ತನ್ನ ಮೈಭಾರವನ್ನೆಲ್ಲ ಅದರ ಮೇಲೆ ಚೆಲ್ಲಿ, ಅತಿ ಕೌತುಕದಿಂದ— "ಕೇಯೂರಕಾ, ನಾನು ಹೊರಟು ಬಂದಾಗಿನಿಂದ ಆ ಗಂಧರ್ವ ರಾಜಮಂದಿರದೊಳಗಿನ ವೃತ್ತಾಂತವೇನು? ಕಾದಂಬರಿಯು ಹೇಗೆ ಹೊತ್ತುಗಳೆಯುವಳು? ಮಹಾಶ್ವೇತೆ ಏನು ಮಾಡುತ್ತಿರುವಳು? ಮದಲೇಖೆ ಏನು ಅನ್ನುತ್ತಾಳೆ" ಎಂದು ಕೇಳಿದನು. ಅದಕ್ಕೆ ಕೇಯೂರಕನು "ಸ್ವಾಮೀ, ಆಲಿಸಬೇಕು. ತಾವು ಅಲ್ಲಿಂದ ಹೊರಟ ಬಳಿಕ ಕಾದಂಬರೀದೇವಿಯು ಕನ್ಯಾಂತಃಪುರದಿಂದ ಹೊರಬಿದ್ದು ತನ್ನ ಮೇಲುಪ್ಪರಿಗೆಯನ್ನು ಹತ್ತಿ ಹುಬ್ಬುಗೈ ಹಚ್ಚಿಕೊಂಡು ನಿಮ್ಮ ಕುದುರೆಯ ಖುರಪುಟದಿಂದೆದ್ದ ಕೆಂಧೂಳಿ ಕಾಣುವತನಕ ನೋಡುತ್ತ ನಿಂತುಕೊಂಡು ಅದು ಕಾಣದ ಹಾಗಾದ ಬಳಿಕ ನಿಟ್ಟುಸಿರು ಬಿಡುತ್ತ, ಮದಲೇಖೆಯ ಹೆಗಲಮೇಲೆ ಕೆನ್ನೆಯನ್ನಿಟ್ಟು, ತಾವು ಹೋದ ದಿಕ್ಕನ್ನು ಕೆಲಹೊತ್ತು ನೋಡುತ್ತ ನಿಂತುಕೊಂಡು ಬಳಿಕ ದುಗುಡದಿಂದ ಕೆಳಗಿಳಿದು, ಕ್ಷಣಹೊತ್ತು ಸಭಾಮಂಟಪದೊಳಗೆ ಕುಳಿತು, ಮನಸ್ಸಿಗೆ ಸೊಗಸೆನಿಸಿದ ಕಾರಣ ತಾವು ಇಳುಕೊಂಡ ಕ್ರೀಡಾಪರ್ವತವನ್ನು ಏರಿ, — 'ಚಂದ್ರಾಪೀಡನು ಕುಳಿತ ಮರಕತಮಣಿಯ ಹಾಸುಗಲ್ಲು ಇದೇ ಅಲ್ಲವೇನೆ? ಆತನು ಪನ್ನೀರಿನಿಂದ ಸ್ನಾನಮಾಡಿದೆಡೆಯು ಇದೇ! ಇದೇ ಸ್ಥಳದಲ್ಲಿ ಕುಳಿತು ಆತನು ಪ್ರಭುವಿನ ಪೂಜೆಯನ್ನು ಮಾಡಿದನು! ಅವನು ಕುಳಿತುಕೊಂಡು ಭೋಜನ ಮಾಡಿದ ಸ್ಫಟಿಕದ ಜಗುಲಿಯ ನೋಡು! ಇದೇ ಮಂಚದ ಮೇಲೆ ಮಲಗಿದ್ದನಲ್ಲವೆ!' ಎಂದು ಸಖಿಯರ ಕೂಡ ಮಾತಾಡುತ್ತ ಒಡೆಯರ ವಿಲಾಸ ಸ್ಥಾನಗಳನ್ನು ನೋಡಿ ನೋಡಿ ಹೊತ್ತುಗಳೆಯಲಾರಂಭಿಸಿದಳು. ಇರುಳು ಮಹಾಶ್ವೇತೆಯ ಆಗ್ರಹದಿಂದ ಉಂಡು, ಸೆಜ್ಜೆವನೆಗೆ ಬಂದು, ತಲೆನೋವಿನಿಂದಲೂ, ದಾಹಜ್ವರದಿಂದಲೂ, ಮನೋವ್ಯಥೆಯಿಂದಲೂ ವ್ಯಾಕುಲಳಾಗಿ, ಹಾಸಿಗೆಯ ಮೇಲೆ ಹೊರಳಾಡುತ್ತ ತೇಲುಗಣ್ಣು ಹಾಕುತ್ತ, ಅಡಿಗಡಿಗೆ ನಿಟ್ಟುಸಿರು ಬಿಡುತ್ತ, ಕಷ್ಟದಿಂದ ಇರುಳುಗಳೆದು, ಬೆಳಗಾದ ಬಳಿಕ ನನ್ನನ್ನು ಕರೆದು, ಸ್ವಾಮಿಯವರ ಸುದ್ದಿಯ ತಿಳಕೊಂಡು ಬಾ! ಎಂದು ನನ್ನನ್ನು ತಮ್ಮ ಸನ್ನಿಧಿಗೆ ಬಹು ಆತುರದಿಂದ ಕಳಿಸಿರುವಳು" ಎಂದು ಹೇಳಿದನು.

ಈ ಮೇರೆಗೆ ಅರಿಕೆ ಮಾಡಿಕೊಂಡ ಕೇಯೂರಕನ ಮಾತು ಕೇಳಿ ಚಂದ್ರಾಪೀಡನು ಕಾದಂಬರಿಯ ಬಳಿಗೆ ಹೋಗಬೇಕೆಂಬ ಆತುರತೆಯಿಂದ 'ಕುದುರೆ ಸಿದ್ಧವಾಗಲಿ, ಕುದುರೆ ಸಿದ್ಧವಾಗಲಿ' ಎನ್ನುತ್ತ ಅಲ್ಲಿಂದ ಹೊರಟು ತನ್ನ ರಾಹುಟಿಯ ಕಡೆಗೆ ಬಂದನು. ಅಷ್ಟರೊಳಗೆ ಅಶ್ವಸೇವಕರು ಇಂದ್ರಾಯುಧವನ್ನು ಸಿದ್ಧಮಾಡಿ ತರಲು, ಚಂದ್ರಾಪೀಡನು ಕುದುರೆಯನ್ನೇರಿ ಪತ್ರಲೇಖೆಯನ್ನು ಹಿಂದೆ ಕುಳ್ಳಿರಿಸಿಕೊಂಡು, ವೈಶಂಪಾಯನನಿಗೆ ದಂಡು ಒಪ್ಪಿಸಿ ಸಂಗಡ ಸೇವಕರನ್ನು ಕರಕೊಳ್ಳದೆ, ಮತ್ತೊಂದು ಕುದುರೆಯನ್ನು ಕೇಯೂರಕನಿಗೆ ಕೊಡಿಸಿ, ಆತನನ್ನು ಕರಕೊಂಡು ಅತಿ ತ್ವರೆಯಿಂದ ಹೇಮಕೂಟಪರ್ವತವನ್ನು ಆರೋಹಿಸಿ ಕಾದಂಬರಿಯ ಮಂದಿರದ ಮಹಾದ್ವಾರದ ಮುಂದೆ ಹೋಗಿ, ಮೊದಲು ಪತ್ರಲೇಖೆಯನ್ನು ಇಳಿಸಿ ತಾನೂ ಕುದುರೆಯಿಂದಿಳಿದನು.

ಅಲ್ಲಿಯ ದ್ವಾರಪಾಲಕರು ಚಂದ್ರಾಪೀಡನು ಬಂದದ್ದನ್ನು ಕಂಡು, ಓಡುತ್ತ ಬಂದು ಕುದುರೆಯನ್ನು ಹಿಡಿಯಲು, ಅವನು ಪತ್ರಲೇಖೆಯೊಡನೆ ಮಂದಿರದೊಳಗೆ ಪ್ರವೇಶಿಸಿ, ಎದುರಿಗೆ ಬಂದ ಒಬ್ಬ ದಾಸಿಯನ್ನು ಕಾದಂಬರೀದೇವಿಯು ಎಲ್ಲಿರುವಳೆಂದು ವಿಚಾರಿಸಿದನು. ಅದಕ್ಕೆ ಅವಳು — "ಜೀಯಾ, ಮತ್ತ ಮಯೂರಕವೆಂಬ ಕ್ರೀಡಾಪರ್ವತದ ಕೆಳಭಾಗದಲ್ಲಿ ಕಮಲವನವಾಪಿಕೆಯ ದಂಡೆಯ ಹತ್ತರ ಹಿಮಗೃಹದೊಳಗೆ ಇದ್ದಾಳೆ" ಎಂದು ಅರಿಕೆ ಮಾಡಿಕೊಂಡ ಕೂಡಲೆ ಕೇಯೂರಕನು ತನಗೆ ಆ ಸ್ಥಳದ ಮಾರ್ಗವು ಗೊತ್ತು ಇದ್ದುದರಿಂದ ಅತ್ತಕಡೆಗೆ ಚಂದ್ರಾಪೀಡ ಪತ್ರಲೇಖೆಯರನ್ನು ಕರಕೊಂಡು ಹೊರಟನು. ಅವರು ಪ್ರಮದವನದೊಳಗಿನ ಚಮತ್ಕಾರಗಳನ್ನು ನೋಡುತ್ತ ಹೋಗುತ್ತಿರಲು, ಎದುರಿಗೆ ಸೊಂಪಿನಿಂದಲೂ, ತಂಪಿನಿಂದಲೂ ಹಚ್ಚಗೆ ಶೋಭಿಸುವದೊಂದು ಕದಳೀವನವನ್ನು ಕಂಡರು. ಅದರ ನಡುವೆ ಆ ಹಿಮಗೃಹವು ಕಂಗೊಳಿಸುತ್ತಿತ್ತು. ಅದರೊಳಗೆ ಕಾದಂಬರಿಯ ಅಂತರಂಗದ ಸೇವಕರು ಸೇವೆಯಲ್ಲಿ ತತ್ಪರರಾಗಿ ಎಡೆಯಾಡುತ್ತಿದ್ದರು. ಅವರು ಚಂದ್ರಾಪೀಡನನ್ನು ನೋಡಿ ಓಡುತ್ತ ಮಂದೆ ಬಂದು ನೆಲಮುಟ್ಟಿ ನಮಸ್ಕರಿಸಿ ಕರಕೊಂಡು ಹೋದರು. ಆಗ ಒಳಹೊಕ್ಕು ನೋಡುತ್ತಾನೆ — ಅಲ್ಲಲ್ಲಿಗೆ ದಾಸಿಯರು ಶೀತೋಪಚಾರದ ಸಾಹಿತ್ಯಗಳನ್ನಳವಡಿಸುವದರಲ್ಲಿಯೇ ತೊಡಗಿದ್ದರು. ಅದನ್ನು ನೋಡುತ್ತ ಚಂದ್ರಾಪೀಡನು ಆ ಹಿಮಗೃಹದ ನಡುವೆ ಹೋಗಿ ನೋಡಲು ಅದು ಚಳಿಬೆಟ್ಟದೊಳಗಿನ ಗವಿಯೋ, ಮಾಗಿಯ ಕಾಲದ ಇರುಳೆಡೆಯೋ, ಮಳೆಗಾಲದ ನೆಲಮನೆಯೋ ಅನ್ನುವ ಹಾಗೆ ತಂಪು ಬೀರುತ್ತಿತ್ತು. ಅಲ್ಲಿ ಪುಟಿಯುತ್ತಿರುವ ನೂರಾರು ಜಲಯಂತ್ರಗಳ ತುಂತುರ್ವನಿಗಳು ಮಂಜುಗವಿದ ಹಾಗೆ ಕಾಣುತ್ತಿರುವವು; ಮೆಲ್ಲನೆ ಸುಳಿಯುವ ತಂಗಾಳಿಯು ಕದಂಬಪುಷ್ಪಗಳೊಳಗಿನ ಪರಾಗವನ್ನು ತಂದು ಹರಹುತ್ತಿರುವದು; ಅರಳಿದ ಹೂವಿನ ತನಿಗಂಪಿಗೆ ಹೆಣ್ದುಂಬಿಗಳೆರಗಿ ಜೇಂಕರಿಸುತ್ತಿರುವವು; ಪೂಗೊಂಚಲುಗಳಿಂದಲೂ, ಕುಡಿಗಳಿಂದಲೂ, ಅರಳುಮೊಗ್ಗೆಗಳಿಂದಲೂ, ತೆನೆಗಳಿಂದಲೂ ಎಸೆಯುತ್ತಿರುವ ತರತರದ ಬಳ್ಳಿಗಳು ಕಿಡಿಕೆಗಳೊಳಗೆಲ್ಲ ಹಬ್ಬಿರುವವು. ಇವೆಲ್ಲ ಬಗೆಯ ಶೀತೋಪಚಾರದ ಸೊಬಗನ್ನು ನಡುವೆ ನಿಂತು ನೋಡುತ್ತಿರುವ ಚಂದ್ರಾಪೀಡನ ಅಂಗಾಲಿನಿಂದ ನಡುನೆತ್ತಿಯವರೆಗೆ ತಣ್ಣಗೆ ತಂಪೇರಿ ನಡುಗು ಹುಟ್ಟಿತು.

ಇಂಥ ಹಿಮಗೃಹದೊಳಗೆ ಮಳಲೆಡೆಯ ಮೃಣಾಳಮಂಟಪದಲ್ಲಿ ಹೂವಿನ ಹಾಸಿಗೆಯ ಮೇಲೆ ಮಲಗಿದ ಕಾದಂಬರಿಯ ಸುತ್ತುಮುತ್ತು ನೆರೆದು, ಮತ್ತು ಶೀತೋಪಚಾರ ಮಾಡುತ್ತಿದ್ದ ಹೆಂಗಳೆಯರು ಚಂದ್ರಾಪೀಡನನ್ನು ನೋಡಿ ಕಾದಂಬರಿಗೆ ತಿಳಿಸಲು, ಚಟ್ಟನೆ ಎದ್ದು, 'ಎಲ್ಲಿರುವನು? ಯಾರು ನೋಡಿದರು?' ಎಂದು ಅವರನ್ನು ಆತುರತೆಯಿಂದ ಕೇಳುವಷ್ಟರಲ್ಲಿ ಚಂದ್ರಾಪೀಡನು ಅವಳೆದುರಿಗೇ ಹೋಗಿ ನಿಂತನು. ಅವನನ್ನು ನೋಡಿ ಕಾದಂಬರಿಯು ಕಯ್ಯೂರಿ ಮೆಲ್ಲನೆ ಎದ್ದು, ಎದೆಯ ಮೇಲಿನ ಸೆರಗು ನೆಟ್ಟಗೆ ಸರಿಸಿಕೊಂಡು, ಮುಂದಲೆಯ ಮುಂಗುರುಳುಗಳನ್ನು ಅವಸರದಿಂದ ತಿದ್ದಿ, ಆನಂದಬಾಷ್ಪಗಳುದುರುವ ಕಡೆಗಣ್ಣಿನ ನೋಟದಿಂದ ಆತನ ಮುಖವನ್ನು ಕೆಲಹೊತ್ತು ದಿಟ್ಟಿಸಿ ನೋಡಿದಳು. ಚಂದ್ರಾಪೀಡನೂ, ಮಹಾಶ್ವೇತೆಯೂ, ಕಾದಂಬರಿಯೂ, ಒಬ್ಬರಿಗೊಬ್ಬರು ವಂದನೆ ಮಾಡಿ ಕುಳಿತುಕೊಂಡ ಬಳಿಕ, ಕೇಯೂರಕನು ಕಾದಂಬರಿಗೆ ಕೈಮುಗಿದು ಪತ್ರಲೇಖೆಯನ್ನವಳಿಗೆ ತೋರಿಸಿ- "ತಾಯೀ, ಚಂದ್ರಾಪೀಡರಾಜನ ತಾಂಬೂಲದ ಕರಡಿಗೆ ಹಿಡಿಯುವ ಇವಳು ಸ್ವಾಮಿಯವರಿಗತ್ಯಂತ ಪ್ರೀತ್ಯಾಸ್ಪದಳಾದ ಪತ್ರಲೇಖೆಯು" ಎಂದು ಹೇಳಿ ಆಕೆಗೂ ಕಾದಂಬರಿಗೂ ಭೆಟ್ಟಿ ಮಾಡಿಸಿದನು. ಕಾದಂಬರಿಯು ಪತ್ರಲೇಖೆಯನ್ನು ನೋಡಿ ಕೌತುಕದಿಂದ "ಬ್ರಹ್ಮನಿಗೆ ಮಾನುಷ ಸ್ತ್ರೀಯರ ಪಕ್ಷಪಾತವೆಷ್ಟುಂಟು ನೋಡಿರಿ!" ಎಂದು "ಇಲ್ಲಿ ಬಾ! ಇಲ್ಲಿ ಬಾ!" ಎಂದು ಆದರದಿಂದ ಕರೆದು ಕೈಪಿಡಿದು ಅವಳನ್ನು ತನ್ನ ಹತ್ತಿರ ಕುಳ್ಳಿರಿಸಿಕೊಂಡು ಮಮತೆಯಿಂದ ಮೈಮೇಲೆ ಕೈಯಾಡಿಸಿ ಆನಂದಪಟ್ಟಳು. ಇದನ್ನು ನೋಡಿ ಎಲ್ಲ ಸಖಿಯರು ಸೋಜಿಗಗೊಂಡರು.

ಆಗಮನ ಸಂಬಂಧದ ಉಪಚಾರದ ಮಾತುಗಳು ಮುಗಿದ ತರುವಾಯ ಚಂದ್ರಾಪೀಡನು ವಿರಹವ್ಯಥೆಯಿಂದ ವ್ಯಥಿತಳಾದ ಕಾದಂಬರಿಗೆ "ದೇವೀ ನೀವು ಸೊರಗಿದಿರಿ; ಯಾವಾಗಲೂ ಕಣ್ಣೀರು ಸುರಿಸುತ್ತೀರಿ; ಹೀಗಾದ ಬಗೆಯೇನು? ನೀವು ಹೀಗಾದದ್ದನ್ನು ಕಂಡು ನನಗೆ ಬಹಳ ದುಃಖವಾಗುತ್ತದೆ" ಎಂದನು. ಈ ಮಾತಿಗೆ ಕಾದಂಬರಿಯು ಲಜ್ಜಿತಳಾಗಿ ತಲೆಬಾಗಿ ಏನೂ ಮಾತಾಡದೆ ಸುಮ್ಮನೆ ಓರೆ ನೋಟದಿಂದ ಆತನ ಮುಖ ನೋಡಿ— ಮುಗುಳ್ನಗೆ ನಕ್ಕಳು. ಕಾದಂಬರಿಯು ಮಾತಾಡದೆ ಇದ್ದದ್ದನ್ನು ನೋಡಿ ಮದಲೇಖೆಯು "ರಾಜಕುಮಾರನೇ, ಈಕೆಯ ಸಂತಾಪವು ಹೇಳಲಾರದಂಥದು, ನೀವೇ ಮನಸ್ಸುಗೊಟ್ಟು ಈಕೆಯ ಪ್ರಾಣವನ್ನು ಕಾಯಬೇಕು" ಎಂದಳು. ಬಳಿಕ ಚಂದ್ರಾಪೀಡನು ಮಹಾಶ್ವೇತೆಯ ಕೂಡ ಪ್ರೀತಿಯ ಮಾತುಗಳನ್ನು ಆಡುತ್ತ ಬಹಳ ಹೊತ್ತು ಕುಳಿತು, ಬಳಿಕ ಇಬ್ಬರನ್ನೂ ಕೇಳಿಕೊಂಡು ತಿರುಗಿ ಅಚ್ಛೋದಸರೋವರಕ್ಕೆ ಹೊರಡಲುದ್ಯುಕ್ತನಾಗಿ ಕಾದಂಬರಿಯ ಹಿಮಗೃಹದಿಂದ ಹೊರಟು, ಇಂದ್ರಾಯುಧದ ಮೇಲೆ ಆರೋಹಿಸುವದಕ್ಕೆ ಹೋಗಲು ಕೇಯೂರಕನು ಹಿಂದಿನಿಂದ ಓಡುತ್ತ ಬಂದು ಕೈಮುಗಿದು— "ಸ್ವಾಮೀ, ಪತ್ರಲೇಖೆಯನ್ನು ತನ್ನ ಬಳಿಯಲ್ಲಿ ನಾಲ್ಕೊಪ್ಪತ್ತು ಇಟ್ಟುಕೊಂಡು, ಹಿಂದಣಿಂದ ಕಳಿಸುವೆನೆಂದು ಕಾದಂಬರಿಯು ಮದಲೇಖೆಯ ಮುಖದಿಂದ ತಮಗೆ ವಿಜ್ಞಾಪಿಸುತ್ತಾಳೆ. ದೇವರ ಚಿತ್ತಕ್ಕೆ ಬಂದಂತೆ ಮಾಡಬೇಕು" ಎಂದನು. ಕೇಯೂರಕನ ಮುಖದಿಂದ ಮದಲೇಖೆಯ ವಿಜ್ಞಾಪನೆಯನ್ನು ಚಂದ್ರಾಪೀಡನು ಕೇಳಿ "ಎಲೈ ಕೇಯೂರಕಾ, ಕಾದಂಬರೀದೇವಿಯ

ಪ್ರೇಮವು ಪತ್ರಲೇಖೆಯ ಮೇಲೆ ಇಷ್ಟುಂಟೋ! ಹಾಗಾದರೆ ನಮ್ಮ ಪತ್ರಲೇಖೆ ಧನ್ಯಳು. ಒಳ್ಳೆಯದು ಅವಳು ಇರಲಿ!" ಎಂದು ಸಂತೋಷದಿಂದ ಹೇಳಿ, ಇಂದ್ರಾಯುಧವನ್ನು ಹತ್ತಿ ಗಮನಕ್ರಮದಿಂದ ತನ್ನ ದಂಡಿಳಿದ ಸ್ಥಳಕ್ಕೆ ಬಂದು ಮುಟ್ಟಿದನು.

ಅಷ್ಟರೊಳಗೆ ತಂದೆ ತಾರಾಪೀಡನ ಕಡೆಯಿಂದ ಒಬ್ಬ ಸೇವಕನು ಬಂದಿದ್ದನು. ಅವನನ್ನು ನೋಡಿ ಕುದುರೆಯನ್ನು ನಿಲ್ಲಿಸಿ, ಮುಂದೆ ಕರೆದು— "ಎಲಾ, ಸರ್ವಪರಿವಾರ ಸಹಿತ ನನ್ನ ತಂದೆಯೂ, ಅಂತಃಪುರ ಸ್ತ್ರೀಯರೊಡನೆ ನನ್ನ ತಾಯಿಯೂ ಸುಖವಾಗಿ ಇರುವರೋ?" ಎಂದು ಕೇಳಲು, ಆ ಸೇವಕನು ಪೊಡಮಟ್ಟು— "ಜೀಯಾ ಕ್ಷೇಮದಲ್ಲಿದ್ದಾರೆ" ಎಂದು ಅರಿಕೆ ಮಾಡಿಕೊಂಡು ಎರಡು ರಾಯಸಗಳನ್ನು ಕೈಯೊಳಗೆ ಕೊಡಲು, ಅವುಗಳನ್ನು ತಕ್ಕೊಂಡು ಚಂದ್ರಾಪೀಡನು ಭಕ್ತಿಯಿಂದ ತನ್ನ ಮಸ್ತಕಕ್ಕೆ ಹಚ್ಚಿಕೊಂಡು ಒಡೆದು ಓದುತ್ತಾನೆ. ಅದರಲ್ಲಿ 'ಸ್ವಸ್ತಿ ಶ್ರೀ, ಉಜ್ಜಯಿನೀ ಪಟ್ಟಣದಲ್ಲಿರುವಂಥ, ಸಕಲ ರಾಜರಿಂದ ವಂದಿತನಾದಂಥ, ಪರಮೇಶ್ವರನ ಭಕ್ತನಾದ ತಾರಾಪೀಡನು ಅಷ್ಟೈಶ್ವರ್ಯಕ್ಕೆ ತವರುಮನೆಯಾದ ಚಂದ್ರಾಪೀಡನಿಗೆ ಮುದ್ದು ಕೊಟ್ಟು ಬರೆದದ್ದೇನಂದರೆ— ಎಲ್ಲ ರೈತರು ಸುಖದಿಂದಿದ್ದಾರೆ; ನಾನೂ ನಿನ್ನ ಹೆತ್ತಾಕೆಯೂ ಸುಕ್ಷೇಮದಲ್ಲಿದ್ದೇವೆ. ಆದರೆ ನಿನ್ನನ್ನು ನೋಡದೆ, ಬಹಳ ದಿನಸಗಳಾದುದರಿಂದ ಎಲ್ಲರೂ ನಿನ್ನನ್ನು ಯಾವಾಗ ನೋಡೇವೆಂದು ಹಾರೈಸಿಕೊಂಡು ಕುಳಿತಿದ್ದೇವೆ. ಈ ಪತ್ರ ಓದಿದ ಬಳಿಕ ಒಂದು ಕ್ಷಣವಾದರೂ ತಡಮಾಡದೆ, ಇಲ್ಲಿಗೆ ಹೊರಟು ಬರಬೇಕು" ಎಂಬುದಾಗಿ ತಂದೆಯು ಬರೆದಿದ್ದನು. ಶುಕನಾಸ ಮಂತ್ರಿಯು ಬರೆದ ಮಾನಪತ್ರದೊಳಗೂ ಇದೇ ಸಂಗತಿ ಇತ್ತು. ಅಷ್ಟರೊಳಗೆ ವೈಶಂಪಾಯನನು ಚಂದ್ರಾಪೀಡನ ಬಳಿಗೆ ಅವಸರದಿಂದ ಬಂದು, ತನಗೆ ಬಂದ ಇದೇ ಸಂಗತಿಯ ಪತ್ರವನ್ನು ತೋರಿಸಿದನು. ಆಗ ಚಂದ್ರಾಪೀಡನು ತಂದೆಯ ಆಜ್ಞೆಯೇ ಪ್ರಮಾಣವೆಂದು ಹೇಳಿ, ಹಾಗೆಯೇ ಕುದುರೆಯ ಮೇಲೆ ಕುಳಿತವನು ಪ್ರಯಾಣದ ಭೇರಿಯ ಹೊಯ್ಸಲಪ್ಪಣೆ ಕೊಟ್ಟು, ಮೇಘನಾದನೆಂಬ ದಳಪತಿಯನ್ನು ಕರೆದು, "ಹಿಂದಣಿಂದ ಪತ್ರಲೇಖೆಯನ್ನು ಕರೆದುಕೊಂಡು ಬರಬೇಕು; ಅವಳನ್ನು ಕೇಯೂರಕನು ಕರಕೊಂಡು ಬಂದು ಇಲ್ಲಿಗೆ ಮುಟ್ಟಿಸುವನು. ಮಾರ್ಗದಲ್ಲಿ ಆಕೆಗೆ ಏನೂ ದುಃಖವಾಗದ ಹಾಗೆ ಬಹು ಎಚ್ಚರದಿಂದ ಮೆಲ್ಲಮೆಲ್ಲನೆ ಸಾಗಿಸಿಕೊಂಡು ಬಾ" ಎಂದು ಅಪ್ಪಣೆಮಾಡಿ ಯಾವತ್ತು ಸೈನ್ಯವನ್ನು ನೀನು ವ್ಯವಸ್ಥೆಯಿಂದ ಸಾಗಿಸಿಕೊಂಡು ಬರಬೇಕೆಂದು ವೈಶಂಪಾಯನನಿಗೆ ತಿಳಿಸಿ, ತನ್ನ ಮೈಗಾವಲ ರಾಹುತರನ್ನೊಡಗೊಂಡು ಹೊರಟನು. ಆಗ ಚಂದ್ರಾಪೀಡನು ಕಾದಂಬರಿಯ ವಿಯೋಗದಿಂದ ಶೂನ್ಯಾಂತಃಕರಣನಾಗಿದ್ದರೂ ತನ್ನ ಕುದುರೆಯ ಡುಮಚಿಯ ಹಿಡಕೊಂಡು ಸಂಗಡ ಬರುವ ಆ ಲೇಖವಾಹಕನ ಮುಖದಿಂದ ಉಜ್ಜಯಿನಿಯ ಕಡೆಯ ವರ್ತಮಾನವನ್ನು ಕೇಳುತ್ತಲೇ ಮಾರ್ಗಕ್ರಮಣ ಮಾಡಿದನು.

ಈ ಮೇರೆಗೆ ಗಮನಕ್ರಮದಿಂದ ಚಂದ್ರಾಪೀಡನು ಶೂನ್ಯಾರಣ್ಯವನ್ನು ದಾಟಿ ಹೊತ್ತು ಮುಳುಗುವ ಸಮಯಕ್ಕೆ ಒಂದು ಹಾಳುಪ್ರದೇಶಕ್ಕೆ ಮುಟ್ಟಿದನು. ಅಲ್ಲಿ ದೂರ ಹಳೆಯ ಒಂದು ರಕ್ತ ಚಂದನ ವೃಕ್ಷದ ಮೇಲೆ ಹಚ್ಚಿದ್ದೊಂದು ಕಾವಿಯ ರವಿಯ ಪತಾಕೆ ಯನ್ನು ಕಂಡು, ಅದಕ್ಕೆ ಅಭಿಮುಖನಾಗಿ ಮುಂದೆ ಹೋಗಲು, ಒಂದು ದೊಡ್ಡ ದೇಗುಲ

ಹತ್ತಿತು; ಅದರೊಳಗೆ ಚಂಡಿಕೆಯ ಉಗ್ರಮೂರ್ತಿಯಿತ್ತು; ಅದರ ಕೊರಳೊಳಗೆ ರುಂಡ ಮಾಲೆಯನ್ನು ಹಾಕಿದ್ದರು. ಆ ದೇವಿಗೆ ಬಲಿಕೊಡುವುದಕ್ಕಾಗಿ ದೇವಿಯ ಮುಂದೆ ಕೋಣ ವನ್ನು ಕಡಿದ ರಕ್ತವು ಸೋರಿರುವದು ; ಮಾಂಸ, ಮಿದುಳುಗಳು ಬಿದ್ದಿರುವವು. ದೇಗುಲದ ಅಂಗಳದಲ್ಲಿ ದೇವಿಯ ಎದುರಿಗೆ ಒಂದು ಜಗುಲಿಯ ಮೇಲೆ ಕಬ್ಬಿಣದ ಕೋಣವಿತ್ತು. ಒಬ್ಬ ವೃದ್ಧ ಧಾರ್ಮಿಕ ದ್ರವಿಡನು ಕೊರಳೊಳಗೆ ರುದ್ರಾಕ್ಷಮಾಲೆಗಳನ್ನು ಹಾಕಿಕೊಂಡು, ಹಣೆಗೆ ಭಸ್ಮವನ್ನು ಹಚ್ಚಿಕೊಂಡು ಆ ಚಂಡಿಕೆಯನ್ನು ಆರಾಧಿಸುತ್ತ ಎದುರಿಗೆ ಕುಳಿತಿದ್ದನು. ದಿನ ಹೋದವನಾದುದರಿಂದ ಅವನ ಮೈಮೇಲಿನ ನರಗಳು ಎದ್ದಿದ್ದವು. ಚಂಡಿಕೆಗೆ ನಮಿಸಿ ನಮಿಸಿ, ಅವನ ತಲೆಗೆ ಗುಬುಟೆಗಳೆದ್ದಿದ್ದವು. ಅವನ ಎರಡೂ ಕಿವಿಮಾಲೆಯ ತೂತು ಗಳು ಲಿಂಬೆಯ ಹಣ್ಣು ಹಿಡಿಸುವಷ್ಟು ಅಗಲವಾಗಿದ್ದವು. ಆ ಸ್ಥಳವನ್ನು ನೋಡಿ ಚಂದ್ರಾ ಪೀಡನು ಇಲ್ಲಿ ಇಳಕೊಳ್ಳಬೇಕೆಂದು ಕುದುರೆಯಿಳಿದು ಆ ಚಂಡಿಕೆಯ ಗುಡಿಯೊಳಗೆ ಹೊಕ್ಕು, ಭಕ್ತಿಯಿಂದ ದೇವಿಗೆ ಪೊಡಮಟ್ಟು ಪ್ರದಕ್ಷಿಣೆ ಹಾಕಿ ಆ ದೇವಾಲಯದ ಸುತ್ತುಮುತ್ತಿನ ಶಾಂತಪ್ರದೇಶವನ್ನು ಕೌತುಕದಿಂದ ನೋಡುತ್ತ ಪೌಳಿಯಲ್ಲಿ ಅಡ್ಡಾಡಹತ್ತಿದನು. ಅಷ್ಟರೊಳಗೆ ಆ ಮುದಿ ದ್ರವಿಡನು ಈ ಜನರನ್ನು ಕಂಡು ಬಾಯಿಗೆ ಬಂದ ಹಾಗೆ ಬೈಯುತ್ತ ಹೊರಬಿದ್ದನು. ಅವನ ಬೈಗಳನ್ನು ಕೇಳಿ ಚಂದ್ರಾಪೀಡನು ಹತ್ತಿರ ಬಂದು, ಅವನನ್ನು ಸಿಟ್ಟಿಗೆಬ್ಬಿಸಿದ ತನ್ನ ಸೈನಿಕರನ್ನು ನಿವಾರಿಸಿ ಕಾದಂಬರಿವಿರಹವ್ಯಥಿತನಾಗಿದ್ದರೂ ಸೌಮ್ಯ ಭಾಷಣಗಳಿಂದ ಆ ಮುದಕನ ಸಿಟ್ಟು ಇಳಿಸಿ, ಅವನನ್ನು ಸಮಾಧಾನಪಡಿಸಿ ಅವನ ಜನ್ಮಭೂಮಿಯನ್ನೂ, ವಿದ್ಯೆಯನ್ನೂ, ಹೆಂಡಿರು ಮಕ್ಕಳನ್ನೂ, ವಯಸ್ಸನ್ನೂ ಸಂಪ ತ್ತನ್ನೂ, ವಿರಕ್ತನಾದ ಕಾರಣವನ್ನೂ ವಿಚಾರಿಸುತ್ತಲೂ, ಆ ಪ್ರಶ್ನೆಗಳಿಗೆ ಆ ಮುದಿದ್ರವಿಡನು ವಿಸ್ತಾರಪೂರ್ವಕವಾಗಿ ಉತ್ತರ ಕೊಡುವಾಗ ಹಚ್ಚಿದ ಹಾಳುಹರಟೆಯನ್ನು ಕೇಳುತ್ತಲೂ ವಿನೋದದಿಂದ ಎರಡು ಗಳಿಗೆ ಹೊತ್ತು ಕಳೆದ ಆ ಮುದುಕನಿಗೆ ತಾಂಬೂಲ ಕೊಡಿಸಿ ದನು.

ಅಷ್ಟು ಹೊತ್ತಿಗೆ ಮುಂಗಾವಳು ಕವಿಯಲು, ರಾವುತರು ತಮ್ಮ ತಮ್ಮ ಕುದು ರೆಯ ತಡಿಯ ತೆಗೆದು ಗಿಡಗಳ ಟೊಂಗೆಯ ಮೇಲಿಟ್ಟು ಎದುರಿಗೆ ಈಟಿಯ ಗಣೆಗಳನ್ನು ನಡಿಸಿ, ಅವುಗಳಿಗೆ ಕುದುರೆಗಳನ್ನು ಕಟ್ಟಿ, ಅವುಗಳಿಗೆ ನೀರು ಕುಡಿಸಿ, ದಾಣೆಯ ತಿನಿಸಿ, ಮೇವು ಹಾಕಿ ಅಲ್ಲಲ್ಲಿಗೆ ಕಡುಗಲಿಗಳ ಕಾವಲಿಟ್ಟು, ಹಲವರು ತಮ್ಮ ತಮ್ಮ ಕುದುರೆಗಳ ಹತ್ತಿರ, ಹಲವರು ಗಿಡಗಳ ಕೆಳಗೆ ಮಲಗಿಕೊಂಡರು. ಹಲವರು ಅಲ್ಲಲ್ಲಿಗೇ ಉರಿಯ ಹಚ್ಚಿ ಕಾಯಿಸಿಕೊಳ್ಳುತ್ತ ಕುಳಿತರು. ಅಷ್ಟರೊಳಗೆ ಸೇವಕರು ಇಂದ್ರಾಯುಧವನ್ನು ಕಟ್ಟಿ, ಅದರ ಹತ್ತಿರ ಸಿದ್ಧಮಾಡಿಕೊಟ್ಟ ಶಯನದ ಮೇಲೆ ಚಂದ್ರಾಪೀಡನು ಕುಳಿತುಕೊಂಡು, ಮನೋಗಮನದಿಂದ ಕಿಂಪುರುಷದೇಶಕ್ಕೆ ಹೋಗಿ ಹಾಗೇ ಹೇಮಕೂಟಪರ್ವತದ ರಮಣೀಯ ಸ್ಥಳಗಳನ್ನೆಲ್ಲ ಎಡೆಯಾಡಿ ಮಹಾಶ್ವೇತೆಯ ಅನಿಮಿತ್ತಬಂಧುತ್ವವನ್ನು ನೆನಸಿ, ಕಾದಂಬರಿಯ ದರ್ಶನವಾದದ್ದೇ ತನ್ನ ಜನ್ಮದ ಸಾಫಲ್ಯವೆಂದು ಬಗೆದು, ಮದಲೇಖೆಯ ಮಾತುಗಳನ್ನು ನೆನಪಿಗೆ ತಂದು, ತಮಾಲಿಕೆಯ ತಾರತಮ್ಯಗಳನ್ನು ಸ್ಮರಿಸಿ, ಇನ್ನು ಕೇಯೂರಕನು ಎಂದು ಬಂದಾನೆಂದು ಹಾರೈಸಿ, ಹಿಮಗೃಹದ ನೆನಪಾದುದರಿಂದ ಬಿಸು

ಸುಯ್ದು, ತನ್ನ ಕೊರಳೊಳಗಿನ ಶೇಷವೆಂಬ ಹಾರದ ಮೇಲೆ ಮೋಹದಿಂದ ಕೈಯಾಡಿಸಿ, ಕಾದಂಬರಿಯ ಬಳಿಯಲ್ಲಿ ಉಳಿದ ಪತ್ರಲೇಖೆಯೇ ಪುಣ್ಯವಂತಳೆಂದು ಭಾವಿಸಿ, ಕಣ್ಣಿಗೆ ಕಣ್ಣು ಹಚ್ಚದೆ ಹಲುಬಿ ಹಂಬಲಿಸುತ್ತ ಇರುಳು ಕಳೆದನು, ಮೂಡಣ ಕೆಂಪು ಹರಿದ ಬಳಿಕ ಚಂದ್ರಾಪೀಡನು ಎದ್ದು, ಆ ಧಾರ್ಮಿಕ ದ್ರವಿಡನಿಗೆ ಬೇಕಾದಷ್ಟು ದ್ರವ್ಯಕೊಟ್ಟು, ಅವನ ಮನಸ್ಸು ತೃಪ್ತಿಪಡಿಸಿ, ಅಲ್ಲಿಂದ ಹೊರಟು, ಅಲ್ಲಲ್ಲಿಗೆ ರಮಣೀಯಸ್ಥಳಗಳಲ್ಲಿ ಬಿಡಾರವಿಡುತ್ತ ಪಯಣಗತಿಯಿಂದ ಉಜ್ಜಯಿನೀಪಟ್ಟಣಕ್ಕೆ ಬಂದು ಮುಟ್ಟಿದನು.

ಚಂದ್ರಾಪೀಡನು ಬಂದನೆಂಬ ಸುದ್ದಿಯ ಕೇಳಿ ತಾರಾಪೀಡಮಹಾರಾಜನು ಪರಮಹರ್ಷಿತನಾಗಿ ಅವಸರದಿಂದ ಕೆಲವು ಪರಿವಾರದವರನ್ನು ಕರಕೊಂಡು, ಕಾಲ್ನಡಿಗೆಯಿಂದ ಎದುರಿಗೆ ಬರಲು, ಚಂದ್ರಾಪೀಡನು ದೂರದಿಂದಲೇ ನೋಡಿ ಕುದುರೆಯನ್ನಿಳಿದು ತಲೆಬಾಗಿ ನೆಲಕ್ಕೆ ಕಿರೀಟ ಹಚ್ಚಿ ತಂದೆಯ ಚರಣಕ್ಕೆ ನಮಿಸಿದನು. ತಾರಾಪೀಡನು ಆನಂದಭರದಿಂದ ಬಾಗಿ 'ಬಾ ಮಗನೆ' ಎಂದು ಎರಡೂ ತೋಳುಗಳಿಂದ ಆತನನ್ನು ಎತ್ತಿ ಎದೆಗೆ ಅಪ್ಪಿಕೊಂಡನು. ತಂದೆಯ ತೆಕ್ಕೆಯೊಳಗಿಂದ ಬಿಡುಗಡೆಯಾಗಿ ಚಂದ್ರಾಪೀಡನು ಉಳಿದ ಮಾಂಡಲಿಕರಿಗೆ ಕ್ರಮದಿಂದ ವಿನಯಪೂರ್ವಕ ವಂದಿಸಿ, ನಿಂತ ನಿಂತಲ್ಲಿಯೇ ಕೈಮುಗಿಯುವ ಪುರಜನರ ಮುಜುರೆ ತಕ್ಕೊಳ್ಳುತ್ತ, ತಂದೆಯ ಕೂಡ ರಾಣಿವಾಸಕ್ಕೆ ಹೋಗಿ ತಾಯಿಯ ಅಡಿಗಳಿಗೆ ಪೊಡಮಡಲು, ಅವಳು ಅತ್ಯಾನಂದದಿಂದ ಮಗನನ್ನು ಅಪ್ಪಿಕೊಂಡಳು. ಬಳಿಕ ಚಂದ್ರಾಪೀಡನು ದಿಗ್ವಿಜಯದ ಸಂಗತಿಗಳನ್ನು ತಾಯಿತಂದೆಗಳಿಗೆ ಅರಹುತ್ತ, ಅವರೊಡನೆ ಹೊತ್ತುಗಳೆದು, ಶುಕನಾಸ ಮಂತ್ರಿಯ ಮನೆಗೆ ಹೋಗಿ, ಆತನಿಗೆ ನಮಿಸಿ, ವೈಶಂಪಾಯನನು ಹಿಂದೆ ದಂಡು ತಕ್ಕೊಂಡು ಬರುತ್ತಾನೆಂದು ಹೇಳಿ, ಮನೋರಮಾತಾಯಿಯ ದರ್ಶನ ತಕ್ಕೊಂಡು, ತಿರುಗಿ ತನ್ನ ತಾಯಿಯ ಮನೆಗೆ ಬಂದು, ಪರಾಧೀನನಂತೆ ಸ್ನಾನ ಮುಂತಾದ ಕೆಲಸಗಳನ್ನು ತೀರಿಸಿಕೊಂಡು ಕುಮಾರಭವನವೆಂಬ ತನ್ನ ಮಂದಿರಕ್ಕೆ ಹೋದನು.

ಚಂದ್ರಾಪೀಡನು ಕಾದಂಬರಿಯುನ್ನಗಲಿ ಬಂದುದರಿಂದ ಅವನಿಗೆ ಆ ಕುಮಾರಭವನವಷ್ಟೇ ಹಾಳು ಕಾಣುತ್ತಿತ್ತೆಂಬುವ ಹಾಗಿಲ್ಲ; ಇಡೀ ಉಜ್ಜಯಿನೀನಗರವೆಲ್ಲ ಭಣಭಣವೆನಿಸುತ್ತಿರುವದು. ಆದುದರಿಂದ ಕಾದಂಬರಿಯ ಕಡೆಯ ಸುದ್ದಿಯು ಯಾವಾಗ ಬಂದೀತೆಂದು ಪತ್ರಲೇಖೆಯ ಮಾರ್ಗವನ್ನು ಪರೀಕ್ಷಿಸಹತ್ತಿದನು.

ಹೀಗೆ ಕೆಲವು ದಿವಸಗಳು ಹೋದ ತರುವಾಯ, ಮೇಘನಾದನು ಪತ್ರಲೇಖೆಯನ್ನು ಕರಕೊಂಡು ಚಂದ್ರಾಪೀಡನ ಬಳಿಗೆ ಬಂದನು. ಮೊದಲೇ ಪ್ರೀತ್ಯಾಸ್ಪದಳು, ಈಗಂತೂ ಕಾದಂಬರಿಯ ಹತ್ತಿರ ಹಲವು ದಿನ ನಿಂತು ಆಕೆಯ ಪ್ರಸಾದವೆಂಬ ಎರಡನೆಯ ಸೌಭಾಗ್ಯವನ್ನು ಪಡೆದು, ಆಕೆಯ ಕಡೆಯಿಂದ ತನ್ನ ಬಳಿಗೆ ಬಂದುದರಿಂದ ಅತ್ಯಂತ ಪ್ರೀತಿಗೆ ಪಾತ್ರಳಾದ ಪತ್ರಲೇಖೆಯು ಬಂದು ಚರಣಕ್ಕೆರಗಲು, ಚಂದ್ರಾಪೀಡನು ಆದರಪೂರ್ವಕ ಎದ್ದು, ಕೈಹಿಡಿದು, ಅವಳನ್ನು ತನ್ನ ಬಳಿಯಲ್ಲಿ ಕುಳ್ಳಿರಿಸಿಕೊಂಡನು. ಹಾಗೆಯೇ ನೆಲಕ್ಕೆ ಹಣೆಹಚ್ಚಿ ನಮಿಸಿದ ಮೇಘನಾದನ ಬೆನ್ನು ಚಪ್ಪರಿಸಿ ಸೈ ಸೈ ಎಂದು ಆತನನ್ನು ಚೆನ್ನಾಗಿ ಪ್ರಶಂಸಿಸಿದನು.

ತರುವಾಯ ಚಂದ್ರಾಪೀಡನು ಪತ್ರಲೇಖೆಯನ್ನು ಕರಕೊಂಡು ಉಪವನದೊಳಗೆ ಹೊಕ್ಕು, ಅಲ್ಲಿ ಲತಾಮಂಟಪದೊಳಗೆ ಇಬ್ಬರೇ ಕುಳಿತುಕೊಂಡು- "ಪತ್ರಲೇಖೇ, ಕಾದಂಬರಿಯ ವೃತ್ತಾಂತವೇನು ಹೇಳು" ಎಂದು ಕೇಳಲು, ಪತ್ರಲೇಖೆಯು- "ಜೀಯಾ, ನೀವು ಅಲ್ಲಿಂದ ಹೊರಟು ಇತ್ತಣ ದಾರಿಯ ಹಿಡಿದ ಬಳಿಕ, ಕೇಯೂರಕನ ಸಂಗಡ ನಾನು ತಿರುಗಿ ಕಾದಂಬರಿಯ ಬಳಿಗೆ ಹೋದಕೂಡಲೆ, ಅವಳು ನನ್ನನ್ನು ತನ್ನ ಹೂವಿನ ಹಾಸಿಗೆಯ ಮೇಲೆ ಕೂಡಿಸಿಕೊಂಡಳು. ತನ್ನ ಮೇಲಿನ ಆಕೆಯ ಪ್ರೀತಿಯನ್ನು ಎಷ್ಟೆಂದು ಹೇಳಲಿ! ಆಕೆಯ ಕಣ್ಣುಗಳು ನನ್ನ ಮುಖದಲ್ಲಿಯೇ ನಟ್ಟಿರುವವು; ಕೈ ನನ್ನ ಕೈ ಮೇಲೆಯೇ ಬಿದ್ದಿರುವದು; ಮೈ ನನ್ನ ಮೈಗೇ ಹತ್ತಿರುವದು; ನಾಲಿಗೆಯು ನನ್ನ ಹೆಸರಿಗೆ, ಹೃದಯವು ನನ್ನ ಮೇಲಿನ ಪ್ರೀತಿಗೆ ಎಡೆಯಾಗಿರುವವು. ಸಂಜೆಯ ಮುಂದೆ ಅವಳು ಹಿಮಗೃಹ ಬಿಟ್ಟು, ನನ್ನ ಕೈ ಹಿಡಿದುಕೊಂಡು ಸ್ವಲ್ಪ ಹೊತ್ತು ಅತ್ತಿತ್ತ ಅಡ್ಡಾಡಿ, ಸಂಗಡ ಬಂದ ಸಖಿಯರಿಗೆ ದೂರ ಹೋಗಹೇಳಿ, ನನ್ನೊಬ್ಬಳನ್ನೇ ಬಾಲೋದ್ಯಾನದೊಳಗೆ ಕರಕೊಂಡು ಹೋಗಿ, ಅಲ್ಲಿಯ ಪಚ್ಚದ ಸೋಪಾನದ ಪಳುಕಿನ ಜಗುಲಿಯ ಮೇಲೆ ಹತ್ತಿ, ರತ್ನಖಚಿತವಾದ ಕಂಬಕ್ಕೆ ಆತು ನಿಂತುಕೊಂಡು, ಮನದೊಳಗೆ ಆಲೋಚಿಸಿ, ಮಾತಾಡುವ ಇಚ್ಛೆಯಿಂದ ನನ್ನ ಮೋರೆಯನ್ನು ಬಹಳ ಹೊತ್ತು ದಿಟ್ಟಿಸಿ ನೋಡಿ, ತುದಿನಾಲಿಗೆಗೆ ಬಂದ ಮಾತುಗಳನ್ನು ನಾಚಿಕೆಯಿಂದ ನುಡಿಯದೆ ಜೋರನೆ ಬೆವತು ನಡುಗಹತ್ತಿದಳು. ಕಾದಂಬರಿಯ ಈ ಅಭಿಪ್ರಾಯವನ್ನು ನಾನು ತಿಳಿದು - "ನೀವು ಏನು ಮಾತಾಡುವದನ್ನು ನಿಃಸಂಶಯದಿಂದ ಆಡಬೇಕು. ಚಿತ್ತಗೊಟ್ಟು ಆಲಿಸುತ್ತೇನೆ" ಎಂದು ಬಿನ್ನವಿಸಿದೆನು. ಆಗ ಕಾದಂಬರಿಯು ಮೋರೆ ಕೆಳಗೆ ಮಾಡಿ, ಕಾಲ ಹೆಬ್ಬೆರಳಿನಿಂದ ಆ ಪಳುಕಿನ ನೆಲವನ್ನು ಬರೆಯುತ್ತ ನೆನೆನೆನೆಸಿಕೊಂಡು ದುಃಖಿಸುತ್ತ, ಕಣ್ಣೀರು ಸುರಿಸುತ್ತ- "ಪತ್ರಲೇಖೇ ಏನು ಹೇಳಲಿ! ದೊಡ್ಡವರ ನಡತೆ ಇದೇ ಸರಿಯೇ? ಹಿಮಗೃಹದಲ್ಲಿ ಹೂವಿನ ಹಾಸಿಗೆಯ ಮೇಲೆ ತಳಮಳಗೊಳ್ಳುತ್ತ ಬಿದ್ದವಳನ್ನು ಕಣ್ಣಾರೆ ಕಂಡುಬಿಟ್ಟು ಹೋದದ್ದು ನಿನ್ನ ಮನಸ್ಸಿಗಾದರೂ ಬಂತೇ? ಕಡೆಗೆ ತನ್ನ ರಾಜ್ಯಭಾರವನ್ನೂ, ಅರಮನೆಯನ್ನೂ ತಾಯಿತಂದೆಗಳನ್ನೂ ನೋಡಿದನೇ ಹೊರತು ನನ್ನನ್ನೇನೂ ನೋಡಲಿಲ್ಲ! ಪರಿಚಯವಾದದ್ದರ ಫಲವಿದೆಯೋ? ನೀನೇ ನೋಡು! ಆಗ ಮತ್ತೊಂದು ಮಾತು ಅದೇನೆಂದರೆ, ನಿಲ್ಲದೆ ತನ್ನ ರಾಜ್ಯಕ್ಕೆ ಹೋದವನು ಈಗ ದಿನಾಲು ನನ್ನ ಕನಸಿನಲ್ಲಿ ಬಂದು, ನನ್ನನ್ನು ಮಧುರ ಮಾತುಗಳಿಂದ ಮರುಳುಗೊಳಿಸುತ್ತಾನೆ. ಒಮ್ಮೊಮ್ಮೆ ನನ್ನ ತಲೆಯೊಳಗಿನ ಹಸ್ತಿದಂತದ ಹಣೆಗೆಯ ಮೇಲೆ ಕಸ್ತೂರಿಯಿಂದ ಸಂಕೇತಸ್ಥಾನವನ್ನೂ ಬರೆಯುತ್ತಾನೆ. ಈ ಪರಿಯಿಂದ ಮುಗ್ಧೆಯಾದ ನನ್ನ ಮನಸ್ಸು ಸೆಳಕೊಂಡು ನನ್ನನ್ನು ಈ ಹಾಡು ಮಾಡಿದನು. ಇನ್ನು ಈ ಅವಸ್ಥೆಗೊಳಗಾಗಿ ನನ್ನ ಕುಲಕ್ಕೆ ಕಲಂಕ ಹಚ್ಚುವುದಕ್ಕಿಂದ ಪ್ರಾಣ ಕೊಡುವದೇ ಲೇಸು!" ಎಂದಳು. ಅವಳ ಈ ಮಾತು ಕೇಳಿ ನಾನು ಮನದೊಳಗೆ ಹರ್ಷಿತಳಾಗಿ- "ತಾಯೀ, ನೀನು ಪ್ರಾಣಕೊಡುವ ಕಾರಣವಿಲ್ಲ. ನಾನು ನಿಶ್ಚಯವಾಗಿ ಚಂದ್ರಾಪೀಡನನ್ನು ನಿನ್ನ ಬಳಿಗೆ ಕರಕೊಂಡು ಬರುವೆನು" ಎಂದು ಆಕೆಗೆ ವಚನಕೊಟ್ಟು ಬಂದೆನು. ಸ್ವಾಮೀ, ಬಹಳ ಹೇಳುವದೇನು, ಕಾದಂಬರಿಯ ಜೀವವೆಲ್ಲ ಈಗ ಶೂನ್ಯರೂಪವಾಗಿದೆ" ಎಂದು ಬಿನ್ನೈಸಿದಳು. ಈ ಮೇರೆಗೆ ಪತ್ರಲೇಖೆಯ

ಬಾಯಿಯಿಂದ ಕಾದಂಬರಿಯ ಅವಸ್ಥೆಯನ್ನು ಕೇಳಿ, ಇನ್ನು ಕಾದಂಬರಿಯ ಬಳಿಗೆ ಹೋಗುವದಕ್ಕೆ ಯಾವ ಉಪಾಯವನ್ನು ಯೋಚಿಸಬೇಕೆಂಬ ಹಲವು ಹಂಚಿಕೆಗಳನ್ನು ಹಾಕುತ್ತಿರುವಾಗ, ಚಂದ್ರಾಪೀಡನಿಗೆ ದಿನವೆಂಬುವದು ಒಂದು ವರ್ಷವಾಯಿತು. ಕಡೆಗೆ ಮನಸ್ಸಿಗೆ ಸೊಗಸಾಗದ್ದರಿಂದ ಪತ್ರಲೇಖೆಯನ್ನು ಕರಕೊಂಡು, ಕ್ಷಿಪ್ರಾನದೀ ತೀರದ ಮೇಲೆ ಚಂದನವನದೊಳಗಿನ ಮನೋಹರಮಂದಿರದೊಳಗೆ ಹೋಗಿ ನಿಂತುಕೊಂಡು, ಕಾಲಕ್ರಮಿಸಹತ್ತಿದನು. ಅಷ್ಟರಲ್ಲಿ ಒಂದು ದಿನ ಕೇಯೂರಕನು ಅಲ್ಲಿಗೆ ಬಂದು ಅವನ ಚರಣಕ್ಕೆರಗಲು, ಆತನನ್ನು ನೋಡಿ ಅತ್ಯಾನಂದದಿಂದ ಅಪ್ಪಿಕೊಂಡು, ಚಂದ್ರಾಪೀಡನು- "ಎಲೈ ಗೆಳೆಯಾ ಕೇಯೂರಕಾ, ಕಾದಂಬರೀದೇವಿಯು ಸುಖರೂಪದಿಂದಿದ್ದಾಳೋ? ಆಕೆಯ ಸಂದೇಶವೇನು?" ಎಂದು ಆತುರದಿಂದ ಕೇಳಲು, ಆತನು- "ಜೀಯಾ, ತಾವು ಕೇಳಿದ್ದರಿಂದ ಕಾದಂಬರೀದೇವಿಯು ಸುಖವಾಗಿದ್ದ ಹಾಗೆಯೇ ಸರಿ; ಆದರೆ ಅವಳು ಏನೂ ಸಂದೇಶ ಹೇಳಿಲ್ಲ. ತಾವು ಅಗಲಿ ಇತ್ತ ಬಂದುದರಿಂದ ದೇವಿಯು ನಿಟ್ಟುಸಿರು ಬಿಡುತ್ತ, ಹಾಸಿಗೆಯ ಮೇಲೆ ಸುಮ್ಮನೆ ದುಮ್ಮಾನದಿಂದ ಹೊರಳಾಡುತ್ತ, ಬಳಿಯಲ್ಲಿ ಕುಳಿತ ಮದಲೇಖೆಯ ಕೂಡ ಸಹ ಏನೊಂದು ಮಾತಾಡದೆ, ಒಮ್ಮೊಮ್ಮೆ ಎಲ್ಲರೂ ಇಲ್ಲಿ ಏಕೆ ನೆರೆದಿರುತ್ತೀರಿ; ಎಂದು ಬೇಸರದ ನುಡಿಗಳನ್ನು ನುಡಿಯುತ್ತ, ನೆರೆದ ತೊತ್ತುಗಳಿಗೆ ಹೊರಗೆ ಹೋಗಹೇಳುವಳು. ಇದನ್ನು ಕಣ್ಣಾರೆ ಕಂಡು ನಿಲ್ಲಲಾರದೆ ನಾನೇ ತಮ್ಮ ಸನ್ನಿಧಾನಕ್ಕೆ ಬಂದೆನು. ತಾವು ಅಲ್ಲಿಗೆ ತಡಮಾಡದೆ ಬಂದು ತಮ್ಮ ವಿರಹದಿಂದ ಸಂತಪ್ತಳಾದ ಕಾದಂಬರಿಗೆ ದರ್ಶನ ಕೊಡಬೇಕು" ಎಂದು ಹೇಳಿದನು. ಕೇಯೂರಕನ ಮಾತು ಕೇಳಿ ಚಂದ್ರಾಪೀಡನು ಮನದೊಳಗೆ ಇಮ್ಮಡಿ ಉಮ್ಮಳಗೊಂಡು, ತಂದೆಯ ಅಪ್ಪಣೆಯ ಹೊರತು ಹೇಗೆ ಹೋಗಬೇಕು? ನನ್ನ ಮಿತ್ರ ವೈಶಂಪಾಯನನೂ ಇನ್ನೂ ಬರಲಿಲ್ಲ! ಹೇಗೆ ಮಾಡಲಿ! ಎಂದು ಮನದೊಳಗೆ ಯೋಚಿಸುತ್ತ ಕುಳಿತಾಗ, ಒಬ್ಬ ಸೇವಕನು ಬಂದು- "ಜೀಯಾ, ದಿಗ್ವಿಜಯಕ್ಕೆ ಹೋದ ಒಡೆಯರ ಚತುರಂಗಬಲವು ಪಟ್ಟಣದ ಹತ್ತಿರ ದಶಪುರಕ್ಕೆ ಇದೇ ಈಗ ಬಂತು" ಎಂದು ಹೇಳಿದನು. ಈ ಸುದ್ದಿಯ ಕೇಳಿ ಇನ್ನು ಕಾದಂಬರಿಯ ಬಳಿಗೆ ಹೋಗುವದಕ್ಕೆ ಮಾರ್ಗವಾಯಿತೆಂದು ಚಂದ್ರಾಪೀಡನು ಮನದೊಳಗೆ ಪರಮಹರ್ಷಿತನಾಗಿ ಕೇಯೂರಕನಿಗೆ- "ಎಲೈ ಪ್ರಿಯಮಿತ್ರನೇ, ನನ್ನ ಗೆಳೆಯನಾದ ವೈಶಂಪಾಯನನು ಸೇನೆಸಹಿತ ಅಚ್ಛೋದಸರೋವರದಿಂದ ಇದೇ ಈಗ ಇಲ್ಲಿಗೇ ಬಂದನಂತೆ! ಇನ್ನು ನಾನು ಕಾದಂಬರೀದೇವಿಯ ಬಳಿಗೆ ನಿಶ್ಚಯವಾಗಿ ಬರುತ್ತೇನೆ; ನೀನು ಈ ಪತ್ರೇಲೇಖೆಯನ್ನು ಕರಕೊಂಡು ಈಗಲೇ ಮುಂದೆ ಹೋಗು! ನಾನು ನಿಮ್ಮ ಬೆನ್ನ ಹಿಂದಿಂದೇ ಬಂದೆನು. ನೀವು ಮಾತ್ರ ತ್ವರೆಮಾಡಿ ಹೋಗಿ, ಬಂದೆನೆಂದು ದೇವಿಗೆ ಹೇಳಿರಿ" ಎಂದು ಕೇಯೂರಕನ ಸಂಗಡ ಪತ್ರಲೇಖೆಯನ್ನು ಕಳುಹಿ, ತಾನೂ ಅಲ್ಲಿಂದ ಹೊರಟು ರಾಜಮಂದಿರಕ್ಕೆ ಬಂದು, ತಂದೆಯ ಅಪ್ಪಣೆ ತಕ್ಕೊಂಡು, ವೈಶಂಪಾಯನನ ದರ್ಶನಕ್ಕೆಂದು ಹಲವು ಪರಿಜನರೊಡಗೊಂಡು ದಶಪುರಕ್ಕೆ ಬಂದನು. ಬಿಡಾರಗೊಂಡ ತನ್ನ ದಂಡಿನೊಳಗೆ ಹೊಕ್ಕು ನೋಡುತ್ತಾನೆ, ದಂಡನಾಯಕರೆಲ್ಲರೂ ಖಿನ್ನಮುಖರಾಗಿ ಅವಸರದಿಂದ ಬಂದು ಚಂದ್ರಾಪೀಡನ ಚರಣಕ್ಕೆರಗಿದರು. ವೈಶಂಪಾಯನನಿಲ್ಲದ್ದರಿಂದಲೂ ಅವರು ದೀನ ಮುಖರಾದುದರಿಂದಲೂ ಇವರಿಗೆ ಏನು ಎಡರು ಎಡೆಗೊಂಡಿತೋ ಎಂದು

ಚಂದ್ರಾಪೀಡನು ಮನದೊಳಗೆ ಉಮ್ಮಳಗೊಂಡು, "ವೈಶಂಪಾಯನನು ಕಾಣುವದಿಲ್ಲ! ಎಲ್ಲಿದ್ದಾನೆ?" ಎಂದು ಆ ದಳಪತಿಗಳನ್ನು ಆತುರತೆಯಿಂದ ಕೇಳಿದನು. ಅವರು ಕೈಮುಗಿದು- "ಜೀಯಾ, ಅವಧರಿಸಬೇಕು! ವೈಶಂಪಾಯನನೂ ನಾವೂ ಅಚ್ಛೋದಸರೋವರದಲ್ಲಿ ಸ್ನಾನಮಾಡಿ, ಇನ್ನುಬೇಗನೆ ಸೇನೆಸಹಿತ ಹೊರಡಬೇಕೆಂಬುದವಷ್ಟರಲ್ಲಿ ಅವನು ಸರೋವರದ ದಂಡೆಯ ಮೇಲೆ ಏನನ್ನೋ ನೋಡಿ ಭ್ರಾಂತನಾಗಿ- "ನಾನು ನಿಮ್ಮ ಕೂಡ ಊರಿಗೆ ಬರುವುದಿಲ್ಲ; ಇಲ್ಲೇ ಇರುತ್ತೇನೆ" ಎಂದು ಮರುಳು ಹಿಡಿದವನ ಹಾಗೆ ಮಾತಾಡಿ, ಅದರ ಬೆನ್ನುಹತ್ತಿ ಹೋದನು; ನಾವು ಬಹು ಪ್ರಕಾರ ಹೇಳಿಕೊಂಡು ಆದಷ್ಟು ಯತ್ನ ಮಾಡಿದೆವು; ಆದರೂ ನಮ್ಮ ಯತ್ನವೇನೂ ಸಾಗಲಿಲ್ಲ; ಹೋದವನು ಹಾಗೇ ಹೋದನು; ಇನ್ನು ಆತನ ಬೆನ್ನು ಹತ್ತುವದು ಉಚಿತವಲ್ಲೆಂದು ಆತನನ್ನು ಬಿಟ್ಟು ದಂಡು ತಕ್ಕೊಂಡು ಇಲ್ಲಿಗೆ ಬಂದೆವು. ಅವನು ಅಲ್ಲಿ ಜೀವದಿಂದ ಮಾತ್ರ ಇದ್ದಾನೆ" ಎಂದು ಅರಿಕೆ ಮಾಡಿಕೊಂಡ ಸೇನಾನಿಗಳ ಮಾತು ಕೇಳಿ, ಒಳ್ಳೆಯದು ಅಲ್ಲಿ ಮಾಹಾಶ್ವೇತೆ ಮುಂತಾದ ನನ್ನ ಆಪ್ತರುಂಟು; ಅವರು ಆತನ ಸಮಾಚಾರ ತಕ್ಕೊಂಡಾರೆಂದು ಸಮಾಧಾನ ತಾಳಿ, ಪಟ್ಟಣಕ್ಕೆ ಬಂದು ಶುಕನಾಸಮಂತ್ರಿಯ ಮನೆಗೆ ಹೋಗುವಷ್ಟರಲ್ಲಿ ಈತನ ತಂದೆ ತಾರಾಪೀಡರಾಜನೂ ಶುಕನಾಸಮಂತ್ರಿಯೂ ವೈಶಂಪಾಯನನು ಬಾರದ ಸುದ್ದಿಯನ್ನೇ ಮಾತಾಡುತ್ತ ಚಿಂತಿಸುತ್ತ ಕೇಳಿತಿದ್ದರು. ಚಂದ್ರಾಪೀಡನನ್ನು ನೋಡಿ, ತಾರಾಪೀಡನು-"ನೀನು ವೈಶಂಪಾಯನನನ್ನು ಬಿಟ್ಟು ಬಂದದ್ದೊಂದು ಹೊಲ್ಲದ ಕೆಲಸ ಮಾಡಿದಿ!" ಎಂದು ಸ್ವಲ್ಪ ಸಿಟ್ಟಿನಿಂದ ಆಡಿದ್ದನ್ನು ಕೇಳಿ ಶುಕನಾಸ ಮಂತ್ರಿಯು- "ಇದರೊಳಗೆ ಚಂದ್ರಾಪೀಡನದೇನೂ ತಪ್ಪು ಇಲ್ಲ. ತಿರ್ಯಗ್ಜಾತಿಯ ಚೇಷ್ಟೆಯುಳ್ಳ ವೈಶಂಪಾಯನನದೇ ತಪ್ಪು. ಆತನ ಮೈಸೊಕ್ಕಿಗೆ ತಕ್ಕ ಫಲವಾಯಿತು!" ಎಂದು ಅಂದನು. ಆಗ ಚಂದ್ರಾಪೀಡನು ತಂದೆಗೆ- "ಸ್ವಾಮೀ, ವೈಶಂಪಾಯನನನ್ನು ಬಿಟ್ಟು ಬಂದುದರಿಂದ ನಾನು ಅಪಕೀರ್ತಿಗೆ ಗುರಿಯಾದೆನು. ಅದಕ್ಕೆ ತಾವು ದಯಮಾಡಿ ಅಪ್ಪಣೆ ಕೊಡಬೇಕು! ನಾನು ಮರಳಿ ಅಚ್ಛೋದಸರೋವರಕ್ಕೆ ಹೋಗಿ ಆತನನ್ನು ಕರಕೊಂಡು ಬರುವೆನು" ಎಂದು ಶುಕನಾಸಮಂತ್ರಿಯ ಮುಖದಿಂದ ತಂದೆಗೆ ಅರಿಕೆ ಮಾಡಿಕೊಳ್ಳಲು, ತಾರಾಪೀಡನು ಮಗನಿಗೆ ಮರಳಿ ಅಚ್ಛೋದಸರೋವರಕ್ಕೆ ಹೋಗಲಪ್ಪಣೆ ಕೊಟ್ಟನು.

ಆಮೇಲೆ ಚಂದ್ರಾಪೀಡನು, "ಇನ್ನೇನು! ಕಾದಂಬರೀದೇವಿಯು ಕೈವಶವಾದ ಹಾಗೆಯೇ ಸರಿ!" ಎಂದು ಮನದೊಳಗೆ ಹರ್ಷನಿರ್ಭರಿತನಾಗಿ ಮರುದಿನ ಸನ್ನದ್ಧನಾಗಿ ಹೊರಟು, ತಂದೆಯ ಚರಣಕ್ಕೆರಗಿ, ಹೋಗಿ ಬರುತ್ತೇನೆ, ಅಪ್ಪಣೆ ಕೊಡಬೇಕೆಂದು ವಿನಯದಿಂದ ಕೈಜೋಡಿಸಿಕೊಂಡು ನಿಲ್ಲಲು, ತಂದೆಯೂ, ತಾಯಿಯೂ, ಮಂತ್ರಿಯೂ ಪುನಃ ಸ್ವಲ್ಪ ದಿನದಲ್ಲಿಯೇ ರಾಜಕುಮಾರನಿಗೆ ಪ್ರಯಾಣದ ಪ್ರಸಂಗ ಬಂತೆಂದು ಮನದೊಳಗೆ ಮರಮರನೆ ಮರುಗಿ ಬಹು ಕಷ್ಟದಿಂದ ಅಪ್ಪಣೆ ಕೊಟ್ಟರು.

ತರುವಾಯ ಚಂದ್ರಾಪೀಡನು, ಸಂಗಡ ಕೆಲವು ರಾಜಕುಮಾರರನ್ನೂ ಮೈಗಾವಲ ರಾವುತರನ್ನೂ, ಕರಕೊಂಡು, ಬಹಳ ತ್ವರೆಮಾಡಿ, ಪಯಣಗತಿಯಿಂದ ಅಚ್ಛೋದ ಸರೋವರಕ್ಕೆ ಹೋಗಿ, ಅಲ್ಲಿ ತನ್ನ ಗೆಳೆಯ ವೈಶಂಪಾಯನನನ್ನು ಹುಡುಕಿದನು. ಎಲ್ಲಿ

ನೋಡಿದರೂ ಆತನ ಕುರುಹೇ ಕಾಣಲಿಲ್ಲ. ಮಹಾಶ್ವೇತೆಯ ಆಶ್ರಮಕ್ಕೆ ಹೋಗಿದ್ದಾನೆಂದು ಚಿಂತಿಸುತ್ತ ಅಲ್ಲಿಗೆ ಹೋಗಿ ನೋಡುತ್ತಾನೆ, ಮಹಾಶ್ವೇತೆ ದೀನಮುಖಳಾಗಿ ಕಣ್ಣೀರು ಸುರಿಸುತ್ತ ಕುಳಿತಿದ್ದಾಳೆ; ಆಕೆಯನ್ನು ತರಲಿಕೆಯು ಹಿಡಿದಿದ್ದಾಳೆ. ಇದನ್ನು ಕಂಡು ಚಂದ್ರಾಪೀಡನು ಭಯಚಕಿತನಾಗಿ ಏನು ಅನಿಷ್ಟವಾಯಿತೋ! ಎಂದು ಎಣಿಕೆಗೊಳ್ಳುತ್ತ, ಮೊದಲು ನನಗೆ ಎಷ್ಟೋ ಆದರ ಮಾಡಿದ ಈ ಮಹಾಶ್ವೇತೆಯು ತನ್ನನ್ನು ಕಣ್ಣೆತ್ತಿ ಈಗ ನೋಡಲೊಲ್ಲಳು! ಮಾತಾಡಿಸಲೊಲ್ಲಳು! ಆದುದರಿಂದ ಇವಳಿಗೆ ಏನೋ ಒಂದು ಅಪಾರ ದುಃಖವಾಗಿರಬಹುದೆಂದು ಬಗೆದು- “ದೇವೀ,ಅಂಥದೇನು ನಿನಗೆ ಆಯಿತು?” ಎಂದು ಕೇಳಲು, ಅವಳು ನಿಟ್ಟುಸಿರು ಬಿಟ್ಟು-“ಎಲೈ ರಾಜಪುತ್ರನೇ, ಹೇಳುವದಕ್ಕೂ, ಕೇಳುವದಕ್ಕೂ ಅಸದಳವಾದ ಈ ದುಃಖವನ್ನು ನಿನ್ನ ಮುಂದೆ ಏನೆಂದು ಹೇಳಲಿ! ನೀನು ಗಂಧರ್ವ ನಗರದಿಂದ ಉಜ್ಜಯಿನಿಯ ದಾರಿಯನ್ನು ಹಿಡಿದ ಬಳಿಕ ಕಾದಂಬರಿಯ ವಿಷಯಕ್ಕೆ ನಾನು ಆಶೆದೊರೆದು, ಇಲ್ಲಿಗೆ ಬಂದು ಕಾಯವನ್ನು ಸಣ್ಣಿಸುವದಕ್ಕಾಗಿ ಉಗ್ರತಪವನ್ನು ಮಾಡತೊಡಗಿದೆನು. ಅಷ್ಟರಲ್ಲಿ ಒಂದು ದಿನ ನಿನ್ನೋರಿಗೆಯವನೊಬ್ಬ ತರುಣನು ಬಂದು ನನ್ನನ್ನು ನೋಡಿ- “ಎಲೈ ಸುಂದರೀ, ನೀನು ಯಾರ ಸಲುವಾಗಿ ತಪಶ್ಚರ್ಯ ಮಾಡುತ್ತೀ? ನಿನ್ನ ಕಾಮೇಷ್ಟವನ್ನು ಹೇಳು, ನಿನ್ನ ಸೌಂದರ್ಯಕ್ಕೆ ನಾನು ಮೋಹಿತನಾದೆನು. ನನ್ನನ್ನು ಉಳಿಸಿಕೋ” ಎಂದು ವ್ಯಗ್ರಚಿತ್ತನಾಗಿ ಅವಿನಯದ ನುಡಿಗಳನ್ನು ನುಡಿದನು. ಆ ಮಾತು ಕೇಳಿ ನಾನು ಆತನ ದುಷ್ಟಭಾವ ತಿಳಿದು, ಅವನಿಗೆ ಏನೂ ಉತ್ತರ ಕೊಡದೆ, ಇಲ್ಲಿ ನೀನು ನಿಲ್ಲಬಾರದು ಹೋಗೆಂದು ತರಲಿಕೆಯಿಂದ ಹೇಳಿಸಿ, ಆತನನ್ನು ಹೊರಗೆ ಹಾಕಿಸಿದೆನು. ಬಳಿಕ ಅವನು ಇರುಳು ಚಂದ್ರೋದಯವಾದ ಕೂಡಲೆ ಏನೋ ಒಂದು ನೆವ ಮಾಡಿಕೊಂಡು ಒಳಗೆ ಬಂದು, ನನ್ನ ಕೈ ಹಿಡಿಯಲು ನಾನು ಕೋಪಿಷ್ಠಳಾಗಿ ತಿರ್ಯಗ್ಜಾತಿ ಚೇಷ್ಟೆಯುಳ್ಳ ನೀನು ಭಸ್ಮೀಭೂತನಾಗೆಂದು ಅವನಿಗೆ ಶಾಪ ಕೊಟ್ಟೆನು. ಆಮೇಲೆ ಅವನು ವಿನಯದಿಂದ ನನಗೆ ಬಹಳ ಪ್ರಕಾರ ಹೇಳಿಕೊಂಡನು. ಅದರಿಂದ ಮುಂದೆ ಶುಕನಾಗಿ ಜನಿಸೆಂದು ನಾನು ನುಡಿದ ಕೂಡಲೆ, ಆತನು ತನ್ನ ಪಾಪದಿಂದ ಅಲ್ಲಿಯೇ ಸುಟ್ಟು ಬೂದಿಯಾಗಿ ಬಿದ್ದನು. ಅವನು ನಿನ್ನ ಮಿತ್ರ ವೈಶಂಪಾಯನನೆಂದು ಹಿಂದಿನಿಂದ ತಿಳಿಯಿತು.” ಎಂದು ಹೇಳಿದಳು. ಇದನ್ನು ಕೇಳಿ ಚಂದ್ರಾಪೀಡನು- “ಓಹೋ ಘಾತವಾಯಿತು! ದೇವೀ, ನೀನು ನನಗೆ ಈ ಜನ್ಮದಲ್ಲಿ ಕಾದಂಬರಿಯ ಸೇವೆ ಘಟಿಸದ ಹಾಗೆ ಮಾತ್ರ ಮಾಡಿದಿ! ಇನ್ನು ಮುಂದಿನ ಜನ್ಮದಲ್ಲಿಯಾದರೂ ನನಗೆ ಆಕೆಯ ಸೇವೆಯೊದಗುವಂತೆ ಸಹಾಯ ಮಾಡು” ಎಂದು ಮಹಾಶ್ವೇತೆಗೆ ಹೇಳಿ ಹರಣ ಹಾರಿ ನೆಲಕ್ಕುರುಳಿದನು. ಅದನ್ನು ಕಂಡು ತರಲಿಕೆಯು ಅಯ್ಯೋ ಘಾತವಾಯಿತೆಂದು ಮಹಾಶ್ವೇತೆಯನ್ನು ಬಿಟ್ಟು ಚಂದ್ರಾಪೀಡನ ದೇಹವನ್ನು ಹಿಡಿದಳು. ಆತನ ಅವಸ್ಥೆಯನ್ನು ಕಂಡು ಮಹಾಶ್ವೇತೆಯು ಶೋಕ ಮಾಡಿದ್ದನ್ನಂತೂ ನಾನು ಹೇಳಲಾರೆನು.

ಇತ್ತ, ಪತ್ರಲೇಖೆಯ ಮುಖದಿಂದ, ಚಂದ್ರಾಪೀಡನು ಅಚ್ಛೋದಸರೋವರಕ್ಕೆ ಬಂದನೆಂಬ ಸುದ್ದಿಯ ಕೇಳಿ, ಕಾದಂಬರಿಯು ಮಹಾಶ್ವೇತೆಯ ದರ್ಶನದ ನೆವ ಹೇಳಿ, ತಂದೆಯ ಅಪ್ಪಣೆ ತಕ್ಕೊಂಡು, ಸಂಗಡ ಮದಲೇಖೆಯನ್ನೂ, ಕೇಯೂರಕನನ್ನೂ

ಕರಕೊಂಡು, ಪತ್ರಲೇಖೆಯ ಕೈಹಿಡಕೊಂಡು, ಗಂಧರ್ವ ನಗರದಿಂದ ಅಚ್ಛೋದ ಸರೋವರಕ್ಕೆ ಬರಲು ಹೊರಟಳು. ಮಾರ್ಗ ತೋರಿಸುವದಕ್ಕೆ ಕೇಯೂರಕನನ್ನು ಮುಂದೆ ಮಾಡಿಕೊಂಡು ಬರುತ್ತ, ದಾರಿಯಲ್ಲಿ ಆ ಕಾದಂಬರಿಯು- “ಮದಲೇಖೇ, ಆ ಚಂದ್ರಾ ಪೀಡನ ಕೂಡ ನಾನೇನೂ ಮಾತಾಡುವುದಿಲ್ಲ ಕಂಡೆಯಾ! ನೀನೇ ಬೇಕಾದರೆ ವಕ್ರೋಕ್ತಿ ಗಳಿಂದ ಮಾತಾಡು! ನೋಡು, ಸಂತಪ್ತಳಾಗಿ ಹಿಮಗೃಹದಲ್ಲಿ ಹೂವಿನ ಹಾಸಿಗೆಯ ಮೇಲೆ ಹೊರಳುವವಳನ್ನು ಕಣ್ಣಾರೆ ನೋಡಿ, ಬಿಟ್ಟು ಹೋದ ಶಠನ ಕೂಡ ಇನ್ನೇತರ ಮಾತು! ಪತ್ರಲೇಖೇ, ನಿಮ್ಮವರ ನಡತೆಯು ನಿನ್ನ ಮನಸ್ಸಿಗಾದರೂ ಬಂತೇನೇ?” ಎಂದು ಅಂತರಂಗದ ಅಕ್ಕರತೆಯಿಂದಲೂ, ಬಹಿರಂಗದ ಮುನಿಸಿನಿಂದಲೂ ಸಖಿಯರ ಕೂಡ ಚಂದ್ರಾಪೀಡನ ಸಂಬಂಧದ ಮಾತುಗಳನ್ನೇ ಆಡುತ್ತ, ಯಾವಾಗ ಆತನನ್ನು ನೋಡೇನೆಂಬ ಆತುರತೆಯಿಂದ ಪಥಶ್ರಮವನ್ನು ಗಣನೆಗೆ ತಾರದೆ, ಮಹಾಶ್ವೇತೆಯ ಆಶ್ರಮಕ್ಕೆ ಬಂದು ನೋಡುತ್ತಾಳೆ, ಹೀಗಾಗಿತ್ತು!!!

ತನ್ನ ಸಲುವಾಗಿ ಪ್ರಾಣಬಿಟ್ಟ ಪ್ರಾಣದರಸನ ಅವಸ್ಥೆಯನ್ನು ಕಂಡು ಕಾದಂಬರಿಯು ಇದೇನಾಯಿತೆಂದು ಹೌಹಾರಿ, ಪತ್ರಲೇಖೆಯ ಕೈಬಿಟ್ಟು, ಬುಡ ಕೊಯ್ದ ಎಳೆ ಬಳ್ಳಿ ಬಸವಳಿದು ಮುದುಡಿ ಬೀಳುವಂತೆ ದೊಪ್ಪನೆ ನೆಲಕ್ಕುರುಳಿ, ಎದೆ ಎದೆ ಬಡಕೊಂಡು, “ಹಾ ನಾಥಾ! ಹಾ ನಾಥಾ! ಹಾ ಪ್ರಿಯನೆ! ನಡು ಮಡುವಿನೊಳು ಮಡದಿಯ ಕೈಬಿಡುವದುಚಿತವೆ?” ಎಂದು ಬಯಲಿಗೆ ಬಾಯಿಬಿಟ್ಟು ಹಲುಬಿ, ಹಂಬಲಿಸಿ, ಸತ್ವಗುಂದಿ, ಸೊಡರಿಗೆ ಹಿಡಿದ ಹೂವಿನಂತೆ ಮೊಗಬಾಡಿ, ಮೈಮರೆದು ಮೂರ್ಛೆ ಹೊಂದಿದಳು. ಪತ್ರಲೇಖೆಯಂತೂ ಇದೇನು ಮೋಸ ಬಂತೆಂದು ಭೂಮಿಯ ಬಗಿದು ಪ್ರಲಾಪಿಸಹತ್ತಿದಳು. ಮದಲೇಖೆಗೆ ಮುಗಿಲು ಹರಿದು ಬಿದ್ದ ಹಾಗಾಗಿ ಶೋಕಾತಿಶಯದಿಂದ ನಡುಗು ಹುಟ್ಟಿ ಮಾತುಗಳೇ ಬರಲೊಲ್ಲವು. ಕೇಯೂರಕನು ಘಾತವಾಯಿತೆಂದು ಓಡುತ್ತ ಹೋಗಿ ಝುರಿಯೊಳಗಿನ ನೀರು ತಂದು, ಕಾದಂಬರಿಯ ಕಣ್ಣಿಗೆ ಹಚ್ಚಿ, ನೆತ್ತಿಗೆ ಬಡಿದು, ಕಿವಿಯೊಳಗೆ ಊದಿ, ಕಾಲಿಗೆ ಬೂದಿಯ ತಿಕ್ಕಿದನು. ಆಗ ಕಾದಂಬರಿಯು ಚೇತರಿಸಿಕೊಂಡು, ಮರಮರಳಿ ಮನದನ್ನನ ಗುಣಗಳನ್ನು ನೆನೆನೆನೆಸಿ ಪುನಃ ಅಳಹತ್ತಿದಳು. ಮದಲೇಖೆಯು ಮೆಲ್ಲನೆ ತನ್ನ ದುಃಖವನ್ನು ಸೈರಿಸಿಕೊಂಡು- “ದೇವೀ, ಇನ್ನು ಎಷ್ಟು ಪ್ರಲಾಪಿಸಿದರೂ ಫಲವಿಲ್ಲ. ಕುಲವನ್ನು ಕಾಯ್ದುಕೊ. ನಿನ್ನ ಸಂಕಟದ ಸುದ್ದಿ ಹತ್ತಿದರೆ ತಾಯಿತಂದೆಗಳು ನಿಶ್ಚಯವಾಗಿ ಪ್ರಾಣಕೊಟ್ಟಾರು” ಎಂದು ಸಮಾಧಾನ ಹೇಳಹೋಗಲು, ಕಾದಂಬರಿಯು- “ಮೂಢಳೇ ಜೀವದಾಶೆಯಿದ್ದವರಿಗೆ ತಾಯಿತಂದೆಗಳ ಆಶೆ; ನಾನಂತೂ ನನ್ನ ಮನೋವಲ್ಲಭನ ಕೂಡ ಸಾಯುವದೇ ಸರಿಯೆಂದು ನಿಶ್ಚಯಿಸಿದ್ದೇನೆ. ನನ್ನ ಎಲ್ಲ ಬದುಕನ್ನು ಯಾಚಕರಿಗೆ ದಾನಕೊಡು, ಮಣಿಗಿರಿಯನ್ನು ಮುನೀಶ್ವರನಿಗೆ ಕೊಡು, ವೀಣೆಯನ್ನು ನೀನು ತೆಗೆದುಕೊ, ನನ್ನ ತಾಯಿತಂದೆಗಳಿಗೆ ದುಃಖವಾಗದ ಹಾಗೆ ಸಮಾಧಾನ ಹೇಳು. ನೀನು ಇನ್ನು ಶೋಕ ಮಾಡಬೇಡ, ಗಂಧರ್ವನಗರಕ್ಕೆ ಹೋಗು!!” ಎಂದು ಮದಲೇಖೆಯನ್ನು ಕಳುಹಿ ಮಹಾಶ್ವೇತೆಯನ್ನು ಅಪ್ಪಿಕೊಂಡು- “ಅಕ್ಕಾ ಮಹಾಶ್ವೇತೇ, ಇನ್ನು ನಿನ್ನ ಮೇಲಿನ ಆಶೆ ನನಗಿಲ್ಲ, ನನ್ನ ಮೇಲಿನ ಆಶೆ ನಿನಗಿಲ್ಲ. ಜನ್ಮಜನ್ಮದಲ್ಲಿ ದೇವರು ನನ್ನನ್ನೂ ನಿನ್ನನ್ನೂ

ಪುನಃ ಕೂಡಿಸಲಿ!” ಎಂದು ಅವಳಿಗೆ ಹೇಳಿ, ಚಂದ್ರಾಪೀಡನ ದೇಹವನ್ನು ನಾನಾ ಪ್ರಕಾರದ ಪುಷ್ಪಗಳಿಂದ ಪೂಜಿಸಿ, ತನ್ನ ಸಲುವಾಗಿ ಉಜ್ಜಯಿನೀ ನಗರದಿಂದ ಇಲ್ಲಿಯವರೆಗೆ ಬಳಲುತ್ತ ಬಂದ ಚರಣಗಳಿವೇ ಎಂದು ಆತನ ಪಾದಗಳಿಗೆ ಹಿಡಿದೆತ್ತಿ, ತೊಡೆಯ ಮೇಲಿಟ್ಟುಕೊಂಡು ಸಂವಾಹನ ಮಾಡಹತ್ತಿದಳು. ಕಾದಂಬರಿಯ ಕೈಸೋಂಕಿದ ಕೂಡಲೆ ಆ ದೇಹದಿಂದ ಒಂದು ಜ್ಯೋತಿಯು ಹೊರಟು ಆಕಾಶಕ್ಕೆ ಹಾರಿ- “ಮಹಾಶ್ವೇತೇ, ಪೂರ್ವದಲ್ಲಿ ನಿನಗೆ ಅಭಯವಚನ ಕೊಟ್ಟ ಜ್ಯೋತಿಯು ನಾನೇ. ನೀನು ನನ್ನ ಮಾತು ಕೇಳಿ ಜೀವಹಿಡಿದ ಕಾರಣ ನಿನ್ನ ಪ್ರಿಯನಾದ ಪುಂಡರೀಕನ ದೇಹವು ನನ್ನ ಬಳಿಯಲ್ಲಿ ಸುರಕ್ಷಿತವಿದೆ. ಶಾಪಾವಸಾನವಾದ ಕೂಡಲೆ ಆ ಪುಂಡರೀಕನು ಮರಳಿ ನಿನ್ನ ಬಳಿಗೆ ಬರುವನು. ಈ ಚಂದ್ರಾಪೀಡನ ಶರೀರವು ನನ್ನ ಶರೀರವು; ಕಾದಂಬರಿಯ ಕರತಲಸ್ಪರ್ಶದಿಂದ ಈತನಿಗೆ ಪುನಃ ಪ್ರಾಣವು ಬರುವದು. ಇವನಿಗಾದ ಶಾಪವು ತೀರುತ್ತ ಬಂತು, ಇನ್ನು ಸ್ವಲ್ಪ ಕಾಲದಲ್ಲಿಯೇ ಕಾದಂಬರಿಗೆ ಈತನ ಸಮಾಗಮವುಂಟಾಗುವದು; ಈಕೆ ಮಾತ್ರ ಚಂದ್ರಾಪೀಡನ ದೇಹವನ್ನು ಹೀಗೆಯೇ ಹಿಡಿದು ಕಾಯ್ದುಕೊಂಡು ಕುಳಿತಿರಲಿ” ಎಂದು ನುಡಿದು ಆ ಜ್ಯೋತಿಯು ಆಕಾಶದಲ್ಲಿ ಅಂತರ್ಧಾನವಾಯಿತು. ಇದನ್ನು ಕಂಡು ಸರ್ವರೂ ವಿಸ್ಮಿತರಾದರು.

ಅಷ್ಟರೊಳಗೆ ಪತ್ರಲೇಖೆಯು “ಇನ್ನು ಉಜ್ಜಯಿನೀನಗರಕ್ಕೆ ಹೋಗಿ ತಾಯಿ ವಿಲಾಸವತಿಗೂ, ತಂದೆ ತಾರಾಪೀಡನಿಗೂ ಏನು ಹೇಳಲಿ? ಹೇಗೆ ಮೋರೆಯ ತೋರಿಸಲಿ! ಚಂದ್ರಾಪೀಡನಿಗೆ ನಾನು ಒಳಗೆ ಹೃದಯವೂ ಹೊರಗೆ ಮೈನೆಳಲೂ ಆದವಳು, ಆತನನ್ನು ಕಳಕೊಂಡು ಇನ್ನು ಭೂಮಿಯ ಮೇಲೆ ಹೇಗೆ ಜೀವಿಸಲಿ!” ಎಂದು ಶೋಕವನ್ನು ತಡೆಯಲಾರದೆ, ಇಂದ್ರಾಯುಧನಿಗೆ ನೀರು ಕುಡಿಸಿಕೊಂಡು ಬರುತ್ತೇನೆಂದು ನೆವ ಹೇಳಿ, ಆ ಕುದುರೆಯನ್ನು ತಕ್ಕೊಂಡು ಹೋಗಿ, ಅದರೊಡನೆ ಅಚ್ಛೋದಸರೋವರದೊಳಗೆ ಧುಮುಕಿ ಮುಳುಗಿಹೋದಳು. ಆಮೇಲೆ ಎರಡು ಗಳಿಗೆಯ ತರುವಾಯ ಅದೇ ಸರೋವರದೊಳಗಿಂದ ಕಪಿಂಜಲಮುನಿಯು ಬಂದನು. ಆತನನ್ನು ಕಂಡು ಮಹಾಶ್ವೇತೆಯು ಆನಂದಾಶ್ಚರ್ಯಗಳಿಂದ ಆತನ ಚರಣಕ್ಕೆ ನಮಿಸಿ, “ಸ್ವಾಮೀ, ಅಂದು ಪುಂಡರೀಕನ ಶವ ತಕ್ಕೊಂಡು ಆಕಾಶಕ್ಕೆ ಹಾರಿಹೋದ ಆ ದಿವ್ಯಪುರುಷನ ಬೆನ್ನು ಹತ್ತಿ ನೀನು ಉಡ್ಡಾಣ ಮಾಡಿಹೋದವನು ಈಗ ಬಂದಿ! ಅಂದಿನಿಂದ ನಿನ್ನ ಮಾರ್ಗವನ್ನು ಪ್ರತೀಕ್ಷಿಸುತ್ತ ಆಶೆ ಹಿಡಿದು ಕುಳಿತಿದ್ದೇನೆ, ಅತ್ತಕಡೆಯ ವೃತ್ತಾಂತವೇನು, ನನಗೆ ಹೇಳಬೇಕು” ಎಂದು ಕೈಮುಗಿಯಲು ಆ ಕಪಿಂಜಲನು- “ತಾಯೀ, ಆಲಿಸು! ಪುಂಡರೀಕನ ದೇಹ ತಕ್ಕೊಂಡು ಹೋದ ಆ ಪುಣ್ಯಪುರುಷನು ಸಾಕ್ಷಾತ್ ಚಂದ್ರಮನು; ನಾನು ಅವನ ಬೆನ್ನು ಹತ್ತಿ ಆ ಲೋಕಕ್ಕೆ ಹೋಗುತ್ತೇನೆ- ಆತನು ನನ್ನ ಮಿತ್ರನ ದೇಹವನ್ನು ತನ್ನ ದಿವ್ಯಾಸನದ ಮೇಲೆ ಇಟ್ಟುಕೊಂಡು ಕುಳಿತಿದ್ದನು. ಈತನನ್ನು ಏನು ಕಾರಣ ತಂದೆ? ಎಂದು ನಾನು ವಿಚಾರಿಸಲು, ಆತನು ನಿನ್ನ ಗೆಳೆಯನಾದ ಪುಂಡರೀಕನು ಕಾಮಾರ್ತನಾಗಿ ಬಳಲುತ್ತ ಬಿದ್ದಾಗ, ನಾನು ಉದಯನಾದೆನು; ಅದರಿಂದ ಅವನಿಗೆ ಮತ್ತಿಷ್ಟು ಕಾಮಸಂತಾಪವಾದುದರಿಂದ ಅವನು ಸಿಟ್ಟಿಗೆದ್ದು ನನಗೆ ಜನ್ಮಜನ್ಮದಲ್ಲಿ ಮರ್ತ್ಯಭಾವವನ್ನು ತಾಳೆಂದು

ಶಾಪ ಕೊಟ್ಟನು; ಅದಕ್ಕೆ ನಾನು- 'ಒಳ್ಳೆಯದು, ಭೂಮಿಯಲ್ಲಿ ನಾನು ಹುಟ್ಟಿ ಚಂದ್ರಾಪೀಡನೆಂಬ ಅರಸನಾಗುವೆನು, ನೀನು ಹುಟ್ಟಿ ವೈಶಂಪಾಯನನೆಂಬ ನನ್ನ ಮಂತ್ರಿಯಾಗು; ಮುಂದೆ ನಿನ್ನ ಅವಿನಯದ ಆಚರಣೆಯನ್ನು ಕಂಡು ಮಹಾಶ್ವೇತೆಯು ನಿನಗೆ ಶಾಪ ಕೊಡುವಳು, ಆ ಶಾಪದಿಂದ ಗಿಳಿಯಾಗಿ ಹುಟ್ಟಿ ನನ್ನಂತೆಯೇ ಕಷ್ಟಗಳನ್ನು ಅನುಭೋಗಿಸು; ನಾನು ಕಾದಂಬರಿಯ ವಿರಹದಿಂದ ಪ್ರಾಣಬಿಟ್ಟು ಶೂದ್ರಕರಾಜನಾಗಿ ಹುಟ್ಟುವೆನು; ಆ ಕಾಲಕ್ಕೆ ಒಬ್ಬ ಚಾಂಡಾಲಕನ್ನಿಕೆಯು ನಿನ್ನನ್ನು ತಂದು ನನಗೆ ಕಾಣಿಕೆ ಕೊಡುವಳು' ಎಂದು ಪುಂಡರೀಕನಿಗೆ ಪ್ರತಿಶಾಪಕೊಟ್ಟೆನು. ಆಗ ಪುಂಡರೀಕನು ಮುಂದೆ ನಮ್ಮ ಗತಿಯೇನೆಂದು ಬಹು ದೀನೋಕ್ತಿಯಿಂದ ಕೇಳಿಕೊಂಡದ್ದಕ್ಕೆ ನಾನು- 'ನಿನ್ನ ತಂದೆ ಶ್ವೇತಕೇತು ಮುನಿಯೂ, ನನ್ನ ತಂದೆ ತಾರಾಪೀಡನೂ ಪರಮೇಶ್ವರನನ್ನು ಆರಾಧಿಸಿದರೆ ನಮ್ಮಿಬ್ಬರಿಗೂ ಶಾಪ ವಿಮೋಚನವಾಗಿ, ನೀನು ಶುಕಜನ್ಮವನ್ನು ನೀಗಿ, ಮಹಾಶ್ವೇತೆಯನ್ನು ಕೂಡಿಕೊಳ್ಳುವಿ; ನಾನು ಶೂದ್ರಕಜನ್ಮವನ್ನು ನೀಗಿ, ಕಾದಂಬರಿಯನ್ನು ಕೂಡಿಕೊಳ್ಳುವೆನು. ಆ ಶಾಪ ಮುಗಿಯುವತನಕ ಪುಂಡರೀಕನ ದೇಹವನ್ನು ನಾನು ಈ ದಿವ್ಯಾಸನದ ಮೇಲೆ ಜತನದಿಂದ ಇಟ್ಟಿರುತ್ತೇನೆ. ನೀನು ಹೋಗಿ, ಶ್ವೇತಕೇತುಮುನೀಶ್ವರನಿಗೆ ಪರಮೇಶ್ವರನನ್ನು ಆರಾಧಿಸೆಂದು ಸೂಚಿಸು ಎಂದು ನನಗೆ ಹೇಳಿದನು. ಅದನ್ನು ಕೇಳಿ ನಾನು ಅವಸರದಿಂದ ಬರುವಾಗ, ಮಾರ್ಗದಲ್ಲಿ ಒಬ್ಬ ಮುನೀಶ್ವರನನ್ನು ದಾಟಿದೆನು; ಆತನು ಮುನಿದು ನೀನು ಕುದುರೆಯ ಹಾಗೆ ನನ್ನನ್ನು ದಾಟಿದ್ದರಿಂದ ಕುದುರೆಯಾಗಿ ಭೂಮಿಯ ಮೇಲೆ ಹುಟ್ಟೆಂದು ನನಗೆ ಶಾಪ ಕೊಟ್ಟನು. ಆಗ ನಾನು ಗದಗದನೆ ನಡುಗಿ ಆತನಿಗೆ ನಮಿಸಿ 'ಸ್ವಾಮೀ, ನನ್ನ ದುರ್ಗುಣವನ್ನು ನೋಡಬಾರದು; ತಮ್ಮ ದಯಾಗುಣವನ್ನು ಬಿಡಬಾರದು, ನನ್ನ ಅಪರಾಧವನ್ನು ಕ್ಷಮಿಸಬೇಕು! ಅದಾಗದಿದ್ದರೆ, ನನ್ನ ಮಿತ್ರನ ಸಂಗಡ ಇರುವಂತೆ ನನಗೆ ಕರುಣಿಸಬೇಕು' ಎಂದು ಬಹಳ ಪ್ರಕಾರ ಬೇಡಿಕೊಂಡದ್ದಕ್ಕೆ ಆ ತಪಸ್ವಿಯು —'ನೀನು ಭೂಮಿಯಲ್ಲಿ ಇಂದ್ರಾಯುಧವೆಂಬ ಕುದುರೆಯಾಗಿ ಚಂದ್ರಾಪೀಡನ ಸೇವೆಯಲ್ಲಿರಬೇಕು, ಆಗ ನಿನ್ನ ಮಿತ್ರನ ಸಹವಾಸವು ನಿನಗೆ ಉಂಟಾಗುವದು. ಮುಂದೆ ಚಂದ್ರಾಪೀಡನು ವಿರಹದಿಂದ ತೀರಿದಾಗ, ನೀನು ಅಚ್ಛೋದಸರೋವರದೊಳಗೆ ಮುಳುಗಿ ಶಾಪವಿಮುಕ್ತನಾಗುವಿ;' ಎಂದು ನನಗೆ ಹೇಳಿದ್ದನು. ಅದೇ ಪ್ರಕಾರ ನಾನು ಅಚ್ಛೋದ ಸರೋವರದೊಳಗೆ ಮುಳುಗಿ ಆ ದೇಹ ಬಿಟ್ಟು ಬಂದೆನು" ಎಂದು ಹೇಳಲು, ಮಹಾಶ್ವೇತೆಯೂ, ಕಾದಂಬರಿಯೂ ಅತಿ ವಿಸ್ಮಿತರಾಗಿ, "ಒಳ್ಳೆಯದು, ಪತ್ರಲೇಖೆಯ ವೃತ್ತಾಂತವೇನು" ಎಂದು ಕೇಳಿದರು. ಆಗ ಆ ಕಪಿಂಜಲನು, "ಆಕೆಯದೇನೂ ನನಗೆ ಗೊತ್ತು ಇಲ್ಲ. ಇನ್ನು ಶ್ವೇತಕೇತು ಮುನಿಯ ಬಳಿಗೆ ಹೋಗುತ್ತೇನೆ" ಎಂದು ಹೇಳಿ, ಹೊರಟು ಹೋದನು.

ಇತ್ತ ಕಾದಂಬರಿಯು ಚಂದ್ರಾಪೀಡನ ದೇಹದ ಮೇಲೆ ಪರಿಮಳದ್ರವ್ಯಗಳನ್ನೂ, ಪರಿಪರಿಯ ಪುಷ್ಪಗಳನ್ನೂ ಹಾಕಿ ಅತ್ಯಾದರದಿಂದ ಅರ್ಚಿಸುತ್ತಿರಲು, ಮರುದಿವಸದಿಂದ ಚಂದ್ರಾಪೀಡನ ಕಾಯವು ಕಾಂತಿಗೊಳ್ಳಹತ್ತಿತು. ಅದನ್ನು ಕಂಡು ಕಾದಂಬರಿ ಮುಂತಾದವರು ಆನಂದಾಶ್ಚರ್ಯಪಟ್ಟು, ಚಂದ್ರಾಪೀಡನ ಸಂಗಡ ಬಂದ ಮಾಂಡಲಿಕರಾಜಕುಮಾರರಿಗೆ

ಇದೆಲ್ಲ ವೃತ್ತಾಂತವನ್ನು ಹೇಳಿ, ಆ ದೇಹವನ್ನು ತೋರಿಸಿದರು. ಅವರು ಕಣ್ಮುಟ್ಟ ನೋಡಿ ಪರಮಹರ್ಷಿತರಾಗಿ — "ಕಾದಂಬರೀದೇವಿ, ಈ ಶುಭೋದಯವೆಲ್ಲ ನಿನ್ನಿಂದಲೇ ಸರಿ" ಎಂದು ನುಡಿದು ತಾರಾಪೀಡನ ಕಡೆಯಿಂದ ಬಂದ ಚರರ ಕೂಡ ಚತುರಕನೆಂಬ ಕರ್ಣಿಕನನ್ನು ಈ ವರ್ತಮಾನವನ್ನು ತಿಳಿಸುವದಕ್ಕೆ ಉಜ್ಜಯಿನೀನಗರಕ್ಕೆ ಕಳಿಸಿದರು. ಅವರೊಡನೆ ಆ ಕರ್ಣಿಕನು ಉಜ್ಜಯಿನೀನಗರಕ್ಕೆ ಹೋಗಿ ಈ ಕಷ್ಟವಿಸ್ಮಯಕಾರಕ ವೃತ್ತಾಂತವನ್ನು ಹೇಳಲು, ವಿಲಾಸವತಿಯೂ, ತಾರಾಪೀಡನೂ, ಶುಕನಾಸ ಮಂತ್ರಿಯೂ ಕಡುತವಕದಿಂದ ಅಚ್ಛೋದಸರೋವರಕ್ಕೆ ಬಂದು ನೋಡುತ್ತಾರೆ — ಚಂದ್ರಾಪೀಡನ ದೇಹವು ಪೂರ್ವದಂತೆ ಕಾಂತಿಮಯವಾಗಿತ್ತು. ಈ ಶುಭಚಿಹ್ನವು ಕಾದಂಬರಿಯ ಮಹತ್ವದಿಂದ ಉಂಟಾಗಿರುವದೆಂದು ತಾರಾಪೀಡನು ತಿಳಿದನು. ಅರಸು ಬಂದುದರಿಂದ ಕಾದಂಬರಿಯೂ, ಮಹಾಶ್ವೇತೆಯೂ ಮರ್ಯಾದೆಯಿಂದ ಆ ಸ್ಥಳಬಿಟ್ಟು ಒತ್ತಟ್ಟಿಗೆ ಮರೆಯಾದರು. ಮಗನ ಅವಸ್ಥೆಯನ್ನು ಕಂಡು ಶೋಕಿಸುವ ಹೆಂಡತಿಗೆ ಅಳತಕ್ಕದ್ದಲ್ಲೆಂತಲೂ, ದುಃಖಿತಳಾದ ಸೊಸೆ ಕಾದಂಬರಿಗೆ ಸಮಾಧಾನ ಹೇಳೆಂತಲೂ ಅರಸನು ಅಂದನು. ಆ ಮಾತು ಕೇಳಿ ವಿಲಾಸವತಿಯು ಕಾದಂಬರಿಯನ್ನು ಅಪ್ಪಿಕೊಂಡು, ಆಕೆಯ ಕಣ್ಣೀರು ಒರಸಿ— "ತಾಯೀ ಕಾದಂಬರೀ, ಇನ್ನು ಶೋಕಮಾಡಬೇಡ! ದೇವರ ಕೃಪೆಯಿಂದ ನೀನು ಮುತ್ತೈದೆಯಾಗುವಿ" ಎಂದು ಹರಸಲು ಕಾದಂಬರಿಯು ಅತ್ತೆ ಮಾವಂದಿರಿಗೆ ನಮಿಸಿ, ಅತ್ತೆಯ ಹಿಂದೆ ಮರ್ಯಾದೆಯಿಂದ ಹುದುಗಿಕೊಂಡು ಕುಳಿತಳು.

ಅದನ್ನು ಕಂಡು ತಾರಾಪೀಡನು 'ಪೂರ್ವದಂತೆ ನೀನೇ ಚಂದ್ರಾಪೀಡನ ದೇಹವನ್ನು ಹಿಡಿದುಕೊಂಡು ಕುಳಿತಿರು' ಎಂದು ಕಾದಂಬರಿಗೆ ಹೇಳಿ, ತಾನು ಹೆಂಡತಿ ಸಹಿತ ತಪಶ್ಚರ್ಯಕ್ಕೆ ಕುಳಿತನು. ಶುಕನಾಸ ಮಂತ್ರಿಯೂ ತಪಸ್ಸು ಮಾಡತೊಡಗಿದನು.

ಜಾಬಾಲಿಋಷಿಯು ಈ ಕಥೆಯನ್ನು ತನ್ನ ಶಿಷ್ಯರಿಗೆ ಹೇಳಿ, ಈಗಲೂ ಆ ಚಂದ್ರಾಪೀಡನ ದೇಹವನ್ನು ಹಿಡಕೊಂಡು ಕಾದಂಬರಿಯು ಆ ಅಚ್ಛೋದಸರೋವರದ ತಟದಲ್ಲಿ ಕುಳಿತಿದ್ದಾಳೆ; ಮಹಾಶ್ವೇತೆಯು ಪುಂಡರೀಕನ ಆಶೆಯಿಂದ ಅಲ್ಲಿ ಈಗಲೂ ತಪಸ್ಸು ಮಾಡುತ್ತಾಳೆ; ಮಕ್ಕಳಿಗೆ ತಟ್ಟಿದ ಶಾಪವಿಮೋಚನಾರ್ಥವಾಗಿ ತಾರಾಪೀಡನೂ, ಶುಕನಾಸನೂ ತಪಸ್ಸು ಮಾಡುತ್ತ ಈಗಲೂ ಆ ಅಚ್ಛೋದಸರೋವರದ ದಂಡೆಯ ಮೇಲೆ ಹಾಗೆಯೇ ಕುಳಿತಿದ್ದಾರೆ; ಅವಿನಯದ ಮೂಲಕ ಮಹಾಶ್ವೇತೆಯ ಶಾಪವು ತಟ್ಟಿ ವೈಶಂಪಾಯನನು ಗಿಳಿಯಾಗಿ ಹುಟ್ಟಿದನೆಂದು ಹೇಳಿದೆನಷ್ಟೇ, ಆ ಗಿಳಿಯು ಇದೇ ಎಂದು ಆ ಮುನಿಗಳಿಗೆ ಬೆರಳಿನಿಂದ ನನ್ನನ್ನು ತೋರಿಸಿ ಬೆಳಗಾಯಿತೆಂದು ಸ್ನಾನಕ್ಕೆ ಹೋದನು.

ಎಲೈ ಶೂದ್ರಕಭೂಪಾ ಕೇಳು, ಆ ಜಾಬಾಲಿ ಋಷೀಶ್ವರನು ನನ್ನ ವೃತ್ತಾಂತವನ್ನು ತನ್ನ ಶಿಷ್ಯರಿಗೆ ಕಥಿಸುವಾಗ, ನನಗೆ ನನ್ನ ಎರಡೂ ಜನ್ಮದ ನೆನಪಾಗಿ ನನ್ನ ವೈಶಂಪಾಯನನ ಜನ್ಮದ ಗೆಳೆಯ ಚಂದ್ರಾಪೀಡನನ್ನೂ, ಪುಂಡರೀಕ ಜನ್ಮದ ಗೆಳತಿ ಮಹಾಶ್ವೇತೆಯನ್ನೂ, ಯಾವಾಗ ನೋಡೇನೆಂದು ಉತ್ಕಂಠಿತನಾಗಿ— "ಸ್ವಾಮೀ, ದಯಮಾಡಿ ನೀನು ನನ್ನನ್ನು ಬಿಟ್ಟರೆ ಈಗಲೇ ನಾನು ಆ ಅಚ್ಛೋದಸರೋವರಕ್ಕೆ ಹೋಗಿ ಅವರನ್ನು ಕೂಡಿಕೊಳ್ಳುವೆನು"

ಎಂದು ಹಾರೀತಮುನಿಗೆ ದೀನೋಕ್ತಿಯಿಂದ ಹೇಳಿಕೊಂಡೆನು. ಆಗ ಆತನು ಪ್ರಣಯಕುಪಿತನಾಗಿ— “ಇನ್ನೂ ನಿನ್ನ ಚಂಚಲತನವ ಬಿಡಲೊಲ್ಲಿ! ಹಾರಿಹೋಗುವ ಸಾಮರ್ಥ್ಯ ನಿನಗೆ ಹುಟ್ಟಿದ ಬಳಿಕ ಹೋಗುವಿಯಂತೆ, ಆ ವರೆಗೆ ಸುಖದಿಂದ ಇಲ್ಲಿ ಇರು” ಎಂದು ನನ್ನನ್ನು ವಲ್ಕಲದ ಹಾಸಿಗೆಯ ಮೇಲೆ ಇಟ್ಟು ಪ್ರಾತಃಸ್ನಾನಕ್ಕೆ ಹೋದನು.

ಆಗ ನಾನು ನನ್ನ ಆಪತ್ತುಗಳನ್ನು ನೆನೆನೆನಸಿಕೊಂಡು ಇನ್ನೇನು ಮಾಡಲೆಂದು ಚಿಂತೆಯಿಂದ ಕುದಿಯುತ್ತ ಕುಳಿತಾಗ ಹಾರೀತಋಷಿಯು ಸ್ನಾನ ಮಾಡಿ ಬಂದು— “ನಿನ್ನ ಹತ್ತಿರ ಕಪಿಂಜಲಋಷಿಯು ಬಂದಿದ್ದಾನೆ” ಎಂದು ಹೇಳಿದನು. ಆಗ ನಾನು ಅತ್ಯಾನಂದದಿಂದ ಕಪಿಂಜಲನನ್ನು ಅಪ್ಪಿಕೊಂಡು “ನಿನ್ನ ದರ್ಶನವಿಲ್ಲದೆ ನನ್ನವೆರಡು ಜನ್ಮಗಳು ಹೋದವು! ಇಂದಿಗೆ ನನಗೆ ನಿನ್ನ ದರ್ಶನವಾಯಿತು! ವಿಧಿಯು ವಿಮುಖವಾಗಲು ಎಲ್ಲವೂ ವಿಮುಖವೇ ಸರಿ” ಎಂದು ದೀನೋಕ್ತಿಯಿಂದ ಆತನ ಕೂಡ ಮಾತಾಡಲು, ಆತನೂ ನನ್ನ ಚರಣಕ್ಕೆರಗಿ ದೀನಮುಖನಾಗಿ ಕಣ್ಣೀರು ಸುರಿಸಿ— “ನಿನಗೆ ತಟ್ಟಿದ ಶಾಪವಿಮೋಚನಾರ್ಥವಾಗಿ ನಿನ್ನ ತಂದೆ ಶ್ವೇತಕೇತುಋಷಿಯು ತಪಸ್ಸು ಮಾಡಲಾರಂಭಿಸಿದ್ದಾನೆ; ನಿನ್ನ ಪಾಪ ಹಿಂಗಿ ನಿನಗೆ ಇಷ್ಟವಾಗಲೆಂಬ ಇಚ್ಛೆಯಿಂದ ನಿನ್ನ ತಾಯಿ ಲಕ್ಷ್ಮಿಯಾದರೂ ದೇವರನ್ನು ಆರಾಧಿಸುತ್ತಾಳೆ. ಇನ್ನು ಸ್ವಲ್ಪ ಕಾಲದಲ್ಲಿಯೇ ನಿನಗೆ ಕಲ್ಯಾಣವಾದೀತು; ಆ ವರೆಗೆ ಚಾಂಚಲ್ಯಕ್ಕೆ ಎಡೆಯಾಗದೆ ಸ್ವಸ್ಥ ಇರು; ನಾನು ನಿನ್ನ ತಂದೆಯ ಬಳಿಗೆ ಹೋಗುತ್ತೇನೆ” ಎಂದು ಹೇಳಿ ಹೋದನು.

ಆಮೇಲೆ ನಾನು ಕೆಲವು ದಿವಸ ಜಾಬಾಲೀಋಷೀಶ್ವರನ ಆಶ್ರಮದಲ್ಲಿ ಸುಖದಿಂದ ಕಾಲಕಳೆದು ಒಂದು ದಿನ ಇನ್ನು ಹಾರುವ ಸಾಮರ್ಥ್ಯವುಂಟಾಯಿತೆಂದು ತಿಳಕೊಂಡು ಆಕಾಶಕ್ಕೆ ಹಾರಿದೆನು. ಮುಂದೆ ಹಾರಿ ಹೋದ ಹೋದ ಹಾಗೆ ದಣಿದು, ಒಂದಾನೊಂದು ಅಡವಿಯೊಳಗೆ ಒಂದು ಗಿಡದ ಬುಡಕ್ಕೆ ಬಿದ್ದೆನು. ಅಲ್ಲಿಗೆ ಒಬ್ಬ ಅಂತ್ಯಜನು ಅಕಸ್ಮಾತ್ತಾಗಿ ಬಂದು ಬಲೆ ಹಾಕಿ ನನ್ನನ್ನು ಹಿಡಿದನು. ಆಗ ನಾನು ಅವನಿಗೆ— “ ಮಹಾರಾಯಾ, ನಾನು ಮುನಿಪುತ್ರನು, ನನ್ನ ಹೆಸರು ವೈಶಂಪಾಯನ, ನನಗೆ ಪೂರ್ವಜನ್ಮಸ್ಮೃತಿಯುಂಟು, ನಾನು ಸಕಲ ಶಾಸ್ತ್ರಜ್ಞನು, ದಯಮಾಡಿ ನನ್ನನ್ನು ಜೀವದಿಂದ ಬಿಡು! ನಿನಗೆ ಈ ಕಾನನದೊಳಗೆ ಬೇರೆ ಅನೇಕ ಪಕ್ಷಿಗಳುಂಟು” ಎಂದು ಪರಿಪರಿಯಿಂದ ಬೇಡಿಕೊಂಡೆನು. ನನ್ನ ಮಾತು ಕೇಳಿ ಅವನು ವಿಸ್ಮಿತನಾಗಿ ಅತ್ಯಾನಂದದಿಂದ ಗಹಗಹಿಸಿ ನಕ್ಕು— “ಎಲೈ ಭದ್ರನೇ, ನನ್ನ ದೈವ ತೆರೆಯಿತು! ಹೇಳುತ್ತೇನೆ ಕೇಳು, ಸ್ವಲ್ಪ ದಿವಸಗಳ ಮುಂಚೆ ಯಾವನೋ ಒಬ್ಬನು ಬಂದು, ನಮ್ಮ ಯಜಮಾನನ ಮಗಳಿಗೆ ಜಾಬಾಲಿಋಷಿಯ ಆಶ್ರಮದಲ್ಲಿ ವೈಶಂಪಾಯನವೆಂಬುದೊಂದು ಗಿಳಿಯಿದೆ, ಅದಕ್ಕೆ ವೇದಶಾಸ್ತ್ರ ಜ್ಞಾನವುಂಟೆಂದು ಹೇಳಿದನು. ಅಂದಿನಿಂದ ಆಕೆ ಅದನ್ನು ಯಾರು ತಂದು ಕೊಟ್ಟಾರೆಂದು ಕುತೂಹಲಚಿತ್ತಳಾಗಿ, ತಂದವರಿಗೆ ಸಾವಿರ ಹೊನ್ನು ಕೊಡುವೆನೆಂದು ಹೇಳಿ ನನ್ನಂಥ ನೂರಾರು ಮಂದಿ ಚರರನ್ನು ದಿಕ್ಕುದಿಕ್ಕಿಗೆ ಕಳಿಸಿದ್ದಾಳೆ. ಇಂಥದರೊಳಗೆ ದೈವಯೋಗದಿಂದ, ಔಷಧದ ಸಲುವಾಗಿ, ಅಡವಿಯೊಳಗೆ ತೊಳಲುತ್ತ, ಹುಡುಕುವ ಬಳ್ಳಿ ಕಾಲ್ತೊಡಕಿದಂತೆ ನೀನೇ ನನಗೆ ದೊರಕಿದಿ. ನಿನ್ನ ಮಾತು ಕೇಳಲು ಜಾಬಾಲಿಋಷಿಯ ಆಶ್ರಮದಲ್ಲಿದ್ದ ವೈಶಂಪಾಯನವೆಂಬ ಗಿಳಿಯು ನೀನೇ ಎಂದು

ನನಗೆ ಪೂರ್ಣ ಮನವರಿಕೆಯಾಯಿತು. ಇನ್ನು ಮೇಲೆ ನಿನ್ನನ್ನು ಬಿಡುವ ಮಾತೆಲ್ಲಿ? ನಾನು ನಿನ್ನನ್ನು ಒಯ್ದು ಆಕೆಗೆ ಕೊಡುವದೇ ನಿಶ್ಚಯ; ಮುಂದೆ ನಿನ್ನನ್ನು ಬಿಡುವದೂ ಬಂಧಿಸುವದೂ ಆಕೆಯ ಕೈಯೊಳಗುಂಟು" ಎಂದು ಹಿರ್‍ರನೆ ಹಿಗ್ಗಿ ನನ್ನನ್ನು ಒಯ್ದು ಆಕೆಯ ಮುಂದೆ ಇಟ್ಟು, ನಾನು ಆಡಿದ್ದನ್ನೆಲ್ಲ ಆಕೆಗೆ ಹೇಳಿದನು.

ಆಕೆ ನನ್ನನ್ನು ನೋಡಿ " ಮಗನೇ, ಇನ್ನೂ ಎಲ್ಲಿಗೆ ಹೋಗಬೇಕೆಂದು ಮಾಡಿದ್ದೀ? ಪುಂಡರೀಕ ಜನ್ಮವನ್ನು ನೀಗಿ ಈ ಅವಸ್ಥೆಯನ್ನು ಹೊಂದಿ, ಈಗ ಚಾಂಡಾಲರ ಕೈವಶವಾದದ್ದು ಸಾಕಾಗಲಿಲ್ಲವೆ? ಮೂಢಾ, ಇದು ನಿನ್ನ ಅವಿನಯಕ್ಕೆ ತಕ್ಕ ಫಲವಾಯಿತು!" ಎಂದು ನನ್ನನ್ನು ಬಗೆಬಗೆಯಿಂದ ಹಳಿದು ಪಂಜರದೊಳಗೆ ಹಾಕಿದಳು. ಆ ಮಾತು ಕೇಳಿ ನಾನು ಬಹು ಚಿಂತಾಕ್ರಾಂತನಾಗಿ ಇನ್ನೇನೆಂದು ಈ ನಿಂದ್ಯ ಜನ್ಮವಿಡಬೇಕು! ಇನ್ನು ಕೂಳೂ ನೀರೂ ಬಿಟ್ಟು ಸಾಯುವದೇ ಲೇಸೆಂದು ಮನದೊಳಗೆ ನಿಶ್ಚಯಿಸಿ ಆಕೆಯ ಕೂಡ ಮಾತಾಡದೆ ಸುಮ್ಮನೆ ಕುಳಿತೆನು.

ಅಷ್ಟರೊಳಗೆ ಆಕೆ ಹಣ್ಣು ನೀರುಗಳನ್ನು ತಂದು ನನ್ನ ಮುಂದೆ ಇಟ್ಟು 'ತಿನ್ನು' ಎನ್ನಲು ನಾನು ಆ ಹಣ್ಣು ಮುಟ್ಟದೆ, ನೀರು ಕುಡಿಯದೆ, ಸುಮ್ಮನೆ ಕುಳಿತೆನು. ಅದನ್ನು ನೋಡಿ, "ಏನು ಕಾರಣ ತಿನ್ನಲೊಲ್ಲಿ?" ಎಂದು ನನ್ನ ಮೇಲೆ ಸಿಟ್ಟಿಗೆದ್ದಳು. ಆಗ ನಾನು "ಚಾಂಡಾಲರ ಕೈಯೊಳಗಿನ ಹಣ್ಣು ನೀರುಗಳನ್ನು ಋಷಿಕುಮಾರರು ಸೇವಿಸುವದುಂಟೆ?" ಎಂದು ಆಕೆಯನ್ನು ಕೇಳಿದೆನು. ಅದಕ್ಕೆ ಅವಳು, "ಇಷ್ಟು ಜಾಣತನವುಳ್ಳವನು ಅಂಥ ಪಾಪ ಕರ್ಮಕ್ಕೆ ಮನಸ್ಸು ಹಾಕಿ ಈ ಗತಿಗೆ ಯಾಕೆ ಬಂದಿ? ಪಶ್ಚಾತ್ತಾಪವಾಗುವ ಕೆಲಸಗಳನ್ನು ಜಾಣರು ಬಹುತರ ಮಾಡುವದಿಲ್ಲ; " ಎಂದು ಅಂದಳು. ಆ ಮಾತು ನನ್ನ ಮನಸ್ಸಿಗೆ ಬಹಳ ಹತ್ತಿದ್ದರಿಂದ ಆ ಹಣ್ಣು ತಿಂದು ನೀರು ಕುಡಿದೆನು.

ಈ ಮೇರೆಗೆ ದುರ್ದೈವದ ಕಾಲವು ಹೋಗಿ ಮುಂದೆ ನನಗೆ ಸುದೈವದ ಕಾಲವು ಒದಗಿತು. ಮರುದಿನ ಮುಂಜಾನೆ ನೋಡುತ್ತೇನೆ, ಆ ಚಾಂಡಾಲಗೃಹವು ಇಂದ್ರಭವನದಂತೆ ಶೋಭಿಸುತ್ತಿರುವದು; ಆ ಸ್ತ್ರೀಯು ಲಕ್ಷ್ಮೀದೇವಿಯಂತೆ ಕಾಣುತ್ತಿರುವಳು; ನನ್ನನ್ನು ಹಾಕಿದ ಪಂಜರವು ರತ್ನಮಯವಾಗಿ ಹೊಳೆಯುತ್ತಿರುವದು. ಇದನ್ನೆಲ್ಲ ಕಂಡು ನನ್ನೊಳಗೆ ನಾನೇ ವಿಸ್ಮಿತನಾಗಿ, ಇದೇನು ಕೌತುಕವೆಂದು ಬೆರಗಾಗಿ ಆಲೋಚಿಸುತ್ತ ಕುಳಿತುಕೊಂಡಾಗ, ಆಕೆ ಬಂದು ತನ್ನ ಸೇವಕರ ಕೈಯಿಂದ ಪಂಜರ ಹಿಡಿಸಿಕೊಂಡು ನನ್ನನ್ನು ನಿನ್ನ ಬಳಿಗೆ ತಂದಳು. ಇನ್ನು ಮುಂದಿನ ಸಂಗತಿಗಳನ್ನು ಆಕೆಯನ್ನೇ ವಿಚಾರಿಸು!" ಎಂದು ವೈಶಂಪಾಯನ ಗಿಳಿಯು ಶೂದ್ರಕರಾಜನಿಗೆ ತನ್ನ ವೃತ್ತಾಂತವನ್ನು ಹೇಳಿತು.

ಆಮೇಲೆ ಶೂದ್ರಕರಾಜನು ಆ ಚಾಂಡಾಲಕನ್ನಿಕೆಯನ್ನು ಕರೆಸಿ ಮುಂದಿನ ವೃತ್ತಾಂತವನ್ನು ನೀನು ಹೇಳೆಂದು ಆಕೆಗೆ ಅಪ್ಪಣೆ ಮಾಡಲು, ಅವಳು — "ಜೀಯಾ, ನಿನ್ನ ನಿಜರೂಪವನ್ನು ನೆನಪು ಮಾಡಿಕೋ! ನೀನು ಲೋಕನಂದಕರನಾದ ಚಂದ್ರನು; ಪುಂಡರೀಕಶಾಪದಿಂದ ಭೂಮಿಯ ಮೇಲೆ ಚಂದ್ರಾಪೀಡನಾಗಿ ಹುಟ್ಟಿ ಕಾದಂಬರೀ ವಿರಹದಿಂದ ಆ ದೇಹವ ತೊರೆದು ಶೂದ್ರಕರಾಜನಾಗಿದ್ದೀ. ನಿನ್ನ ದೇಹವನ್ನು ಹಿಡಕೊಂಡು

ಈಗ್ಯೂ ಕಾದಂಬರಿಯು ಅಚ್ಛೋದಸರೋವರದ ತಟದ ಮೇಲೆ ಕುಳಿತಿದ್ದಾಳೆ; ಈ ಗಿಳಿಯು ನಿನ್ನ ಮಿತ್ರನಾದ ವೈಶಂಪಾಯನನು; ನಾನು ಪುಂಡರೀಕನ ತಾಯಿ ಲಕ್ಷ್ಮೀಯು. ಶಾಪ ಮುಗಿಯುವತನಕ ಈ ವೈಶಂಪಾಯನ ಗಿಳಿಯು ಶೂದ್ರಕನ ಸ್ವಾಧೀನವಿರುವಂತೆ ಮಾಡೆಂದು ಶ್ವೇತಕೇತುಋಷಿಯು ನನಗೆ ಸೂಚಿಸಿದ ಮೂಲಕ ನಾನು ಇದನ್ನು ನಿನ್ನ ಸ್ವಾಧೀನ ಮಾಡಬಂದೆನು; ನಿಮ್ಮ ಶಾಪಗಳು ತೀರುತ್ತ ಬಂದವು. ಇನ್ನು ಮೇಲೆ ನೀವಿಬ್ಬರೂ ಈ ನಿಂದ್ಯ ಕಾಯಗಳನ್ನು ಬಿಟ್ಟು ನಿಮ್ಮ ನಿಮ್ಮ ಪೂರ್ವದ ಕಾಯಗಳನ್ನು ಧರಿಸಿ, ಸುಖಗಳನ್ನು ಉಪಭೋಗಿಸುತ್ತ ಕೂಡಿಯೆ ಇರುವಿರಿ" ಎಂದು ಹೇಳಿದ ಕೂಡಲೇ ಶೂದ್ರಕರಾಜನು ಕಾದಂಬರಿಯನ್ನು ನೆನಸಿ ಪ್ರಾಣಬಿಟ್ಟನು; ಅವನ ಅವಸ್ಥೆಯನ್ನು ಕಂಡು ಆ ಗಿಳಿಯೂ ಜೀವ ಬಿಟ್ಟಿತು. ಇದನ್ನು ನೋಡಿ ಸರ್ವರೂ ವಿಸ್ಮಿತರಾದರು.

ಇತ್ತ ಮಧುಮಾಸದಲ್ಲಿ ಒಂದು ದಿನ ಕಾದಂಬರಿಯು ಚಂದ್ರಾಪೀಡನ ಪಾದಸೇವೆಯನ್ನು ಮಾಡುತ್ತ ಕುಳಿತಿರಲು, ಚಂದ್ರಾಪೀಡನು ಸಪ್ರಾಣನಾಗಿ ನಿದ್ದೆಯಿಂದ ಎದ್ದವನಂತೆ ಪರಮೇಶ್ವರನನ್ನು ಧ್ಯಾನಿಸುತ್ತ ಎದ್ದು ಕುಳಿತನು; ಒಮ್ಮಿಂದೊಮ್ಮೆ ಎದ್ದವನನ್ನು ನೋಡಿ ಕಾದಂಬರಿಯು ಅಂಜಲು, ಚಂದ್ರಾಪೀಡನು— "ಕಾಂತೇ, ನೀನು ಹೆದರಬೇಡ? ಅಗೋ ನೋಡು! ಮಹಾಶ್ವೇತೆಯ ಪ್ರಿಯನಾದ ಪುಂಡರೀಕನು ಚಂದ್ರಲೋಕದಿಂದ ಹೇಗೆ ಬರುತ್ತಾನೆ' ಎಂದು ಹೇಳಿದನು. ಆಗ ಆಕೆ ಗಕ್ಕನೆ ತಿರುಗಿ ನೋಡುತ್ತಾಳೆ, ಪುಂಡರೀಕನು ಆಕಾಶದಿಂದ ಕೆಳಗಿಳಿದು ಬಂದು ಮಹಾಶ್ವೇತೆಯ ಪಾಣಿಗ್ರಹಣ ಮಾಡಿದನು. ಅದನ್ನು ನೋಡಿ ಕಾದಂಬರಿಯು ತನ್ನ ಪ್ರತಿಜ್ಞೆ ಕೊನೆಗಂಡಿತೆಂದು ಆನಂದಪಟ್ಟು, ತಾನೂ ಚಂದ್ರಾಪೀಡನ ಪಾಣಿಗ್ರಹಣ ಮಾಡಿದಳು.

ಆಮೇಲೆ ಚಂದ್ರಾಪೀಡನು ತನ್ನ ಹೆಂಡತಿಯಾದ ಕಾದಂಬರಿಯೊಡನೆ ಬಂದು ತಂದೆತಾಯಿಗಳ ಚರಣಕ್ಕೆ ನಮಿಸಲು, ಅವರು ಪರಮೇಶ್ವರನ ಕೃಪೆಯಿಂದ ಮಗನಿಗೂ, ಸೊಸೆಗೂ ಕಲ್ಯಾಣವಾಯಿತೆಂದು ಪರಮಹರ್ಷಿತರಾಗಿ ಇಬ್ಬರನ್ನೂ ಅಪ್ಪಿಕೊಂಡು ಹರಸಿದರು.

ಅನಂತರ ಪುಂಡರೀಕನು ತನ್ನ ಹೆಂಡತಿ ಮಹಾಶ್ವೇತೆ ಸಹಿತ ಬಂದು ಶುಕನಾಸನ ಪಾದಕ್ಕೆ ವಂದಿಸಿ— "ಶಾಪವಿಮೋಚನವಾಗಿ ಪುಂಡರೀಕನಾದೆನು. ಆದರೆ ನಾನು ನಿನ್ನ ಮಗ ವೈಶಂಪಾಯನನು" ಎಂದು ಅರಿಕೆ ಮಾಡಿದನು. ಅದನ್ನು ಕೇಳಿ ಶುಕನಾಸನು — "ಎಲೈ ಮುನಿಪುತ್ರನೇ, ನೀನು ನನ್ನ ಮಗನಾಗಿ ಹುಟ್ಟಿ, ಬಳಿಕ ಶಾಪವಿಮುಕ್ತನಾಗಿ, ನಿನ್ನ ನಿಜರೂಪವನ್ನು ತಾಳಿದಿ; ದೇವರ ದಯೆಯಿಂದ ನಿನಗೂ ಮಹಾಶ್ವೇತೆಗೂ ಕಲ್ಯಾಣವಾಯಿತು. ಇದನ್ನು ಕಣ್ಣಾರೆ ನೋಡಿದುದರಿಂದಲೂ, ಮನಮುಟ್ಟಿ ಅರಿತುದರಿಂದಲೂ ನಾನು ಕೃತಾರ್ಥನಾದೆನು" ಎಂದು ಅವರಿಬ್ಬರನ್ನೂ ಅಪ್ಪಿಕೊಂಡು ಹರಸಿದನು.

ಅಷ್ಟರೊಳಗೆ ಕೇಯೂರಕನ ಮುಖದಿಂದ ಈ ಸುವಾರ್ತೆಯನ್ನು ಕೇಳಿ ಚಿತ್ರರಥ ಗಂಧರ್ವರಾಜನೂ, ಹಂಸರಾಜನೂ, ಹೆಂಡಿರು ಸಹಿತ ಅಲ್ಲಿಗೆ ಬಂದು, ಅಳಿಯರನ್ನೂ,

ಹೆಣ್ಣುಮಕ್ಕಳನ್ನೂ ಅಪ್ಪಿಕೊಂಡು ಹರಸಿ, ಬೀಗರಿಗೆ ಆದರದಿಂದ ಸನ್ಮಾನ ಮಾಡಿ, ಕೈಮುಗಿದು ವಿನಯದಿಂದ ಅವರಿಗೆ ಹೇಳಿಕೊಂಡು ಅವರೆಲ್ಲರನ್ನು ಗಂಧರ್ವನಗರಕ್ಕೆ ಆನಂದೋತ್ಸಾಹಗಳಿಂದ ಕರಕೊಂಡುಹೋಗಿ, ತಮ್ಮ ತಮ್ಮ ರಾಜ್ಯಗಳನ್ನು ಅಳಿಯರಿಗೆ ಕೊಟ್ಟು ಪಟ್ಟಗಟ್ಟಿದರು.

ಈ ಮೇರೆಗೆ ದಂಪತಿಗಳು ಸುಖವನ್ನು ಅನುಭೋಗಿಸುತ್ತ ಗಂಧರ್ವನಗರದಲ್ಲಿದ್ದಾಗ, ಒಂದು ದಿನ ಕಾದಂಬರಿಯು ಪತ್ರಲೇಖೆಯ ವೃತ್ತಾಂತವೇನೂ ತಿಳಿಯಲಿಲ್ಲೆಂದು ಚಂದ್ರಾಪೀಡನನ್ನು ಕೇಳಿದಳು. ಆಗ ಆತನು "ಆ ಪತ್ರಲೇಖೆ ಯಾರೆಂದರೆ, ನನ್ನ ಹೆಂಡತಿ ರೋಹಿಣಿಯು. ಶಾಪ ತಟ್ಟಿ ಮರ್ತ್ಯ ಶರೀರ ತಾಳಿ ನಾನು ದಿವ್ಯಲೋಕದಿಂದ ಭೂಮಿಗೆ ಬಂದುದರಿಂದ ಆಕೆ ನನ್ನನ್ನು ಅಗಲಿ ಇರಲಾರದೆ ಪತ್ರಲೇಖೆಯಾಗಿ ಹುಟ್ಟಿ ನನ್ನ ತಾಂಬೂಲದ ಕರಡಿಗೆ ಹಿಡಿಯುವ ತೊತ್ತಾಗಿದ್ದಳು. ಆಕೆಯ ಸಲುವಾಗಿ ಚಂದ್ರಲೋಕದಲ್ಲಿ, ನಿನ್ನ ಸಲುವಾಗಿ ಗಂಧರ್ವನಗರದಲ್ಲಿ, ತಾಯಿತಂದೆಗಳ ಸಲುವಾಗಿ ಉಜ್ಜಯಿನೀನಗರದಲ್ಲಿ ಇರುವೆನು. ನಿನಗೆ ಪತ್ರಲೇಖೆಯ ದರ್ಶನವು ಚಂದ್ರಲೋಕದಲ್ಲಿ ಆಗುವದು" ಎಂದು ಹೇಳಿದನು.

ವಿಮರ್ಶೆ

ಸಂಸ್ಕೃತ ಸಾಹಿತ್ಯದಲ್ಲಿ ಬಾಣನಿಗೆ ಮೊದಲಿನ ಯುಗ ಕಾವ್ಯಪ್ರಚುರವಾದ ಯುಗ; ಛಂದೋಬದ್ಧ ಕಾವ್ಯವೇ ಪಾಂಡಿತ್ಯದ ಒರೆಗಲ್ಲು! ಭಾಸ, ಸೌಮಿಲ್ಲ, ಕವಿಪುತ್ರ ಇವರೆಲ್ಲ ಆ ಯುಗಕ್ಕೆ ಸೇರಿದವರು. ಬಾಣನ ಸಮಯಕ್ಕೆ ಬರುವ ವೇಳೆಗೆ ಕಾವ್ಯದ ಪರಿಭಾಷೆಯಲ್ಲಿಯೇ ವ್ಯತ್ಯಾಸವಾಗಿರಬೇಕು. ಅಥವಾ ಮಹಾಕವಿಯ ಕೃತಿಯೊಂದು, ಪರಿಭಾಷೆಯಲ್ಲಿಯ ವ್ಯತ್ಯಾಸಕ್ಕೆ ಕಾರಣವಾಗಿರಬೇಕು! ಅಂದಿನಿಂದ ಅಲಂಕಾರಯುಕ್ತವಾಗಿ ಛಂದೋಬದ್ಧವಾಗಿದ್ದ ಸಾಹಿತ್ಯ ಮಾತ್ರ ಕಾವ್ಯ ಎಂಬ ಕಲ್ಪನೆ ಅಳಿದು ಹೋಗಿ "ವಾಕ್ಯಂ ರಸಾತ್ಮಕಂ ಕಾವ್ಯಂ" (ರಸಪೂರ್ಣವಾದ ವಾಕ್ಯವೇ ಕಾವ್ಯ) ಎಂಬ ರಸ-ಪಕ್ಷದವರ ಪರಿಭಾಷೆ ಬಾಣಕವಿಯ ಗದ್ಯಕ್ಕೆ ಬೆಂಬಲವಾಗಿ ನಿಂತಿದೆ.

ಕೇಳುವವರ ಕಿವಿಗೆ ಇಂಪಾಗುವಂತಹ ಸ್ವರಸಂಯೋಗ, ಅರ್ಥಾಲಂಕಾರ, ಶಬ್ದಾಲಂಕಾರ, ಛಂದಸ್ಸಿನ ನಿಯಮಗಳನ್ನೊಳಗೊಂಡಿರುವದು ಕಾವ್ಯದ ಲಕ್ಷಣ ಎಂದು ನಾವು ಸುಮಾರಾಗಿ ತಿಳಿಯುವದು. 'ಕಾವ್ಯ' ಎನ್ನಿಸಿಕೊಳ್ಳುವದರಲ್ಲಿ ಭಾವನೆಯ ಅಂಶ ಹೆಚ್ಚು; ಗದ್ಯ ಎಂದು ಹೇಳಿಸಿಕೊಳ್ಳುವದರಲ್ಲಿ ವಿಚಾರದ ಅಂಶ ಹೆಚ್ಚು. ಆದರೆ ಬಾಣನ ಗದ್ಯ ಇದಕ್ಕೆ ಅಪವಾದ. ಅಲ್ಲಿ ಪಾಂಡಿತ್ಯವೂ ಇದೆ, ಕವಿಯ ಕಲ್ಪನೆಯೂ ಇದೆ. ಆದರೆ ಛಂದಸ್ಸಿನ ನಿಯಮಗಳನ್ನು ಮಾತ್ರ ಅನುಸರಿಸದೆ, "ಗದ್ಯಂ ಕವೀನಾಂ ನಿಕಷಂ ವದಂತಿ" (ಗದ್ಯವೇ ಕವಿಗಳ ಒರೆಗಲ್ಲು), ಎಂದು ಸಾರಹಚ್ಚಿದ ಮಹಾಕವಿ ಬಾಣ! ಈ ಕವಿಯ ಬಗ್ಗೆ ಆ ಕಾಲದಲ್ಲಿ ಪ್ರಚಲಿತವಿದ್ದ ಒಂದು ಕಥೆ (ಕಥೆ ಕಲ್ಪಿತವಿರಬಹುದು)ಯನ್ನು ನೋಡಿದರೆ, ಬಾಣಕವಿಯ ಅದ್ಭುತ ಪಾಂಡಿತ್ಯದ ಬಗ್ಗೆ, ಜನರಲ್ಲಿದ್ದ ಆದರ ವ್ಯಕ್ತವಾಗುವದು.

ಜಾತಾ ಶಿಖಂಡಿನೀ ಪ್ರಾಕ್ ಯಥಾ ಶಿಖಂಡೀ ತಥಾವಗಚ್ಛಾಮಿ।
ಪ್ರಾಗಲ್ಭ್ಯಮಧಿಕಮಾಪ್ತುಂ ವಾಣೀ ಬಾಣೋ ಬಭೂವೇತಿ॥

(ಪೂರ್ವದಲ್ಲಿ ಶಿಖಂಡಿಯು ಶಿಖಂಡಿನಿಯಾದಂತೆಯೇ ವಾಣಿಯು ಹೆಚ್ಚಿನ ಪಾಂಡಿತ್ಯವನ್ನು ಪಡೆಯಲು, ಬಾಣಕವಿಯಾದಳೆಂದು ತಿಳಿಯುತ್ತೇನೆ.)

ಕನ್ನಡ ಸಾಹಿತ್ಯದ ಪ್ರಾಚೀನತೆ

ಒಂಬತ್ತನೆ ಶತಮಾನದಲ್ಲಿ, ರಾಷ್ಟ್ರಕೂಟರ ಆಶ್ರಯದಲ್ಲಿ 'ಕವಿರಾಜಮಾರ್ಗ'ವೆಂಬ ಲಕ್ಷಣಗ್ರಂಥವೇ ಕನ್ನಡಸಾಹಿತ್ಯದಲ್ಲಿ ನಮಗೆ ಇದುವರೆಗೆ ಉಪಲಬ್ಧವಿರುವ ಮೊದಲನೆಯ ಗ್ರಂಥ; ಆದರೆ ವ್ಯಕ್ತವಾದ ಪುಷ್ಟ ಸಾಹಿತ್ಯವಿಲ್ಲದೆ, ಲಕ್ಷಣಗ್ರಂಥದ ರಚನೆಯಾಗಲಾರದೆಂಬುದೂ ಅಷ್ಟೇ ಸತ್ಯ. ಮೊದಲು ಉದಾಹರಣೆ, ಆಮೇಲೆ ನಿಯಮ! ಹೀಗಿದ್ದೂ, ಇದಕ್ಕೆ ಮೊದಲಿನ ಸಾಹಿತ್ಯ ಗ್ರಂಥ ದೊರೆಯದಿರುವದು ಶೋಚನೀಯ; ೭ನೆಯ ಶತಮಾನದ ಬಾದಾಮಿಯ ಶಾಸನದಲ್ಲಿ ಕನ್ನಡದ ಜನಪದ ಛಂದಸ್ಸಿನ ತ್ರಿಪದಿಯನ್ನು ನಾವು ಕಾಣುತ್ತೇವೆ. ಇದಕ್ಕೂ ಹಿಂದೆ ಹೋದರೂ ಶಿಲಾಲೇಖದ ಹೊರತು ನಮಗೆ ಬೇರೇನೂ ಇದುವರೆಗೆ ದೊರೆತಿಲ್ಲ. ಅಂತೂ ಕನ್ನಡದಲ್ಲಿ ಗ್ರಂಥರಚನೆಯಾಗುವ ಹೊತ್ತಿಗೆ

ಸಂಸ್ಕೃತದ ಪ್ರಾಬಲ್ಯ ಪ್ರಭಾವಗಳು ಭರತಖಂಡದಲ್ಲಿ ತಾವೇ ತಾವಾಗಿ ಹಬ್ಬಿದವು. ಆದರ ಪ್ರಭಾವದಿಂದಲೋ ಏನೋ - ಭರತಖಂಡದ ಎಲ್ಲ ಭಾಷೆಗಳಿಗೂ - ಹಾಗೇ ಕನ್ನಡಕ್ಕೂ - ಸಂಸ್ಕೃತವೇ ಮೂಲವೆಂಬ ಅನುಮಾನ ಇತ್ತೀಚೆಗೂ ಬಂದದ್ದು. ಸಂಸ್ಕೃತ, ಕನ್ನಡ ಭಾಷೆಯ ಹೆತ್ತತಾಯಿಯಾಗದೆ ಹೋದರೂ ಸಾಕುತಾಯಿ ಮಾತ್ರ ನಿಶ್ಚಿತ. ಸಂಸ್ಕೃತದ ಕೋಶದಿಂದ ಅಸಂಖ್ಯ ಶಬ್ದಗಳನ್ನು ಬಳಸಿಕೊಂಡು ಕನ್ನಡದ ಕೋಶ ಪುಷ್ಟವಾಗಿದೆ.

ಕನ್ನಡಸಾಹಿತ್ಯದ ಮೇಲೆ ಸಂಸ್ಕೃತಸಾಹಿತ್ಯದ ಪ್ರಭಾವ

ಸಂಸ್ಕೃತ ಸಾಹಿತ್ಯ, ಕಾವ್ಯದ ಸೀಮೆಯನ್ನು ದಾಟಿ ಪ್ರೌಢ ಗದ್ಯ ಪ್ರಬಂಧಗಳಲ್ಲಿ ಕಾಲಿಕ್ಕಿದಾಗ, ಕನ್ನಡದಲ್ಲಿ ಗ್ರಂಥರಚನೆ ಪ್ರಾರಂಭವಾಯಿತು, ಕನ್ನಡದ ಕವಿಗಳು, ಲೇಖಕರು, ಸಂಸ್ಕೃತದ ವಿಷಯವನ್ನೂ, ಮಾರ್ಗವನ್ನೂ ಅನುಕರಿಸಿದರು. ಮಹಾಭಾರತದ ಮಹಾವೃಕ್ಷದಲ್ಲಿ ಅನೇಕ ಪಕ್ಷಿಗಳು ಗೂಡುಗಟ್ಟಿ ಇದ್ದಂತೆ, ಅಪಾರವಾದ ಸಂಸ್ಕೃತ ಸಾಹಿತ್ಯದಲ್ಲಿ, ಕನ್ನಡದ ಪಕ್ಷಿಗಳೂ ಗೂಡು ಕಟ್ಟಿದವು. ಕವಿಗಳು ಕಾವ್ಯಕ್ಕೆ ವಸ್ತುವನ್ನು ಆಯ್ದುಕೊಂಡರು; ಕೆಲವರು ಸಂಸ್ಕೃತ, ಪ್ರಾಕೃತ ಗ್ರಂಥಗಳನ್ನು ಕನ್ನಡಕ್ಕೆ ಪರಿವರ್ತಿಸಿದರು. ಸಂಸ್ಕೃತ ಸಾಹಿತ್ಯದ ಅನುಕರಣ ಕನ್ನಡದಲ್ಲಿ ಹೆಮ್ಮೆಯ ವಿಷಯವಾಯಿತು.

ಭಾಸ, ಕಾಲಿದಾಸರ ಪ್ರಸಾದಯುಕ್ತ ಕೃತಿಗಳನ್ನು ಸಂಸ್ಕೃತಸಾಹಿತ್ಯ ನಮಗೆ ಕೊಟ್ಟಿದ್ದರೂ, ಕನ್ನಡದಲ್ಲಿ ಗ್ರಂಥರಚನೆಯಾಗುವ ಕಾಲಕ್ಕೆ ಇವರ ಯುಗ ಹಿಂದೆಬಿದ್ದು ಬಾಣ, ಮಾಘರ ಕಾಲ ಸನ್ನಿಹಿತವಾಗಿತ್ತು, ಧರ್ಮ, ನೀತಿ, ರಸಾಭಿವ್ಯಕ್ತಿಗಳಿಗೆ ಕಾವ್ಯದಲ್ಲಿ ಸ್ಥಳ ಕಡಿಮೆಯಾಗಿ, ಶಬ್ದಾಲಂಕಾರ, ಅರ್ಥಾಲಂಕಾರಗಳು ಆ ಸ್ಥಾನವನ್ನು ಆಕ್ರಮಿಸಿದ್ದವು. 'ಚಂಪೂ' ಕಾವ್ಯದ ಶೈಲಿ, ದ್ರಾವಿಡರು ಸಂಸ್ಕೃತಕ್ಕಿತ್ತ ಕಾಣ್ಕೆಯೆಂದು ಪ್ರತಿಪಾದಿಸಬಹುದಾದರೂ, ಕನ್ನಡದ ಕವಿಗಳ ಚಂಪೂಕೃತಿಗಳನ್ನು ತೆರೆದೋದಿದರೆ, ಸಂಸ್ಕೃತದ ಅಭಿರುಚಿಯ ಪ್ರಭಾವ— ಔಚಿತ್ಯವರಿಯದ ವರ್ಣನೆ, ಕವಿಸಮಯ, ಅಲಂಕಾರಗಳು — ಸ್ಪಷ್ಟವಾಗಿ ಕಂಡುಬರುವವು. ಚಂಪುವಿನ ಗದ್ಯ ಶೈಲಿಗೆ ಬಾಣನೇ ಮುಖ್ಯ ಕಾರಣ. ಬಳಿಕ ಬಾಣನ 'ಕಾದಂಬರಿ' ಕನ್ನಡಕ್ಕೆ ಪರಿವರ್ತಿತವಾಗುವಲ್ಲಿ ಹೆಮ್ಮೆ ಇರದೇನು!

ಬಾಣಕವಿಯ ಪರಿಚಯ

ಉತ್ತರ ಭಾರತವನ್ನು ಏಕಛತ್ರಾಧಿಪತ್ಯದಿಂದ ಆಳುತ್ತಲಿದ್ದ ಶ್ರೀಹರ್ಷ ಚಕ್ರವರ್ತಿಯ ಆಸ್ಥಾನಕವಿ ಬಾಣ; ಶ್ರೀಹರ್ಷನ ಕಾಲ ಕ್ರಿ. ಶ. ೬೦೬ರಿಂದ ೬೪೬. ಉತ್ತರದಲ್ಲಿ ಶ್ರೀಹರ್ಷನ ಆಧಿಪತ್ಯವಾದರೆ ದಕ್ಷಿಣದಲ್ಲಿ ಪುಲಿಕೇಶಿಯ ಆಧಿಪತ್ಯ. ದಕ್ಷಿಣಕ್ಕೆ ಬಂದಾಗ ಪರಾಕ್ರಮಶಾಲಿಯಾದ ಶ್ರೀಹರ್ಷನನ್ನು ವಿಗಲಿತಹರ್ಷನನ್ನಾಗಿ ಮಾಡಿದ ಶ್ರೇಯಸ್ಸು ಈ ಪುಲಿಕೇಶಿಯದು! ಉತ್ತರದ ಸಮ್ರಾಟ್ ಶ್ರೀಹರ್ಷನು ಕಲಿಯೂ ಅಹುದು, ಕವಿಯೂ ಅಹುದು. ರತ್ನಾವಲಿ ('ಮಿತ್ರವಿಂದಾ ಗೋವಿಂದ' ಎಂಬ ಹೆಸರಿನಿಂದ ಕನ್ನಡದಲ್ಲಿ ಪ್ರಕಟವಾದ ಮೊದಲ ನಾಟಕ). ಪ್ರಿಯದರ್ಶಿಕಾ, ನಾಗಾನಂದಗಳು, ಶ್ರೀಹರ್ಷನಿಂದ ರಚಿತವಾದವುಗಳೇ

ಎಂದು ನಿರ್ಣಿತವಾಗಿದೆ. ಇಂತಹ ಕವಿ ಹೃದಯದ ಸಮ್ರಾಟನು ಬಾಣಕವಿಗೆ ಆಶ್ರಯವನ್ನಿತ್ತು ಪೋಷಿಸಿದುದು ಸಹಜವೇ. ಬಾಣಕವಿಯು ಅನೇಕ ಕೃತಿಗಳನ್ನು ರಚಿಸಿದ್ದರೂ, ಹೆಸರುವಾಸಿಯಾದುದು 'ಕಾದಂಬರಿ', 'ಹರ್ಷಚರಿತ'ಗಳೆರಡರಿಂದಲೇ. (ಪಾರ್ವತೀ ಪರಿಣಯವೆಂಬ ನಾಟಕವೂ ಬಾಣಕವಿಯಿಂದಲೇ ರಚಿತವಾದುದೆಂಬ ಪ್ರತೀತಿಯಿದೆ.) ಕವಿಯು ತನ್ನ ವಿಚಾರವಾಗಿ 'ಕಾದಂಬರಿ' ಯಲ್ಲಿ ಸಂಗ್ರಹವಾಗಿಯೂ, 'ಹರ್ಷಚರಿತ' ದಲ್ಲಿ ವಿಸ್ತಾರವಾಗಿಯೂ ಹೇಳಿಕೊಂಡಿದ್ದಾನೆ. ಬಾಣನ ಆತ್ಮಕಥೆ ಸಾಮಾನ್ಯ ವ್ಯಕ್ತಿಯ ಕಥೆಯಲ್ಲ. ಕಾದಂಬರಿ, ಹರ್ಷ ಚರಿತಗಳಲ್ಲಿ ರೂಪುಗೊಂಡಿರುವ ಬಾಣನ ಕಥನಕೌಶಲ್ಯಕ್ಕೆ, ವಿವಿಧ ವರ್ಣನೆಗಳಿಗೆ, ಬಾಣನ ಆತ್ಮಕಥೆಯೂ ಪೋಷಕವಾಗಿದೆ ಎಂಬ ಮಾತು ಸತ್ಯವೇ. ಬಾಣನ ಜನ್ಮ, ಹೆಸರು ಪಡೆದ ಒಂದು ಬ್ರಾಹ್ಮಣಮನೆತನದಲ್ಲಾಯಿತು. ತಂದೆಯ ಹೆಸರು ಚಿತ್ರಭಾನು. ತಾಯಿಯ ಹೆಸರು ರಾಜದೇವಿ. ಬಾಣನು ಹುಟ್ಟಿದ ಸ್ವಲ್ಪ ಸಮಯದಲ್ಲೇ ತಾಯಿ ತೀರಿಹೋದಳು. ತಂದೆಯೇ ಮಗುವನ್ನು ಪ್ರೀತಿಯಿಂದ ಬೆಳೆಸಿ ವಿದ್ಯೆ ಕಲಿಸಿದನು. ಆದರೆ ತಂದೆಯ ವಾತ್ಸಲ್ಯವೂ ಬಾಣನಿಗೆ ಬಹುಕಾಲ ದೊರೆಯಲಿಲ್ಲ. ಬಾಣನು ಹದಿನಾಲ್ಕು ವರುಷದವನಿರುವಾಗಲೇ ತಂದೆಯೂ ಇಲ್ಲವಾದನು. 'ಕಾದಂಬರಿ' ಯಲ್ಲಿ ಬರುವ ಗಿಳಿಮರಿ ಇಂತಹ ಪ್ರಸಂಗಗಳನ್ನೇ ಎದುರಿಸಬೇಕಾಗಿರುತ್ತದೆ. ಅದರ ದುಃಖವನ್ನು ಮರ್ಮಭೇದಕವಾಗಿ, ಕೇಳುಗರ ಕಣ್ಣಲ್ಲಿ ನೀರೂರುವಂತೆ ಚಿತ್ರಿಸಿದ್ದಾನೆ ಕವಿ! ಹೀಗೆ ಅನಾಥನಾದ ಕವಿ ಏನೂ ಮಾಡಲು ತೋಚದೆ ಕೆಲವು ಕಾಲ ಮನೆಯಲ್ಲಿದ್ದನು. ಆದರೆ ಅವನ ಶಕ್ತಿ, ಪ್ರತಿಭೆ, ಯೌವನಾರಂಭದ ಹುರುಪು, ಅವನನ್ನು ಬಹುಕಾಲ ಒಳಗಿಡಬಲ್ಲವೇ? ಯೌವನೋಚಿತ ಚಾಪಲ್ಯಗಳಿಗೆ ಈಡಾಗಿ, ಬಾಣ ಹೊರಹೊರಟನು. ಜೊತೆಗೆ ತಂದೆಯ ಆಸ್ತಿ ಅವನಿಗೆ ಸಾಕಷ್ಟಿತ್ತು. ಬಾಣನನ್ನೂ ಅವನ ಆಸ್ತಿಯನ್ನೂ ಮೆಚ್ಚಿದ ಗೆಳೆಯರ ತಂಡ ದೊಡ್ಡದಿತ್ತು. ಕವಿಗಳು, ವೈದ್ಯರು, ಪಂಡಿತರು, ಚಿತ್ರಕಾರರು, ನರ್ತಕಿಯರು, ಭಿಕ್ಷುಗಳು, ಸನ್ಯಾಸಿಗಳು ಎಲ್ಲರೂ ಅದರಲ್ಲಿ ಸೇರಿದ್ದರು. ಬಾಣ ಬುದ್ಧಿಶಾಲಿ, ಪಂಡಿತ; ವೇದೋಪನಿಷತ್ತುಗಳನ್ನು ಆಗಲೇ ಓದಿ ತಿಳಿದಿದ್ದನು. ತನ್ನ ಸಂಗಡಿಗರ ಜೊತೆಯಲ್ಲಿ ಬಾಣ, ರಾಜಾಸ್ಥಾನಗಳನ್ನೂ ಗುರುಕುಲಗಳನ್ನೂ ಸಂದರ್ಶಿಸುತ್ತ, ವಿದ್ವಜ್ಜನರ ಚರ್ಚೆಯಲ್ಲಿ ಭಾಗವಹಿಸುತ್ತ, ದೇಶಪರ್ಯಟನವನ್ನು ಪ್ರಾರಂಭಿಸಿದನು. ಕೆಲಕಾಲದ ಮೇಲೆ ಬಾಣನ ಕೀರ್ತಿ ಶ್ರೀಹರ್ಷನ ಕಿವಿಯವರೆಗೂ ಹೋಯಿತು. ಶ್ರೀಹರ್ಷನ ಆಸ್ಥಾನದಲ್ಲಿದ್ದ ಕೆಲವರು ಅಸೂಯೆಯಿಂದ ಬಾಣನ ಸ್ವತಂತ್ರ ವೃತ್ತಿಯನ್ನು ಆಡಿಕೊಂಡರು ಕೂಡ. ಆದರೆ ಶ್ರೀಹರ್ಷನ ತಮ್ಮ ಕೃಷ್ಣ, ಗುಣಗ್ರಾಹಿ. ಬಾಣನ ಪಾಂಡಿತ್ಯದ ವಿಚಾರವಾಗಿ ಅಣ್ಣನಿಗೆ ಹೇಳಿ, ಅವನನ್ನು ಆಸ್ಥಾನಕ್ಕೆ ಕರೆಸಿಕೊಂಡನು. ಕೃಷ್ಣನ ದೂತರು ಬಾಣನ ಬಳಿಗೆ ರಾಜನ ಕರೆಸಹಿತ ಬಂದದ್ದು. ಅವನೊಡನೆ ತಾನು ಮಾಡಿದ ಸಂಭಾಷಣೆ, ಶ್ರೀಹರ್ಷನ ಆಸ್ಥಾನಕ್ಕೆ ಹೊರಟಾಗಿನ ಪ್ರಯಾಣ, ರಾಜನ ದರ್ಶನ, ಸಂಭಾಷಣೆ, ಇವುಗಳನ್ನೆಲ್ಲ ಕುರಿತು ಕವಿ ವಿಸ್ತಾರವಾಗಿ ಹೇಳಿದ್ದಾನೆ. ಇವುಗಳ ಛಾಯೆಯೇ ಶೂದ್ರಕರಾಜನ ದರ್ಶನ, ವರ್ಣನೆಗಳಲ್ಲಿ, 'ಕಾದಂಬರಿ' ಯಲ್ಲಿ ಕಂಡುಬರುವದು. ಶ್ರೀಹರ್ಷನು ಬಾಣನ ನಡತೆಯನ್ನೂ, ವಿದ್ವತ್ತೆಯನ್ನೂ ಕಂಡು ಸಂತೋಷಪಟ್ಟು, ಅವನನ್ನು ಆಸ್ಥಾನಕವಿಯನ್ನಾಗಿ ಮಾಡಿದನು. ಶ್ರೀಹರ್ಷ-ಬಾಣರಲ್ಲಿ ಸ್ನೇಹ ಅಷ್ಟೊಂದು ಅಗಾಧವಾಗಿ

ಬೆಳೆದದ್ದರ ಕುರುಹಾಗಿಯೋ ಏನೋ, ಕೊನೆಗೆ ಬಾಣಕವಿಯು ಶ್ರೀಹರ್ಷನ ಹೆಸರಿನಲ್ಲಿ ನಾಟಕಗಳನ್ನು ಬರೆದನೆಂಬ ಮಾತೂ ಪ್ರಚಲಿತವಾಯಿತು!

ಬಾಣಕವಿಯ ಶೈಲಿ

ಬಾಣಕವಿಯ ಶೈಲಿ ಅವನದೇ ಎಂಬ ಮಾತಿನ ಬಗ್ಗೆ ಭಿನ್ನಾಭಿಪ್ರಾಯವೆಲ್ಲಿಯೂ ಇದ್ದಂತೆ ಕಂಡುಬರುವದಿಲ್ಲ. ಶೈಲಿ ಅನುಕರಣೆಗೆ ಅಸಾಧ್ಯ (ಅನುಕರಣಯೋಗ್ಯವೋ ಎಂಬ ಮಾತು ಬೇರೆ) " ಪುರಾ ಕವೀನಾಂ ಗಣನಾ ಪ್ರಸಂಗೇ ಕನಿಷ್ಠಿಕಾಧಿಷ್ಠಿತ ಕಾಲಿದಾಸಾ, ಅದ್ಯಾಪಿ ತತ್ತುಲ್ಯ ಕವೇರ ಭಾವಾದನಾಮಿಕಾ ಸಾರ್ಥವತೀ ಬಭೂವ" — ಎಂಬ ಮಾತು ಗದ್ಯ ಲೇಖಕರ ವಿಷಯದಲ್ಲಿ, ಬಾಣನಿಗೇ ಅನ್ವಯಿಸುವುದು. ಬಾಣಕವಿಯ ವರ್ಣನೆಯ ಓಘ ಮಹಾಪ್ರವಾಹದಂತೆ ಧುಮ್ಮಿಕ್ಕುವದು. 'ಕಾದಂಬರಿ'ಯ ನಾಲ್ಕು ಪುಟಗಳನ್ನು ಒಂದೇ ಬಾರಿಗೆ ಓದಿ ಅರಗಿಸಿಕೊಳ್ಳಬಹುದಾದರೆ, ನಮ್ಮ ಪಾಂಡಿತ್ಯವನ್ನು ನಾವೇ ಹೊಗಳಿಕೊಳ್ಳಬಹುದು! ಅದರಲ್ಲಿ ಬರುವ ಅಲಂಕಾರಗಳು, ಪದವಿನ್ಯಾಸವೈಖರಿ, ಓದುಗರ ಮನವನ್ನು ಸೆಳೆಯುವವು. ರಮ್ಯವಾದ, ರಸ ಹೊರಸೂಸುವ ಅರ್ಥಾಲಂಕಾರಗಳೇನೋ ಸರಿಯೇ. ಆದರೆ ಜೊತೆಗೆ ಶಬ್ದಾಲಂಕಾರಗಳನ್ನೂ ನಿರ್ಮಿಸಲು, ಅರ್ಥವನ್ನು ಎಷ್ಟೋ ಸಂದರ್ಭಗಳಲ್ಲಿ ಎಳೆದು ತರಬೇಕಾದ ಪ್ರಸಂಗವೂ ಬರುವದು, ಎಂದು ವಿಧಿಯಿಲ್ಲದೆ ಹೇಳಬೇಕಾಗುವದು. ಮಾನವನ ಹೃದಯದ ಆಳವನ್ನು ಹೊಕ್ಕು, ಸೂಕ್ಷ್ಮ ಭಾವನೆಗಳ ತೆರೆಗಳನ್ನು ಅರಿತುಕೊಂಡು ವರ್ಣಿಸುವಲ್ಲಿ ಬಾಣಕವಿ ನಿಸ್ಸೀಮ; ಪ್ರಕೃತಿಸೌಂದರ್ಯದ ಅಣುಗಳನ್ನೂ ಬಾಣ ಸಹೃದಯನ ಕಣ್ಣಿನಿಂದ ನಿರೀಕ್ಷಿಸಿದ್ದಾನೆ. ವರ್ಣನೆ ಮಾಡಬಹುದಾದ ಯಾವುದೇ ಪ್ರಸಂಗವನ್ನು ವ್ಯರ್ಥವಾಗಿ ಹೋಗಗೊಡುವದು ಬಾಣನ ಸ್ವಭಾವದಲ್ಲಿಯೇ ಇಲ್ಲ. "ಬಾಣೋಚ್ಛಿಷ್ಟಂ ಜಗತ್ಸರ್ವಂ," ಎಂಬ ಮಾತು ಅತಿಶಯೋಕ್ತಿಯಾಗಿ ಕಂಡರೂ, ಕೆಲಮಟ್ಟಿಗೆ ಸತ್ಯವಿದೆ.

ಬಾಣನು ನಿಸರ್ಗದತ್ತ ಪ್ರತಿಭೆಯಿಂದ ಕೂಡಿದ ಕವಿಯೂ ಅಹುದು. ಸಾಹಿತ್ಯವನ್ನು ಆಳವಾಗಿ ಅಭ್ಯಾಸಮಾಡಿ ಬುದ್ಧಿ ಚಮತ್ಕಾರವನ್ನು ತೋರಿಸಬಲ್ಲ ಪಂಡಿತನೂ ಅಹುದು; ಬುದ್ಧಿ, ಭಾವನೆಗಳೆರಡೂ ಇಷ್ಟೊಂದು ಉಚ್ಚ ಮಟ್ಟದಲ್ಲಿ ಸರಿದೊರೆಯಾಗಿ ಕೂಡಿದುದು ಇನ್ನೆಲ್ಲಿಯೂ ಕಂಡುಬರದು. ಬಾಣನ ಕವಿಹೃದಯ ಯಾವದೊಂದು ರಸಪ್ರತಿಪಾದನೆಗೆ ಹೊರಟರೆ, ಅವನ ಪಾಂಡಿತ್ಯ ಅಲ್ಲಿಯೇ ತಡೆದು ನಿಲ್ಲಿಸಿ ಮೇರೆಮೀರಿದ ವರ್ಣನೆಯ ಸೆಳವಿಗೆ ನೂಕಿಬಿಡುತ್ತದೆ.

ಬಾಣಕವಿ ಹುಟ್ಟು ಕಥೆಗಾರ. ಕಥೆಯನ್ನು ಸ್ವಾರಸ್ಯವಾಗಿ ಬಣ್ಣಿಸುವ ಶಕ್ತಿ ಅವನಲ್ಲಿ ಧಾರಾಳವಾಗಿದೆ. ಆದರೆ ವರ್ಣನೆ ಮಧ್ಯೆ ಬಂದರೆ, ಕಥೆ ಹಿಂದೆ ಬಿದ್ದು ಓದುಗರ ಕುತೂಹಲವು ಸಪ್ಪೆಯಾಗಿ ಬಿಡುತ್ತದೆ. ವರ್ಣನೆ ಮಾಡುತ್ತಾ ಮಾಡುತ್ತಾ ಕವಿ ಎಲ್ಲಿಗೋ ಹೊರಟುಹೋಗಿ ಕೀರ್ತನಕಾರರಂತೆ ಮತ್ತೆ 'ಪ್ರಸ್ತುತ ವಿಷಯ,' ಎಂದು ಹಿಂದಿನ ಕಥೆಗೆ ಬರುತ್ತಾನೆ. ಆದರೆ ವರ್ಣನೆಯ ವಿಷಯ ಮಾತ್ರ ಕಣ್ಣೆದುರು ಕಟ್ಟಿದಂತೆ ಸ್ಪಷ್ಟವಾಗಿರುತ್ತದೆ.

ಶಬ್ದಾರ್ಥಾಲಂಕಾರಗಳು, ವಿರೋಧಾಭಾಸಗಳು, ಇಂತಹ ವರ್ಣನೆಯ ಪ್ರಸಂಗದಲ್ಲಿ ಅಸಂಖ್ಯವಾಗಿ ಬಂದು ಒಂದೊಂದು ಸಲ ವರ್ಣ್ಯವಿಷಯದ ಸ್ಪಷ್ಟ ಚಿತ್ರಣದಲ್ಲಿಯೂ ವ್ಯತ್ಯಯವುಂಟಾಗುವ ಸಂಭವವಿರುತ್ತದೆ. ಶಾಲ್ಮಲೀವೃಕ್ಷವನ್ನು ವರ್ಣಿಸಹೊರಟ ಕವಿ, ಹೇಗೆ ಹೇಗೋ ರಾಮಾಯಣವನ್ನೂ ಮಹಾಭಾರತವನ್ನೂ ಎಳೆದು ತಂದುಬಿಡುತ್ತಾನೆ. ಎಷ್ಟೋ ಸಲ ಬೀಭತ್ಸವಾದ ಉಪಮೆಗಳೂ ಬಂದು ಸೇರಿ, ಓದುಗರಲ್ಲಿ ಜುಗುಪ್ಸೆಯುಂಟಾಗುತ್ತದೆ. "ದುರ್ಯೋಧನ ಇವೋಪಲಕ್ಷಿತ ಶಕುನಿಪಕ್ಷಪಾತಃ, " ಎಂದು ಜೀರ್ಣ ಶಾಲ್ಮಲೀ ವೃಕ್ಷವನ್ನು ವರ್ಣಿಸಿದರೆ, ಅರಣ್ಯವನ್ನು ವರ್ಣಿಸಹೊರಟ ಕವಿ, 'ಪ್ರೇತಾಧಿಪನಗರೀವ ಸದಾ ಸನ್ನಿಹಿತಮೃತ್ಯುಭೀಷಣಾ,' ಎಂದು ಜಿಗುಪ್ಸೆಯುಂಟಾಗುವಂತೆ ವರ್ಣಿಸಿಬಿಡುತ್ತಾನೆ. ಕವಿಯ ಈ ವರ್ಣನಾಪ್ರಿಯತೆ ಕಥಾರಚನೆಯಲ್ಲಿಯೂ, ಸಹೃದಯರ ಪೂರ್ಣ ರಸಾಸ್ವಾದದಲ್ಲಿಯೂ, ಆತಂಕವನ್ನು ತಂದೊಡ್ಡುತ್ತದೆ. ಅರ್ಥಾಲಂಕಾರ, ಶಬ್ದಾಲಂಕಾರಗಳು, ಉಪಮೆ ಉತ್ಪ್ರೇಕ್ಷೆಗಳು ಕಾವ್ಯದಲ್ಲಿ ಬರಬಹುದು. ಆದರೆ ಇವು ರಸಭಾವಕ್ಕೆ ತಡೆಯನ್ನೊಡ್ಡಕೂಡದು. ಉಚಿತವಾದ ರಸಕ್ಕೆ ಇವು ಪೋಷಕವಾಗಿರಬೇಕು. ಅದೂ ಯೋಗ್ಯ ಪ್ರಮಾಣದಲ್ಲಿ ಇವುಗಳನ್ನು ಬೆರಸಿದರೆ, ಕಾವ್ಯ ಸಾಲಂಕೃತವಾಗಿ, ಕಳೆಗಟ್ಟಿ ಹೊರಸೂಸುತ್ತದೆ. 'ಪಂಡಿತ ಕವಿ' ಎಂದು ಬಾಣನಿಗೆ ಮರ್ಯಾದೆಯನ್ನು ಸಲ್ಲಿಸಬಹುದಾದರೂ, ಕವಿಯ ಈ ದೋಷವನ್ನು ಮಾತ್ರ ಒಪ್ಪಲೇಬೇಕು. ಬಾಣಕವಿ, ಎಷ್ಟೇ ಪಾಂಡಿತ್ಯವಿದ್ದರೂ, ಇಪ್ಪತ್ತನೆಯ ಶತಮಾನದಲ್ಲಿದ್ದರೆ ನಿಶ್ಚಯವಾಗಿಯೂ, ಹೀಗೆ ಬರೆಯುತ್ತಿರಲಿಲ್ಲ. ಅದು ಆ ಕಾಲದ ಸಾಹಿತ್ಯಾಭಿರುಚಿ; ಅಭಿರುಚಿಗೆ ತಕ್ಕ ಗ್ರಂಥವನ್ನು ರಚಿಸಿದೆನೆಂದು ಕವಿಯ ಹೆಮ್ಮೆ! ಪಾಶ್ಚಾತ್ಯ ವಿದ್ವಾಂಸರೊಬ್ಬರು ಬಾಣಕವಿಯ ಶೈಲಿಯನ್ನು ದಟ್ಟವಾದ ಅಡವಿಗೆ ಹೋಲಿಸಿ ಬರೆದಿದ್ದಾರೆ: "Bana's prose is an Indian wood, where progress is impossible through the undergrowth until the traveller cuts out a path for himself and where even then he is confronted by malicious wild beasts in the shape of unknown words to terrify him." 'ಕಾದಂಬರಿ' ಯಲ್ಲಿ ಒಂದೊಂದು ವಾಕ್ಯ ದೀರ್ಘ ಸಮಾಸಗಳಿಂದ ಸಹಿತವಾಗಿ ಮೂರುನಾಲ್ಕು ಪುಟದುದ್ದಕ್ಕೂ ಓಡುತ್ತದೆ. 'ಸಮಾಸ' ದ ಉದ್ದೇಶ ಬಹಳ ಅರ್ಥವನ್ನು ಸ್ವಲ್ಪದರಲ್ಲಿ ವ್ಯಕ್ತಮಾಡುವದು. ಇಂತಹ ದೀರ್ಘ ಸಮಾಸಗಳನ್ನೇ ಬಾಣಕವಿ ಅಸಂಖ್ಯವಾಗಿ ಉಪಯೋಗಿಸಿದ್ದಾನೆ!

'ಕಾದಂಬರೀ' ಕಥೆಯ ಮೂಲ

ಈ ಕಥೆಯ ಮೂಲ, ಇಲ್ಲಿಯವರೆಗಿನ ವಿಚಾರದಿಂದ ತಿಳಿದುಬಂದಂತೆ, ಗುಣಾಢ್ಯನ "ಬೃಹತ್ಕಥೆ" ಯಲ್ಲಿದೆ. ಭಾರತ-ರಾಮಾಯಣಗಳಿಂದ, ಸಂಸ್ಕೃತ, ಕನ್ನಡ ಕವಿಗಳು ತಮ್ಮ ಕೃತಿಗಳಿಗೆ ವಸ್ತುಗಳನ್ನು ಆಯ್ದುಕೊಂಡಂತೆ, ಈ ಬೃಹತ್ಕಥೆಯಿಂದಲೂ ಆಯ್ದುಕೊಂಡಿದ್ದಾರೆ. ರಾಮಾಯಣ, ಭಾರತಗಳು ಸಂಸ್ಕೃತದಲ್ಲಿವೆ, ಪರಿಷ್ಕೃತವಾಗಿ ಬೆಳಕಿಗೆ ಬಂದಿವೆ. ಇವುಗಳಲ್ಲಿ ಬರುವ ಮೂಲಕಥೆಗೂ, ಈ ಕಥೆಯ ಆಧಾರದಿಂದ

ರಚಿತವಾದ ನವೀನಕೃತಿಗೂ ಹೋಲಿಸಿ ತುಲನಾತ್ಮಕವಾಗಿ ಅಭ್ಯಾಸ ಮಾಡಬಹುದು. ಆದರೆ ಬೃಹತ್‌ಕಥೆಯ ವಿಷಯ ಹಾಗಲ್ಲ. ಅದು ಪೈಶಾಚೀಭಾಷೆಯಲ್ಲಿದೆ. (ಪಿಶಾಚಿಗಳು ಅಂದರೆ ಕಾಡುಜನರು ಎಂದರ್ಥವಿರಬೇಕು. ಆದರೆ ಇಂದು ಅದರ ಅರ್ಥ ಆಮೂಲಾಗ್ರ ಬದಲಾಗಿದೆ.) ಮತ್ತೆ ಆ ಗ್ರಂಥ ಈಗ ದೊರೆಯುವಂತಿಲ್ಲ. ಆದರೆ ಇದೇ ಗ್ರಂಥವನ್ನೇ ಪರಿಷ್ಕರಿಸಿ, ಸಂಸ್ಕೃತದಲ್ಲಿ ಸೋಮದೇವ 'ಕಥಾ ಸರಿತ್ ಸಾಗರ' ಎಂಬ ಗ್ರಂಥವನ್ನು ರಚಿಸಿದ್ದಾನೆ. ಇದರಲ್ಲಿ ಬರುವ 'ಕಾದಂಬರೀ' ಕಥೆಯ ಆಧಾರದಿಂದ ಮೂಲಕಥೆ ಹೇಗಿದ್ದಿರಬೇಕೆಂದು ಊಹಿಸಬಹುದು. 'ಕಥಾ ಸರಿತ್ ಸಾಗರ' ದ ಮಕರಂದಿ ಕೋಪಾಖ್ಯಾನದಲ್ಲಿ (ಲಂಬಕ ೧೦-ತರಂಗ ೩) ಕಾದಂಬರೀಕಥೆಯ ರಚನಾಶೈಲಿಗೂ ಇದಕ್ಕೂ ಮಹದಂತರ! ಬಾಣನ ಕೃತಿ ಅನುಚರರಿಂದೊಡಗೂಡಿ ಆತಪತ್ರ ಸಹಿತನಾಗಿ ಹೊರಟ ಸಮ್ರಾಟನಂತಿದ್ದರೆ, ಮೂಲ ಕಥೆಯೊಂದು ಆಶ್ರಮವಾಸಿಯಂತೆ!

ಕಾದಂಬರಿ ಒಂದು ಕಥಾಕಾವ್ಯ; ಆದರೆ ಈ ಕಾವ್ಯದ ವಸ್ತು ಸರಳವಾಗಿಲ್ಲ; ಅನೇಕ ತೊಡಕುಗಳಿವೆ. ಸಾಮಾನ್ಯ ಓದುಗನು ಕಥೆಯ ಸೂತ್ರವನ್ನು ಗುರುತಿಸದೆ ತೊಳಲಾಡುವದು ನಿಶ್ಚಿತ. 'ಹುತ್ತದಲ್ಲಿ ಹುತ್ತ' ಎಂದು ಹೇಳುವಂತೆ ಕಥೆಯಲ್ಲಿ ಕಥೆಯಿದೆ ಇದರಲ್ಲಿ. ಕಥೆ, ವ್ಯಕ್ತಿಯ ಜೀವನದ ಒಂದು ಘಟನೆಯಾಗಿದ್ದರೆ, ಒಂದೇ ವ್ಯಕ್ತಿಯ ಜೀವನ ಕಥೆಯಾಗಿದ್ದರೆ, ಅದೂ ಹೋಗಲಿ, ಕೊನೆಗೆ ವ್ಯಕ್ತಿಯ ಒಂದೇ ಜನ್ಮದ ಕಥೆಯಾಗಿದ್ದರಾದರೂ ಸರಳವಾಗಬಹುದಾಗಿತ್ತೇನೊ! ಆದರೆ ಕಥೆ ಜನ್ಮಜನ್ಮಾಂತರಗಳ ತೊಡಕಿನಲ್ಲಿ ಸಿಕ್ಕಿಬಿದ್ದು, ತನ್ನ ಉದ್ದೇಶ ಸಾಧನೆಗೆ ಜನ್ಮಜನ್ಮಾಂತರಗಳ ಸಂಸ್ಕೃತಿಯ ಪರಿಪಾಕದ ಲಾಭ ಪಡೆಯುತ್ತದೆ.

'ಕಾದಂಬರಿ' ಯ ಕಥಾಸೂತ್ರವನ್ನು ತಿಳಿಯಲು ನಾವು ಕೆಲ ಸಂಗತಿಗಳನ್ನು ಲಕ್ಷ್ಯದಲ್ಲಿಡುವುದು ಅವಶ್ಯಕ. (೧) 'ಕಾದಂಬರಿ' ಈ ಕಥೆಯ ನಾಯಿಕೆ; ಚಂದ್ರಾಪೀಡ ನಾಯಕ; ಇವರೀರ್ವರ ಪ್ರಣಯಕಥೆಯೇ ಇಲ್ಲಿ ಮುಖ್ಯವಾಗಿ ಬಂದಿರುವದು. ಇದರ ಜೊತೆಗೆ ಪುಂಡರೀಕ, ಮಹಾಶ್ವೇತೆಯರ ಪ್ರಣಯಕಥೆಯೂ ಬೆರೆತುಕೊಂಡು ಬಂದಿದೆ. (೨) ಕಾದಂಬರಿ, ಮಹಾಶ್ವೇತೆಯರು ದೇವಾಂಶಸಂಭೂತರು, ಕಾದಂಬರಿ ಗಂಧರ್ವ ಕನ್ಯೆ, ಮಹಾಶ್ವೇತೆ ಅಪ್ಸರಕನ್ಯೆ, ಚಂದ್ರಾಪೀಡ ಶಾಪಗ್ರಸ್ತನಾಗಿ ಭೂಮಿಗೆ ಅವತರಿಸಿದ ಚಂದ್ರ; ಪುಂಡರೀಕನು ಲಕ್ಷ್ಮಿಯ ಪುತ್ರ, ಮುನಿಕುಮಾರ; ಶಾಪಗ್ರಸ್ತರಾಗಿ ಇವರೀರ್ವರು ಮಾನವರಾಗಿ ಭೂಮಿಯಲ್ಲಿ ಅವತರಿಸಿ, ಕಾದಂಬರಿ, ಮಹಾಶ್ವೇತೆಯರ ಮೋಹಜಾಲದಲ್ಲಿ ಬೀಳುತ್ತಾರೆ. ಆದರೆ ಇವರ ಪ್ರೇಮ, ವಿವಾಹದಲ್ಲಿ ರೂಪಾಂತರವಾಗುವ ಮೊದಲೇ, ಶಾಪಗ್ರಸ್ತರಾಗಿ ಪುಂಡರೀಕ, ಚಂದ್ರಾಪೀಡರು ಭಿನ್ನ ದೇಹಗಳನ್ನು ತಾಳುತ್ತಾರೆ. ಚಂದ್ರನು, ಚಂದ್ರಾಪೀಡನಾದಾಗ ಪುಂಡರೀಕನು ಮಂತ್ರಿಕುಮಾರ ವೈಶಂಪಾಯನನಾಗುವನು; ಮಹಾಶ್ವೇತೆಯ ಶಾಪದಿಂದ ಗಿಳಿಯಾಗಿ ಮತ್ತೆ ಶಾಪವಿಮೋಚನೆಯ ತರುವಾಯ ಮೊದಲಿನ ದಿವ್ಯ ದೇಹವನ್ನು ಪಡೆಯುವನು. ಚಂದ್ರಾಪೀಡನು ದೇಹತ್ಯಾಗ ಮಾಡಿ ಶೂದ್ರಕರಾಜನಾಗಿ ಮತ್ತೆ ಮೊದಲಿನ ದೇಹವನ್ನು ಪಡೆಯುತ್ತಾನೆ. ಪ್ರೇಮದ ಸಂಸ್ಕಾರ ಜನ್ಮಜನ್ಮಾಂತರಗಳಲ್ಲಿ ಇರುತ್ತದೆ, ಎಂದು ಹೇಳಲು ಪುಂಡರೀಕ, ಚಂದ್ರಾಪೀಡರ ಜನ್ಮಾಂತರಗಳ ಜಟಿಲ ಸಮಸ್ಯೆಯನ್ನು ಕವಿ ಎತ್ತಿ ಹಿಡಿದಿದ್ದಾನೆ. ತ್ಯಾಗದಿಂದ, ಸಹನೆಯಿಂದ ಪ್ರೇಮ ಆಧ್ಯಾತ್ಮಿಕವಾಗಿ

ಪರಿಣಮಿಸಿ ದಿವ್ಯವಾಗುತ್ತದೆ ಎಂಬುದನ್ನು, ಮಹಾಶ್ವೇತೆ- ಕಾದಂಬರಿಯರ ಮುಖಾಂತರ ವ್ಯಕ್ತಪಡಿಸುತ್ತಾನೆ. ಕಥೆಗೆ ಈ ಸಂವಿಧಾನಗಳು ಮುಖ್ಯ; ಈ ಉದ್ದೇಶ ಸಾಧನೆಯಲ್ಲಿ, ಕವಿ ತನ್ನ ವರ್ಣನಾಚಾತುರ್ಯವನ್ನೂ, ಪಾಂಡಿತ್ಯವನ್ನೂ, ಮೇರೆಮೀರಿ ತೂರಿಬಿಟ್ಟದ್ದರಿಂದ, ಕೊಂಚ ವ್ಯತ್ಯಯ ಬಂದಂತಾಗುತ್ತದೆ. ಮುಖ್ಯ ಕಥೆಯ ಸೂತ್ರ ಸಂವಿಧಾನಗಳು, ಓದುಗರ ಮನಸ್ಸಿನಿಂದ ಮರೆಯಾಗಿಬಿಡುತ್ತವೆ. ಸಮಗ್ರ 'ಕಾದಂಬರಿ', ವರ್ಣನೆ, ಶೈಲಿ, ಸಂವಿಧಾನಗಳ ದೃಷ್ಟಿಯಿಂದ ಒಂದು ಉತ್ತಮ ಉದಾಹರಣೆ!

ಮೂಲದ ಕಥೆಗೂ ಬಾಣನ ಕಥೆಗೂ ಶೈಲಿಯಲ್ಲಿ ತುಂಬಾ ಭೇದವಿದೆ. ಕಥಾರಚನೆಯಲ್ಲಿಯೂ ಅಲ್ಲಲ್ಲಿ ಎತ್ತಿ ತೋರಿಸುವಂತಹ ಕೆಲವು ಮಾರ್ಪಾಟುಗಳನ್ನು ಕವಿ ಮಾಡಿದ್ದಾನೆ. ಮೂಲದಲ್ಲಿ ನರವಾಹನದತ್ತ ಆಕಾಶಗಮನ ಮಾಡಿ ವಿಶ್ರಮಿಸುತ್ತಿದ್ದಾಗ ದಿವ್ಯಕನ್ಯೆಯೊಬ್ಬಳು ಇಳಿದು ಬಂದುದನ್ನು ನೋಡುತ್ತಾನೆ. ಅವಳೇ ವಿದ್ಯಾಧರರಾಜನ ಮಗಳು ಶಕ್ತಿಯಶಳು-ಗೌರೀ ವರಪ್ರಸಾದದಿಂದ ಹುಟ್ಟಿದವಳು. ಅವಳಿಗೆ ದೇವಿಯ ಆದೇಶವಾಗಿರುವದು, “ನಾಳೆ ಇಂತಹ ಸಮಯದಲ್ಲಿ, ನಿನ್ನ ಪತಿಯಾಗುವ ನರವಾಹನದತ್ತನ ದರ್ಶನವಾಗುವದು” ಎಂದು ಹಾಗೆ ಹೇಳಿದ್ದರಿಂದಲೇ ಅವಳು ಅಲ್ಲಿಗೆ ಬಂದಿರುತ್ತಾಳೆ. ಅಲ್ಲದೆ ತಾನೇ ಆ ಕಾರಣವನ್ನು ನರವಾಹನದತ್ತನಿಗೆ ಹೇಳಿ ಹೊರಟು ಹೋಗುತ್ತಾಳೆ. ಅವಳಲ್ಲಿಯೇ ಅನುರಕ್ತನಾದ ನರವಾಹನದತ್ತನೂ ಮನಸ್ಸಿಲ್ಲದ ಮನಸ್ಸಿನಿಂದ ಹೊರಟುಬರುತ್ತಾನೆ. ಆಸ್ಥಾನದಲ್ಲಿ ಗೋಮುಖನೆಂಬ ಮಂತ್ರಿಯೊಬ್ಬನು ಅವನ ಮನಸ್ಸಿನ ವಿನೋದಕ್ಕಾಗಿ ಕಥೆಯೊಂದನ್ನು ಪ್ರಾರಂಭಿಸುತ್ತಾನೆ; ಆ ಕಥೆ ಶೂದ್ರಕನ ಕಥೆಯಂತೆಯೇ ಇದೆ; ಸುಮನಾ ಎನುವ ರಾಜನೊಬ್ಬ; ಅವನ ಬಳಿ ಒಂದು ದಿನ 'ಮುಕ್ತಾಲತೆ' ಯೆಂಬ ಚಾಂಡಾಲಕನ್ನಿಕೆ ಗಿಳಿಯನ್ನು ತೆಗೆದುಕೊಂಡು ಬರುತ್ತಾಳೆ. ಮುಂದೆ ಜಾತಿಸ್ಮರ ಗಿಳಿ ಕಥೆಯನ್ನು ಪ್ರಾರಂಭಿಸುತ್ತದೆ. ಆ ಗಿಳಿಯನ್ನು 'ಮರೀಚ'ನೆಂಬ ಋಷಿಕುಮಾರನು ಕುಲಗುರುಗಳಾದ ಪುಲಸ್ತ್ಯರಲ್ಲಿ ಒಯ್ದಿರಿಸುತ್ತಾನೆ. ಮತ್ತೆ ಮುಂದೆ ಕಥೆ ಪ್ರಾರಂಭವಾಗುತ್ತದೆ.

ಶಕ್ತಿಯಶಳು ನರವಾಹನದತ್ತನಿಗೆ ತಾನೇ ಎಲ್ಲ ವೃತ್ತಾಂತವನ್ನು ವಿದಿತಪಡಿಸುವದು, ಬಾಣನಿಗೆ ಸರಿಹೋಗಲಿಲ್ಲ. ಮಹಾಶ್ವೇತೆ, ಬಾಣನಲ್ಲಿ, ತನ್ನ ಹಿಂದಿನ ಕಥೆಯೆಲ್ಲವನ್ನು ಹೇಳಿದರೂ , ತೀರ ನಯವಾಗಿ ಹೇಳುತ್ತಾಳೆ; ಜೊತೆಗೆ ಕಾದಂಬರಿಯ ಮನಃಸ್ಥಿತಿಯನ್ನೂ ಹೇಳುತ್ತಾಳೆ. ಹಾಗೆ ಪ್ರತಿಜ್ಞೆ ಮಾಡಿದಂಥ ಕಾದಂಬರಿಗೂ ಚಂದ್ರಾಪೀಡನಲ್ಲಿ ಅನುರಾಗವುಂಟಾಯಿತು. ಎಂಬುದನ್ನು ಕವಿ ಬಹು ಸೂಕ್ಷ್ಮವಾಗಿ ವರ್ಣಿಸುತ್ತಾನೆ. ಅಚ್ಛೋದ ಸರಸ್ಸಿನ ಬಳಿ ನಡೆದ ಮಹಾಶ್ವೇತೆ, ಪುಂಡರೀಕರ ದುರ್ದಮ್ಯಭಾವನೆಗಳನ್ನು ಹೆಣೆಯುವಲ್ಲಿಯಂತೂ ಕವಿ ನಿಸ್ಸೀಮನಾಗಿದ್ದಾನೆ!

ಬಾಣಭಟ್ಟನ ವರ್ಣನೆಗಳಲ್ಲಿ ಒಂದೊಂದು ವರ್ಣನೆ ತನ್ನ ಮಟ್ಟಿಗೇ ಪರಿಪೂರ್ಣವಾಗಿದೆ. ಆದರೆ ವರ್ಣನೆಗಳಲ್ಲಿ ಏಕಸೂತ್ರವಿಲ್ಲ.

ಬಾಣಕವಿಯ ಪಾಂಡಿತ್ಯದಿಂದ ' ಕಾದಂಬರಿ' ಗೊಂದು ಮೆರುಗು ಬಂದಿತು; ಕೃತಿ, ಕಾಲದ ಅಭಿರುಚಿಯನ್ನು ಪೂರೈಸಿತು. ಕನ್ನಡ ಕವಿಗಳು ಸಂಸ್ಕೃತ ಸಾಹಿತ್ಯದ

ಮಾರ್ಗವನ್ನು ತುಳಿಯುತ್ತಿದ್ದ ಕಾಲದಲ್ಲಿ, ಬಾಣನ ಈ ಕೃತಿಯೂ ಕನ್ನಡದಲ್ಲಿಳಿಯಿತು. ನಾಗವರ್ಮನು ೧೦ನೆಯ ಶತಮಾನದಲ್ಲಿ ಬಾಣನ ಈ ಕಾದಂಬರಿಯನ್ನು ಚಂಪೂ ರೂಪದಲ್ಲಿ ಪರಿವರ್ತಿಸಿದನು ಚಂಪೂ, ಗದ್ಯ ಪದ್ಯ ಸಂಮಿಶ್ರಿತವಾದುದು; ಕಾದಂಬರಿಯ ಶೈಲಿಯನ್ನು ಚಂಪೂಶೈಲಿಗೆ ಅಳವಡಿಸಿಕೊಳ್ಳುವದು ಸಾಮಾನ್ಯ ಮಾತಲ್ಲ. ಆದರೆ ನಾಗವರ್ಮ ಅದನ್ನು ಯಶಸ್ವಿಯಾಗಿ ಮಾಡಿದ್ದಾನೆ.

ಕಾದಂಬರಿ, ಛಂದೋಂಬುಧಿಯನ್ನು ಬರೆದ ನಾಗವರ್ಮನು ಒಬ್ಬನೇ; ಕಾವ್ಯಾವಲೋಕನ, ಭಾಷಾ-ಭೂಷಣ, ವಸ್ತುಕೋಶಗಳನ್ನು ರಚಿಸಿದವನು ಮಾತ್ರ ಮತ್ತೊಬ್ಬನು, ಎಂದು ನರಸಿಂಹಾಚಾರ್ಯರು ಅಭಿಪ್ರಾಯ ಪಡುತ್ತಾರೆ. ಇವೆಲ್ಲವುಗಳನ್ನು ರಚಿಸಿದವನು ಒಬ್ಬನೇ ಎಂದು ಡಾ. ವೆಂಕಟಸುಬ್ಬಯ್ಯನವರ ಅಭಿಪ್ರಾಯ!

'ಕಾದಂಬರಿ' ಯನ್ನು ರಚಿಸಿದ ನಾಗವರ್ಮ, "ಕೃತಿಪತಿ ನರೇಂದ್ರ ಚಂದ್ರಂ" ಎಂದು ತನಗೆ ಆಶ್ರಯದಾತನಾದ ರಾಜನನ್ನು ಕುರಿತು ಹೇಳುತ್ತಾನೆ. ಆದರೆ ತನ್ನ ವಿಚಾರವಾಗಿ ಹೆಚ್ಚಿಗೆ ಏನೂ ಹೇಳಿಕೊಂಡಿಲ್ಲ.

ಒಂದು ಭಾಷೆಯಲ್ಲಿಯ ಕಾವ್ಯದ ಅರ್ಥವನ್ನು ಅದರ ಪದರಚನಾಮಹತ್ವದೊಡನೆ ಮತ್ತೊಂದು ಭಾಷೆಯಲ್ಲಿ ತರುವದು ಸುಲಭ ಕೆಲಸವಲ್ಲ. ಪರಿವರ್ತನಕಾರನು ದ್ವಿಭಾಷಾಪಂಡಿತನಾಗಿರುವದು ಅವಶ್ಯ. ನಾಗವರ್ಮನು ಅನುವಾದ ಮಾಡಿದ್ದರೂ, ಅವನ ಕೃತಿ ಪ್ರಥಮವರ್ಗದ ಪರಿವರ್ತನವಾಗಿದೆ.

ನಾಗವರ್ಮನು ಬಾಣನ ಕೃತಿಯನ್ನೇ ಅನುಸರಿಸಿದ್ದರೂ ಹೆಜ್ಜೆ ಹೆಜ್ಜೆಗೆ ಅನುಸರಿಸಿಲ್ಲ. ಎಲ್ಲಿ ವರ್ಣನೆ ಅನವಶ್ಯಕವೋ ಅಲ್ಲಿ ನಾಗವರ್ಮನು ವರ್ಣನೆಯಲ್ಲಿಯ ಬಹುಭಾಗವನ್ನು ಬಿಟ್ಟುಬಿಟ್ಟಿದ್ದಾನೆ. ಉದಾಹರಣೆಗೆ ಶೂದ್ರಕ ರಾಜನ ವರ್ಣನೆಯನ್ನೇ ನೋಡಬಹುದು. ಬಾಣನಷ್ಟು ದೀರ್ಘವಾಗಿ ಬೆಳೆಸದೆ, ಸ್ವಲ್ಪದರಲ್ಲಿಯೇ ಮುಗಿಸಿ ಕಥೆಯನ್ನು ಮುಂದೋಡಿಸುತ್ತಾನೆ. ಬಹು ದೀರ್ಘವಾದ ವಾಕ್ಯಗಳನ್ನು ನಾಗವರ್ಮ ಹೆಚ್ಚಾಗಿ ಉಪಯೋಗಿಸಿಲ್ಲ; ಸಮಾಸಗಳನ್ನಾದರೂ ಹಾಗೇ; ಗದ್ಯ ಪದ್ಯ ಎರಡನ್ನೂ ಸೇರಿಸಿದ್ದರಿಂದ, ಶೈಲಿಯಲ್ಲಿ ವೈವಿಧ್ಯವುಂಟಾಗಿದೆ. ಎಷ್ಟೋ ಸಲ ಮೂಲದ ಭಾಗಕ್ಕಿಂತ, ನಾಗವರ್ಮನಲ್ಲಿಯ ಆ ಭಾಗವೇ ಸ್ಪಷ್ಟವಾಗಿ ಬಂದಿದೆ. 'ಕನ್ನೆಯದೊಂದು ಭಕ್ತಿಯಿಂ ಭಾವಿಸಿ' ಎಂದು ಚಾಂಡಾಲ ಕನ್ಯೆ ಹೇಳುವಾಗ ವಿನಯಪೂರ್ಣವಾದ ಅವಳ ಚಿತ್ರ ನಮ್ಮೆದುರು ನಿಲ್ಲುತ್ತದೆ.

ಶೈಲಿಯಲ್ಲಿಯ ಮಾರ್ಪಾಟಿನಿಂದ, ಕಥೆಯ ಕುತೂಹಲವನ್ನು ಕಾಯ್ದಿಡುವದರಿಂದ ನಾಗವರ್ಮನ ಕೃತಿ ಕನ್ನಡದ ಅನುವಾದ ಕೃತಿಗಳಲ್ಲಿ ಗಣ್ಯವಾಗಿದೆ.

ಬಾಣಕವಿಯ ಕೃತಿಯ ಆಧಾರದಿಂದಲೇ ಕನ್ನಡದಲ್ಲಿ ಕರ್ನಾಟಕಗ್ರಂಥಮಾಲೆಯ ಪ್ರಕಾಶನದಲ್ಲಿ ಕೃಷ್ಣಾಚಾರ್ಯರ ಕಾದಂಬರಿಯೂ ಗದ್ಯದಲ್ಲಿ ಬಂದಿದೆ. ತುರಮರಿಯವರ ಪ್ರಸ್ತುತ ಕೃತಿಯಾದರೂ ಬಾಣಭಟ್ಟನ ಕೃತಿಯ ಅನುವಾದವೇ; ಆದರೆ ಪೂರ್ಣವಾಗಿ ಹೊಸಗನ್ನಡದಲ್ಲಿದೆ.

'ಕಾದಂಬರಿ'ಯ ಸಂಕ್ಷಿಪ್ತ ಕಥೆ

ಶೂದ್ರಕರಾಜನು ರಾಜ್ಯಕಾರಭಾರ ಮಾಡುತ್ತಿದ್ದಾಗಿನಿಂದ ಕಥೆ ಮೊದಲಾಗುತ್ತದೆ. ವಿದಿಸೆ ಮಾಳವದ ರಾಜಧಾನಿ. ಶೂದ್ರಕದೊರೆ ಅಲ್ಲಿ ಸಮುದ್ರವಲಯಾಂಕಿತ ಭೂಮಿಗಧಿಪತಿಯಾಗಿ ಆಳುತ್ತಿದ್ದನು. ದೊರೆ ಒಂದು ದಿನ ಆಸ್ಥಾನದಲ್ಲಿರುವಾಗ, ಬೆಳಿಗ್ಗೆ ಲಕ್ಷ್ಮಿಯ ಅವತಾರವೋ ಎನ್ನುವಂತಿದ್ದ ಚಾಂಡಾಲ ಕನ್ಯೆಯೊಬ್ಬಳು, ಗಿಳಿಮರಿಯೊಂದನ್ನು ಹಿಡಿದುಕೊಂಡು ವೃದ್ಧನೊಬ್ಬನೊಡನೆ ಪ್ರವೇಶಿಸಿದಳು. ಪ್ರತೀಹಾರಿ ಅವಳ ವಾರ್ತೆಯನ್ನು ರಾಜನಿಗೆ ಮುಟ್ಟಿಸಿದನು. ಶೂದ್ರಕರಾಜ, ಅವನ ಸಭೆ, ಆಸ್ಥಾನದ ವಿದ್ವಾಂಸರು, ವೇಶ್ಯೆಯರು, ಪ್ರತೀಹಾರಿ, ಚಾಂಡಾಲಕನ್ಯೆ, ಗಿಳಿಮರಿ— ಇವರಾರೂ ಬಾಣನ ವರ್ಣನೆಯ ಸೆಳವಿನಲ್ಲಿ ಸಿಕ್ಕದೆ ಪಾರಾಗರು. ಗಿಳಿಯದು ಜಾತಿಸ್ಮರ. ವೇದ, ಶಾಸ್ತ್ರ, ಪುರಾಣಗಳೆಲ್ಲವನ್ನೂ ಬಲ್ಲುದು. ಆ ಕನ್ಯೆ ಒಳ ಬಂದು, ಪಂಜರದ ಬಾಗಿಲನ್ನು ತೆರೆದೊಡನೆ, ಸಾಷ್ಟಾಂಗ ಪ್ರಣಿಪಾತ ಮಾಡಿ, ಗಿಳಿಯು,

> "ಸ್ತನಯುಗಮಶ್ರುಸ್ನಾತಂ, ಸಮೀಪತರವರ್ತಿಹೃದಯಶೋಕಾಗ್ನೇಃ
> ಚರತಿ ವಿಮುಕ್ತಾಹಾರಂ ವ್ರತಮಿವ ಭವತೋ ರಿಪುಸ್ತ್ರೀಣಾಂ"

ಎಂಬ ಆರ್ಯೆಯೊಂದನ್ನು ಹೇಳಿತು. ಕೇಳಿದೊಡನೆ ರಾಜನ ಕುತೂಹಲಕ್ಕೆ ಎಣೆಯಿಲ್ಲದಾಯಿತು. ಆ ಗಿಳಿಯ ಬಗ್ಗೆ ಇನ್ನೂ ಹೆಚ್ಚು ತಿಳಿದುಕೊಳ್ಳುವ ಆಶೆಯಿಂದ ಶೂದ್ರಕನು ಭೋಜನಾದಿಗಳನ್ನು ತೀರಿಸಿಕೊಂಡು ಕಥೆ ಕೇಳಲು ಪ್ರಾರಂಭ ಮಾಡಿದನು.

ಗಿಳಿ, ಹೇಳುವ ಉತ್ಸಾಹವಿಲ್ಲದಿದ್ದರೂ, ಶೂದ್ರಕನೆದುರು ತನ್ನ ದುಃಖದ ಕಥೆಯನ್ನು ಪ್ರಾರಂಭಿಸಿತು.

ವಿಂಧ್ಯಾಚಲದ ಅಡವಿಯಲ್ಲಿ ಪಂಪಾಸರೋವರವಿದೆ. ಅದರ ತೀರದಲ್ಲಿ ಜೀರ್ಣವಾದಂಥ ಬಹು ದೊಡ್ಡ ಶಾಲ್ಮಲೀ (ಬೂರುಗದ) ವೃಕ್ಷವಿದೆ. ಅದರ ಶಾಖೋಪಶಾಖೆಗಳಲ್ಲಿ, ನಾನಾ ದೇಶದಿಂದ ಬಂದ ಪಕ್ಷಿಗಳು ಗೂಡುಗಟ್ಟಿ ವಾಸವಾಗಿವೆ. ಅಲ್ಲಿ ನನ್ನ ಮುದಿ ತಂದೆ, ನನ್ನ ತಾಯಿಯೊಡನೆ ವಾಸವಾಗಿದ್ದರು. ಅವರ ವೃದ್ಧಾಪ್ಯದಲ್ಲಿ ದುರ್ದೈವದಿಂದ ಅವರಿಗೆ ನಾನೊಬ್ಬ ಮಗನಾದೆನು. ಪ್ರಸವವೇದನೆಯಿಂದ ತಾಯಿ ತೀರಿಹೋದಳು. ತಂದೆ ನನಗೆ ಗುಟುಕು ಕೊಟ್ಟು ಬಹಳ ಪ್ರಯಾಸದಿಂದ ಜೋಪಾನ ಮಾಡಿದರು. ಆದರೆ ಒಂದು ದಿನ ಯಮನ ದೂತರಂತಿರುವ ಬೇಡರ ತಂಡವೊಂದು ಆ ಅಡವಿಯಲ್ಲಿ ಪ್ರವೇಶಿಸಿ ಹಾಹಾಕಾರವನ್ನುಂಟುಮಾಡಿಬಿಟ್ಟಿತು. ಬೇಡರ ಪಡೆ ಮರಳಿತೇನೋ ಎಂದು ತಂದೆಯ ಮಡಿಲಿನಿಂದಲೇ ನಾನು ಇಣಿಕಿ ನೋಡುವಷ್ಟರಲ್ಲಿ ಬೇಟೆ ದೊರೆಯದ ಮುದಿ ಬೇಡನೊಬ್ಬನು ಸರಸರನೆ ಮರವನ್ನೇರಿ ಮೇಲೆ ಬಂದು, ಕರಿಯ ನಾಗರಹಾವಿನಂತಹ ಕೈಯನ್ನು ಚಾಚಿ, ನಮ್ಮ ಗೂಡಿನೊಳಗೆ ಕೈಯಿಕ್ಕಿ ತಂದೆಯ ಗೋಣು ಮುರಿದು ಕೆಳಗೆ ಚೆಲ್ಲಿದನು. ತಂದೆಯ ಪಕ್ಕಗಳಲ್ಲಿಯೇ ಅಂಟಿಕೊಂಡಿದ್ದ ನಾನು ಹಾರಿ ಕೆಳಗೆ ತರಗೆಲೆಯ ರಾಶಿಯಲ್ಲಿ ಬಿದ್ದೆನು. ಎಲೆಯ ಬಣ್ಣ ನನ್ನ ಮೈಬಣ್ಣ ಒಂದೇ

ಆದ್ದರಿಂದ, ಮುದಿ ಬೇಡನು ಎಸೆದ ಗಿಳಿಗಳನ್ನು ಆಯ್ದುಕೊಳ್ಳುವಾಗ ನಾನು ಕಾಣಿಸದೆ ಹೋದೆನು. ತಂದೆಯ ಮರಣಕ್ಕೂ ದುಃಖಿತನಾಗಿ ಕರಗದೆ ಇದ್ದ ನನ್ನನ್ನು ನೀರಡಿಕೆ ಬಲವಾಗಿ ಬಾಧಿಸತೊಡಗಿತು. ನೀರಿಲ್ಲದೆ ಪ್ರಾಣ ಬಿಡುತ್ತಿರುವಾಗಲೇ ಹಾರೀತನೆಂಬ ಮುನಿಕುಮಾರನು ತನ್ನ ಮಿತ್ರರೊಡನೆ ಸ್ನಾನಕ್ಕಾಗಿ ಸರೋವರಕ್ಕೆ ಆಗಮಿಸಿದನು. ನನ್ನನ್ನು ನೋಡಿ ದಯಾರ್ದ್ರಹೃದಯನಾಗಿ ಕಮಂಡಲುವಿನಲ್ಲಿ ನೀರು ತಂದು, ಒಂದೊಂದೇ ಹನಿಯನ್ನು ಚುಂಚಿನಲ್ಲಿ ಇಳಿಬಿಟ್ಟು ಬದುಕಿಸಿದನು. ತಣ್ಣೆಳಲಲ್ಲಿ ನನ್ನನ್ನಿಟ್ಟು, ಬಳಿಕ ತನ್ನ ಸ್ನಾನಾದಿಗಳನ್ನೆಲ್ಲ ಪೂರೈಸಿ, ನನ್ನನ್ನೂ ಕರೆದುಕೊಂಡು ಆಶ್ರಮಕ್ಕೆ ಹೊರಟನು. ಆಶ್ರಮ, ಜಾಬಾಲಿಮುನಿಗಳದು; ಮಹಾತಪಸ್ವಿಗಳವರು; ಅವರ ತಪೋಬಲದಿಂದ ಹುಲಿಹುಲ್ಲೆಗಳೂ ಅಲ್ಲಿ ಸಖ್ಯಭಾವದಿಂದ ಕೂಡಿರುತ್ತವೆ. ಅಂತಹ ತಪಸ್ವಿಗಳ ಸಾನ್ನಿಧ್ಯದಲ್ಲಿ ನನ್ನನ್ನಿಳಿಸಿದಾಗ ನನಗೆ ಸಂಕೋಚವಾಯಿತು. ಹಾರೀತನು ನನ್ನ ಪರಿಚಯವನ್ನು ಹೇಳಿ ಸುಮ್ಮನಾಗಲು, ಜಾಬಾಲಿ ಮುನಿಗಳು ನನ್ನೆಡೆಗೆ ನೋಡಿ ನಕ್ಕು, "ತನ್ನ ಪಾಪದ ಫಲವನ್ನು ಅನುಭವಿಸುತ್ತಿದ್ದಾನೆ" ಎಂದರು. ಉಳಿದವರು ಕುತೂಹಲದಿಂದ ಕೇಳತೊಡಗಿದರು. ನಾನು ಜಾತಿಸ್ಮರ ಎಂಬುದು ತ್ರಿಕಾಲಜ್ಞಾನಿಗಳಾದ ಮುನಿಗಳಿಗೆ ಗೊತ್ತು. "ಹಿಂದಿನ ಜನ್ಮದಲ್ಲಿ ನೀತಿಯನ್ನು ಬಿಟ್ಟು ನಡೆದು, ಮೋಹದಿಂದ ತಿರ್ಯಗ್ ಜಾತಿಯಲ್ಲಿ ಹುಟ್ಟಿದನು" ಎಂದು ಹೇಳಲು ಉಳಿದವರು ನನ್ನ ಹಿಂದಿನ ಕಥೆಯನ್ನು ಕೇಳಲು ಆತುರರಾಗಿ ಮುನಿಗಳಿಗೆ ಬಿನ್ನವಿಸಿಕೊಂಡರು; ಅವರು ನನ್ನ ಕಥೆಗೆ ಮೊದಲುಮಾಡಿದರು.

ಆವಂತೀದೇಶದ ಉಜ್ಜಯಿನಿ ಪಟ್ಟಣದಲ್ಲಿ ತಾರಾಪೀಡನೆಂಬ ರಾಜನು ವೈಭವದಿಂದ ರಾಜ್ಯವಾಳುತ್ತಿದ್ದನು. ವಿಲಾಸವತಿ ಆತನ ಪಟ್ಟದರಸಿ. ಸಕಲ ಶಾಸ್ತ್ರಪಾರಂಗತನಾದ ಶುಕನಾಸನು ಮಂತ್ರಿ. ಸಕಲ ವೈಭವಗಳಿದ್ದೂ ಪುತ್ರನಿಲ್ಲದೆ, ರಾಜನೂ ರಾಣಿಯೂ ಕೊರಗುತ್ತಿದ್ದರು. ಅದಕ್ಕಾಗಿ ಅನೇಕ ವ್ರತನಿಯಮಾದಿಗಳನ್ನು ಆಚರಿಸುತ್ತಿದ್ದರು. ಅದರ ಪ್ರತಿಫಲವಾಗಿಯೋ ಏನೋ, ನಸುಕಿನ ಸ್ವಪ್ನದಲ್ಲಿ ವಿಲಾಸವತಿಯ ಉದರದಲ್ಲಿ ಚಂದ್ರನು ಪ್ರವೇಶಿಸಿದಂತೆ ಭಾಸವಾಯಿತು. ಸ್ವಪ್ನ ನಿಜವಾಗಿ ತಾರಾಪೀಡ ದೊರೆಗೆ ಚಂದ್ರಾಪೀಡನೆಂಬ ಮಗನು ಹುಟ್ಟಿದನು. ಅಂದೇ ಶುಕನಾಸನಿಗೂ ವೈಶಂಪಾಯನನೆಂಬ ಮಗನು ಜನಿಸಿದನು. ಚಂದ್ರಾಪೀಡ, ವೈಶಂಪಾಯನರು ಜೀವದ ಗೆಳೆಯರು; ಎಲ್ಲ ವಿದ್ಯೆ, ಕಲೆಗಳನ್ನು ಅವರು ಒಟ್ಟಿಗೇ ಅಭ್ಯಾಸ ಮಾಡಿದರು. ಹದಿನಾರು ವರುಷದ ಚಂದ್ರಾಪೀಡನು ಗುರುಕುಲದಿಂದ ಹೊರಹೊರಟರೆ ಜನ ಅವನನ್ನು ಸ್ವಾಗತಿಸಿದರು, ಹೂಮಳೆಗರೆದರು. ಇಂದ್ರಾಯುಧವೆಂಬ ದಿವ್ಯತುರಗವು ಅವನಿಗಾಗಿ ಕಾದಿತ್ತು. ಯೌವನರಾಜ್ಯಾಭಿಷೇಕದ ಸಮಯದಲ್ಲಿ ಈ ತುರಗವೂ, ತನ್ನನ್ನು ನೆರಳಿನಂತೆ ಅನುಸರಿಸುವ ಪತ್ರಲೇಖೆಯೆಂಬ ತಾಂಬೂಲಕರಂಡವಾಹಿನಿಯೂ ಕಾಣ್ಕೆಯಾಗಿ ದೊರೆತರು. ತರುವಾಯ ಚಂದ್ರಾಪೀಡನು ಇಂದ್ರಾಯುಧದೊಡನೆ ದಿಗ್ವಿಜಯಕ್ಕಾಗಿ ಪ್ರಯಾಣ ಬೆಳಸಿದನು.

ಬೇಟೆಯ ಮಾರ್ಗದಲ್ಲಿ ಚಂದ್ರಾಪೀಡನು ಕಿನ್ನರಮಿಥುನದ ಬೆನ್ನುಹತ್ತಿ ತನ್ನ ಸೈನ್ಯವನ್ನು ಹಿಂದೆ ಬಿಟ್ಟು ಬಹುದೂರ ಹೊರಟುಹೋದನು. ಇಂದ್ರಾಯುಧವು ಗಾಳಿಯಂತೆ ಹಾರಿದರೂ, ಕಿನ್ನರ ಮಿಥುನವು ಕೈಗೆ ಸಿಕ್ಕದೆ ಕೈಲಾಸ ಶಿಖರವನ್ನೇರಿ ಕಣ್ಮರೆಯಾದವು. ದಣಿವಿನಿಂದ

ಬಳಲಿದ ಚಂದ್ರಾಪೀಡನು ಜಲಾಶಯವೊಂದನ್ನು ಹುಡುಕುತ್ತಿರುವಾಗ ಅಚ್ಛೋದ ಸರೋವರವು ಕಣ್ಣಿಗೆ ಬಿದ್ದು ತುಂಬ ಸಂತೋಷವಾಯಿತು. ಕುದುರೆಯಿಂದಿಳಿದು ನೀರು ಕುಡಿದು ವಿಶ್ರಮಿಸುತ್ತಿರುವಷ್ಟರಲ್ಲಿ, ಇಂಪಾದ ಗಾಯನವು ಕಿವಿಗೆ ಬಿತ್ತು. ಅದನ್ನನುಸರಿಸುತ್ತ ಹೋಗಲು ಸಿದ್ಧಾಯತನವೊಂದರಲ್ಲಿ ಸುರಸುಂದರಿಯಾದ ನವಯುವತಿಯೊಬ್ಬಳು, ತಾಪಸವೇಷಧಾರಿಣಿಯಾಗಿ ಶಿವನನ್ನು ಆರಾಧಿಸುತ್ತಿದ್ದುದು ಕಣ್ಣಿಗೆ ಬಿತ್ತು. ಅವಳು ಪ್ರದಕ್ಷಿಣೆ ಮಾಡಿದ ಬಳಿಕ, ಅಲ್ಲಿಯೇ ನಿಂತಿದ್ದ ವಿನಯಶಾಲಿಯಾದ ಚಂದ್ರಾಪೀಡನನ್ನು ಕಂಡು ಅವನಿಗೆ ಸ್ವಾಗತವನ್ನು ಕೋರಿದಳು. ಆತಿಥ್ಯವನ್ನು ಸ್ವೀಕರಿಸುವಂತೆ ಪ್ರಾರ್ಥಿಸಿ ತನ್ನ ಕುಟೀರಕ್ಕೆ ಕರೆದುಕೊಂಡು ಹೋದಳು. ಚಂದ್ರಾಪೀಡನು ಅವಳ ಆತಿಥ್ಯವನ್ನು ಸ್ವೀಕರಿಸಿ ಆಕೆಯ ವೃತ್ತಾಂತವೆಲ್ಲವನ್ನು ಕೇಳಬೇಕೆಂದು ಆಶಿಸಿದನು. ಅವಳದು ಕರುಣಕಥೆ; ಬಾಯಿಂದ ಮಾತು ಹೊರಡದೆ, ಕಣ್ಣಿಂದ ನೀರು ಧಾರೆಗಟ್ಟಿ ಸುರಿಯತೊಡಗಿತು; ದುಃಖವನ್ನು ನುಂಗಿ ಚಂದ್ರಾಪೀಡನಂತಹ ಮಹಾಶಯನು ಕೇಳಲಾಶಿಸುತ್ತಾನೆಂದು ತಿಳಿದು ಹೇಳತೊಡಗಿದಳು.

"ನನ್ನ ತಂದೆ ಗಂಧರ್ವರಾಜ ಹಂಸ, ಇಂದ್ರನ ಪರಮಮಿತ್ರ, ತಾಯಿ ಗೌರೀದೇವಿ, ಅಪ್ಸರೆ. ಬಹುಕಾಲದ ಮೇಲೆ ದುರ್ಭಾಗ್ಯೆಯಾದ ನಾನೊಬ್ಬಳೇ ಮಗಳು ಅವರಿಗೆ ಜನಿಸಿದೆನು. ಬಹು ಪ್ರೀತಿಯಿಂದ ಸಲಹಿ ನನ್ನನ್ನು ದೊಡ್ಡವಳನ್ನಾಗಿ ಮಾಡಿದರು. ಬಳಿಕ ಒಂದು ದಿನ ನಾನು ತಾಯಿಯೊಡನೆ ಅಚ್ಛೋದ ಸರೋವರಕ್ಕೆ ಸ್ನಾನಕ್ಕಾಗಿ ಹೋದಾಗ ಗೆಳತಿಯೊಡನೆ ಹೂ ಕೊಯ್ಯುತ್ತ ಸ್ವಲ್ಪ ದೂರ ಹೋದೆನು. ತಿರುಗಿ ಬರುವಾಗ ದಿವ್ಯ ಸ್ವರೂಪವುಳ್ಳ ಒಬ್ಬ ಮುನಿಕುಮಾರನು ಅವನ ಗೆಳೆಯನೊಡನೆ ಬರುತ್ತಿರುವದನ್ನು ಕಂಡೆನು. ಆ ಮುನಿಕುಮಾರನ ಸೌಂದರ್ಯ ನನ್ನನ್ನು ಮೋಹದಲ್ಲಿ ಕೆಡವಿತು. ಕಾಮಪರವಶಳಾದ ನನ್ನನ್ನೆಲ್ಲಿ ಉರಿಗಣ್ಣಿನಿಂದ ಭಸ್ಮಮಾಡುವನೋ ಎಂದು ಅಂಜುತ್ತ, ಆ ಮಿತ್ರನನ್ನು ಕೇಳಿದೆನು, " ಇವನಾರು? ಹೆಸರೇನು? ಇವನ ಕಿವಿಯಲ್ಲಿರುವ ಸುಂದರವಾದ ಕುಸುಮ ಮಂಜರಿ ಎಲ್ಲಿಯದು?" ನನ್ನ ಕುತೂಹಲವನ್ನು ನೋಡಿ ಆ ಮುನಿಕುಮಾರನು, ತಾನೂ ಮೋಹಪರವಶನಾಗಿ, " ಈ ಕುಸುಮಮಂಜರಿ ನಿನಗೆ ಬೇಕಾದರೆ ತೆಗೆದುಕೊ," ಎಂದು ತಾನೇ ಎತ್ತಿ ನನ್ನ ಕಿವಿಗೆ ತೊಡಿಸಿದನು, ನನ್ನ ಕದಂಪಿನ ಸೋಂಕಿನಿಂದ ಮುನಿಕುಮಾರನ ಕೈ ನಡುಗಿತು; ನಡುಗುತ್ತಿರುವ ಕೈಯಿಂದ ಅಕ್ಷಮಾಲೆ ಜಾರಿ ಕೆಳಗೆ ಬಿದ್ದುದೂ ಅವನಿಗೆ ತಿಳಿಯಲಿಲ್ಲ. ನಾನದನ್ನು ಮೆಲ್ಲಗೆ ಎತ್ತಿ ಕೊರಳಲ್ಲಿ ಹಾಕಿಕೊಂಡೆನು. ಅಷ್ಟರಲ್ಲಿ ನನ್ನ ಸಖಿ, ನನಗಾಗಿ ತಾಯಿ ಕಾದಿದ್ದಾರೆಂದು ಹೇಳಲು ನಾನು ವಂದನೆಗಳನ್ನರ್ಪಿಸಿ ಹೊರಟೆನು. ಅಕ್ಷಮಾಲೆಯನ್ನು ಕೈಯಿಂದ ಚೆಲ್ಲಿಕೊಟ್ಟದರ ಪರಿವೆಯೂ ಇಲ್ಲದ ಮುನಿಕುಮಾರನನ್ನು ಅವನ ಮಿತ್ರ ಕಪಿಂಜಲ ಹೀಗಳೆದು ನುಡಿದನು, "ಇದೇನು ಪುಂಡರೀಕ, ಅಕ್ಷಮಾಲೆ ಜಾರಿಹೋದುದು ಕೂಡ ತಿಳಿಯಲಿಲ್ಲವೆ ನಿನಗೆ? ಮುನಿಕುಮಾರರಿಗೆ ವಿರುದ್ಧವಾದ ಈ ಮೋಹವು ನಿನ್ನನ್ನಿಷ್ಟೊಂದು ಆವರಿಸಿತೆ?" ಮಿತ್ರನ ಮಾತನ್ನು ಕೇಳಿದೊಡನೆಯೇ ಸುಳ್ಳು ಸಿಟ್ಟಿನಿಂದ ಪುಂಡರೀಕನು, 'ಎಲೆ ಚಪಲೆ, ನನ್ನ ಜಪಸರವನ್ನು ತೆಗೆದುಕೊಂಡು ಎಲ್ಲಿ ಓಡುತ್ತೀ?' ಎನ್ನಲು ಗಾಬರಿಯಾಗಿ, ನಾನು ಆ ಗಾಬರಿಯಲ್ಲಿ ನನ್ನ ಕೊರಳಲ್ಲಿಯ ಹಾರವನ್ನೇ ಅದಕ್ಕೆ ಪ್ರತಿಯಾಗಿ ಕೊಟ್ಟೆನು. ಮುನಿಕುಮಾರನು ಅದನ್ನೇ ಸ್ವೀಕರಿಸಿದನು. ಅವನಲ್ಲೇ ನಟ್ಟ

ಮನಸ್ಸುಳ್ಳ ನಾನು ಮನೆಗೆ ಹೋಗಿಯೂ ಮೇಲ್ಮನೆಯ ಕಿಟಕಿಯಿಂದ ಅವನಿದ್ದ ದಿಸೆಯನ್ನೇ ನಿಟ್ಟಿಸುತ್ತಿದ್ದೆನು. ಅಷ್ಟರಲ್ಲಿಯೇ ಹಿಂದೆ ಉಳಿದುಕೊಂಡಿದ್ದ ನನ್ನ ಸಖಿ ತರಲಿಕೆ, ಪುಂಡರೀಕನ ಪ್ರೇಮಪತ್ರವನ್ನು ನನ್ನ ಕೈಗಿತ್ತಳು; ಅದರಿಂದ ಇನ್ನೂ ಹೆಚ್ಚಿನ ಅಶಾಂತಿ ನನ್ನನ್ನಾವರಿಸಿತು. ಹೇಗೋ ದಿನವನ್ನು ನೂಕುವಷ್ಟರಲ್ಲಿ ಕಪಿಂಜಲನು ಬಂದು ತನ್ನ ಮಿತ್ರನ ಅಸಹಾಯ ಸ್ಥಿತಿಯನ್ನು ಬಣ್ಣಿಸಿ, "ಹೇಗೂ ಅವನನ್ನು ಕಾಪಾಡುವದು ನಿನ್ನನ್ನೇ ಕೂಡಿದೆ," ಎಂದು ಹೇಳಿ ಯಾರೂ ಅರಿಯದಂತೆ ಲಗುಬಗೆಯಿಂದ ಹೊರಟುಹೋದನು. ಆ ಸಮಯದಲ್ಲಿ ನನ್ನ ತಾಯಿ ಬಂದು ಮಾತಾನಾಡಿಸಿದುದರ ಎಚ್ಚರವೂ ನನಗಿರಲಿಲ್ಲ. ನಸುಗತ್ತಲಾಗಲು ತರಲಿಕೆಯೊಡನೆ ನಾನು ಪುಂಡರೀಕನನ್ನು ಕಾಣಲು ಹೊರಟೆನು. ಬಲಗಣ್ಣು ಹಾರಿತು; ದೂರದಿಂದಲೇ ಪುರುಷರ ಪ್ರಲಾಪಧ್ವನಿ ಕೇಳಬಂತು; ನನ್ನ ದುಃಖ ಮೇರೆಮೀರಿತು. ಪ್ರಿಯವಿರಹವನ್ನು ತಾಳಲಾರದೆ ಸಹಗಮನ ಮಾಡಬೇಕೆಂದು ಸಿದ್ಧತೆ ಮಾಡುತ್ತಿರಲು, ಚಂದ್ರಮಂಡಲದಿಂದ ದಿವ್ಯ ಪುರಷನೊಬ್ಬನು ಬಂದು, "ಮಗಳೇ, ಸಾಯುವ ಯೋಚನೆ ಬೇಡ; ಇವನೊಡನೆ ಮತ್ತೆ ನಿನ್ನ ಸಮಾಗಮವಾಗುವದು," ಎಂದು ಹೇಳಿ ಪುಂಡರೀಕನ ದೇಹವನ್ನು ಹೊತ್ತುಕೊಂಡು ಮೇಲೆ ನೆಗೆದನು. ಕಪಿಂಜಲನೂ ಅವನ ಬೆನ್ನು ಹತ್ತಿದನು. ಅಂದಿನಿಂದ ನಾನಿಲ್ಲಿ ಪುಂಡರೀಕನ ಮಾರ್ಗಪ್ರತೀಕ್ಷೆ ಮಾಡುತ್ತ, ಅವನಿಗೆ ಪ್ರಿಯವಾದ ಈ ತಾಪಸವೇಷವನ್ನೇ ಧರಿಸಿ, ತರಲಿಕೆಯೊಡನೆ ಶಿವನ ಆರಾಧನೆ ಮಾಡುತ್ತ ವಾಸಿಸುತ್ತಿದ್ದೇನೆ," ಎಂದು ಮಹಾಶ್ವೇತೆ ಕಣ್ಣೀರ್ಗರೆದಳು.

"ಹಾಗಾದರೆ ಈಗ ಆ ತರಲಿಕೆಯೆಲ್ಲಿ?" ಚಂದ್ರಾಪೀಡನು ಪ್ರಶ್ನಿಸಿದನು. ಮಹಾಶ್ವೇತೆ ಮತ್ತೆ ಪ್ರಾರಂಭಿಸಿದಳು, "ಕಾದಂಬರಿ ಎಂಬೊಬ್ಬ ಪ್ರಾಣಸಖಿ ನನಗಿದ್ದಾಳೆ. ಚಿತ್ರರಥ ಗಂಧರ್ವ ರಾಜನ ಮಗಳು. ನಾನೂ ಅವಳೂ ಒಬ್ಬರನ್ನೊಬ್ಬರು ಬಿಟ್ಟಿರುತ್ತಿರಲಿಲ್ಲ. ನನ್ನ ಈ ದುಃಖದ ವಾರ್ತೆಯನ್ನು ಕೇಳಿ ತಾನೂ ಆಜನ್ಮ ಕನ್ಯೆಯಾಗಿರಬೇಕೆಂಬ ವ್ರತ ತೊಟ್ಟಿದ್ದಾಳೆ. ಅವಳ ಈ ಹಟವನ್ನು ಕಂಡು ಚಿಂತೆಯಿಂದ ಚಿತ್ರರಥರಾಜನು ನನ್ನ ಬಳಿಗೆ ಕಂಚುಕಿಯನ್ನಟ್ಟಿದನು. ತಂದೆಯ ಮಾತಿನಂತೆ ನಡೆಯಬೇಕೆಂದು ಬುದ್ಧಿ ಹೇಳಲು ಅವಳೊಡನೆ ನಾನು ತರಲಿಕೆಯನ್ನು ಕಳಿಸಿಕೊಟ್ಟಿದ್ದೇನೆ. ಅವಳು ಹೊರಟುಹೋದ ಅಲ್ಪ ಸಮಯದಲ್ಲಿಯೇ ನೀವೂ ಬಂದಿರಿ."

ಜಾಬಾಲಿ ಮುನಿಗಳು ತಮ್ಮ ಕಥೆಯನ್ನು ಮುಂದುವರಿಸಿದರು; ಮರುದಿನ ನಸುಕಿನಲ್ಲಿ ತರಲಿಕೆ ವಿಫಲಪ್ರಯತ್ನಳಾಗಿ ಮರಳಿದಳು. ಅವಳ ಮಾತನ್ನು ಕೇಳಿ ಮಹಾಶ್ವೇತೆ, ತಾನೇ ಹೋಗಬೇಕೆಂದು ನಿಶ್ಚಯಿಸಿ, " ನಾವೇ ಕಾದಂಬರಿಯ ಬಳಿಗೆ ಹೋದರೆ, ಅವಳಿಗೆ ಸಮಾಧಾನವಾಗಬಹುದು. ನೀವು ಇಲ್ಲಿಯವರೆಗೆ ಬಂದಿದ್ದೀರಿ, ಗಂಧರ್ವರಾಜನಲ್ಲಿಗೂ ಬಂದು ಆತಿಥ್ಯವನ್ನು ಸ್ವೀಕರಿಸಿದರೆ ಅವಳಿಗೆ ತುಂಬ ಸಂತೋಷವಾದೀತು, " ಎಂದು ಹೇಳಲು ಚಂದ್ರಾಪೀಡನೂ ಒಪ್ಪಿಕೊಂಡನು; ಅವಳೊಡನೆ ಚಿತ್ರರಥನ ರಾಜಧಾನಿಗೆ ಹೋದನು. ಕಾದಂಬರಿಯನ್ನು ನೋಡಿದೊಡನೆಯೇ ಅವಳಲ್ಲಿ ಚಂದ್ರಾಪೀಡನಿಗೆ ಮೋಹವುಂಟಾಯಿತು; ಕಾದಂಬರಿಯೂ ಪ್ರೇಮಪಾಶದಲ್ಲಿ ಬಿದ್ದಳು. ಅವಳು ಮಹಾಶ್ವೇತೆಗೆ ಅರ್ಘ್ಯಪಾದ್ಯಾದಿಗಳನ್ನು ಕೊಟ್ಟು ಮದಲೇಖೆಯಿಂದ ಚಂದ್ರಾಪೀಡನಿಗೂ ಕೊಡಿಸಿದಳು.

ಬಳಿಕ ಮಹಾಶ್ವೇತೆಗೆ ತಾಂಬೂಲ ಕೊಡಹೋಗಲು, 'ಬಂದ ಅತಿಥಿವರನನ್ನು ಮೊದಲು ಆದರಿಸಬೇಕು. ' ಎಂದು ಹೇಳಿ ಚಂದ್ರಾಪೀಡನಿಗೆ ಕೊಡಬೇಕೆಂದು ಒತ್ತಾಯಪಡಿಸಲು, ನಾಚಿಕೆಯಿಂದ ನಡುಗುತ್ತ ಕಾದಂಬರಿ ತಾಂಬೂಲವನ್ನು ಕೊಟ್ಟಳು. ಅಷ್ಟರಲ್ಲಿಯೇ ಚಿತ್ರರಥನೂ, ರಾಣಿಯೂ ಮಹಾಶ್ವೇತೆಯನ್ನು ನೋಡಲಿಚ್ಛಿಸಿದ್ದರಿಂದ, ಚಂದ್ರಾಪೀಡನ ವಾಸಕ್ಕೆಂದು ಬೇರೆ ನಿವಾಸಸ್ಥಳವನ್ನು ಗೊತ್ತು ಮಾಡಿ ಮಹಾಶ್ವೇತೆ ಹೊರಟುಹೋದಳು. ಇತ್ತ ಕಾದಂಬರಿಗೆ 'ಎಲ್ಲರ ಎದುರಿನಲ್ಲಿಯೇ ರಾಜಕುಮಾರನನ್ನು ಕಂಡು ಮೋಹಗೊಂಡೆನಲ್ಲ, ನನ್ನ ವ್ರತವೇನಾಯಿತು?' ಎಂದು ಕಳವಳ. ವಿರಹವೇದನೆ ಅಸಹ್ಯವಾಗಿ ಮದಲೇಖೆಯಿಂದ ಚಂದ್ರಾಪೀಡನಿಗೆ ತನ್ನ ಪ್ರೇಮದ ಕುರುಹಾಗಿ ಶೇಷವೆಂಬ ಹಾರವನ್ನು ಕಳುಹಿದಳು. ಚಂದ್ರಾಪೀಡನಾದರೂ ಕಾದಂಬರಿಯನ್ನೇ ಕುರಿತು ಯೋಚಿಸುತ್ತಿದ್ದನು. ಬಳಿಕ ಚಂದ್ರೋದಯಸಮಯದಲ್ಲಿ ಕಾದಂಬರಿ ಬಂದು ಚಂದ್ರಾಪೀಡನನ್ನು ಕಂಡು ಮಾತನಾಡಿಸಿ ಹೋದಳು. ಚಂದ್ರಾಪೀಡನು ಮಹಾಶ್ವೇತೆಯ ವಾತ್ಸಲ್ಯ, ಕಾದಂಬರಿಯ ಪ್ರೇಮಗಳನ್ನೇ ಕುರಿತು ಯೋಚಿಸುತ್ತ ರಾತ್ರಿಯನ್ನು ನೂಕಿದನು. ಮರುದಿನ ಕಾದಂಬರಿ ಮಹಾಶ್ವೇತೆಯರ ಅಪ್ಪಣೆಗಳನ್ನು ಪಡೆದು ಅಚ್ಛೋದಸರಸ್ಸಿನ ಮಾರ್ಗವಾಗಿ ಹೊರಡಲು, ಚಂದ್ರಾಪೀಡನು ತನ್ನ ಸೈನ್ಯವು ಇಂದ್ರಾಯುಧದ ಹೆಜ್ಜೆಗಳನ್ನು ಗುರುತಿಸುತ್ತ ಬಂದು, ಅಲ್ಲಿಯೇ ಬಳಿಯಲ್ಲಿ ಬೀಡು ಬಿಟ್ಟಿರುವದನ್ನು ಕಂಡನು. ಅವನು ಅಲ್ಲಿರುವಾಗಲೇ ಕೇಯೂರಕನು ಬಂದು, ಚಂದ್ರಾಪೀಡನು ಮರೆತು ಬಂದಿದ್ದ ಶೇಷಹಾರವನ್ನೂ, ಕಾದಂಬರಿ ಕಳುಹಿದ ಪ್ರೇಮಕಾಣಿಕೆಯನ್ನೂ ಕೊಟ್ಟು, 'ಕಾದಂಬರಿ ವಿರಹವ್ಯಥೆಯಿಂದ ಬಳಲುತ್ತಿದ್ದು, ನಿಮ್ಮನ್ನು ಕರೆತರಲು ಹೇಳಿದ್ದಾಳೆ,' ಎಂದು ಹೇಳಿದನು. ಕೂಡಲೆ ಚಂದ್ರಾಪೀಡನು ಪತ್ರಲೇಖೆಯೊಡನೆ ಹೊರಟು, ಹಿಮಗೃಹದಲ್ಲಿ ವಿಶ್ರಾಂತಿ ಪಡೆಯುತ್ತಲಿದ್ದ ಕಾದಂಬರಿಯನ್ನು ಕಂಡನು. ಬಳಿಕ ಕಾದಂಬರಿಯ ಇಷ್ಟದಂತೆ ಪತ್ರಲೇಖೆಯನ್ನು ಅಲ್ಲಿಯೇ ಬಿಟ್ಟು ಮತ್ತೆ ತನ್ನ ಬಿಡಾರಕ್ಕೆ ಬಂದನು. ಅಷ್ಟರಲ್ಲಿ ರಾಜಧಾನಿಯಿಂದ ಕಾಗದವು ಬಂದಿತ್ತು, ಕೂಡಲೆ ಹಿಂದಿರುಗಬೇಕೆಂದು. ಚಂದ್ರಾಪೀಡನು ತಂದೆಯ ವಚನಕ್ಕೆ ಮನ್ನಣೆಯಿತ್ತು, ಸೈನ್ಯದೊಡನೆ ಬರಲು ವೈಶಂಪಾಯನನಿಗೆ ಹೇಳಿ ಪತ್ರಲೇಖೆಯನ್ನು ಕರೆತರಲು ಮೇಘನಾದನನ್ನು ಬಿಟ್ಟು, ರಾಜಧಾನಿಗೆ ಮರಳಿದನು.

ಚಂದ್ರಾಪೀಡನು ರಾಜಧಾನಿಗೆ ಬಂದರೂ ಕಾದಂಬರಿಯ ಯೋಚನೆ ತಪ್ಪಲಿಲ್ಲ; ಪತ್ರಲೇಖೆ ಬಂದು ಕಾದಂಬರಿಯ ವಿರಹವ್ಯಥೆಯನ್ನು ವರ್ಣಿಸಿದ ಮೇಲಂತೂ ಸರಿಯೆ; ಅದಕ್ಕೆ ಮತ್ತೆ ಕೇಯೂರಕನು ಕಾದಂಬರಿಯಿಂದ ತಂದ ಸಂದೇಶ ನೆರವಾಯಿತು, ವೈಶಂಪಾಯನನು ರಾಜಧಾನಿಗೆ ಬರುವ ದಾರಿಯನ್ನೇ ಚಂದ್ರಾಪೀಡನು ನೋಡುತ್ತಿದ್ದನು, ಹಾಗೆಂದು ಸಂದೇಶವನ್ನೂ ಕಾದಂಬರಿಗೆ ಕೇಯೂರಕ, ಪತ್ರಲೇಖೆಯರ ಮುಖಾಂತರ ಮುಟ್ಟಿಸಿದನು. ಆದರೆ ವೈಶಂಪಾಯನನ ಬರುವಿಕೆಯ ಲಕ್ಷಣವೇ ಇಲ್ಲ. ಚಂದ್ರಾಪೀಡನು ತಾನೇ ಹೋಗಿ ನೋಡಲಾಗಿ, ಅಚ್ಛೋದ ಸರಸ್ತೀರವನ್ನು ಬಿಟ್ಟು ಬರಲು ವೈಶಂಪಾಯನನು ಎಂದಿಗೂ ಒಪ್ಪಲಿಲ್ಲವೆಂದು ತಿರುಗಿ ಬರುತ್ತಿದ್ದ ಸೈನಿಕರು ಹೇಳಿದರು. ಹಾಗಾದರೆ ವಿಷಯವೇನೆಂದು ತಿಳಿಯಲು ತಾನೇ ಹೋಗುವದಾಗಿ ಚಂದ್ರಾಪೀಡನು ತಾಯಿ-ತಂದೆಗಳ ಅಪ್ಪಣೆಯನ್ನು ಪಡೆದು ಹೊರಟನು.

ಮಿತ್ರನನ್ನು ನೋಡುವ ಹಂಬಲದಿಂದ, ಕಾದಂಬರಿಯ ಸಮಾಗಮದಾಶೆಯಿಂದ, ಚಂದ್ರಾಪೀಡನ ಮನಸ್ಸು ಇಂದ್ರಾಯುಧದೊಡನೆಯೇ ಹಾರುತ್ತಿತ್ತು. " ಗೆಳೆಯನನ್ನು ಸಂತೈಸಿ, ಅವನೊಂದಿಗೆ ಮಹಾಶ್ವೇತೆಯ ಆಶ್ರಮಕ್ಕೆ ಹೋಗಿ, ಅಲ್ಲಿಂದ ಮುಂದೆ ಇಬ್ಬರೂ ಕಾದಂಬರಿಯ ಬಳಿ ಹೋಗುವೆವು. ಓಹೋ, ನನ್ನನ್ನಿದಿರುಗೊಳ್ಳಲು ಕಾದಂಬರಿಯು ತವಕದಿಂದೇಳುವಳು. ಕಾದಂಬರಿಗೆ ಹೇಳಿ, ಮದಲೇಖೆಗೂ, ವೈಶಂಪಾಯನನಿಗೂ ವಿವಾಹ ಮಾಡಿಸಿದರೆ ಹೇಗೆ?" ಎಂದು ದಾರಿಯುದ್ದಕ್ಕೂ ಚಂದ್ರಾಪೀಡನ ಮನಸ್ಸು ಎಣಿಕೆ ಹಾಕುತಿತ್ತು. ಮಹಾಶ್ವೇತೆಯ ಆಶ್ರಮದವರೆಗೂ ವೈಶಂಪಾಯನನ ಸುಳಿವು ಹತ್ತಲಿಲ್ಲ; ಅವಳೆಡೆಗೆ ಬಂದು ನೋಡಿದರೆ, ಎಡೆಬಿಡದೆ ಕಣ್ಣೀರು ಸುರಿಸುತ್ತ ಕುಳಿತಿದ್ದಳು; ಕಾದಂಬರಿಗೇನಾದರೂ ಕೇಡು ಸಂಭವಿಸಿತೋ ಏನೋ ಎಂದು ಚಂದ್ರಾಪೀಡನ ಮನಸ್ಸು ಶಂಕಿಸಿತು. ಚಂದ್ರಾಪೀಡನು ಸವಿನಯವಾಗಿ ಮಹಾಶ್ವೇತೆಯನ್ನು ಕೇಳಲು, ಅವಳು ದುಃಖದಿಂದ ಹೇಳತೊಡಗಿದಳು: "ನೀನು ಉಜ್ಜಯಿನಿಗೆ ಹೋದ ಕೂಡಲೆ ನಾನಿಲ್ಲಿ ಹೊರಟು ಬಂದೆನು. ನಾನು ತಪಸ್ಸನ್ನಾಚರಿಸುತ್ತಿರುವಾಗ ನಿನ್ನ ಓರಿಗೆಯ ಬ್ರಾಹ್ಮಣಕುಮಾರನೊಬ್ಬನು ನನ್ನನ್ನು ದುರದುರನೆ ನೋಡುತ್ತ, ಕಾಮುಕನಂತೆ ಮಾತಾಡಿದನು, 'ಕೋಮಲೆ, ನಿನ್ನಂಥವರು ತಪಸ್ಸನ್ನಾಚರಿಸುವದೇ?' ಎಂದು. ಪುಂಡರೀಕನನ್ನಲ್ಲದೆ ಅನ್ಯರನ್ನು ಸ್ಮರಿಸದ ನಾನು, ಅವನು ನಮ್ಮ ಗುಹೆಯತ್ತ ಬಾರದಂತೆ ನೋಡಿಕೊಳ್ಳಲು ತರಲಿಕೆಗೆ ಹೇಳಿ ಹೊರಟು ಹೋದೆನು. ಆದರೂ ಅವನು ಕೇಳದೆ ಒಂದು ರಾತ್ರಿ ಮೇರೆಮೀರಿ ನಡೆದುದರಿಂದ, ನಾನು ರೇಗಿ 'ಗಿಳಿಯಾಗಿ ಜನ್ಮ ತಾಳು,' ಎಂದು ಶಾಪವನ್ನು ಕೊಟ್ಟೆನು. ಕೂಡಲೇ ಆತನು ಭೂಮಿಗಿಳಿದುಹೋದನು. ಅವನು ನಿನ್ನ ಮಿತ್ರನೆಂಬುದು ಆಮೇಲೆ ತಿಳಿಯಿತು" ಎಂದು ಮಹಾಶ್ವೇತೆ ಹೇಳುವಷ್ಟರಲ್ಲಿಯೇ ಚಂದ್ರಾಪೀಡನು ನೆಲಕ್ಕುರುಳಿದನು; ಮಹಾಶ್ವೇತೆ ಮೂರ್ಛೆ ಹೋದಳು; ತರಲಿಕೆ ಅಳತೊಡಗಿದಳು; ಚಂದ್ರಾಪೀಡನ ಆಗಮನದ ವಾರ್ತೆಯನ್ನು ಕೇಳಿ ಅಲ್ಲಿಗೆ ಬಂದಿದ್ದ ಕಾದಂಬರಿ, ಪತ್ರಲೇಖೆಯರೂ ಮೂರ್ಛೆಹೋದರು. ಕೆಲ ಸಮಯದ ಮೇಲೆ ಕಾದಂಬರಿಯು ಎಚ್ಚತ್ತು ಸಹಗಮನಕ್ಕೆ ಸಿದ್ಧಳಾಗಲು, ದಿವ್ಯಧ್ವನಿಯೊಂದು ಕೇಳಿಸಿತು: 'ಮಹಾಶ್ವೇತೆ, ಹಿಂದೆ ನಿನಗೆ ವಚನಕೊಟ್ಟಂತೆ ಪುಂಡರೀಕನ ದಿವ್ಯದೇಹವು ನಿನಗಾಗಿ ಕಾಯುತ್ತಿದೆ. ಈ ಚಂದ್ರಾಪೀಡನಾದರೂ ನಿತ್ಯನು. ಈತನ ದೇಹವನ್ನು ಜೋಕೆಯಿಂದ ಕಾಯುತ್ತಿರಿ. ಈತನೊಡನೆ ಕಾದಂಬರಿಯ ಪುನಃಸಮಾಗಮವಾಗುವದು ನಿಶ್ಚಿತ.' ಬಳಿಕ ಪತ್ರಲೇಖೆ ಮೂರ್ಛೆ ತಿಳಿದೆದ್ದವಳೇ ಹೋಗಿ ಇಂದ್ರಾಯುಧದೊಡನೆ ಅಚ್ಛೋದಸರಸ್ಸಿನಲ್ಲಿ ಹಾರಿಬಿಟ್ಟಳು. ಒಡನೆಯೇ ಕೇಯೂರಕನು, ಎದ್ದು ಬಂದು ಹೇಳತೊಡಗಿದನು, "ಪುಂಡರೀಕನು ವಿರಹವಿಹ್ವಲನಾಗಿ ಚಂದ್ರನನ್ನು ಕುರಿತು 'ನೀನು ಎರಡು ಸಲ ಮನುಷ್ಯನಾಗಿ ಹುಟ್ಟು' ಎಂದು ಶಪಿಸಿದನಂತೆ, ಆದ್ದರಿಂದ ಕ್ರುದ್ಧನಾದ ಚಂದ್ರನು, 'ನೀನೂ ನನ್ನೊಡನೆ ಸುಖದುಃಖವನ್ನನುಭವಿಸು,' ಎಂದು ಶಾಪವಿತ್ತು, ಪುಂಡರೀಕನ ದೇಹವನ್ನು ಈಗ ಚಂದ್ರಲೋಕದಲ್ಲಿ ಕಾಪಾಡುತ್ತಿದ್ದಾನೆ. 'ಶ್ವೇತಕೇತು ಮುನಿಗಳಿಗೆ ಆಯುಷ್ಕಾಮ ಹೋಮವನ್ನು ಮಾಡುವಂತೆ ತಿಳಿಸು' ಎಂದು ಚಂದ್ರನು ನನಗೆ ಅಪ್ಪಣೆ ವಿಧಿಸಿದ್ದನು. ಮುನಿಗೆ ಈ ಮಾತನ್ನು ತಿಳಿಸಲು ಲಗುಬಗೆಯಿಂದ ಬರುವಾಗ ನಾನು ವೈಮಾನಿಕನೊಬ್ಬನನ್ನು ದಾಟಿದೆನು.

ನಾನು ಅರಿಯದೆ ತಪ್ಪು ಮಾಡಿದೆನೆಂದು ಎಷ್ಟು ಹೇಳಿದರೂ ಕೇಳದೆ 'ನೀನು ವಾಹನವಾಗು' ಎಂದು, ಅವನು ಶಾಪವಿತ್ತನು. 'ಆದರೂ ಆಗಲಿ, ನನ್ನ ಗೆಳೆಯನ ಬಳಿ ಇರುವಂತೆ ಅನುಗ್ರಹಿಸು,' ಎಂದು ಹೇಳಿಕೊಳ್ಳಲು ಅವನು 'ತಥಾಸ್ತು' ಎಂದನು. ಚಂದ್ರನು ತಾರಾಪೀಡರಾಜನ ಮಗನಾಗಿಯೂ, ಪುಂಡರೀಕನು ಮಂತ್ರಿಕುಮಾರ ವೈಶಂಪಾಯನನಾಗಿಯೂ, ಹುಟ್ಟಿದರು. ನಾನು ಇಂದ್ರಾಯುಧವಾಗಿ ಸಮುದ್ರದಲ್ಲಿ ಬಿದ್ದೆನು. ಪಾರಶೀಕರಾಜನು ನನ್ನನ್ನು ಹಿಡಿದು ತಾರಾಪೀಡನಿಗೆ ಕಾಣ್ಕೆಯಾಗಿ ಒಪ್ಪಿಸಿದನು. ನಾನು ಚಂದ್ರಾಪೀಡನಿಗೆ ವಾಹನವಾದೆನು. ಅಚ್ಛೋದ ಸರಸ್ಸಿನಲ್ಲಿ ಬಿದ್ದೊಡನೆಯೇ, ನನ್ನ ಶಾಪ ಕಳೆಯಿತು. ನಾನೀಗ ಶ್ವೇತಕೇತು ಮುನಿಗಳ ಬಳಿಗೆ ಹೋಗುತ್ತೇನೆ" ಎಂದು ಹೇಳಿ ಕೇಯೂರಕನು ಹೊರಟುಹೋದನು.

ಮಹಾಶ್ವೇತೆ ಕಾದಂಬರಿಯನ್ನು ವಿಧವಿಧವಾಗಿ ಸಂತೈಸಿದಳು— "ತಂಗೀ ನಮ್ಮಿರ್ವರ ಸುಖದುಃಖ ಒಂದೇ. ತಾಳು, ಕೊಂಚ ತಾಳು, ಸಾಕ್ಷಾತ್ ಚಂದ್ರನೇ ಒಲಿದಿರುವಾಗ ಇನ್ನೇನು!" ಎಂದು. ಚಂದ್ರಾಪೀಡನ ತಾಯಿ ತಂದೆಗಳು ಮಗನ ವಿಷಯವನ್ನೆಲ್ಲ ತಿಳಿದು, ಅಲ್ಲಿಗೆ ಬಂದು ಶೋಕಾಕುಲರಾಗಿದ್ದರು. ಇದು ಚಂದ್ರಾಪೀಡನ ವಿಚಾರವಾಯಿತು. ಪುಂಡರೀಕನು ಮುನಿಕುಮಾರನಾಗಿದ್ದು, ಮಹಾಶ್ವೇತೆಗೆ ಮುಗ್ಧನಾಗಿ, ದೇವತ್ವವನ್ನು ಕಳೆದುಕೊಂಡು, ಬಳಿಕ ವೈಶಂಪಾಯನನಾಗಿ, ಮತ್ತೆ ಮಹಾಶ್ವೇತೆಯನ್ನು ಮೋಹಿಸಿ ಶಾಪದಿಂದ ಗಿಳಿಯಾದನು" ಎಂದು ಜಾಬಾಲಿ ಮುನಿಗಳು ಹೇಳುತ್ತಿರಲು, ಗಿಳಿಗೆ ಎಚ್ಚರ ಬಂದು, ಹಿಂದಣ ಜನ್ಮಗಳ ವಿದ್ಯೆಯೆಲ್ಲ ಪ್ರಾಪ್ತವಾಗಿ, ಮುನಿವರರನ್ನು ಕುರಿತು ಹೇಳತೊಡಗಿತು: " ಜಾತಿಸ್ಮರತೆಯಿಂದ ಮುಕ್ತಿಯುಂಟಾಗುತ್ತದೆಂಬ ಮಾತು ಸುಳ್ಳು. ಏಕೆಂದರೆ ಮಹಾಶ್ವೇತೆಯಲ್ಲಿಯ ನನ್ನ ಅನುರಾಗ ಜನ್ಮಜನ್ಮಕ್ಕೂ ಹೆಚ್ಚಾಗುತ್ತಿದೆ. ಮಿತ್ರ ಚಂದ್ರನನ್ನು ನೋಡಬೇಕೆಂಬ ಆಶೆಯಾಗಿದೆ. ಅವನು ಎಲ್ಲಿರುವನೆಂಬುದನ್ನು ಹೇಳಿದರೆ ತುಂಬಾ ಉಪಕಾರವಾಗುವದು."

ಮುನಿಗಳು, " ಪಕ್ಕಗಳು ಬಲಿತಮೇಲೆ ಹೋಗುವೆಯಂತೆ" ಎಂದು ಸಮಾಧಾನ ಹೇಳಿ ಹೊರಟುಹೋದರು. ಇಷ್ಟರಲ್ಲಿ ನನ್ನ ಪೂರ್ವಜನ್ಮದ ಮಿತ್ರನಾದ ಕೇಯೂರಕನು ಬಂದು ತಂದೆಯಾದ ಶ್ವೇತಕೇತು ಮುನಿಗಳು ಆಯುಷ್ಕಾಮಹೋಮವನ್ನು ಮಾಡುತ್ತಿರುವರೆಂದೂ, ತಾಯಿಯಾದ ಲಕ್ಷ್ಮೀದೇವಿಯು ಅದಕ್ಕೆ ನೆರವಾಗಿರುವಳೆಂದೂ ಹೇಳಿ ಹೋದರು. ಆ ಹೋಮ ಮುಗಿಯುವವರೆಗೆ ನಾನು ಇಲ್ಲಿಯೇ ಇರಬೇಕೆಂದು ಅವರ ಆಜ್ಞೆಯಂತೆ! ಕೆಲಕಾಲದ ತರುವಾಯ ನನ್ನ ಪಕ್ಕಗಳು ಬಲಿತು ಹಾರಲನುವಾದೆನು. ಚಂದ್ರಾಪೀಡನನ್ನು ಕಾಣುವ ಆಶೆಯಿಂದ, ಜಾಬಾಲಿ ಮುನಿಗಳ ಆಶ್ರಮದಿಂದ ತಪ್ಪಿಸಿಕೊಂಡು ಹಾರಿದೆನು. ಮಾರ್ಗಮಧ್ಯದಲ್ಲಿ ದಣಿದು ಒಂದು ಗಿಡದ ಮೇಲೆ ವಿಶ್ರಮಿಸಿರುವಾಗ, ನನ್ನನ್ನಾರೋ ಬಲೆಯಲ್ಲಿ ಹಿಡಿದಿದ್ದರು. ಗೆಳೆಯನನ್ನು ನೋಡಲು ಹೊರಟಿದ್ದೇನೆಂದು ಎಷ್ಟು ಅಂಗಲಾಚಿ ಬೇಡಿಕೊಂಡರೂ ಆ ದುಷ್ಟನು ನನ್ನನ್ನು ಬಿಡಲಿಲ್ಲ. ನನ್ನನ್ನೊಯ್ದು ಆ ಚಾಂಡಾಲ ಕನ್ಯೆಗೆ ಕೊಟ್ಟನು. ಅವಳು ನನ್ನನ್ನು ಪಂಜರದಲ್ಲಿರಿಸಿ ನಿನ್ನ ಬಳಿಗೆ ತಂದಳು.

ಏಕೆ ತಂದಳೆಂಬುದು ಮಾತ್ರ ನನಗೆ ಗೊತ್ತಾಗದು" ಎಂದು ಹೇಳಿ ಗಿಳಿ ಸುಮ್ಮನಾಯಿತು. ರಾಜನು ಆಶ್ಚರ್ಯದಿಂದ ಚಾಂಡಾಲ ಕನ್ಯೆಯನ್ನು ಕರೆಸಿ ಕೇಳಲು ಅವಳು ಹೇಳತೊಡಗಿದಳು, "ಶೂದ್ರಕ ರಾಜನೇ ಚಂದ್ರಾಪೀಡನಾಗಿದ್ದ ಚಂದ್ರನು; ಈ ಗಿಳಿಯೇ ವೈಶಂಪಾಯನನಾಗಿದ್ದ ಪುಂಡರೀಕನು, ನಾನೇ ಲಕ್ಷ್ಮಿ. ಶ್ವೇತಕೇತುಗಳ ಆಜ್ಞೆಯಂತೆ ಹೋಮ ಮುಗಿಯುವವರೆಗೂ ಇವನನ್ನು ಸೆರೆಯಲ್ಲಿಟ್ಟಿದ್ದೆ. ಈಗ ಹೋಮ ಮುಗಿಯುತ್ತ ಬಂದದ್ದರಿಂದ, ಮಿತ್ರನ ಬಳಿಗೆ ಕರೆದು ತಂದಿದ್ದೇನೆ. ಇನ್ನು ನೀವೀರ್ವರೂ ದಿವ್ಯದೇಹಗಳನ್ನು ಪಡೆದು ಇಷ್ಟಜನಸಮಾಗಮಸುಖವನ್ನು ಪಡೆಯಬಹುದು" ಎಂದು ಹೇಳಿದವಳೇ ಲಕ್ಷ್ಮಿ ಆಕಾಶಕ್ಕೆ ಹಾರಿದಳು. ಚಂದ್ರಾಪೀಡ, ವೈಶಂಪಾಯನರು ದಿವ್ಯದೇಹಗಳನ್ನು ಪಡೆದು ತಮ್ಮತಮ್ಮ ಇಷ್ಟಜನರೊಡನೆ ಸುಖವಾಗಿದ್ದರು.

ಕಥೆ ಇಲ್ಲಿಗೆ ಸುಖಾಂತವಾಗಿ ಕೊನೆಗಾಣುತ್ತದೆ.

ಕಾದಂಬರಿಯ ಕಥಾವಿಮರ್ಶೆ

ಬಾಣಭಟ್ಟನು ಕೃತಿಗೆ "ಕಾದಂಬರಿ" ಎಂಬ ಹೆಸರಿಟ್ಟದ್ದರಿಂದ, ಮತ್ತು 'ಕಾದಂಬರಿ' ಎಂಬ ನಾಯಿಕೆಯೂ ಕಥೆಯಲ್ಲಿದ್ದುದರಿಂದ, ಈ ಕೃತಿಯಲ್ಲಿ 'ಕಾದಂಬರಿ'ಯ ಕಥೆಯೇ ಮುಖ್ಯ ಎಂದು ತಿಳಿದುಕೊಳ್ಳಬಹುದು. ಇದಿಷ್ಟು ಆಧಾರವಿಲ್ಲದೆ ಹೋದರೆ ಮುಖ್ಯ ಕಥೆ ಯಾವುದು, ಪ್ರಾಸಂಗಿಕವಾಗಿ ಬರುವ ಗೌಣ ಕಥೆ ಯಾವುದು ಎಂದು ತಿಳಿದುಕೊಳ್ಳುವದೇ ಅಸಾಧ್ಯವಾಗಿ ಬಿಡುತ್ತದೆ. ಓದುತ್ತ ಹೋದಂತೆ, ನಮಗೆ ಮೊದಲು ಕಾಣಿಸಿಕೊಳ್ಳುವವಳು ಮಹಾಶ್ವೇತೆಯೇ! ಈ ಮಹಾಶ್ವೇತೆಯ ಮೂಲಕ ಕಾದಂಬರಿಯ ಪರಿಚಯ ದೈವವಶಾತ್ ಅಲ್ಲಿಗೆ ಬಂದಿದ್ದ ಚಂದ್ರಾಪೀಡನಿಗಾಗುವದು. ಪ್ರಥಮ ದೃಷ್ಟಿಯಲ್ಲಿಯೇ ಅವರಿಬ್ಬರಲ್ಲಿ ಅನುರಾಗವುಂಟಾಗುವದು. ಅವರೀರ್ವರಲ್ಲಿ ವಿರಹವುಂಟಾಗಿ ಮತ್ತೆ ಮಿಲನವಾಗುವಲ್ಲಿ ಕಥೆ ಪರಿಸಮಾಪ್ತಿಯಾಗುವದು. ಆದರೆ ಇವರಿಬ್ಬರ ಕಥೆಗಿಂತ ಪ್ರಾಸಂಗಿಕವಾದುದೆಂದು ನಾವು ತಿಳಿಯುವ ಮಹಾಶ್ವೇತೆಯ ಕಥೆಯೇ ಚಿತ್ತಾಕರ್ಷಕವಾಗಿದೆ. ಮುಖ್ಯ ಕಥೆಯ ಯಾವ ಭಾಗಕ್ಕೂ ಅನ್ಯಾಯವಾಗದಂತೆ, ಪ್ರಾಸಂಗಿಕಘಟನೆಯನ್ನು, ಇನ್ನುಳಿದ ವರ್ಣನೆಗಳನ್ನು ಔಚಿತ್ಯವರಿತು, ಮೇರೆಮೀರದಂತೆ, ತರಬೇಕಾದುದು ಲೇಖಕನ ಕರ್ತವ್ಯ. 'ಕಾದಂಬರಿ'ಯಲ್ಲಿ ಮುಖ್ಯ ಕಥೆಗಿಂತ ಗೌಣ ಘಟನೆಗಳು, ಗಿಳಿಯ ಕಥೆ, ಮಹಾಶ್ವೇತೆಯ ಕಥೆಗಳು ಹೆಚ್ಚು ರಮ್ಯವಾಗಿ ಬಂದಿವೆ. ಅಲ್ಲದೆ ವರ್ಣನೆಗಳಂತೂ ಅಸಂಖ್ಯ — ಗಿಳಿಮರಿ, ವಿಂಧ್ಯಾಟವಿ, ಬೇಡರಪಡೆ, ಶೂದ್ರಕ ನೃಪತಿ, ಅವನ ಆಸ್ಥಾನ, ಅಲ್ಲಿಯ ಮಂತ್ರಿಗಳು, ವಿದ್ವಾಂಸರು, ವಾರವನಿತೆಯರು, ಹಾರೀತ, ಜಾಬಾಲಿಯ ತಪೋಭೂಮಿ, ಕಿನ್ನರಮಿಥುನ, ಮಹಾಶ್ವೇತೆ, ಗಂಧರ್ವರಾಜಧಾನಿ, ಕಾದಂಬರಿ-ಇತ್ಯಾದಿಯಾಗಿ ಚೇತನಾ ಚೇತನ ವಸ್ತುಗಳನ್ನೂ ಲೆಕ್ಕಿಸದೆ ಬಾಣ ನಿಷ್ಪಕ್ಷಪಾತ ಬುದ್ಧಿಯಿಂದ ತನ್ನ ವರ್ಣನೆಗಳನ್ನು ಮುಂದುವರಿಸುತ್ತಾನೆ.

ಬಾಣನಿಗೆ ಕಥೆ ಒಂದು ನೆಪ ಮಾತ್ರ. ಕಥಾಸೂತ್ರವನ್ನು ಅಲ್ಲಿಯೇ ಬಿಟ್ಟು ರಸಿಕವೃಂದ, ಪದಬಂಧಪ್ರೌಢಿಮೆಯನ್ನೂ, ಭಾಷಾಪ್ರಭುತ್ವವನ್ನೂ ಕವಿಯು

ವರ್ಣನಾಶಕ್ತಿಯನ್ನೂ ಮೆಚ್ಚಿ ತಲೆದೂಗಿದರೆ, ಕವಿಗೆ ಅದೇ ಸಮಾಧಾನ! ಅಚ್ಛೋದ ಸರಸ್ಸಿನ ವರ್ಣನೆಯೇ ಆಗಲಿ, ಮಹಾಶ್ವೇತೆಯ ವಿರಹಪೀಡಿತ ಮನೋವೇದನೆಯೇ ಆಗಲಿ ಅಥವಾ ಸಮುದ್ರವಲಯಾಂಕಿತ ಭೂಮಿಗಧಿಪತಿ ಶೂದ್ರಕ ರಾಜನೇ ಆಗಿರಲಿ, ಕವಿ ಅಷ್ಟೇ ಸೂಕ್ಷ್ಮನಿರೀಕ್ಷಣೆಯಿಂದ, ಅಂತರ್ದೃಷ್ಟಿಯಿಂದ, ಅವರ ಸುಸ್ಪಷ್ಟ ಚಿತ್ರವನ್ನು ನಮ್ಮೆದುರು ಇಡುತ್ತಾನೆ. ಟಾಗೋರರು ಹೇಳುವಂತೆ, "ಸಮಸ್ತ ಕಾದಂಬರಿ ಒಂದು ಚಿತ್ರಶಾಲೆ. ಇನ್ನುಳಿದ ಲೇಖಕರು ಘಟನೆಗಳನ್ನು ಹೇಳಿ ಕಥೆಯನ್ನು ಮುಂದುವರಿಸಿದರೆ ಬಾಣಭಟ್ಟನು ಚಿತ್ರಗಳನ್ನು ಶೃಂಗರಿಸಿ, ಕಥೆಯನ್ನು ಹೇಳುತ್ತಾನೆ. ಅದರಿಂದಲೇ ಅವನ ಕಥೆ ಮಂದೆ ಸಾಗುತಕ್ಕುದಲ್ಲ." ಚಿತ್ರಶಾಲೆಯಲ್ಲಿ ಪ್ರವೇಶಿಸಿದಂತೆನಿಸಿದರೂ, ಚಿತ್ರಗಳಿಂದಾಗಬೇಕಾದ ಕಥೆಯ ಒಟ್ಟು ಪರಿಣಾಮ ಇವುಗಳಿಂದಾಗುವುದಿಲ್ಲ. ಚಿತ್ರಗಳಲ್ಲಿ ಧಾರಾವಾಹಿಕತೆ ಇಲ್ಲದಿರುವದೇ ಇದಕ್ಕೆ ಕಾರಣ.

"ಬಾಣನಿಗೆ ಕಥೆಯನ್ನು ಹೇಳಬೇಕೆಂಬ ಸ್ಪಷ್ಟ ಉದ್ದೇಶವಿದ್ದರೂ ಆತನು ದೇವವಾಣಿಯ ಗೌರವಕ್ಕೆ ಎಲ್ಲಿಯೂ ಅನ್ಯಾಯವಾಗದಂತೆ ನೋಡಿಕೊಂಡಿದ್ದಾನೆ. ಸಂಸ್ಕೃತಭಾಷೆಯನ್ನು ಅನುಚರರಿಂದೊಡಗೂಡಿದ ಚಕ್ರವರ್ತಿಗಳಂತೆ ಮುಂದೆ ಮಾಡಿಕೊಂಡು, ಕಥೆಯು ಕಣ್ಣಿಗೆ ಬೀಳದಂತೆ ಅದರ ಹಿಂದೆ ಆತಪತ್ರವನ್ನು ರಾಜಮರ್ಯಾದೆ ಸಹಿತವಾಗಿ ಹಿಡಿದುಕೊಂಡು ಹೋಗುವಲ್ಲಿಯೇ ಅವನಿಗೆ ಹೆಮ್ಮೆ!"

ಕಥೆಯ ಪ್ರಾರಂಭವನ್ನು ಕವಿಯೇ ಮಾಡುವನಾದರೂ ಕಥೆಯ ಬಹುಭಾಗ ಭಿನ್ನ ಭಿನ್ನ ಪಾತ್ರಗಳ ಬಾಯಲ್ಲಿಯೇ ಬರುವದು. ಗಿಳಿಮರಿ, ಜಾಬಾಲಿ ಮುನಿಗಳು, ಮಹಾಶ್ವೇತೆ, ಕೇಯೂರಕ, ಚಾಂಡಾಲ ಕನ್ಯೆ — ಇವರೆಲ್ಲ ಕಥೆಯನ್ನು ಮುಂದುವರಿಸುವರು. ಆದರೆ ಸಾಮಾನ್ಯ ಓದುಗನು ಮಾತ್ರ, ಕಥೆ ಎಲ್ಲಿ ಪ್ರಾರಂಭವಾಗಿ ಎಲ್ಲಿ ಹೊರಟಿತೆಂದು ಹೇಳುವದು ಅಸಾಧ್ಯವಾಗಿ ಬಿಡುತ್ತದೆ. ಇವರೆಲ್ಲರೂ ಕಥೆಯನ್ನು ಹೇಳುವದು ಒಂದೇ ಶೈಲಿಯಲ್ಲಿ; ಗಿಳಿಮರಿಯದೂ ಅದೇ ಶೈಲಿ. ಜಾಬಾಲಿಮುನಿಗಳದೂ ಅದೇ ಶೈಲಿ! ಪಾತ್ರಾಪಾತ್ರಗಳ ಔಚಿತ್ಯವನ್ನು ಬಾಣನು ಅರಿಯ ಎಂದು ಕಟುವಾಗಿ ಹೇಳುವದಕ್ಕಿಂತಲೂ, ಓದುಗರ ಲಕ್ಷ್ಯವು ಕೂಡ ಇತ್ತ ಹೊರಳದಂತೆ ಭಾಷೆಯ ದೈವೀ ಮೆರುಗಿನಿಂದ ಸಹೃದಯರನ್ನು ಸೆರೆಹಿಡಿಯುವ ಶಕ್ತಿ ಬಾಣನ ಲೇಖನಿಯಲ್ಲಿದೆ ಎಂದು ಹೇಳುವದೇ ಹೆಚ್ಚು ಒಳ್ಳೆಯದು! ಬಾಣನ ವಾಣಿಯೊಂದು ದೈವೀಧಾರೆ!

ಕಾದಂಬರಿಯನ್ನು ರಚಿಸುವಲ್ಲಿ ಬಾಣನ ಉದ್ದೇಶ, ವರ್ಣನೆಯೇನೋ ಎಂದು ಭಾಸವಾಗುವ ಸಂಭವವಿದ್ದರೂ ಕಾದಂಬರೀ ಕಥೆಯ ಸಂವಿಧಾನ ಬೇರೆ! ಈ ಕಥೆಗೆ ಸಂವಿಧಾನಗಳೆರಡು; ಒಂದು ತ್ಯಾಗದಿಂದ, ಸಹನೆಯಿಂದ ಪ್ರೀತಿಯು ಪಾವಿತ್ರ್ಯದ ಚರಮಸೀಮೆಯನ್ನು ಮುಟ್ಟಬಲ್ಲುದು ಎಂಬುದು; ಶುದ್ಧಪ್ರೇಮದ ಸಂಸ್ಕಾರ ಜನ್ಮಜನ್ಮಾಂತರಗಳಲ್ಲೂ ಬೆನ್ನುಬಿಡದು, ಎಂಬುದು ಮತ್ತೊಂದು! ಮೊದಲನೆಯದು ಕಾದಂಬರಿ, ಮಹಾಶ್ವೇತೆಯರ ಜೀವನ ಚರಿತೆಯಿಂದ ವ್ಯಕ್ತವಾಗುತ್ತದೆ. "ಕಾದಂಬರಿ" ಒಂದು ಪ್ರಣಯಕಥೆ ನಿಜ. ಆದರೆ ಈ ಪ್ರಣಯದ ಸ್ವರೂಪ ವಿಕಾರರಹಿತವಾಗಿ

ಗಂಭೀರವಾಗಿದೆ, ಪವಿತ್ರವಾಗಿದೆ. ಕಾದಂಬರಿಯ ಪ್ರಥಮದರ್ಶನದಿಂದಲೇ ಹುಟ್ಟಿದ ಅನುರಾಗ ಸೂಕ್ಷ್ಮವಾಗಿ ಬೆಳೆದು, ಚಂದ್ರಾಪೀಡನ ಪುನರ್ಜನ್ಮದಲ್ಲೂ ಬೆನ್ನಟ್ಟಿ ವಿಕಸಿತವಾದುದನ್ನು ಕವಿ ಬಹು ರಮ್ಯವಾಗಿ ವರ್ಣಿಸಿದ್ದಾನೆ, ನಿಜ; ಆದರೆ ಕಾದಂಬರಿಯ ಈ ಕಥೆಗಿಂತ ಮಹಾಶ್ವೇತೆಯ ಪ್ರಣಯಕಥೆಯೇ ಹೆಚ್ಚು ಮಾರ್ಮಿಕವಾಗಿ ಮೂಡಿಬಂದಿದೆ ಕಾದಂಬರಿಯಲ್ಲಿ! "ಸ್ನೇಹಾನಾಹುಃ ಕಿಮಪಿ ವಿರಹೇಧ್ವಂಸಿನಸ್ತೇ ಅಭೋಗಾದಿಷ್ಟೇ ವಸ್ತುನ್ಯುಪಚಿತರಸಾಃ ಪ್ರೇಮರಾಶೀ ಭವಂತೀ" ಎಂಬ ಕಾಲಿದಾಸನ ಮಾತು ಮಹಾಶ್ವೇತೆ ಪುಂಡರೀಕರಲ್ಲಿ ಸತ್ಯವಾಗಿ ಪರಿಣಮಿಸಿದೆ. ವಿರಹದಿಂದ, ಅದರ ವೇದನೆಯನ್ನು ಸಹಿಸುವದರಿಂದ, ಮಹಾಶ್ವೇತೆಯ ಪ್ರೇಮ ಆಧ್ಯಾತ್ಮಿಕ ಸೌಂದರ್ಯವನ್ನು ಪಡೆದಿದೆ. ಮಹಾಶ್ವೇತೆ ಸ್ವತಃ ವಿರಹಪೀಡಿತಳಾಗಿದ್ದರೂ, ಕಾದಂಬರಿಯ ಭವಿತವ್ಯದಲ್ಲಿ ಅವಳು ವಹಿಸುವ ಆಸ್ಥೆ, ಅವಳ ದೊಡ್ಡ ಮನಸ್ಸು, ಅತಿಥಿಗಳನ್ನು ಸತ್ಕರಿಸುವ ಅವಳ ಹೃದಯ—ಇವೆಲ್ಲ ನಮ್ಮನ್ನು ಮುಗ್ಧರನ್ನಾಗಿ ಮಾಡುತ್ತವೆ.

ಶುದ್ಧಪ್ರೇಮದ ಸಂಸ್ಕಾರ ಜನ್ಮಾಂತರದಲ್ಲೂ ಬೆನ್ನುಬಿಡದು - ಎಂದು ತೋರಿಸಲು ಕವಿಯು ಜನ್ಮಗಳ ಜಟಿಲ ಸಮಸ್ಯೆಯನ್ನೇ ಎತ್ತಿಕೊಂಡಿದ್ದಾನೆ. ಸಂಸ್ಕೃತ ಸಾಹಿತ್ಯದಲ್ಲಿ ಉಳಿದೆಡೆಗೆ ಬರುವದು ಈ ಪ್ರೇಮ ಜನ್ಮಜನ್ಮಗಳಲ್ಲೂ ಇರಲಿ ಎಂಬ ಆಶೆ, ವಿಶ್ವಾಸ ಮಾತ್ರ, ರಾಮಚಂದ್ರನು ಸೀತಾದೇವಿಯನ್ನು ವನಕ್ಕಟ್ಟಿದಾಗಲೂ ಅವಳು ರಾಮನನ್ನು ಶಪಿಸದೆ 'ಮುಂದಿನ ಜನ್ಮದಲ್ಲೂ ನೀನೇ ನನ್ನ ಪತಿಯಾಗಿರಬೇಕೆಂದು ತಪಸ್ಸು ಗೈಯ್ಯುತ್ತೇನೆ' ಎನ್ನುತ್ತಾಳೆ. ಆದರೆ ಬಾಣಭಟ್ಟ ಇಲ್ಲಿ ಅದನ್ನು ಪ್ರತ್ಯಕ್ಷ ಎದುರಿಸಿದ್ದಾನೆ. ಪುಂಡರೀಕ, ಗಿಳಿ, ವೈಶಂಪಾಯನ ಈ ಮೂರು ಜನ್ಮಗಳ ಕಥೆ, ಜೊತೆಗೆ ಜಾತಿಸ್ಮರತೆ, ಕಥೆಯನ್ನು ಜಟಿಲವಾಗಿ ಮಾಡಿವೆ. ಅದೇ ರೀತಿ ಚಂದ್ರಾಪೀಡನ ಜನ್ಮಗಳ ವಿಚಾರ! ಮುಂದಣ ಜನ್ಮಕ್ಕೆ ಕಾರಣವಾದ ಪುಂಡರೀಕನ ಕಥೆ ಮಹಾಶ್ವೇತೆಯಿಂದ, ಗಿಳಿಯ ಕಥೆ ಜಾಬಾಲಿ ಮುನಿಗಳಿಂದ, ವೈಶಂಪಾಯನನ ಕಥೆ ಕೇಯೂರಕ, ಚಾಂಡಾಲ ಕನ್ಯೆಯರಿಂದ ವರ್ಣಿತವಾಗಿದೆ. ತಿರ್ಯಗ್ ಜಾತಿಯಲ್ಲಿ ಹುಟ್ಟಿದರೂ ಈ ಸಂಸ್ಕಾರ ಬೆನ್ನುಬಿಡದು, ಎಂಬುದನ್ನು ಕವಿ ಬಹು ಸೂಕ್ಷ್ಮವಾಗಿ ಹೇಳಿದ್ದಾನೆ. ಪುಂಡರೀಕ, ಚಂದ್ರಾಪೀಡರ ಜನ್ಮಾಂತರಗಳ ಸಮಸ್ಯೆಯನ್ನೂ ತಂದಿದ್ದರೆ, ಕಥೆಯ ಗತಿ ಇನ್ನೇನಾಗುತ್ತಿತ್ತೊ! ಆದರೆ ಅವರನ್ನು ಹಾಗೇ ಇರಗೊಟ್ಟು ತ್ಯಾಗ, ಸಹನೆಗಳ ಹಿರಿಮೆಯನ್ನು ಕವಿ ಎತ್ತಿ ತೋರಿಸಿದ್ದಾನೆ.

ಆ ಸಮಯದ ವಿಶಿಷ್ಟ ಅಭಿರುಚಿಯಿಂದ, ಅದ್ವಿತೀಯ ಶೈಲಿಯಿಂದ, ಪ್ರಣಯ ಕಥೆಯ ಸಂವಿಧಾನ ನಿರೂಪಣೆಯ ಹಿರಿಮೆಯಿಂದ, ಸಂಸ್ಕೃತ ಸಾಹಿತ್ಯದಲ್ಲಿ 'ಕಾದಂಬರಿ' ತನ್ನದೇ ಆದ ಒಂದು ಸ್ಥಾನವನ್ನು ಗಳಿಸಿದೆ ಎಂದು ಹೇಳಬಹುದು.

ಬಾಣಕವಿಯು, 'ಕಾದಂಬರಿ'ಯನ್ನು ಪೂರ್ಣವಾಗಿ ರಚಿಸಲಿಲ್ಲ. ಚಂದ್ರಾಪೀಡನು ಕಾದಂಬರಿಯ ಪ್ರಥಮ ಸಂದರ್ಶನವನ್ನು ಪಡೆದು ತಿರುಗಿ ಬರುವವರೆಗೆ ಮಾತ್ರ ಬರೆದನು. ಉಳಿದುದನ್ನು ಅವನ ಮಗ ಭೂಷಣಭಟ್ಟನು, ತಂದೆಯ ಇಚ್ಛೆಯಂತೆಯೇ ಬರೆದು ಪೂರೈಸಿದನು. ಈ ಪೂರ್ವಾರ್ಧಕ್ಕೂ, ಉತ್ತಾರಾರ್ಧಕ್ಕೂ ಶೈಲಿಯಲ್ಲಿ ಅಂತರವಿದೆ.

ಪೂರ್ವಾರ್ಧದ ದೈವೀ ವಾಗ್ಧಾರೆಯ ಮಾಯೆ ಉತ್ತರಾರ್ಧದಲ್ಲಿಲ್ಲ ಎಂದು ವಿದ್ವಾಂಸರ ಅಭಿಪ್ರಾಯ, ಏನಿದ್ದರೂ ಸಾಮಾನ್ಯ ಓದುಗನ ದೃಷ್ಟಿಯಿಂದ ಎರಡೂ ಶೈಲಿ ಅಷ್ಟೇ ಕಠಿಣ!

ಸುಬಂಧುವಿನೊಡನೆ ಸ್ಪರ್ಧಿಸಲೇಬೇಕೆಂದು ಹೊರಟಿರುವ ಬಾಣ, ಕಾದಂಬರಿ, ಹರ್ಷಚರಿತಗಳಲ್ಲಿ, ಸ್ವಲ್ಪ ಕೃತ್ರಿಮನಾಗಿ ಕಾಣುತ್ತಾನೆ. ಕಥೆಯಲ್ಲಿ ಕಥೆಯನ್ನು ತೊಡಕಿಸಿರುವಲ್ಲಿ, 'ದಶಕುಮಾರಚರಿತ' 'ವಾಸವದತ್ತ' ಗಳನ್ನು 'ಕಾದಂಬರಿ' ಹೋಲುತ್ತಿದ್ದರೂ ಕಥಾಸರಣಿ ಸರಳವಾಗಿಲ್ಲ. ಗುಣಾಢ್ಯನ ಬೃಹತ್ಕಥೆ 'ಕಾದಂಬರಿ'ಗೆ ಮೂಲವಾಗಿದ್ದರೂ ಬಾಣನು ಅದನ್ನು ವಿಸ್ತರಿಸಿ, ಪಂಡಿತ ಕವಿಯ ಕುಂಚದಿಂದ ಅಲ್ಲಲ್ಲಿ ಬಣ್ಣ ಬಳೆದು ಹೇಳುವ ಪ್ರಯತ್ನ ಮಾಡಿದ್ದಾನೆ. ಕಥೆಯ ಬಹುಭಾಗವನ್ನು ಗಿಳಿಮರಿಯಿಂದ ಹೇಳಿಸುವದು ಅಷ್ಟೊಂದು ಸಮಂಜಸವಾಗಿಲ್ಲ. ಶೂದ್ರಕನ ಪಾತ್ರ ಕಥೆಯಲ್ಲಿ ಬರದೇಹೋಗಿದ್ದರೂ ನಡೆಯಬಹುದಿತ್ತು ಎನ್ನುವ ಹಾಗಿದೆ. ಆದರೆ ಕವಿಯ ಕೌಶಲ್ಯ ಮಹಾಶ್ವೇತೆಯ ಧೀರಗಂಭೀರ ಪ್ರಣಯ, ಕಾದಂಬರಿಯ ಚಂಚಲಚಿತ್ತ ಇವುಗಳನ್ನು ಸ್ಪಷ್ಟವಾಗಿ, ಒಂದಕ್ಕೊಂದು ಪೂರಕವಾಗುವಂತೆ ಚಿತ್ರಿಸುವಲ್ಲಿದೆ! ಶೂದ್ರಕ, ತಾರಾಪೀಡರ ರಾಜವೈಭವ ಒಂದೆಡೆ, ಮುನಿಗಳ ಆಶ್ರಮದ ಗಂಭೀರ ಶಾಂತತೆ ಇನ್ನೊಂದೆಡೆ! ಚಂದ್ರಾಪೀಡನಲ್ಲಿಯೇ ನಟ್ಟ ಮನಸ್ಸುಳ್ಳ 'ಕಾದಂಬರಿ'ಯ ಚಂಚಲ ಚಿತ್ರ ಮೊದಲಲ್ಲಾದರೆ; ವಿರಹದುರಿಯಿಂದ ಬಳಲಿ, ಪ್ರೇಮದ ಆಳವನ್ನು ಅರಿಯುವ 'ಕಾದಂಬರಿ'ಯ ಚಿತ್ರ ಕೊನೆಯಲ್ಲಿ! ಅವಳ ಪ್ರೇಮದ ಸಾಫಲ್ಯದಲ್ಲಿ ಬಂದೊದಗುವ ಎಡರುಗಳು ಮಾತ್ರ ಅಮಾನುಷ! ಕಥೆಯೇ ಜಟಿಲವಾದ್ದರಿಂದ ಅದು ಅನಿವಾರ್ಯ. ಶೃಂಗಾರ, ಕರುಣ ರಸಗಳನ್ನು ಚಿತ್ರಿಸುವಲ್ಲಿ ಬಾಣಕವಿ ನಿಸ್ಸೀಮನೆಂದು ಬೇರೆ ಹೇಳಬೇಕಾಗಿಲ್ಲ. ಚಂದ್ರಾಪೀಡನ ದೇಹತ್ಯಾಗವಾದಾಗ, ಈ ಮಾತು ನಿದರ್ಶನಕ್ಕೆ ಬರುವದು.

"ಬಾಣೋಚ್ಛಿಷ್ಟಂ ಜಗತ್ಸರ್ವಂ" ಎಂಬ ಮಾತು ಬಳಕೆಯಲ್ಲಿ ಬಂದಿದೆ. ಅಂತೂ ಬಾಣಕವಿ ಯಾವ ವಿಷಯವನ್ನೂ ಬಿಟ್ಟಿಲ್ಲ. ನೈಜವಾದ ಅನುಭವವಿದ್ದಲ್ಲಿ ಮಾತು ಸರಸವಾಗಿದೆ, ಇಲ್ಲದಲ್ಲಿ ಪಾಂಡಿತ್ಯ ಪ್ರಚುರವಾಗಿದೆ! ಚಂದ್ರಾಪೀಡನು ಗುರುಗೃಹದಿಂದ ಹೊರಟ ಸನ್ನಿವೇಶ ಚಿತ್ತಾಕರ್ಷಕವಾಗಿದೆ. ವ್ಯವಹಾರ, ರಾಜನೀತಿಗಳ ದೃಷ್ಟಿಯಿಂದ ಶುಕನಾಸರು ಚಂದ್ರಾಪೀಡನಿಗೆ ಕೊಡುವ ಉಪದೇಶ, 'ಕಾದಂಬರಿ'ಯಲ್ಲಿಯೇ ಹೃದಯಂಗಮವಾದ ಭಾಗವೆಂದು ಹೇಳಬಹುದು.

ಬಾಣನ ಶೈಲಿಯನ್ನು ಕುರಿತು, ಇಂದು ನಾವು ಕಟುವಾಗಿ ಟೀಕಿಸಬಹುದಾದರೂ ಅಂದು ಬಾಣ, ಸಾಹಿತ್ಯದ ಹಿರಿಯ ಆಚಾರ್ಯರಲ್ಲಿ ಒಬ್ಬನು. 'ವಕ್ರೋಕ್ತಿ'ಯಲ್ಲಿ— ತಾನು, ಸುಬಂಧು, ಬಾಣ ಅದ್ವಿತೀಯರೆಂದು 'ಕವಿರಾಜ' ಹೇಳಿಕೊಂಡಿದ್ದಾನೆ. ಅರ್ಥ, ಧ್ವನಿಗಳು ಸರಿದೊರೆಯಾಗಿ ಬರುವ 'ಪಾಂಚಾಲೀ' ಶೈಲಿಯಲ್ಲಿ ಬಾಣನು ಶೀಲಾಭಟ್ಟಾರಿಕೆಯನ್ನೂ ಮೀರಿಸಬಲ್ಲನು! ಧ್ವನಿಶಕ್ತಿಯನ್ನು ಬಳಸುವಲ್ಲಿ ಬಾಣ ಬಲು ಗಟ್ಟಿಗನು! ವಾಕ್ಯರಚನೆ, ದೊಡ್ಡ ಸಮಾಸಗಳು, ಮೇರೆ ಮೀರಿ ಬರುವ ವರ್ಣನೆಗಳನ್ನು ಬಿಟ್ಟರೆ, ಉಳಿದ ವಿಷಯ ಬಾಣನಲ್ಲಿ ನಾವು ಮೆಚ್ಚತಕ್ಕಂತಹದೇ. ಪೌರಾಣಿಕ ಕಥೆಗಳನ್ನೆಲ್ಲ

ಒಂದೊಂದೇ ಸಮಾಸದಲ್ಲಿ ಸೇರಿಸಿ ಹೇಳಿಬಿಡುವ ಬಾಣನ ಶಕ್ತಿ ಸುಬಂಧುವನ್ನೂ ಮೀರಿಸಿದ್ದು; ಶಬ್ದಗಳ ಕುಣಿತ, ಸಣ್ಣ ಸಣ್ಣ ವಾಕ್ಯಗಳು ಎಷ್ಟೋ ಸಲ ಓದುಗರ ಮನವನ್ನು ಸೆಳೆಯುತ್ತವೆ. ಆದರೆ ಅವೇ ಮಿತಿಮೀರಿದರೆ ತೀರ ಬೇಸರವನ್ನೂ ಉಂಟುಮಾಡುತ್ತವೆ. "ಗಿಳಿಗಳ ಚುಂಚು ಕೆಂಪಾಗಿತ್ತೇ ವಿನಃ ಸಿಟ್ಟಿನಿಂದ ಅವುಗಳ ಮುಖ ಕೆಂಪಾಗಿರಲಿಲ್ಲ. ಶಕುನಿಯ ಕೊಲೆ ಮಹಾ ಭಾರತದಲ್ಲಿಯೇ ಹೊರತು, ಮುನಿಗಳ ಆಶ್ರಮದಲ್ಲಲ್ಲ" ಇತ್ಯಾದಿ.

ಕಾದಂಬರಿಯ ಉಳಿದ ಭಾಗವನ್ನು ಬರೆದು ಪೂರೈಸಿದ ಬಾಣನ ಮಗನಲ್ಲಿ ತಂದೆಯ ಪ್ರತಿಭೆ ಕಾಣದು. ಪೌರಾಣಿಕ ಕಥೆಗಳನ್ನು ಸಂಗ್ರಹಿಸಿ ಹೇಳುವ ಅವನ ಶಕ್ತಿ, ಭಾಷೆಯ ಮೇಲಿನ ಪ್ರಭುತ್ವ, ತಂದೆಗಿಂತ ಕಡಿಮೆ. ಏನಿದ್ದರೂ ತಂದೆಯ ಶೈಲಿಯಲ್ಲಿಯೇ ಬರೆದು ಪೂರೈಸಬೇಕೆಂಬ ಅವನ ಹವ್ಯಾಸವನ್ನು ನಾವು ಮೆಚ್ಚಲೇಬೇಕು.

ಜಟಿಲವಾದಂಥ 'ಕಾದಂಬರಿ'ಯ ಕಥೆಗೆ ಬೃಹತ್ಕಥೆಯೇ ಮೂಲ ನಿಜ; ಆದರೆ ಕಾದಂಬರಿ, ಹರ್ಷಚರಿತಗಳಲ್ಲಿ ಯಾವುದು ಮೊದಲು ರಚಿತವಾಯಿತೆಂದು ಹೇಳುವದೇ ಕಷ್ಟ. ಶ್ರೀಹರ್ಷನ ಆಸ್ಥಾನದಿಂದ ಬಾಣನು ಮನೆಗೆ ಮರಳಿದಾಗ, ಜನರು ಕುತೂಹಲದಿಂದ ರಾಜನು ಹೇಗಿದ್ದಾನೆಂದು ಕೇಳಿದ ಪ್ರಶ್ನೆಗೆ ಉತ್ತರರೂಪವಾಗಿ ಬಾಣಕವಿಯು 'ಹರ್ಷಚರಿತ'ವನ್ನು ಬರೆದಿದ್ದಾನಂತೆ!

'ಚಂಡೀಶತಕ' , 'ಪಾರ್ವತೀಪರಿಣಯ'ಗಳನ್ನು ಬಾಣಕವಿ ಬರೆದಿರುವನೆಂಬ ಪ್ರತೀತಿ ಇರುವದಾದರೂ, ಬಾಣನ ಶೈಲಿಯಲ್ಲಿಯ ಪ್ರೌಢಿಮೆ ಅವುಗಳಲ್ಲಿ ಕಂಡುಬರದು; ಜನ್ಮಜನ್ಮಾಂತರಗಳಲ್ಲಿ ವಿಶ್ವಾಸವಿಡುವ ಭಾರತೀಯ ಮನೋವೃತ್ತಿಗೆ ಕಥೆ ಹೊಂದಿಕೊಳ್ಳಬಹುದು; ಮತ್ತು ಕಥೆಯ ಸ್ವಾರಸ್ಯ ತಿಳಿಯುವದೂ ಹಾಗೆ ಹೊಂದಿಕೊಂಡರೆ ಮಾತ್ರ!

'ಕಾದಂಬರಿ' ಯಲ್ಲಿ ಪಾತ್ರಸೃಷ್ಟಿ

ಕಥೆಯ ದೃಷ್ಟಿಯಿಂದ 'ಕಾದಂಬರಿ'ಯಲ್ಲಿ ಪಾತ್ರಗಳ ಸಂಖ್ಯೆ ಹೆಚ್ಚಾಗಿದೆ. ಒಂದೊಂದು ವ್ಯಕ್ತಿಯ ಮೂರು ಮೂರು ಜನ್ಮಗಳ ಹೆಸರುಗಳನ್ನೂ, ಕಾರ್ಯಗಳನ್ನೂ, ಜಟಿಲತೆಯನ್ನೂ ನೆನೆಸಿಕೊಂಡರೆ, ಇದೇನೂ ಆಶ್ಚರ್ಯದ ಮಾತಲ್ಲ! ಚಂದ್ರ - ಚಂದ್ರಾಪೀಡ, ಶೂದ್ರಕ-ಪುಂಡರೀಕ, ವೈಶಂಪಾಯನ-ಗಿಳಿಮರಿ, ಚಾಂಡಾಲಕನ್ಯೆ-ಲಕ್ಷ್ಮಿ, ಕಪಿಂಜಲ-ಇಂದ್ರಾಯುಧ— ಹೀಗೆ ಪಾತ್ರಗಳ ಜನ್ಮಾಂತರಗಳ ವಿವರ ನಮಗೆ ಗೊತ್ತಿರದೆ ಹೋದರೆ, ಕಥೆಯನ್ನು ಅನುಸರಿಸುವದು ಕಠಿಣವಾಗಿ ಬಿಡುತ್ತದೆ. ಕಥೆಯಲ್ಲಿ 'ಕಾದಂಬರಿ' ನಾಯಿಕೆ, ಚಂದ್ರಾಪೀಡ ನಾಯಕ; ಇವರ ಕಥೆಗಿಂತ ಮಹಾಶ್ವೇತೆಯ ಕಥೆಯೇ ಜಟಿಲವೂ, ದಿವ್ಯವೂ ಆಗಿದೆಯೆಂದು ಹೇಳಬಹುದು. ಶ್ರೀಹರ್ಷನ ಆಸ್ಥಾನಕವಿಯಾಗಿದ್ದ ಬಾಣ, ಶೂದ್ರಕ-ತಾರಾಪೀಡ ಇವರ ಆಸ್ಥಾನದ ವರ್ಣನೆಯನ್ನು, ವೈಭವವನ್ನು ವಿಸ್ತಾರವಾಗಿ ಬಣ್ಣಿಸಿದ್ದಾನೆ. ಬಾಣನ ಸಾಹಿತ್ಯದಲ್ಲಿ ಅನುಭವವೇದ್ಯವಾದುದೂ ಇದೆ. ಜೊತೆಗೆ ದಿವ್ಯ ರಾಜ್ಯದಲ್ಲಿ ಹಾರಾಡುವ ಕಲ್ಪನೆಯೂ ಇದೆ. ಜಾಬಾಲಿ ಋಷಿಗಳ ತಪೋಭೂಮಿಯನ್ನು

ಬಣ್ಣಿಸುವಾಗಲೂ ಕವಿಗೆ ಅಷ್ಟೇ ಸೂಕ್ಷ್ಮವಾದ ದೃಷ್ಟಿಯಿದೆ. ಮುನಿಕುಮಾರ ಹಾರೀತನ ವರ್ಣನೆಯಲ್ಲಿಯೇ ಶಾಂತರಸ ಜಾಗೃತವಾಗುತ್ತದೆ. ನಾವಿದನ್ನು ಕಂಡುಕೊಳ್ಳುತ್ತೇವೆ. ರಾಜರ ಆಸ್ಥಾನವರ್ಣನೆಯಲ್ಲಿ ಸಹೃದಯರ ಶೃಂಗಾರರಸ ಜಾಗೃತವಾದರೆ ಆಶ್ರಮದ ವರ್ಣನೆಯಲ್ಲಿ ಶಾಂತರಸ ಜಾಗೃತವಾಗುತ್ತದೆ. ಕರುಣರಸವನ್ನು ಚಿತ್ರಿಸುವಲ್ಲಿಯೂ ಬಾಣಕವಿ ನಿಪುಣನೆಂದು ಬೇರೆ ಹೇಳಬೇಕಾಗಿಲ್ಲ. ಗಿಳಿಮರಿಯ ದುರವಸ್ಥೆಯನ್ನು ಕಂಡು, ಸಾಮಾನ್ಯ ಪಕ್ಷಿಯಲ್ಲಿ ಮರುಕವುಂಟಾಗುವಂತೆ, ಓದುಗರಲ್ಲಿ ಮೊದಲೇ ಕರುಣೆಯುಂಟಾಗುತ್ತದೆ. ಅದರಲ್ಲಿಯೂ ಹಿಂದಣ ಜನ್ಮಗಳ ವೃತ್ತಾಂತವನ್ನು ಕೇಳಿ, ಮತ್ತೆ ಈಗ ತಿರ್ಯಗ್ ಜಾತಿಯಲ್ಲಿ ಅದರ ದುರವಸ್ಥೆಯನ್ನು ನೋಡಿದಾಗ ಈ ಕರುಣೆ ಇಮ್ಮಡಿಸುತ್ತದೆ.

ರಾಜನೀತಿಯನ್ನು ವಿವರಿಸುವಲ್ಲಿ ಬಾಣನ ಜಾಣ್ಮೆ, ವ್ಯವಹಾರ, ಅನುಭವ, ದೂರದೃಷ್ಟಿ, ಮುತ್ಸದ್ದಿತನ, ಎಲ್ಲವೂ ಒಟ್ಟಿಗೇ ವಿದಿತವಾಗುತ್ತವೆ. “ವಿಷಯಾರಣ್ಯದೊಳಗೆ ಮನುಷ್ಯನ ಇಂದ್ರಿಯಗಳೆಂಬ ಎರಳೆಗಳು ಸುಖೋಪಭೋಗವೆಂಬ ಮೃಗಜಲಕ್ಕೆಳಸಿ ಹರಿದಾಡುತ್ತವೆ .... ಚಂದನವೃಕ್ಷದಿಂದ ಹುಟ್ಟಿದ ಬೆಂಕಿ ಸುಡುವದಿಲ್ಲವೆನ್ನಬಹುದೊ?” ಎಂದು ಅಧಿಕಾರವಾಣಿಯಿಂದ ಹೇಳುವ ಶುಕನಾಸ, ಚಾಣಕ್ಯನ ಅಪರಾವತಾರವಾದಂತೆ ಕಂಡುಬರುತ್ತಾನೆ.

ಮುಖ್ಯ ಪಾತ್ರಗಳು:

ಚಂದ್ರಾಪೀಡ

ಪುಂಡರೀಕನ ಶಾಪದಿಂದ ಚಂದ್ರನೇ ಚಂದ್ರಪೀಡನಾಗಿ ಉಜ್ಜಯಿನಿಯ ದೊರೆಯಾದ ತಾರಾಪೀಡನಿಗೆ ಮಗನಾಗಿ ಹುಟ್ಟುತ್ತಾನೆ. ಚಂದ್ರನಂತೆ ದಿನದಿನಕ್ಕೆ ವಿಕಾಸವನ್ನು ಹೊಂದುತ್ತಿರುವ ಚಂದ್ರಾಪೀಡನ ಜನನದಿಂದ ಪ್ರಜೆಗಳೆಲ್ಲರಿಗೆ ಆನಂದಮಹೋತ್ಸವ! ಮಂತ್ರಿಕುಮಾರ ವೈಶಂಪಾಯನನೂ ಚಂದ್ರಾಪೀಡನೂ ಓರಗೆಯವರು. ಅಕ್ಷರಾಭ್ಯಾಸದಿಂದ ಪ್ರಾರಂಭಿಸಿ ಇಬ್ಬರೂ ಹದಿನಾರು ವರ್ಷಗಳ ವರೆಗೆ ಗುರುಕುಲದಲ್ಲಿ ವಿದ್ಯಾಭ್ಯಾಸ ಮಾಡುವರು. ಚಂದ್ರಾಪೀಡನು ಗುರುಕುಲದಿಂದ ಹೊರಗೆ ಬರುವದಕ್ಕೆ ಇಂದ್ರಾಯುಧವು ಅವನಿಗಾಗಿ ಕಾದಿದೆ. ರಾಜಧಾನಿಗೆ ಮರಳಿದರೆ, ಪ್ರಜೆಗಳೂ ತಾಯಿ ತಂದೆಗಳೂ ಕಣ್ಣು ತುಂಬ ನೋಡಿ, ಯುವರಾಜಪಟ್ಟವನ್ನು ಕೊಡಲು ಕಾದಿದ್ದಾರೆ. ಚಂದ್ರಾಪೀಡನಿಗೆ ಇಲ್ಲಿಯವರೆಗೆ ಬರುವ ಅನುಭವ ಹೇಳತಕ್ಕಂತಹದೇನೂ ಅಲ್ಲ. ಐಶ್ವರ್ಯದ ಮಡಿಲಿನಲ್ಲಿ ಬೆಳೆಯುತ್ತಾನೆ, ಅಷ್ಟೇ; ಅಲ್ಲಿಂದ ದಿಗ್ವಿಜಯಕ್ಕೆ ಹೊರಟಾಗ, ಕಿನ್ನರಮಿಥುನದ ಬೆನ್ನುಹತ್ತಿದಾಗ ಮಾತ್ರ ಯಾರ ಸಂರಕ್ಷಣೆಯೂ ಇಲ್ಲದೆ, ತಾನೇ ಪ್ರಸಂಗಗಳನ್ನು ಎದುರಿಸಬೇಕಾಗುತ್ತದೆ. ಆದರೂ ಚಂದ್ರಾಪೀಡನಲ್ಲಿರುವ ನಯ, ನೀತಿಗಳು ಮಹಾಶ್ವೇತೆಯೊಡನಾದ ಅವನ ಸಂಭಾಷಣೆಯಲ್ಲಿಯೇ ಕಂಡುಬರುತ್ತವೆ. ವಿವಾಹವಾಗುವದಿಲ್ಲವೆಂದು ಹಟವನ್ನು ಹಿಡಿದ ಕಾದಂಬರಿಯನ್ನೂ ಆಕರ್ಷಿಸುವಂತಹ ಶಕ್ತಿ ಚಂದ್ರಾಪೀಡನಲ್ಲಿದೆ. ಪ್ರಣಯಿಯ ದೃಷ್ಟಿಯಿಂದ ಚಂದ್ರಾಪೀಡನ ಚಿತ್ರ, ನಯವಾಗಿ, ಮನೋವಿಶ್ಲೇಷಣೆಯ ದೃಷ್ಟಿಯಿಂದ ಒಂದೊಂದೇ

ಮೆಟ್ಟಲನ್ನೇರುತ್ತಿದ್ದಂತೆ ಭಾಸವಾಗುತ್ತದೆ. ಕೇಯೂರಕ, ಪತ್ರಲೇಖೆಯರಿಂದ ಕಾದಂಬರಿಯ ವಿಷಯ ತಿಳಿಯುವದೇ ತಡ, ಹೊರಟುಬಿಡುತ್ತಾನೆ.

ಮುಂದೆ ರಾಜನಾಗತಕ್ಕ ಯುವರಾಜನೆಂದು ಚಂದ್ರಾಪೀಡನು ಪಡೆಯುವ ವಿದ್ಯೆ, ಶುಕನಾಸರ ಉಪದೇಶಗಳನ್ನು ನೋಡಿದರೆ, ಜನರೆಲ್ಲರ ಕಣ್ಮಣಿ ಚಂದ್ರಾಪೀಡನಾಗಿದ್ದ ಎಂಬುದು ನಿರ್ವಿವಾದದ ಮಾತು. ಕಾದಂಬರಿಯೊಡನಾದ ವಿರಹವೊಂದನ್ನು ಬಿಟ್ಟರೆ ಚಂದ್ರಾಪೀಡನಲ್ಲಿ ಕಟುವಾದ ಅನುಭವ ಹೆಚ್ಚಾಗಿಲ್ಲವೆಂದೇ ಹೇಳಬಹುದು.

ವೈಶಂಪಾಯನ

ವೈಶಂಪಾಯನ ಮಂತ್ರಿಕುವರ; ಪುಂಡರೀಕನೇ ಈ ಜನ್ಮದಲ್ಲಿ ಚಂದ್ರಾಪೀಡನ ಪರಮಮಿತ್ರನಾಗಿ ಬಂದವನು. ಪುಂಡರೀಕನು ಮುನಿಕುಮಾರ; ಎಂತಹ ಸಂಯಮವಿದ್ದರೂ, ನಿಸರ್ಗಕ್ಕೆ ಅವನೂ ಹೊರತಾಗಿಲ್ಲ ಎಂಬುದನ್ನು ಕವಿ ಮಹಾಶ್ವೇತೆಯ ದರ್ಶನದಲ್ಲಿ ಚೆನ್ನಾಗಿ ತೋರಿಸಿದ್ದಾನೆ. ಅನ್ಯಮನಸ್ಕನಾಗಿ, ಮಹಾಶ್ವೇತೆ ಅಕ್ಷಮಾಲೆಯನ್ನು ಎತ್ತಿ ಒಯ್ದುದೂ ಅವನ ಲಕ್ಷ್ಯದಲ್ಲಿಲ್ಲ; ಗೆಳೆಯ ಹೇಳಿದಾಗ ಸುಳ್ಳು ಸಿಟ್ಟನ್ನು ಅಭಿನಯಿಸುತ್ತ, “ಚಪಲೇ, ನಿಲ್ಲು, ನಿಲ್ಲು; ” ಎಂದು ಆವೇಶದಿಂದ ನುಡಿಯುವನು. ಪ್ರಿಯತಮೆಯ ಧ್ಯಾನದಲ್ಲಿಯೇ ಮೃತನಾದ ಅವನನ್ನು, ಮಹಾಶ್ವೇತೆಯಲ್ಲಿದ್ದ ಅವನ ಪ್ರೇಮ, ಅವನ ಮುಂದಣ ಜನ್ಮದಲ್ಲಿಯೂ ಬಿಡದು ಎಂಬುದನ್ನು ಕವಿ ಬಹು ಅಂದವಾಗಿ ಹೇಳಿದ್ದಾನೆ.

ವೈಶಂಪಾಯನನಾಗಿ, ಅದೇ ಮಹಾಶ್ವೇತೆಯಿಂದ ಅವಳ ಪ್ರೇಮಕ್ಕಾಗಿ ತಿರ್ಯಗ್‌ಜಾತಿಯಲ್ಲಿ ಹುಟ್ಟುವ ಸಾಹಸವನ್ನೂ ಮಾಡಬೇಕಾಗುತ್ತದೆ, ಕಾದಂಬರಿಯ ಕಥಾಸಂವಿಧಾನ ವೈಶಂಪಾಯನನ ಜನ್ಮಾಂತರಗಳ ಚರಿತ್ರೆಯಿಂದ ಇನ್ನೂ ಸ್ಪಷ್ಟವಾಗುತ್ತದೆ.

ಜಾಬಾಲಿ ಮುನಿಗಳು

ಜಾಬಾಲಿ ಮಹರ್ಷಿಗಳು ದಿವ್ಯಜ್ಞಾನಿಗಳು; ಅಂತರ್ದೃಷ್ಟಿ, ತ್ರಿಕಾಲಗಳ ಜ್ಞಾನವೂ ಅವರಿಗಿರುತ್ತದೆ. ಗಿಳಿಮರಿಯು ಕಥೆ ಹೇಳಿದ ತರುವಾಯ ಮುಂದಿನ ಭಾಗವನ್ನು ಜಾಬಾಲಿಗಳೇ ಮುಂದುವರಿಸುತ್ತಾರೆ. ಹಿಂದಣ ಜನ್ಮಗಳ ಕಥೆಯನ್ನು ಹೇಳಲು ಮತ್ತಾವ ಸಾಧನವೂ, ಇಲ್ಲದಾಗ, ಕವಿ ತ್ರಿಕಾಲಜ್ಞಾನಿಗಳ ಸಹಾಯವನ್ನು ಪಡೆಯುತ್ತಾನೆ; ಶಾಕುಂತಲದಲ್ಲಿ ದೂರ್ವಾಸರ ಶಾಪ ಬಂದಂತೆ, ಮುನಿಗಳು ಗಿಳಿಮರಿ ಆಶ್ರಮಕ್ಕೆ ಬಂದೊಡನೆ, ಮುಗುಳ್ನಗೆ ನಕ್ಕು, “ತನ್ನ ಪಾಪದ ಫಲವನ್ನು ಅನುಭವಿಸುತ್ತಾನೆ, ” ಎಂದು ನುಡಿಯುತ್ತಾರೆ. ಆಗ ಗಂಭೀರವಾದ ಅವರ ಚಿತ್ರ ನಮ್ಮೆದುರು ಬಂದು ನಿಲ್ಲುತ್ತದೆ. ಇನ್ನುಳಿದ ಪಾತ್ರಗಳೆಂದರೆ ಪ್ರಜೆಗಳ ಮೆಚ್ಚಿಕೆಯನ್ನು ಪಡೆದ ತಾರಾಪೀಡ, ಕುಶಲಬುದ್ಧಿಯ ಮಂತ್ರಿ ಶುಕನಾಸ, ಶೂದ್ರಕ, ಕೇಯೂರಕ ಇವರೇ. ಬಾಣಕವಿ ಎಲ್ಲ ಪಾತ್ರಗಳಿಗೂ ಸಾಕಷ್ಟು ಲಕ್ಷ್ಯ ಪೂರೈಸಿದ್ದಾನೆ. ಆದರೆ ಅದನ್ನು ಚಿತ್ರಿಸುವ ಶೈಲಿ ಅಷ್ಟೇ ಗಂಭೀರವಾದ್ದರಿಂದ ಪ್ರಥಮದೃಷ್ಟಿಗೆ ಅವುಗಳ ಸೂಕ್ಷ್ಮತೆ ವಿದಿತವಾಗದೆ ಹೋಗಬಹುದು.

ಮಹಾಶ್ವೇತೆ

ಮಹಾಶ್ವೇತೆ ಗಂಧರ್ವರಾಜ ಹಂಸನ ಮಗಳು; ತಾಯಿಯೊಡನೆ ಅಚ್ಛೋದ ಸರಸ್ಸಿಗೆ ಸ್ನಾನಕ್ಕಾಗಿ ಬಂದಾಗ ಮುನಿಕುಮಾರ ಪುಂಡರೀಕನನ್ನು ಕಂಡು ಮಾರುಹೋಗುತ್ತಾಳೆ. ಅಲ್ಲಿಂದಲೇ ಅವಳ ವಿರಹ, ದುಃಖ ಪ್ರಾರಂಭವಾಗುತ್ತವೆ. ಮಹಾಶ್ವೇತೆ ಒಳ್ಳೇ ಸುಂದರಿ, ವಿದ್ಯಾಶಾರದೆ. ಶಿವಾಲಯದಲ್ಲಿ ವೀಣೆ ನುಡಿಸುತ್ತ, ಹೇಳುವ ಹಾಡಿನ ಇಂಪು ನಾಲ್ಕು ದಿಕ್ಕಿನಲ್ಲಿಯೂ ಹರಡಿ, ಚಂದ್ರಾಪೀಡನನ್ನು ಆಕರ್ಷಿಸುತ್ತದೆ. ವಿನಯದಿಂದ ಅತಿಥಿಗಳಿಗೆ ಆದರಾತಿಥ್ಯವನ್ನು ನೀಡಿ, ತನ್ನ ಕಥೆಯನ್ನು ಕೇಳಬೇಕೆಂಬ ಆಶೆಯನ್ನೂ ಪೂರೈಸಿ, ತನ್ನ ಪ್ರಾಣಸಖಿಯ ಹಟವನ್ನು ಬಿಡಿಸಲು, ಯೋಗ್ಯ ಸಾಧನವನ್ನೇ ತೆಗೆದುಕೊಂಡು ಹೊರಡುತ್ತಾಳೆ. 'ಕಾದಂಬರಿ'ಯ ತಾಯಿ ತಂದೆಗಳು ಮಹಾಶ್ವೇತೆಯ ಮಾತಿಗೆ ಮನ್ನಣೆ ಕೊಡುತ್ತಿದ್ದರೆಂಬುದು ಅವಳ ಮಾತಿನಿಂದಲೇ ಸ್ಪಷ್ಟವಾಗುತ್ತದೆ. ಕೊನೆಗೆ ಪುಂಡರೀಕನ ದೇಹತ್ಯಾಗದೊಡನೆ ಮಹಾಶ್ವೇತೆ ಸರ್ವವನ್ನೂ ತ್ಯಜಿಸಿ, ದೈವೀವಾಣಿಯ ಮೇಲೆ ನಂಬುಗೆಯಿಟ್ಟು, ತಪಸ್ಸನ್ನಾಚರಿಸುತ್ತ ಶಿವಾಲಯದಲ್ಲಿ ಕಾಲಕಳೆಯುತ್ತಾಳೆ. ವೈಶಂಪಾಯನನನ್ನು ಶಪಿಸಿದ್ದು ಅವಳು ಪುಂಡರೀಕನಲ್ಲಿಟ್ಟ ದೃಢಪ್ರೇಮದ ಕುರುಹು. ಮಹಾಶ್ವೇತೆಯ ಜೀವನ ಕಟುವಾದ ಅನುಭವಗಳಿಂದ, ದುಃಖ ಸಹನೆಯಿಂದ ಉತ್ಪನ್ನವಾಗಿ ಪವಿತ್ರಪ್ರೇಮದ ಸಿದ್ಧಿಯತ್ತ ಸಾಗುತ್ತದೆ; 'ಕಾದಂಬರಿ'ಯ ಎಲ್ಲ ಪಾತ್ರಗಳಲ್ಲಿ, ಇದು ಉತ್ತಮ ಪಾತ್ರ ಎಂದು ಹೇಳಬಹುದು.

ಕಾದಂಬರಿ

'ಕಾದಂಬರಿ' ಚಿತ್ರರಥ ಗಂಧರ್ವ ರಾಜನ ಮಗಳು. ಮಹಾಶ್ವೇತೆಯ ಪ್ರಿಯಸಖಿ, ಸುಂದರಿ; ತನ್ನ ಸಖಿ ಮಹಾಶ್ವೇತೆಯ ಗತಿ ಹೀಗಾಯಿತಲ್ಲ ಎಂದು ನೊಂದುಕೊಂಡು ತಾನೂ ವಿವಾಹವಾಗುವದಿಲ್ಲವೆಂದು ಹಟ ಹಿಡಿಯುತ್ತಾಳೆ. ಆದರೆ ಪ್ರಥಮ ದೃಷ್ಟಿಯಲ್ಲಿಯೇ ಚಂದ್ರಾಪೀಡನಿಗೆ ಮಾರುಹೋಗುತ್ತಾಳೆ. ಅವಳ ವಿರಹದ ವರ್ಣನೆ, ಪ್ರೇಮದ ವಿಕಾಸಗಳನ್ನು ಕವಿ ಬಹು ಸೂಕ್ಷ್ಮವಾಗಿ ವರ್ಣಿಸಿದ್ದಾನೆ. ಚಂದ್ರಾಪೀಡನ ದೇಹಾಂತವಾದಾಗ ಕಾದಂಬರಿ ಅಗ್ನಿಪ್ರವೇಶವನ್ನು ಮಾಡಲಿಚ್ಛಿಸುತ್ತಾಳೆ. ಆದರೆ ಆಕಾಶವಾಣಿ ಅವಳನ್ನೂ ತಡೆಹಿಡಿಯುತ್ತದೆ. ಕೊನೆಗೆ ಚಂದ್ರಾಪೀಡನು ದಿವ್ಯದೇಹದಿಂದ ಪುನರ್ಜನ್ಮವನ್ನು ಪಡೆದಾಗ ಅವರೀರ್ವರ ಸಮಾಗಮವಾಗಿ, ಕಥೆ ಸುಖಾಂತವಾಗಿ ಕೊನೆಗೊಳ್ಳುತ್ತದೆ.

'ಕಾದಂಬರಿ' ಯಲ್ಲಿ ಬರುವ ಇನ್ನುಳಿದ ಸ್ತ್ರೀಪಾತ್ರಗಳೆಂದರೆ ತಾರಾಪೀಡನ ಮಹಾರಾಣಿ ವಿಲಾಸವತಿ, ಪತ್ರಲೇಖೆ, ತರಲಿಕೆ ಇತ್ಯಾದಿ. ಈ ಪಾತ್ರಗಳ ಚಿತ್ರ ಸ್ಫುಟವಾಗಿ ಬರದಿದ್ದರೂ ಕಣ್ಣೆದುರು ಬರುವಂತಿವೆ ಎಂದು ಹೇಳಬಹುದು!

ಬಾಣಕಾಲದ ಜೀವನ

ಕವಿ 'ಹರ್ಷಚರಿತ'ವನ್ನು ಮೊದಲು ರಚಿಸಿದ್ದೋ, 'ಕಾದಂಬರಿ' ಯನ್ನೋ ಎಂಬುದು

ಸ್ಪಷ್ಟವಾಗಿ ತಿಳಿಯದು. ಆದರೂ 'ಹರ್ಷಚರಿತ'ದ ಪ್ರಾರಂಭದಲ್ಲಿ ಕವಿ, ತನ್ನ ವಿಷಯವನ್ನು ಹೇಳಿಕೊಂಡಿರುವಷ್ಟು 'ಕಾದಂಬರಿ' ಯಲ್ಲಿ ಹೇಳಿಕೊಂಡಿಲ್ಲ. ಹರ್ಷಚರಿತದಲ್ಲಿ ವಾಸ್ತವಿಕತೆ ಸ್ವಲ್ಪ ಹೆಚ್ಚು. ಬಾಣನ ಕಾಲದ ಇತರ ಗ್ರಂಥಗಳನ್ನು, ಉದಾಹರಣೆಗೆ ಬಾಣನ ಆಶ್ರಯದಾತನಾದ ಶ್ರೀಹರ್ಷನ ನಾಟಕಗಳನ್ನು ಓದಿದರೆ ಆ ಕಾಲದ ಜೀವನಪರಿಚಯ ಇನ್ನೂ ಹೆಚ್ಚಾಗಿ ದೊರೆಯಬಹುದು; ಅದರಲ್ಲಿಯೂ ಶ್ರೀಹರ್ಷನ ಕೊನೆಯ ಕೃತಿ 'ನಾಗಾನಂದ' ವನ್ನೋದಿದರೆ ಶ್ರೀಹರ್ಷನಿಗಿದ್ದ ನಿಷ್ಪಕ್ಷಪಾತ ನ್ಯಾಯ ಬುದ್ಧಿ, ಬೌದ್ಧತತ್ವಗಳಲ್ಲಿದ್ದ ಅವನ ಆದರ ಇವುಗಳನ್ನು 'ಹರ್ಷಚರಿತ'ದಲ್ಲಿ ಕಾಣುತ್ತೇವೆ. 'ಕಾದಂಬರಿ'ಯಲ್ಲಿ ಹೆಚ್ಚಾಗಿ ಬಂದುದು ವೈಭವ, ಕಲ್ಪನಾ ವೈಭವಗಳಿಂದ ಸುರಮ್ಯವಾದ ರಾಜರುಗಳ ವರ್ಣನೆ, ಆಸ್ಥಾನದ ವರ್ಣನೆ; ಹುಲಿ ಹುಲ್ಲೆಗಳು ನಿಸರ್ಗಸಿದ್ಧವಾದ ವೈರಭಾವವನ್ನು ಮರೆತು, ಸಖ್ಯದಿಂದಿದ್ದ ಮುನಿಗಳ ತಪೋಭೂಮಿಯ ದಿವ್ಯ ಮಹಿಮೆ! ಚತುರಂಗಬಲದ ವರ್ಣನೆಯನ್ನು ಮಾಡುವದಾದರೆ ಕವಿ ಸೈನ್ಯದ ನಾಲ್ಕೂ ಅಂಗಗಳನ್ನು ಎತ್ತಿ ಹಿಡಿದು ಬಿಡುತ್ತಾನೆ; ಆದರೆ ಅದೇ ಶ್ರೀಹರ್ಷನ ನಾಟಕಗಳಲ್ಲಿ ಮೂರು ಅಂಗಗಳ ವರ್ಣನೆ ಮಾತ್ರ ಬರುತ್ತದೆ. ಕವಿಯ ಪ್ರಗಾಢವಾದ ಜ್ಞಾನದ ಮೂಲಕ ಕವಿಯ ಪಾಂಡಿತ್ಯದ ಮೂಲಕ, ಆ ಕಾಲದ ಜೀವನದ ನಿಜವಾದ ದರ್ಶನ ಮರೆಯಾಗುತ್ತದೆಯೆಂದು ಮಾತ್ರ ಹೇಳಬಹುದು.

ಸಂಸ್ಕೃತ ಸಾಹಿತ್ಯದಲ್ಲಿ ಬಾಣಕವಿಯ ಸ್ಥಾನ

ಬಾಣನು ಆ ಕಾಲದ ಸುವಿಖ್ಯಾತ ಕವಿ, ಗದ್ಯಲೇಖಕ; ಆದರೆ ಕಾಳಿದಾಸ, ಭಾಸರ ಯುಗದಲ್ಲಿ ಅವರ ಶೈಲಿಯನ್ನೇ ಅನುಕರಿಸಿ ಬರೆದ ಗ್ರಂಥಗಳನ್ನು ನಾವು ಕಾಣುವಂತೆ, ಇಲ್ಲಿ ಹೆಚ್ಚಾಗಿ ಕಾಣೆವು. ಬಾಣನ ಶ್ಲೇಷಾಲಂಕಾರದ ಅನುಕರಣೆ, ಶಿಲಾಲೇಖಗಳಲ್ಲಿ ಅಲ್ಲಲ್ಲಿ ಮೂಡಿಬಂದಿದೆ. ಧನಪಾಲನ 'ತಿಲಕಮಂಜರಿ'ಯಲ್ಲಿ, ಉದಯದೇವ, ವಾದೀಭಸಿಂಹನ, 'ಗದ್ಯ ಚಿಂತಾಮಣಿ'ಯಲ್ಲಿ, 'ಕಾದಂಬರಿ'ಯ ಶೈಲಿಯ ಅನುಕರಣೆ ಕಂಡುಬರುತ್ತದೆ. ಆದರೆ ಆ ಶೈಲಿ ಪಂಡಿತಕವಿಗಳಿಗೇ ಸಾಧ್ಯವೆಂದೋ ಅಥವಾ ಜನಸಾಮಾನ್ಯರ ತಿಳಿವಿಗೆ ನಿಲುಕದೆಂದೋ, ಹೆಚ್ಚಾಗಿ ಅನಂತರದ ಕಾಲದಲ್ಲಿ ಜನಪ್ರಿಯವಾಗಲಿಲ್ಲ.

ಕಥೆಯಲ್ಲಿ ಕಥೆಯನ್ನೊಳಗೊಂಡ, 'ಜಾತಕ' ಕಥೆಗಳ ಪ್ರಭಾವವೂ ಇದರ ಮೇಲೆ ಸಾಕಷ್ಟಾಗಿರಬೇಕು. ಆದರೆ ಇವುಗಳ ಜೊತೆಗೆ ಪಾಶ್ಚಾತ್ಯ ಸಾಹಿತ್ಯದ ಪ್ರಭಾವವೂ 'ಕಾದಂಬರಿ' ಕಥಾರಚನೆಯ ಮೇಲಾಗಿದೆಯೇ ಹೇಗೆ? ಎಂಬುದು ಹಲವು ವಿದ್ವಾಂಸರ ಸಂದೇಹ. ಗ್ರೀಕರಿಗೂ ಭಾರತೀಯರಿಗೂ ನಿಕಟವಾದ ಸಂಬಂಧ ಒಂದು ಕಾಲದಲ್ಲಿತ್ತು; ಈ ಸಂಬಂಧದ ಪರಿಣಾಮ ಸಾಹಿತ್ಯದಲ್ಲೂ ಏಕೆ ಮೂಡಿರಬಾರದು? 'ಕಾದಂಬರಿ'ಯಲ್ಲಿ ಬರುವ ನಾಯಿಕೆಯ ವರ್ಣನೆ, ಪ್ರಾಣಿ-ವನಸ್ಪತಿಗಳ ಜಗತ್ತಿನಿಂದ ಉಪಮೆಗಳನ್ನು ಆಯ್ದುಕೊಳ್ಳುವ ಕವಿಯ ಮೋಹ, ಇವು ಗ್ರೀಕ್ ಸಾಹಿತ್ಯದಲ್ಲಿಯ ಈ ಭಾಗವನ್ನು ಪೂರ್ಣವಾಗಿ ಹೋಲುತ್ತದೆ. ಗ್ರೀಕ್‌ಸಾಹಿತ್ಯಕ್ಕೆ ಭಾರತೀಯ ಸಾಹಿತ್ಯ ಪ್ರೇರಕವೋ ಅಥವಾ ಭಾರತೀಯಸಾಹಿತ್ಯಕ್ಕೆ ಗ್ರೀಕ್ ಸಾಹಿತ್ಯವೋ ಎಂಬುದು ಮಾತ್ರ ಇನ್ನೂ ಆಳವಾದ ಅಧ್ಯಯನದ ವಿಷಯವಾಗಿಯೇ ಉಳಿಯುತ್ತದೆ!

ಹೊಸಗನ್ನಡ ಸಾಹಿತ್ಯದ ವಿಕಾಸ

ಸಂಸ್ಕೃತದಲ್ಲಿಯೇ ಸಾಹಿತ್ಯರಚನೆ ಮಾಡುವದು ಪಾಂಡಿತ್ಯದ ಕುರುಹೆಂಬ ಭಾವನೆ ಮಾಯವಾಗಿದ್ದರೂ, ಕನ್ನಡದಲ್ಲಿ ಸಾಹಿತ್ಯ ರಚನೆಯಾಗುವದು ಸುಲಭವಾದ ಮಾತಾಗಿರಲಿಲ್ಲ. ಹದಿನೇಳನೆಯ ಶತಮಾನದಲ್ಲಿ ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ಕನ್ನಡ ಗ್ರಂಥಗಳು ಅಸಂಖ್ಯವಾಗಿ ಬಂದರೂ, ಅವೆಲ್ಲ ಹಳಗನ್ನಡ ಗದ್ಯ-ಪದ್ಯಗಳಲ್ಲಿ, ಹಳಗನ್ನಡವು ಹೊಸಗನ್ನಡವಾಗಿ ಪರಿಣಮಿಸಬೇಕಾದರೆ, ಅದು ಜೀವಂತ ಭಾಷೆಯಾಗಿ, ಜನರ ಮಾತಿನ ಪ್ರವಾಹದೊಡನೆ ಬೆರೆತುಹೋಗಬೇಕಾಗುತ್ತದೆ. ಬಳಿಕ ಅದು ಗ್ರಾಂಥಿಕವಾಗಿ ಮನ್ನಣೆಯನ್ನು ಪಡೆದಾಗ, ಹೊಸಗನ್ನಡವೂ ಭಾಷೆಯ ಒಂದು ಅವಸ್ಥೆಯಾದೀತು!

ಆದರೆ ಕನ್ನಡದಲ್ಲಿ ಹೇಳದೆ, ಜನತೆಯ ಜೀವನ ಪ್ರತಿಬಿಂಬಿತವಾಗದೆ, ಕನ್ನಡಿಗರು ತಿಳಿಯುವದು ಹೇಗೆ? ಗ್ರಂಥರಚನೆ ಹೊಸಗನ್ನಡದಲ್ಲಾದರೂ ಸ್ವತಂತ್ರವಾದ ಕೃತಿಗಳು ಮೊದಲು ಬರಲಿಲ್ಲ. ಅಚ್ಚಗನ್ನಡ ಸ್ಥಳವಾದ ಧಾರವಾಡದಲ್ಲಿಯೂ ಕನ್ನಡಶಾಲೆ ಬಹುಕಾಲದವರೆಗೆ ಇರಲಿಲ್ಲವೆಂದಮೇಲೆ ಮಾತೃಭಾಷೆಯ ಶಿಕ್ಷಣ, ಅಭಿಮಾನಗಳಾದರೂ ಉಂಟಾಗುವದು ಹೇಗೆ? ಹಿಂದುಸ್ಥಾನದಲ್ಲೆಲ್ಲ ಬೀಸಿದ ಸಾಹಿತ್ಯಕ್ರಾಂತಿಯ ಗಾಳಿ ಕೊನೆಗೆ ಕರ್ನಾಟಕದಲ್ಲೂ ಬೀಸಿತು. ಗುಜರಾಥದಲ್ಲಿ ಕಾದಂಬರೀಸಾಹಿತ್ಯರಚನೆ ನಡೆದಾಗ, ಮಹಾರಾಷ್ಟ್ರದಲ್ಲಿ ಹರಿನಾರಾಯಣ ಆಪಟೆಯವರ ಸ್ವತಂತ್ರ ಕಾದಂಬರಿಗಳು ಹೊರಡುತ್ತಿದ್ದಾಗ, ಕರ್ನಾಟಕದಲ್ಲೂ ಬಂಕಿಮಚಂದ್ರರ ಕೃತಿಗಳ ಅನುವಾದ ನಡೆಯಿತು; ಸಂಸ್ಕೃತ ಗ್ರಂಥಗಳ ಹೊಸಗನ್ನಡ (ಅಂದಿನ ಹೊಸಗನ್ನಡ) ರೂಪಾಂತರಗಳೂ ಬರತೊಡಗಿದವು. ಅಂದಿನ ಹೊಸಗನ್ನಡದಲ್ಲಿ ಹಳಗನ್ನಡದ ಪ್ರತ್ಯಯಗಳೂ, ಸಂಸ್ಕೃತದ ಕುರುಹಾದ ದೊಡ್ಡ ದೊಡ್ಡ ಸಮಾಸಗಳೂ, ಧಾರಾಳವಾಗಿ ಸೇರಿದ್ದನ್ನು ಕಾಣುತ್ತೇವೆ. ಆದರೂ ಹೊಸಗನ್ನಡದ ಆ ಮೊದಲ ರೂಪವನ್ನು ವಿಕಾಸಗೊಳಿಸುವ ಪ್ರಯತ್ನ ಕೈಕೊಂಡವರಲ್ಲಿ, 'ಮುದ್ರಾಮಂಜೂಷ' ವನ್ನು ರಚಿಸಿದ ಕೆಂಪುನಾರಾಯಣ, 'ಕಾದಂಬರಿ'ಯನ್ನು ರಚಿಸಿದ ಶ್ರೀ ಗಂಗಾಧರ ತುರಮರಿ, ವೆಂಕಟರಂಗೋ ಕಟ್ಟಿ ಇವರೇ ಮೊದಲಾದ ಆಚಾರ್ಯರುಗಳ ಹೆಸರನ್ನು ಹೇಳಬಹುದು. ಅಲ್ಲಿಂದೀಚೆಗೆ ಐತಿಹಾಸಿಕ, ಪೌರಾಣಿಕ ಕಥೆಗಳನ್ನು ಕನ್ನಡ ಗದ್ಯದಲ್ಲಿ ಹೇಳಿದವರು ಶ್ರೀ ಗಳಗನಾಥರು; ಕೆರೂರ ವಾಸುದೇವಾಚಾರ್ಯರೂ ಹೊಸಗನ್ನಡದ ವಿಕಾಸಕ್ಕಾಗಿ ಹೆಣಗಿದವರಲ್ಲಿ ಒಬ್ಬರು. ಆ ತರುವಾಯ ಹೊಸಗನ್ನಡ ಸಾಹಿತ್ಯವೂ ವಿವಿಧ ಮುಖವಾಗಿ ಗದ್ಯ—ಪದ್ಯಗಳಲ್ಲಿ, ಪ್ರಬಂಧ, ನಾಟಕ, ಚರಿತ್ರ, ಭಾವಗೀತ, ಅಷ್ಟಷಟ್ಪದಿ ಎಂದು ಮುಂತಾಗಿ ಬೆಳೆದಿದೆ.

ಕನ್ನಡ ಗದ್ಯ—ಕಾದಂಬರಿಯ ಅನುವಾದ ಶೈಲಿ

ಒಂದು ಭಾಷೆಯಲ್ಲಿಯ ಕೃತಿಯನ್ನು, ಅದರ ಅರ್ಥದ ಸ್ವಾರಸ್ಯ, ಪದರಚನಾಕೌಶಲ್ಯಗಳೊಂದಿಗೆ ಇನ್ನೊಂದು ಭಾಷೆಯಲ್ಲಿ ಅನುವಾದಿಸುವದೆಂದರೆ ಸುಲಭವಾದ ಮಾತಲ್ಲ. ಅದರಲ್ಲೂ ಸಂಸ್ಕೃತ ಗೌಡ ಭಾಷೆ, ಕನ್ನಡ ದ್ರಾವಿಡ ಭಾಷೆ; ಸಂಸ್ಕೃತದಿಂದ ಕನ್ನಡ ಪುಷ್ಟವಾಗಿದ್ದರೂ, ಬಾಣಕವಿಯ ದೀರ್ಘ ಸಮಾಸಗಳು, ನಾಲ್ಕು ಪುಟಗಳವರೆಗೂ ಹರಡಿದ ವಾಕ್ಯಗಳು ಕನ್ನಡದ ರಚನೆಗೆ ಹೊಂದಿಕೊಳ್ಳವು. ಆದರೆ ಶ್ರೀ ತುರಮರಿಯವರು ಕನ್ನಡ ಭಾಷೆಗೆ ಹೊಂದಿಕೊಳ್ಳುವಂತೆ, 'ಕಾದಂಬರಿ' ಯ ಜಟಿಲ ಕಥಾನಕವನ್ನು ಕನ್ನಡಿಸಿದ್ದಾರೆ. ಕಥೆಯ ಓಟವನ್ನೇ ನಿಲ್ಲಿಸಿಬಿಡುವಂಥ ಸುದೀರ್ಘವಾದ ವರ್ಣನೆಗಳನ್ನು ಅಲ್ಲಲ್ಲಿ ಬಿಟ್ಟುಕೊಡುವ ಸಾಹಸವನ್ನೂ ಅವರು ಮಾಡಿದ್ದಾರೆ. ಕಥೆಯ

ಸಂವಿಧಾನ ಮರೆಯಾಗದಂತೆ, ಅದರ ಹಿರಿಮೆಗೆ ಕುಂದು ಬಾರದಂತೆ, ಗಟ್ಟಿ ಸಂಸ್ಕೃತದ ತಿಳಿಯಾದ ಭಾಷಾಂತರವನ್ನು ಕನ್ನಡಿಗರಿಗಿತ್ತು, ಭಾಷೆಗೂ, ಜನತೆಗೂ ಮಹದುಪಕಾರವನ್ನು ಮಾಡಿದ್ದಾರೆ.

ಕನ್ನಡದಲ್ಲಿ, ಸಣ್ಣ ಸಣ್ಣ ವಾಕ್ಯಗಳಲ್ಲಿ ಇರುವಷ್ಟು ಸ್ವಾರಸ್ಯ ದೊಡ್ಡ ವಾಕ್ಯಗಳಲ್ಲಿ, ದೀರ್ಘ ಸಮಾಸಗಳಲ್ಲಿ ಕಂಡುಬರದು. ಉದಾಹರಣೆಗೆ— ಶುಕನಾಸರ ಉಪದೇಶಗಳಲ್ಲಿ ಬರುವ ಮಾತುಗಳನ್ನೇ ನೋಡಬಹುದು. "ಛತ್ರ ಹಿಡಿಸಿಕೊಂಡಾಗಲೇ ಅವರಿಗೆ ಪರಲೋಕವು ಮರೆಯಾಗುವದು; ಚಾಮರದ ಗಾಳಿಗೆ ಅವರ ಸತ್ಯಶೀಲತ್ವವು ಹಾರಿಹೋಗುವದು.... ದೊಡ್ಡ ದೊಡ್ಡ ತಪ್ಪುಗಳನ್ನು ಉಪೇಕ್ಷಿಸುವದೇ ಮನಸ್ಸಿನ ದೊಡ್ಡಿಸ್ತನವೆಂದು, ಜನರು ಹೇಳಿದಾಗ್ಯೂ, ತಾವು ಸುಮ್ಮನೆ ಕಣ್ಣು ಮುಚ್ಚಿ ಕೊಂಡಿರುವದೇ ತಾಳ್ಮೆಯೆಂದೂ.... ಅರಸರು ತಿಳಕೊಳ್ಳುತ್ತಾರೆ." ಇದರಲ್ಲಿ ಅರ್ಥವನ್ನು ತಿಳಿದುಕೊಳ್ಳುವಲ್ಲಿ ಯಾವ ತೊಂದರೆಯೂ ಇಲ್ಲ.

ಬೇಟೆಯ ಕೋಲಾಹಲದ ಪ್ರಸಂಗವನ್ನು ಗಿಳಿಮರಿ ಒಳ್ಳೇ ಆಶ್ಚರ್ಯ ಭಯಗಳಿಂದ ಹೇಳುತ್ತಿರುತ್ತದೆ. ಆ ಸಮಯದಲ್ಲಿ ಬಾಣಕವಿ, ದೀರ್ಘ ಸಮಾಸಗಳಿಂದ ಕೂಡಿದ ಒಂದು ದೊಡ್ಡ ವಾಕ್ಯವನ್ನು ಇಟ್ಟುಬಿಟ್ಟಿದ್ದಾನೆ, "ಏಕದಾ ತು ಪ್ರಭಾತಸಂಧ್ಯಾರಾಗಲೋಹಿತೆ, ಅಪರ ಜಲನಿಧಿತಟಮವತರತಿ ಚಂದ್ರಮಸಿ, ವಿಘಟಮಾನ ಕಮಲಖಂಡ ಮಧುಸೀಕಧಿಸಾರವರ್ಷಿಣಿ ಕುಸುಮಾಮೋದ ಲೇರ್ಪಿತಾಲಿಜಾ... ಮಹಾನ್ ಮೃಗಯಾ ಕೋಲಾಹಲ ಧ್ವನಿರುದಚರತ್" ಆದರೆ ಇದೇ ವಾಕ್ಯದ ಅರ್ಥ, ಸಣ್ಣ ಸಣ್ಣ ವಾಕ್ಯಗಳಲ್ಲಿ ತಿಳಿಯಾಗಿ ಕನ್ನಡದಲ್ಲಿ ಬಂದಿದೆ: "ಒಂದು ದಿನ ಮುಂಜಾವಿನಲ್ಲಿ ಎಂಟೂ ದಿಕ್ಕುಗಳು ಸ್ವಚ್ಛವಾಗಿಯೂ, ವಿಸ್ತೀರ್ಣವಾಗಿಯೂ ತೋರಹತ್ತಿದವು. ಕೊಳದೊಳಗಿನ ತಾವರೆಗಳ ಮೇಲೆ ತುಂಬಿಗಳೆರಗಿ ಝೇಂಕಾರ ಮಾಡಹತ್ತಿದವು... ಅಷ್ಟರೊಳಗೆ ಬೇಟೆಯಾಡಿ ಬಂದ ಭಿಲ್ಲರ ಕೋಲಾಹಲ ಧ್ವನಿಯು ನನ್ನ ಕಿವಿಗೆ ಬಿತ್ತು."

ಬಾಣನಲ್ಲಿ ಅಪರಿಮಿತವಾಗಿ ಬರುವ ಶ್ಲೇಷೆಯನ್ನು ಕನ್ನಡದಲ್ಲಿ ತರುವದು ಸಾಧ್ಯವಿಲ್ಲ. ಅಕೃತ್ರಿಮವಾಗಿ ಒಂದೊಂದೆಡೆ ಬರಬಹುದು. ಆದರೆ ಎಲ್ಲೆಡೆಗೂ ಅದನ್ನು ತರುವ ಪ್ರಯತ್ನವನ್ನು ತುರಮರಿಯವರು ಬಿಟ್ಟುಗೊಟ್ಟದ್ದು ನಿಜವಾಗಿಯೂ ಸ್ತುತ್ಯವಾದುದು.

ಪ್ರಾಸದ ಮೋಹಕ್ಕೂ ಅವರು ಕಟ್ಟುಬಿದ್ದಿಲ್ಲ. ಕೆಂಪುನಾರಾಯಣನ ಗದ್ಯವನ್ನೂ, ಕಟ್ಟಿಯವರ ಗದ್ಯಶೈಲಿಯನ್ನೂ ನೋಡಿದರೆ, ತುರಮರಿಯವರು ಕನ್ನಡ ಸಾಹಿತ್ಯದ ಸರಲ ಸೌಂದರ್ಯಕ್ಕೆ ಮೆಚ್ಚಿದ್ದರೆನ್ನುವದು ಸ್ಪಷ್ಟ. ಈ ದೃಷ್ಟಿಯಿಂದ ತುರಮರಿಯವರ ಗದ್ಯಶೈಲಿ, ಹೊಸಗನ್ನಡದ ಮೊದಲಿನ ಗದ್ಯಶೈಲಿಗಿಂತ ಒಂದು ಹೆಜ್ಜೆ ಮುಂದೆ!

ಹೊಸಗನ್ನಡ ಗದ್ಯ ಸಾಹಿತ್ಯದ ತಳಹದಿಯನ್ನು ರೂಪಿಸಿ ಭದ್ರಗೊಳಿಸುವ ಆ ಕಾಲದಲ್ಲಿ ತುರಮರಿಯವರು ಕೈಕೊಂಡ ಕಾರ್ಯ ನಿಜವಾಗಿಯೂ ಅಭಿನಂದನೀಯವಾದುದು. ಸಂಸ್ಕೃತದ ಮಹತ್ಕೃತಿಯ ಸಾರವನ್ನೂ ಕನ್ನಡದಲ್ಲಿ ತಿಳಿಯಾಗಿ, ಸ್ವಾರಸ್ಯವಾಗಿ ಹೇಳಬಹುದೆಂಬುದನ್ನು ಜನತೆಗೆ ತೋರಿಸಿ ಕೊಟ್ಟರು. ಶ್ರೀ ತುರಮರಿಯವರು 'ಕಾದಂಬರಿ' ಯನ್ನಲ್ಲದೆ ಶಬ್ದಮಂಜರೀ ಕೋಶವನ್ನೂ ರಚಿಸಿದ್ದಾರೆ. ಹೊಸಗನ್ನಡ ಗದ್ಯದ ಪತಾಕೆಯನ್ನೆತ್ತಿ ತುರಮರಿಯವರು, ೧೮೭೭ ರಲ್ಲಿ ಕಾಲವಶರಾದರು. ಅವರಂತಹ ಜೀವದ ನಷ್ಟದಿಂದ ಕನ್ನಡನಾಡಿಗೂ, ಸಾಹಿತ್ಯಕ್ಕೂ ಅಪಾರವಾದ ಹಾನಿ ತಟ್ಟಿದೆ ! ಆ ಸಮಯದಲ್ಲಿ ಅವರು ಕೈಕೊಂಡು ಪೂರ್ತಿಗೊಳಿಸಿದ ಕಾರ್ಯ ನಿಜವಾಗಿಯೂ ಪ್ರೇರಕವಾಗಿದೆ.

ಧಾರವಾಡ **ಸರೋಜಿನಿ ಮಹಿಷಿ**, ಎಂ. ಎ.,

೨ನೇ ಜೂನ್ ೧೯೫೩

ಪ್ರಿಯ ಕನ್ನಡ ಬಂಧುಗಳೆ, ೧೯೧೫ರಲ್ಲಿ ಸ್ಥಾಪನೆಗೊಂಡ ಕನ್ನಡ ಸಾಹಿತ್ಯ ಪರಿಷತ್ತು ೯೫ನೇ ವರ್ಷದ ಹೊಸ್ತಿಲಲ್ಲಿದೆ. ಸ್ಥಾಪನೆಗೊಂಡಂದಿನಿಂದ ಇಂದಿನವರೆಗೂ ಕನ್ನಡ - ಕನ್ನಡಿಗ - ಕರ್ನಾಟಕದ ಒಳಿತಿಗೆ ಶ್ರಮಿಸುತ್ತಾ, ಕನ್ನಡಿಗರಲ್ಲಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಎಚ್ಚರ ಮೂಡಿಸುವಲ್ಲಿ ಪರಿಷತ್ತಿನ ಪ್ರಕಟಣೆಗಳು ಮಹತ್ವದ ಪಾತ್ರ ವಹಿಸುತ್ತಾ ಬಂದಿವೆ. ನಮ್ಮ ಪ್ರಕಟಣೆಗಳು ಓದುಗರ ಜೇಬಿಗೆ ಭಾರವೆನಿಸುವಂಥವಲ್ಲ, ಆದಷ್ಟೂ ಕಡಿಮೆ ಬೆಲೆಯಲ್ಲಿ ಮೌಲಿಕ ಕೃತಿಗಳನ್ನು ಸಹೃದಯರಿಗೆ ಕೊಡಬೇಕೆನ್ನುವ ನೀತಿಗೆ ಪರಿಷತ್ತು ಈಗಲೂ ಬದ್ಧವಾಗಿದೆ. ಕನ್ನಡಿಗರನ್ನು ಪ್ರಜ್ಞಾವಂತರಾಗಿ, ಅಭಿಮಾನಧನರಾಗಿ, ವಿಶ್ವಮಾನವರಾಗಿ ರೂಪಿಸಲು ಪರಿಷತ್ತು ಪ್ರಕಟಿಸುವ ಸಾಹಿತ್ಯವು ಪೂರಕವಾಗಿರಬೇಕೆನ್ನುವ ಆಶಯ ನನ್ನದು.

ಪರಿಷತ್ತು ಈಗಾಗಲೇ ಪ್ರಕಟಿಸಿ ಅತ್ಯಂತ ಜನಪ್ರಿಯವಾಗಿರುವ ಹಾಗೂ ಹೊಸ ಪುಸ್ತಕಗಳನ್ನು ಕೊಪ್ಪಳ ಜಿಲ್ಲೆ, ಗಂಗಾವತಿಯಲ್ಲಿ ನಡೆಯುತ್ತಿರುವ ೭೬ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಮುದ್ರಣಗೊಳಿಸಿ ಕನ್ನಡಿಗರ ಕೈಗೊಪ್ಪಿಸುವುದಕ್ಕೆ ನಮಗೆ ಹೆಮ್ಮೆಯೆನಿಸುತ್ತದೆ. ಸಹೃದಯರು ಈ ಪುಸ್ತಕಗಳನ್ನು ಎಂದಿನ ಪ್ರೀತ್ಯಾದರಗಳಿಂದ ಬರಮಾಡಿಕೊಳ್ಳುವರೆಂಬ ಭರವಸೆ ನನಗಿದೆ.

ಡಾ. ನಲ್ಲೂರು ಪ್ರಸಾದ್. ಆರ್. ಕೆ.

ಅಧ್ಯಕ್ಷರು

ಕನ್ನಡ ಸಾಹಿತ್ಯ ಪರಿಷತ್ತು

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು-೫೬೦ ೦೧೮.